₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಬುಧವಾರ 11.12.2024** **ಸಂಪುಟ**:9 **ಸಂಚಿಕೆ**:352 **ಪುಟಗಳು**:14 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕರುನಾಡ ಕಣ್ಮಣಿ

ಕೃಷ್ಣ ಕಣ್ಮರೆ

01.05.1932 - 10.12.2024

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗೌರವಾರ್ಪಣೆ
ಎಸ್.ಎಂ.ಕೃಷ್ಣ ನಿಧನರಾದ ಹಿನ್ನೆಲೆಯಲ್ಲಿ ವಿಧಾನಸೌಧದ ಮೇಲಿನ ರಾಷ್ಟ್ರಧ್ವಜವನ್ನು ಮಂಗಳವಾರ ಅರ್ಧಕ್ಕೆ ಇಳಿಸಲಾಗಿತ್ತು.

ಕೃಷ್ಣ ನಮನ
ವಿಶೇಷ ಪುಟಗಳು
3, 4, 5, 6, 7, 8, 9 & 10

ದಾರಿದೀಪೋಕ್ತಿ
ಸಂಕಷ್ಟದ ಸಮಯದ ಒಂದು ಉತ್ತಮ ಸಂಗತಿಯೆಂದರೆ ನಿಮ್ಮ ಹತ್ತಿರದಲ್ಲಿರುವವರ ನಿಜವಾದ ಬಣ್ಣ ಗೊತ್ತಾಗುವುದು. ಸ್ನೇಹಿತರ ನಿಜವಾದ ದರ್ಶನ ಆಗುವುದು ಆಗಲೇ. ನೀವು ಕಷ್ಟದಲ್ಲಿದ್ದಾಗ ಅವರು ತೋರುವ ವರ್ತನೆಯೇ ನಿಜವಾದುದು. ಉಳಿದುದೆಲ್ಲ ನಟನೆ.

ವಕ್ರತುಂಡೋಕ್ತಿ
ಮನುಷ್ಯರು ನಿಜಕ್ಕೂ ಬಹಳ ಕ್ರೇಜಿ. ಅವರು ಮರುಭೂಮಿಯಲ್ಲಿ ಕಾಡುಗಳನ್ನು ಸೃಷ್ಟಿಸಬಲ್ಲರು ಮತ್ತು ಕೆರೆ-ಸರೋವರಗಳನ್ನು ಬತ್ತುವಂತೆ ಮಾಡಬಲ್ಲರು.

ರಾಜಕೀಯ ಮುತ್ಸದ್ದಿ, ನವ ಬೆಂಗಳೂರು ನಿರ್ಮಾತೃ ವಿಧಿವಶ

ರಾಜ್ಯಾದ್ಯಂತ ಮೂರು ದಿನ ಶೋಕಾಚರಣೆ, ಇಂದು ಸರಕಾರಿ ರಜೆ

ಎಸ್.ಎಂ. ಕೃಷ್ಣ ಇನ್ನು ನೆನಪು

ಬೆಂಗಳೂರು: ಕರ್ನಾಟಕ ಕಂಡ ಅಪರೂಪದ ರಾಜಕಾರಣಿ, ಮಾಜಿ ಮುಖ್ಯಮಂತ್ರಿಗಳು, ಮಾಜಿ ರಾಜ್ಯಪಾಲರು, ಕೇಂದ್ರದ ಮಾಜಿ ಸಚಿವರಾದ ಸೋಮನಹಳ್ಳಿ ಮಲ್ಲಯ್ಯ ಕೃಷ್ಣ (92) ವಿಧಿವಶರಾಗಿದ್ದಾರೆ.

ಕಳೆದ ಹಲವು ತಿಂಗಳಿನಿಂದ ಶ್ವಾಸಕೋಶ ಸಮಸ್ಯೆಯಿಂದ ಬಳಲುತ್ತಿದ್ದರು. ಇತ್ತೀಚೆಗೆ ಶ್ವಾಸಕೋಶದ ಸೋಂಕು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದರು. ಬೆಂಗಳೂರಿನ ಸದಾಶಿವನಗರದ ಸ್ವಗೃಹದಲ್ಲಿ ಮಂಗಳವಾರ ಬೆಳಗಿನ ಜಾವ 2.30ರ ಸುಮಾರಿಗೆ ಕೊನೆಯುಸಿರೆಳೆದಿದ್ದಾರೆ. ಬುಧವಾರ ಬೆಳಗ್ಗೆ 8 ಗಂಟೆವರೆಗೂ ಸದಾಶಿವನಗರ ನಿವಾಸದಲ್ಲಿ ಕೃಷ್ಣ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಸ್ವಾಮೀಜಿಗಳು, ರಾಜಕಾರಣಿಗಳು, ಚಿತ್ರರಂಗದ ಗಣ್ಯರು ಅಂತಿಮ ದರ್ಶನ ಪಡೆದರು.

ಹುಟ್ಟೂರಲ್ಲಿ ಅಂತ್ಯಸಂಸ್ಕಾರ: ಎಸ್.ಎಂ.ಕೃಷ್ಣ ಅವರ ಹುಟ್ಟೂರಾದ ಮಂಡ್ಯ ಜಿಲ್ಲೆಯ ಮದ್ದೂರಿನ ಸೋಮನಹಳ್ಳಿಯಲ್ಲಿ ಬುಧವಾರ ಸಂಜೆ 4 ಗಂಟೆಗೆ ಸಕಲ ಸರಕಾರಿ ಗೌರವಗಳೊಂದಿಗೆ ಅಂತ್ಯಸಂಸ್ಕಾರ ನೆರವೇರಿಸಲಾಗುವುದು. ಬೆಳಗ್ಗೆ 10.30ರಿಂದ ಮಧ್ಯಾಹ್ನ 3 ಗಂಟೆವರೆಗೂ ಸಾರ್ವಜನಿಕ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದು ಅವರ ಸಂಬಂಧಿಯೂ ಆದ ಡಿಸಿಎಂ ಡಿ.ಕೆ. ಶಿವಕುಮಾರ್ ಮಾಹಿತಿ ನೀಡಿದ್ದಾರೆ. ಅಂತ್ಯ ಸಂಸ್ಕಾರ ನಡೆಯುವ ಸ್ಥಳವನ್ನು ಡಿ.ಕೆ.ಶಿವಕುಮಾರ್ ಪರಿಶೀಲನೆ ನಡೆಸಿದ್ದಾರೆ.

1000 ಕೆ.ಜಿ ಗಂಧದ ಕಟ್ಟಿಗೆ ಬಳಕೆ: ಎಸ್.ಎಂ.ಕೃಷ್ಣ ಅವರು ಸಿಎಂ ಆಗಿದ್ದ ಅವಧಿಯಲ್ಲಿ ರೈತರಿಗೆ ಗಂಧದ ಮರಗಳನ್ನು ಬೆಳೆಯಲು ಅನುವು ಮಾಡಿಕೊಟ್ಟಿದ್ದರು. ಇದರ ನೆನಪಾರ್ಥ ಬರೋಬ್ಬರಿ 1,000 ಕೆ.ಜಿ ಗಂಧದ ಕಟ್ಟಿಗೆ ಬಳಸಿ ಎಸ್.ಎಂ.ಕೃಷ್ಣ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಶಾಸಕ ಗಣಿಗ ರವಿ ಮಾಹಿತಿ ನೀಡಿದ್ದಾರೆ.

ಕಲಾಪ ರದ್ದು: ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದ ಎರಡನೇ ದಿನದ ವಿಧಾನಸಭೆಯ ಕಲಾಪದಲ್ಲಿ ಅಗಲಿದ ಹಿರಿಯ ಮುತ್ಸದ್ದಿ ನಾಯಕನಿಗೆ ಸದಸ್ಯರು ಸಂತಾಪ ಸೂಚಿಸುವ ಮೂಲಕ ಶ್ರದಾಂಜಲಿ ಸಲ್ಲಿಸಿ ಗೌರವ ಸಮರ್ಪಿಸಿದರು. ಉಭಯ ಸದನಗಳ ಕಲಾಪವನ್ನು ಗುರುವಾರ ಬೆಳಗ್ಗೆ 11 ಗಂಟೆಗೆ ಸೇರುವಂತೆ ಸ್ಪೀಕರ್ ಯು.ಟಿ.ಖಾದರ್ ಹಾಗೂ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮುಂದೂಡಿದ್ದಾರೆ.

3 ದಿನ ಶೋಕಾಚರಣೆ: ಎಸ್.ಎಂ.ಕೃಷ್ಣ ಅವರ ನಿಧನದ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಡಿಸೆಂಬರ್ 10, 11 ಹಾಗೂ 12 ರಂದು ಮೂರು ದಿನಗಳ ಶೋಕಾಚರಣೆಯನ್ನು ಘೋಷಿಸಿದೆ. ಶೋಕಾಚರಣೆ ಸಮಯದಲ್ಲಿ ಸಾರ್ವಜನಿಕ ಮನೋರಂಜನಾ ಕಾರ್ಯಕ್ರಮಗಳನ್ನು ನಿಷೇಧಿಸಲಾಗಿದೆ. ನಿಯತವಾಗಿ ರಾಜ್ಯ ಸರಕಾರದ ಎಲ್ಲ ಕಟ್ಟಡಗಳ ಮೇಲೆ ರಾಷ್ಟ್ರ ಧ್ವಜವನ್ನು ಅರ್ಧ ಮಟ್ಟದಲ್ಲಿ ಹಾರಿಸಲಾಗುವುದು ಎಂದು ರಾಜ್ಯ ಸರಕಾರದ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಸರಕಾರಿ ರಜೆ: ಎಸ್.ಎಂ.ಕೃಷ್ಣ ಅವರ ನಿಧನದ ಹಿನ್ನೆಲೆಯಲ್ಲಿ ಬುಧವಾರ ರಾಜ್ಯಾದ್ಯಂತ ಎಲ್ಲ ಸರಕಾರಿ ಕಚೇರಿಗಳು, ಶಾಲಾ–ಕಾಲೇಜುಗಳಿಗೆ (ಅನುದಾನಿತ ವಿದ್ಯಾ ಸಂಸ್ಥೆಗಳು ಸೇರಿದಂತೆ) ಸಾರ್ವಜನಿಕ ರಜೆ ಘೋಷಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಸ್.ಎಂ.ಕೃಷ್ಣ ಅವರ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದರು.

ತಮ್ಮ ಸುದೀರ್ಘ ಸಾರ್ವಜನಿಕ ಜೀವನದಲ್ಲಿ ವಿಧಾನಸಭೆ, ಸಂಸತ್ತಿನ ಸದಸ್ಯ, ಕೇಂದ್ರ ಸಚಿವರು ಹಾಗೂ ರಾಜ್ಯಪಾಲ ಹೀಗೆ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಎಸ್.ಎಂ.ಕೃಷ್ಣ ಅವರ ನಿಧನದ ಸುದ್ದಿ ತಿಳಿದು ದುಃಖವಾಗಿದೆ. ಸಿಎಂ ಆಗಿ ಕರ್ನಾಟಕದ ಅಭಿವೃದ್ಧಿಗೆ ಬದ್ಧತೆ ತೋರಿಸಿ ಜನ ಮನ್ನಣೆ ಗಳಿಸಿದ್ದರು. ಅವರ ಕುಟುಂಬಸ್ಥರಿಗೆ ನನ್ನ ಸಂತಾಪಗಳು.

– **ದ್ರೌಪದಿ ಮುರ್ಮು** ರಾಷ್ಟ್ರಪತಿ

ಎಸ್.ಎಂ.ಕೃಷ್ಣ ಅಸಾಧಾರಣ ನಾಯಕರಾಗಿದ್ದರು, ಎಲ್ಲ ವರ್ಗಗಳ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. ಅವರೊಂದಿಗೆ ಸಂವಾದ ನಡೆಸುವ ಅನೇಕ ಅವಕಾಶಗಳು ನನಗೆ ದೊರೆತವು. ಆ ಸಂವಾದಗಳನ್ನು ನಾನು ಯಾವಾಗಲೂ ಗೌರವಿಸುತ್ತೇನೆ. ಅವರ ನಿಧನದಿಂದ ನನಗೆ ದುಃಖವಾಗಿದೆ. ಅವರ ಕುಟುಂಬಸ್ಥರು, ಅಭಿಮಾನಿಗಳಿಗೆ ನನ್ನ ಸಂತಾಪಗಳು. ಓಂ ಶಾಂತಿ.

– **ನರೇಂದ್ರ ಮೋದಿ** ಪ್ರಧಾನ ಮಂತ್ರಿ

ಎಸ್.ಎಂ.ಕೃಷ್ಣ ಅವರ ನಿಧನದ ಸುದ್ದಿ ತಿಳಿದು ದುಃಖವಾಯಿತು. ಕರ್ನಾಟಕದ ಅಭಿವೃದ್ಧಿಗೆ ಹಾಗೂ ಬೆಂಗಳೂರು ತಾಂತ್ರಿಕ ಕೇಂದ್ರವಾಗಿ ರೂಪಾಂತರಗೊಳ್ಳಲು ಕೃಷ್ಣ ಅವರು ಗಣನೀಯ ಕೊಡುಗೆ ನೀಡಿದ್ದರು. ಈ ಕಷ್ಟದ ಸಮಯದಲ್ಲಿ ಅವರ ಕುಟುಂಬಸ್ಥರು ಮತ್ತು ಪ್ರೀತಿಪಾತ್ರರ ಜತೆಗೆ ನಾವಿದ್ದೇವೆ.

– **ರಾಹುಲ್ ಗಾಂಧಿ,** ಲೋಕಸಭೆ ಪ್ರತಿಪಕ್ಷದ ನಾಯಕ

ಎಸ್.ಎಂ ಕೃಷ್ಣರ ನಿಧನ ತೀವ್ರ ನೋವುಂಟುಮಾಡಿದೆ. ಅಭಿವೃದ್ಧಿಯ ಕನಸುಗಾರರಾಗಿದ್ದ ಅವರು ರಾಜ್ಯ ಹಾಗೂ ರಾಷ್ಟ್ರದ ಅಭಿವೃದ್ಧಿಗೆ ನೀಡಿದ ಕೊಡುಗೆ ಅಪಾರ. ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ನನ್ನ ಆತ್ಮೀಯರಾಗಿ, ಸಹೋದ್ಯೋಗಿಯಾಗಿ ಜತೆಯಾಗಿದ್ದ ಅವರ ನಿಧನ ನನಗೆ ವೈಯಕ್ತಿಕವಾಗಿ ನಷ್ಟ. ಅವರ ಕುಟುಂಬಕ್ಕೆ, ಅಭಿಮಾನಿ ಬಳಗಕ್ಕೆ ನನ್ನ ಸಂತಾಪಗಳು.

– **ಮಲ್ಲಿಕಾರ್ಜುನ ಖರ್ಗೆ** ಎಐಸಿಸಿ ಅಧ್ಯಕ್ಷ



ನನ್ನ ಬಹುಕಾಲದ ಸ್ನೇಹಿತ, ಸಹೋದ್ಯೋಗಿ ಎಸ್.ಎಂ.ಕೃಷ್ಣ, ನಿಧನದಿಂದ ತೀವ್ರ ದುಃಖವಾಗಿದೆ. ನಾವಿಬ್ಬರು ಒಟ್ಟಿಗೆ ರಾಜಕೀಯ ಜೀವನವನ್ನು ಪ್ರಾರಂಭಿಸಿದ್ದೆವು. ಅಭಿವೃದ್ಧಿ ಮತ್ತು ಆಡಳಿತಕ್ಕೆ ವಿಭಿನ್ನ ದಾರಿಗಳನ್ನು ಕಂಡುಕೊಂಡಿದ್ದೆವು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ಕೋರುತ್ತೇನೆ.

– **ಎಚ್.ಡಿ.ದೇವೇಗೌಡ** ಮಾಜಿ ಪ್ರಧಾನಿ

ಎಸ್.ಎಂ.ಕೃಷ್ಣ ಅವರ ಸಾವಿನಿಂದ ಆಘಾತಕ್ಕೀಡಾಗಿದ್ದೇನೆ. ರಾಜ್ಯ ಮತ್ತು ಕೇಂದ್ರ ಸಚಿವರಾಗಿ ಹಾಗೂ ಸಿಎಂ ಆಗಿ ಕೃಷ್ಣ ಅವರು ಸಲ್ಲಿಸಿರುವ ಸೇವೆ ಅನುಪಮವಾದುದು. ಮುತ್ಸದ್ದಿ ರಾಜಕಾರಣಿಯಾಗಿದ್ದ ಕೃಷ್ಣ ಅವರು ಅಜಾತಶತ್ರುಗಳಾಗಿದ್ದರು. ಅವರ ಅಗಲಿಕೆಯಿಂದ ನೊಂದಿರುವ ಅವರ ಕುಟುಂಬವರ್ಗ, ಅಭಿಮಾನಿಗಳ ದುಃಖದಲ್ಲಿ ನಾನೂ ಭಾಗಿಯಾಗಿದ್ದೇನೆ.

– **ಸಿದ್ದರಾಮಯ್ಯ** ಮುಖ್ಯಮಂತ್ರಿ

ಮದ್ದೂರಿನಿಂದ ದಿಲ್ಲಿವರೆಗೆ...

ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಮಲ್ಲಯ್ಯ–ತಾಯಮ್ಮ ದಂಪತಿಗಳ ಮಗನಾಗಿ 1932 ಮೇ 01ರಂದು ಕೃಷ್ಣ ಅವರು ಜನಿಸಿದರು. ಸ್ವಗ್ರಾಮದಲ್ಲಿ 2ನೇ ತರಗತಿ ಮುಗಿಸಿದ ಅವರು, ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿದ್ದುಕೊಂಡು ಮಹಾಜನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗೆ ಸೇರಿ ಎಸ್‌ಎಸ್‌ಎಲ್‌ಸಿ ಮುಗಿಸಿದರು. ನಂತರ ಮೈಸೂರಿನ ಯುವರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ಮುಗಿಸಿ ಮಹಾರಾಜ ಕಾಲೇಜಿನಲ್ಲಿ ಕಲಾ ವಿಭಾಗದಲ್ಲಿ ಪದವಿ ಪಡೆದರು. ನಂತರ ಬೆಂಗಳೂರಿನ ಸರಕಾರಿ ಕಾಲೇಜಿನಲ್ಲಿ ಕಾನೂನು ಪದವಿ ಪಡೆದರೆ. ಬಳಿಕ ಫುಲ್ ಬ್ರೈಟ್ ಸ್ಕಾಲರ್‌ಶಿಪ್ ಪಡೆದು ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ತೆರಳಿದರು. ಅಮೆರಿಕದಲ್ಲಿ ಸದರನ್ ಮೆಥೋಡಿಸ್ಟ್ ವಿವಿಯಲ್ಲಿ ಎಲ್ ಎಲ್‌ಎಂ ಪದವಿ ಪಡೆದು ಭಾರತಕ್ಕೆ ಮರಳಿದರು.

ಬಳಿಕ 1962ರಲ್ಲಿ ಮದ್ದೂರು ವಿಧಾನಸಭಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಮೂಲಕ ಚುನಾವಣಾ ರಾಜಕೀಯ ಆರಂಭಿಸಿದರು. ಮೊದಲ ಚುನಾವಣೆಯಲ್ಲಿಯೇ ಗೆದ್ದರು. ಆದರೆ 1967ರ ಚುನಾವಣೆಯಲ್ಲಿ ಸೋಲು ಕಂಡರು. 1968ರ ಮಂಡ್ಯ ಲೋಕಸಭೆ ಉಪಚುನಾವಣೆಯಲ್ಲಿ ಸ್ಪರ್ಧಿಸಿ ಸಂಸತ್ ಸದಸ್ಯರಾದರು. 1971ರಲ್ಲಿ ಸಂಸದರಾಗಿದ್ದ ಅವರನ್ನು ಡಿ.ದೇವರಾಜ ಅರಸು ಅವರು ಎಂಎಲ್‌ಸಿ ಮಾಡಿ, ಸಚಿವ ಸ್ಥಾನ ನೀಡಿದರು. ಆದ್ದರಿಂದ ಎಸ್.ಎಂ.ಕೃಷ್ಣ ರಾಜ್ಯ ರಾಜಕೀಯಕ್ಕೆ ವಾಪಸ್ ಆದರು. 1989ರಲ್ಲಿ ಮದ್ದೂರಿನಿಂದ ಕಾಂಗ್ರೆಸ್ ಅಭ್ಯರ್ಥಿ ಯಾಗಿ ಕಣಕ್ಕಿಳಿದ ಎಸ್.ಎಂ.ಕೃಷ್ಣ ಚುನಾವಣೆಯಲ್ಲಿ ಗೆದ್ದರು. ಉಪ ಮುಖ್ಯಮಂತ್ರಿ ಗಳಾಗಿ ಮತ್ತು ಕರ್ನಾಟಕ ವಿಧಾನಸಭೆ ಸ್ಪೀಕರ್ ಆಗಿ ಕಾರ್ಯ ನಿರ್ವಹಣೆ ಮಾಡಿದರು. 1994ರ ಚುನಾವಣೆಯಲ್ಲಿ ಸೋಲು ಕಂಡರು. 1996ರಲ್ಲಿ ರಾಜ್ಯಸಭಾ ಸದಸ್ಯರಾದರು. 1999ರ ವಿಧಾನಸಭೆ ಚುನಾವಣೆಯಲ್ಲಿ ಮತ್ತೆ ರಾಜ್ಯ ರಾಜಕೀಯಕ್ಕೆ ಬಂದರು. ಎಸ್.ಎಂ.ಕೃಷ್ಣ ನೇತೃತ್ವದಲ್ಲಿಯೇ ಕಾಂಗ್ರೆಸ್ ಚುನಾವಣೆಯನ್ನು ಎದುರಿಸಿತು. ಪಕ್ಷ 132 ಸೀಟುಗಳಲ್ಲಿ ಜಯಗಳಿಸಿತು. ಕಾಂಗ್ರೆಸ್ ಪಕ್ಷ ಎಸ್.ಎಂ.ಕೃಷ್ಣ ಅವರನ್ನೇ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿತು. ಅಕ್ಟೋಬರ್‌ನಲ್ಲಿ ಅಧಿಕಾರವಹಿಸಿಕೊಂಡರು. ಎಸ್.ಎಂ.ಕೃಷ್ಣ ಅವರು ಆಡಳಿತ ನಡೆಸಿದ ಅವಧಿಯಲ್ಲಿ ಸವಾಲುಗಳ ಸುರಿಮಳೆಯೇ ಆಗಿತ್ತು. ಕಾವೇರಿ ವಿವಾದ ಹಾಗೂ ಡಾ.ರಾಜ್‌ಕುಮಾರ್ ಅಪಹರಣ ದಂತಹ ಗಂಭೀರ ವಿಷಯಗಳು ಇದ್ದವು. ಈ ಎಲ್ಲ ವಿಷಯಗಳನ್ನು ಅತ್ಯಂತ ಸಮರ್ಥವಾಗಿ ಅವರು ನಿಭಾಯಿಸಿದ್ದರು. ಆದರೆ ಅಧಿಕಾರಾವಧಿ ಪೂರ್ಣಗೊಳ್ಳಲು 5 ತಿಂಗಳು ಬಾಕಿ ಇರುವಾಗ ಲೋಕಸಭೆ ಚುನಾವಣೆ ಎದುರಾಯಿತು. ಆದ್ದರಿಂದ ವಿಧಾನಸಭೆ ಚುನಾವಣೆಯೂ ಒಟ್ಟಿಗೆ ನಡೆಯಲಿ ಎಂದು ಕೃಷ್ಣ ಸರಕಾರ ವಿಸರ್ಜನೆ ಮಾಡಿದರು. ಆದ್ದರಿಂದ ಅವರು ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಕೆಲಸ ಮಾಡಲಿಲ್ಲ. ಅವಧಿ ಮುಗಿಯುತ್ತಿದ್ದಂತೆ 2008 ರವರೆಗೆ ಮಹಾರಾಷ್ಟ್ರದಲ್ಲಿ 19 ರಾಜ್ಯಪಾಲರಾದರು. ವಿದೇಶಾಂಗ ಸಚಿವರಾಗಿಯು ಕಾರ್ಯನಿರ್ವಹಿಸಿದರು. ದಶಕಗಳ ಕಾಲ ಕಾಂಗ್ರೆಸ್‌ನಲ್ಲಿದ್ದ ಅವರು, ಇತ್ತೀಚೆಗೆ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾಗಿದ್ದರು.

ಪುತ್ಥಳಿ, ಪ್ರಶಸ್ತಿ ಸ್ಥಾಪಿಸಿ

ವಿಧಾನಸೌಧದ ಆವರಣದಲ್ಲಿ ಎಸ್.ಎಂ. ಕೃಷ್ಣ ಅವರ ಪುತ್ಥಳಿ ನಿರ್ಮಿಸುವಂತೆ ಶಾಸಕರು ಆಗ್ರಹಿಸಿದ್ದಾರೆ. ಈ ಕುರಿತು ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದು, ಕೃಷ್ಣ ಅವರ ಪುತ್ಥಳಿ ನಿರ್ಮಿಸುವ ಬಗ್ಗೆ ಚರ್ಚಿಸಿ ತೀರ್ಮಾನಿಸುತ್ತೇವೆ ಎಂದು ತಿಳಿಸಿದ್ದಾರೆ. ರಾಜ್ಯ ಸರಕಾರದ ವತಿಯಿಂದ ಎಸ್.ಎಂ.ಕೃಷ್ಣ ಅವರ ಹೆಸರಿನಲ್ಲಿ ಗೌರವಾರ್ಥ ಪ್ರಶಸ್ತಿ ಸ್ಥಾಪನೆ ಮಾಡಬೇಕು ಎಂದು ಸಂಸದ ತೇಜಸ್ವಿ ಸೂರ್ಯ ಆಗ್ರಹಿಸಿದ್ದಾರೆ. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದು, ಎಸ್.ಎಂ. ಕೃಷ್ಣ ಅವರ ಹೆಸರಿನಲ್ಲಿ, ಅವರ ಸಾಧನೆಗಳು, ನೆನಪುಗಳು ಮತ್ತು ಮೌಲ್ಯಗಳನ್ನು ಮುಂದುವರಿಸಿಕೊಂಡು ಹೋಗಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯ ಸರಕಾರ ಪ್ರಶಸ್ತಿಯೊಂದನ್ನು ಸ್ಥಾಪನೆ ಮಾಡಿ, ಅವರ ಹೆಸರನ್ನು ಚಿರಸ್ಥಾಯಿಯಾಗಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂರ್ಯ ಮನವಿ ಮಾಡಿದ್ದಾರೆ.

ಪಾಂಚಜನ್ಯ ಯಾತ್ರೆ ಸಾರಥ್ಯ

ಎಸ್.ಎಂ ಕೃಷ್ಣ ಅವರು ಕರ್ನಾಟಕದಲ್ಲಿ ಪ್ರಾರಂಭಿಸಿದ ಪಾಂಚಜನ್ಯ ಯಾತ್ರೆ, ಅಂದಿನ ಕಾಂಗ್ರೆಸ್‌ಗೆ ಮರುಹುಟ್ಟು ಅಂತಲೇ ಹೇಳಲಾಗುತ್ತದೆ. ಕಾಂಗ್ರೆಸ್ ಹೈಕಮಾಂಡ್ ಸಹ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟುವುದಕ್ಕೆ ಎಸ್.ಎಂ.ಕೃಷ್ಣ ಅವರ ಮುಂದಾಳತ್ವಕ್ಕೆ ಪೂರ್ಣ ಸಹಕಾರ ಕೊಟ್ಟಿತ್ತು. ಈ ಯಾತ್ರೆಯ ಮೂಲಕ ಅವರು ಕಾಂಗ್ರೆಸ್‌ಗೆ ಶಕ್ತಿ ತುಂಬಿದ್ದರು. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿದ್ದು ಮಾತ್ರವಲ್ಲ ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸುವಲ್ಲಿ ಹಾಗೂ ಕರ್ನಾಟಕದಲ್ಲಿ ಅಭಿವೃದ್ಧಿ ಪರ್ವ ಸೃಷ್ಟಿ ಮಾಡುವ ಮೂಲಕ ಕಾಂಗ್ರೆಸ್‌ಗೆ ಭದ್ರ ನೆಲೆಯನ್ನು ಕಲ್ಪಿಸಿದ್ದರು. ಪಾಂಚಜನ್ಯ ಯಾತ್ರೆಯ ವೇಳೆ ಕಾಂಗ್ರೆಸ್‌ನಲ್ಲಿ ಕೆಲವೊಂದು ಗೊಂದಲಗಳು ಸೃಷ್ಟಿಯಾಗಿದ್ದವು ನಿಜ. ಆದರೆ, ಅಂತಿಮವಾಗಿ ಆ ವರ್ಷ ನಡೆದ ಕರ್ನಾಟಕದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿತ್ತು. ಈ ಯಾತ್ರೆ, ಅಂದು ಕರ್ನಾಟಕದ ಮನೆ ಮನೆ ತಲುಪಿತ್ತು.

ಸದನದಲ್ಲಿ ಮೊಳಗಿದ ಕೃಷ್ಣನ ಗುಣಗಾನ

ವಿಧಾನಸಭೆ ಸುವರ್ಣಸೌಧ, ಬೆಳಗಾವಿ: ಮಾಜಿ ಮುಖ್ಯಮಂತ್ರಿ ಎಸ್.ಎಂ ಕೃಷ್ಣ ಅವರು ಮಂಗಳವಾರ ನಸುಕಿನ ಜಾವ ವಿಧಿವಶರಾದ ಹಿನ್ನೆಲೆಯಲ್ಲಿ ಎರಡನೇ ದಿನದ ವಿಧಾನಸಭೆಯ ಕಲಾಪದಲ್ಲಿ ಅಗಲಿದ ಹಿರಿಯ ಮುತ್ಸದ್ದಿ ನಾಯಕನಿಗೆ ಸದಸ್ಯರು ಸಂತಾಪ ಸೂಚಿಸುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿ ಗೌರವ ಸಮರ್ಪಿಸಿದರು.

ವಿಧಾನಸಭೆ ಸಭಾಧ್ಯಕ್ಷ ಯು.ಟಿ ಖಾದರ್ ಅವರು ಸಂತಾಪ ಸೂಚಕ ನಿರ್ಣಯ ಮಂಡಿಸಿದರು. ಈ ಸಂತಾಪ ಸೂಚಕ ಮಂಡನೆಗೆ ಸಿಎಂ ಸಿದ್ದರಾಮಯ್ಯ, ಪ್ರತಿಪಕ್ಷದ ನಾಯಕ ಆರ್.ಅಶೋಕ, ಗೃಹ ಸಚಿವ ಜಿ.ಪರಮೇಶ್ವರ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ ಪಾಟೀಲ್ ಸೇರಿ ಅನೇಕ ಸದಸ್ಯರು ಮಾತನಾಡಿದರು. ಎಸ್.ಎಂ. ಕೃಷ್ಣ ಅವರೊಂದಿಗಿನ ಒಡನಾಟ ಹಂಚಿಕೊಂಡರು.

ದೂರದೃಷ್ಟಿಯ ರಾಜಕಾರಣಿ: ಸಂತಾಪ ನಿರ್ಣಯ ಬೆಂಬಲಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ದಿ. ಎಸ್.ಎಂ.ಕೃಷ್ಣ ಅವರು, ಮುತ್ಸದ್ದಿ, ದೂರದೃಷ್ಟಿ ಉಳ್ಳವರಾಗಿದ್ದರು. ದೀರ್ಘಕಾಲ ರಾಜಕಾರಣ ಮಾಡಿದ್ದರು. ನಾನು ವಿದ್ಯಾರ್ಥಿಯಾಗಿದ್ದಾಗ ಎಸ್.ಎಂ.ಕೃಷ್ಣ ಅವರು ಕರೆದಿದ್ದ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯ ಸಭೆಯಲ್ಲಿ ಭಾಗವಹಿಸಿದ್ದೆ. ಬಳಿಕ ನಾನು ಲೋಹಿಯಾ ಅವರ ಸಮಾಜವಾದಿ ಪಕ್ಷ ಸೇರ್ಪಡೆಯಾದೆ. ಎಸ್.ಎಂ.ಕೃಷ್ಣ ಅವರು 1962 ರಲ್ಲೇ ಸ್ವತಂತ್ರವಾಗಿ ವಿಧಾನಸಭೆಗೆ ಸ್ಪರ್ಧಿಸಿದ್ದರು. ನಾನು ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಎಸ್.ಎಂ.ಕೃಷ್ಣ ಅವರ ಅಭಿಮಾನಿಯಾಗಿದ್ದೆ ಎಂದು ಅವರೊಂದಿಗೆ ಒಡನಾಟದ ಮೆಲುಕು ಹಾಕಿದರು.

ಅಪರೂಪದ ಮುತ್ಸದ್ದಿ: ವಿಧಾನಸಭೆ, ವಿಧಾನ ಪರಿಷತ್, ರಾಜ್ಯಸಭೆ, ಲೋಕಸಭೆ ನಾಲ್ಕೂ ಸದನಗಳ ಸದಸ್ಯರಾಗಿ ಆಯ್ಕೆಯಾದ ಕೆಲವೇ ಕೆಲವು ರಾಜಕಾರಣಿಗಳಲ್ಲಿ ಎಸ್.ಎಂ.ಕೃಷ್ಣ ಒಬ್ಬರಾಗಿದ್ದರು. ರಾಜ್ಯದ ಮುಖ್ಯಮಂತ್ರಿ, ವಿಧಾನಸಭೆ ಸ್ಪೀಕರ್, ಕೇಂದ್ರ ಸಚಿವರು ಹಾಗೂ ರಾಜ್ಯಪಾಲರೂ ಆಗಿದ್ದ ಅವರು ನಾಡು ಕಂಡ ಅಪರೂಪದ ರಾಜಕಾರಣಿಯಾಗಿದ್ದರು. ಒಳ್ಳೆಯ ಸಂಸದೀಯ ಪಟು, ಎಲ್ಲರನ್ನೂ ಗೌರವದಿಂದ ಕಾಣುತ್ತಿದ್ದರು. ಯಾವತ್ತೂ ದ್ವೇಷದ ರಾಜಕಾರಣ ಮಾಡಿದವರಲ್ಲ. ಅವರ ಕಾಲದಲ್ಲೇ ಡಾ.ರಾಜ್‌ಕುಮಾರ್ ಅವರ ಅಪಹರಣವಾಗಿತ್ತು. ಆ ಸಂದರ್ಭ ದೊಡ್ಡ ಸವಾಲನ್ನು ಎದುರಿಸಿದ್ದರು. ಅದನ್ನು ನಿಭಾಯಿಸಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಸ್.ಎಂ.ಕೃಷ್ಣ ಅವರ ಆಡಳಿತ ವೈಖರಿ ಸ್ಮರಿಸಿದರು.

ಬೆಂಗಳೂರು ಅಭಿವೃದ್ಧಿಗೆ ಕೊಡುಗೆ: ಬೆಂಗಳೂರನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಸಿಂಗಾಪುರದಂತೆ ಮಾಡಬೇಕು ಎನ್ನುವ ಉದ್ದೇಶ ಹೊಂದಿದ್ದರು. ಬೆಂಗಳೂರಿಗೆ ಸಿಲಿಕಾನ್ ವ್ಯಾಲಿ ಆಫ್ ಇಂಡಿಯಾ ಎನ್ನುವ ಹೆಗ್ಗಳಿಕೆ ಬರಲು ಎಸ್.ಎಂ.ಕೃಷ್ಣ ಅವರ ಕೊಡುಗೆ ಅಪಾರವಾಗಿದೆ. ಕಾಂಗ್ರೆಸ್ ಮೂಲಕ ಸುದೀರ್ಘ ರಾಜಕಾರಣ ಮಾಡಿ ಬಿಜೆಪಿ ಸೇರಿ ಒಂದು ವರ್ಷಕ್ಕೆ ರಾಜಕೀಯ ನಿವೃತ್ತಿ ಘೋಷಿಸಿದ ದಕ್ಷ ಆಡಳಿತಗಾರ, ಸಜ್ಜನ–ಮುತ್ಸದ್ಧಿ ರಾಜಕಾರಣಿಯಾಗಿದ್ದರು ಎಂದು ಮುಖ್ಯಮಂತ್ರಿಯವರು ಸಂತಾಪ ಸೂಚಿಸಿದರು.

ವಿವಿಧ ನಾಯಕರಿಂದ ಗೌರವ ಸಮರ್ಪಣೆ: ಸಂತಾಪ ಸೂಚನೆ ನಿರ್ಣಯದ ಮೇಲೆ ಪ್ರತಿಪಕ್ಷದ ನಾಯಕ ಆರ್.ಅಶೋಕ, ಗೃಹ ಸಚಿವ ಜಿ.ಪರಮೇಶ್ವರ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಅರಣ್ಯ ಸಚಿವ ಈಶ್ವರ್ ಖಂಡ್ರೆ, ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್, ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಎಚ್. ಮುನಿಯಪ್ಪ, ಮಾಜಿ ಸಚಿವ ಟಿ.ಬಿ.ಜಯಚಂದ್ರ, ಆರಗ ಜ್ಞಾನೇಂದ್ರ, ಶಾಸಕ ಜಿ.ಟಿ.ದೇವೇಗೌಡ ಮೊದಲಾದವರು ಮಾತನಾಡಿ, ಅವರೊಂದಿಗಿನ ಒಡನಾಟ ಹಾಗೂ ಕೊಡಗೆಯನ್ನು ಸ್ಮರಿಸುವ ಮೂಲಕ 'ಕೃಷ್ಣ' ಕೂಗು ಸದನಕ್ಕೆ ಕೇಳುವಂತೆ ಮಾಡಿದರು. ಬಳಿಕ ಎಸ್.ಎಂ.ಕೃಷ್ಣ ಗೌರವಾರ್ಥ ಸದನದಲ್ಲಿ ಮೌನಾಚರಣೆ ಮೂಲಕ ಗೌರವ ಸಲ್ಲಿಸಲಾಯಿತು.

ತಮ್ಮ ರಾಜಕೀಯ ಜೀವನದಲ್ಲಿ ಯಾವತ್ತೂ ಯಾರ ಬಗ್ಗೆಯೂ ನಕಾರಾತ್ಮಕ ಚಿಂತನೆ, ದ್ವೇಷ ಮಾಡದ ಮಾಜಿ ಸಿಎಂ ಕೃಷ್ಣ ಅವರು ಇಂದಿನ ಯುವ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ. ಎಲ್ಲ ಉನ್ನತ ಹುದ್ದೆಗಳ ಮಜಲನ್ನು ಕಂಡಿರುವ ಅವರು ರಾಜ್ಯ ಹಾಗೂ ರಾಷ್ಟ್ರದಲ್ಲಿ ತಮ್ಮದೇಯಾದ ಕೊಡುಗೆ ನೀಡಿದ್ದಾರೆ. ಬೆಂಗಳೂರು ಸಿಲಿಕಾನ್ ಸಿಟಿಯಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಲು ಕಾರಣರಾಗಿದ್ದಾರೆ.

– **ಯು.ಟಿ.ಖಾದರ್** ಸಭಾಧ್ಯಕ್ಷ

ನಾವೆಲ್ಲರೂ ಹೆಮ್ಮೆಯಿಂದ ಹೇಳುವ ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯ ರೂವಾರಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ. ಬೆಂಗಳೂರಿನ ಜನ ಎಂದಿಗೂ ಎಸ್.ಎಂ.ಕೃಷ್ಣ ಅವರ ಅಭಿವೃದ್ಧಿ ಕಾರ್ಯವನ್ನು ಮರೆಯುವುದಿಲ್ಲ. ಇಂದು ಯಾವುದೇ ಅಂತಾರಾಷ್ಟ್ರೀಯ ನಾಯಕರು ರಾಷ್ಟಕ್ಕೆ ಬಂದರೆ ತಪ್ಪದೇ ಬೆಂಗಳೂರಿಗೆ ಭೇಟಿ ನೀಡುತ್ತಾರೆ. ಇಂತಹ ಘನತೆ ಬೆಂಗಳೂರು ನಗರಕ್ಕೆ ಬರಲು ಕೃಷ್ಣ ಕಾರಣವಾಗಿದ್ದಾರೆ.

– **ಆರ್.ಅಶೋಕ** ವಿಧಾನಸಭೆ ಪ್ರತಿಪಕ್ಷದ ನಾಯಕ

ಎಸ್.ಎಂ.ಕೃಷ್ಣ ಅವರು ತಮ್ಮ ವ್ಯಕ್ತಿತ್ವದಿಂದಲೇ ಮುಂದಿನ ಪೀಳಿಗೆಗೆ ಮಾದರಿಯಾಗಿದ್ದಾರೆ. ಮುಖ್ಯಮಂತ್ರಿಯಾಗಿ ತಮ್ಮ ಸಂಪುಟದ ಸಹದ್ಯೋಗಿಗಳನ್ನು ಗೌರವದಿಂದ ಕಾಣುತ್ತಿದ್ದರು. ವಿದ್ಯಾರ್ಥಿ ದೆಸೆಯಿಂದಲೂ ಪ್ರತಿಭಾನ್ವಿತರಾಗಿದ್ದ ಅವರು, ಪ್ರಖ್ಯಾತ ವಾಷಿಂಗ್ಟನ್ ವಿಶ್ವ ವಿದ್ಯಾಲಯದಲ್ಲಿ ಫುಲ್‌ಬ್ರೈಟ್ ಸ್ಕಾಲರ್‌ಶಿಪ್ ಪಡೆದ ಏಕೈಕ ರಾಜಕಾರಣಿಯಾಗಿದ್ದಾರೆ. ಬೆಂಗಳೂರನ್ನು ಐ.ಟಿ. ಕ್ರಾಂತಿ ಮೂಲಕ ಇಡೀ ಜಗತ್ತಿಗೆ ಪರಿಚಯಿಸಿಕೊಟ್ಟಿದ್ದಾರೆ.

– **ಡಾ.ಜಿ.ಪರಮೇಶ್ವರ್** ಗೃಹ ಸಚಿವ



ರಾಜ್ಯದ ಪ್ರಾದೇಶಿಕ ಅಸಮತೋಲನೆ ನಿವಾರಿಸಲು ಕೃಷ್ಣ ಅವರು ಡಾ.ಡಿ.ಎಂ.ನಂಜುಂಡಪ್ಪ ಅವರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿದರು. ಈ ಸಮಿತಿ ವರದಿಯನ್ನು ಆಧರಿಸಿ ಹಿಂದುಳಿದ ಪ್ರದೇಶಗಳಿಗೆ ಹೆಚ್ಚಿನ ಅನುದಾನ ನೀಡಿದರು. ಉತ್ತರ ಕರ್ನಾಟಕ ನೀರಾವರಿ ಯೋಜನೆಗಳಿಗೆ ಒದಗಿಸುವ ಮೂಲಕ ಉತ್ತರ ಕರ್ನಾಟಕ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದರು. ಎಸ್.ಎಂ.ಕೃಷ್ಣ ಅವರ ಕೊಡುಗೆ ಸ್ಮರಿಸುವ ದೃಷ್ಟಿಯಿಂದ ವಿಧಾನಸೌಧದಲ್ಲಿ ಅವರ ಪ್ರತಿಮೆ ನಿರ್ಮಿಸಬೇಕು.

–**ಎಚ್.ಕೆ.ಪಾಟೀಲ್,** ಕಾನೂನು –ಸಂಸದೀಯ ವ್ಯವಹಾರಗಳ ಸಚಿವ

@vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಬುಧವಾರ 11.12.2024 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕುಟುಂಬ ಸದಸ್ಯರೊಂದಿಗೆ ಎಸ್.ಎಂ.ಕೃಷ್ಣ ದಂಪತಿ

ಪುತ್ರಿಯರಾದ ಮಾಳವಿಕಾ, ಶಾಂಭವಿ ಹಾಗೂ ಅಳಿಯಂದಿರಾದ ಸಿದ್ಧಾರ್ಥ ಹೆಗ್ಡೆ, ಉಮೇಶ್ ಹಿಂಗೋರಾಣಿ, ಮೊಮ್ಮಕ್ಕಳೊಂದಿಗೆ ಎಸ್.ಎಂ.ಕೃಷ್ಣ ಮತ್ತು ಪ್ರೇಮಾ ಕೃಷ್ಣ.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಎಸ್.ಎಂ. ಕೃಷ್ಣ

ಜನನ: 01-05-1932 **ನಿಧನ: 10-12-2024**

ನವ ಕರ್ನಾಟಕದ ಆವಿಷ್ಕಾರಕ್ಕೆ ಮುನ್ನುಡಿ ಬರೆದು, ವಿಶ್ವ ಭೂಪಟದಲ್ಲಿ ಬೆಂಗಳೂರಿನ ಹೆಗ್ಗುರುತು ಮೂಡಿಸಿದ, ಸರ್ವರಿಗೂ ಆದರ್ಶನೀಯರಾಗಿ ಭೌತಿಕವಾಗಿ ನಮ್ಮನ್ನಗಲಿದ ಅಮರ ಚೇತನ ಶ್ರೀ ಎಸ್.ಎಂ. ಕೃಷ್ಣ ರವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ: **11-12-2024 ರ ಬುಧವಾರ ಬೆಳಿಗ್ಗೆ 8:00** ಗಂಟೆಗೆ ಬೆಂಗಳೂರಿನ ಸದಾಶಿವನಗರದ ನಿವಾಸದಿಂದ ಶ್ರೀಯುತರ ಪಾರ್ಥೀವ ಶರೀರವನ್ನು ಟೌನ್‌ಹಾಲ್ ಮೂಲಕ ಮೈಸೂರು ಸರ್ಕಲ್, ಕೆಂಗೇರಿ, ಬಿಡದಿ, ರಾಮನಗರ, ಚನ್ನಪಟ್ಟಣ ಮುಖಾಂತರ ಹೊರಟು, **ಬೆಳಿಗ್ಗೆ 10:30** ಗಂಟೆಗೆ ಸ್ವಗ್ರಾಮ ಸೋಮನಹಳ್ಳಿಯಲ್ಲಿ ಸಾರ್ವಜನಿಕರಿಗೆ ಅಂತಿಮ ದರ್ಶನವನ್ನು ಏರ್ಪಡಿಸಲಾಗಿದೆ. ಮಧ್ಯಾಹ್ನ ಸುಮಾರು **3:00 ಗಂಟೆಗೆ ಅಂತಿಮ ಸಂಸ್ಕಾರದ ವಿಧಿ ವಿಧಾನವನ್ನು** ನೆರವೇರಿಸಲಾಗುತ್ತದೆ.

ಇಂತಿ ದುಃಖತಪ್ತರು

ಶ್ರೀಮತಿ ಪ್ರೇಮ ಎಸ್.ಎಂ. ಕೃಷ್ಣ ರವರು ಮತ್ತು ಕುಟುಂಬ ವರ್ಗದವರು

ಶ್ರೀಮತಿ ಉಷಾ ಮತ್ತು ಡಿ.ಕೆ. ಶಿವಕುಮಾರ್ ರವರು ಹಾಗೂ ಕುಟುಂಬ ವರ್ಗದವರು

(ಅಧ್ಯಕ್ಷರು:- ನ್ಯಾಷನಲ್ ಎಜುಕೇಶನ್ ಫೌಂಡೇಷನ್)

ಎಸ್.ಎಂ. ಕೃಷ್ಣ ರವರ ಅಭಿಮಾನಿಗಳು

ಕೃಷ್ಣ ನಮನ

1941
ಮೈಸೂರಿನ ಒಂಟಿಕೊಪ್ಪಲ್‌ನಲ್ಲಿರುವ ಮಹಾಜನ ಪ್ರಾಥಮಿಕ ಶಾಲೆಯಲ್ಲಿ 3ನೇ ತರಗತಿಗೆ ಸೇರ್ಪಡೆ. ರಾಮಕೃಷ್ಣ ಆಶ್ರಮದಲ್ಲಿ ಇದ್ದುಕೊಂಡು ಇಂಟರ್ ಮೀಡಿಯೇಟ್‌ವರೆಗೆ ಶಿಕ್ಷಣ.

1995
ವಿಧಾನಸಭಾ ಚುನಾವಣೆಯಲ್ಲಿ ಮದ್ದೂರು ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದ ಕೃಷ್ಣ ಅವರು ಸೋಲು ಅನುಭವಿಸಬೇಕಾಯಿತು. ಆ ವೇಳೆ ರಾಜಕೀಯದಲ್ಲಿ ಉನ್ನತ ಮಟ್ಟದಲ್ಲಿದ್ದ ಕೃಷ್ಣ ಅವರ ಸೋಲು ವ್ಯಾಪಕ ಚರ್ಚೆಗೆ ಸಹ ಕಾರಣವಾಯಿತು.

2004
ಕೃಷ್ಣ ಅವರು ತಮ್ಮ ಸ್ವಕ್ಷೇತ್ರ ಮದ್ದೂರನ್ನು ಡಿ.ಸಿ. ತಮ್ಮಣ್ಣ ಅವರಿಗೆ ಬಿಟ್ಟುಕೊಟ್ಟು ಬೆಂಗಳೂರಿನ ಚಾಮರಾಜಪೇಟೆ ಕ್ಷೇತ್ರದಲ್ಲಿ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿ ಗೆಲುವು ಸಾಧಿಸಿದರು. ಬಳಿಕ ಈ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ 2004ರಲ್ಲಿ ಮಹಾರಾಷ್ಟ್ರದ ರಾಜ್ಯಪಾಲರಾಗಿ ನೇಮಕಗೊಂಡರು.

ಅಶ್ರುತರ್ಪಣ

ರಾಜ್ಯದ ಹಾಗೂ ದೇಶದ ಅಭಿವೃದ್ಧಿಗೆ ಅನುಪಮ ಕೊಡುಗೆ ನೀಡಿದ್ದ ಎಸ್.ಎಂ.ಕೃಷ್ಣ ನಿಧನದಿಂದ ನಾಡು ಒಬ್ಬ ಮಹಾನ್ ನಾಯಕನನ್ನು ಕಳೆದುಕೊಂಡಿದೆ. ಕೃಷ್ಣ ಅವರು ಬೆಂಗಳೂರು ನಗರಕ್ಕೆ ಐಟಿ-ಬಿಟಿಯ ಗರಿಮೆ ಮೂಡಿಸುವ ಮೂಲಕ ವಿಶ್ವ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ ಮೇರು ವ್ಯಕ್ತಿ.

– ಕ್ಯಾ. ಬ್ರಿಜೇಶ್ ಚೌಟ, ಬಿಜೆಪಿ ಸಂಸದ

ನನ್ನ ರಾಜಕೀಯ ಜೀವನದಲ್ಲಿ ಗುರುವಿನಂತೆ ಇದ್ದು ಕೃಷ್ಣ ಮಾರ್ಗದರ್ಶನ ನೀಡುತ್ತಿದ್ದರು. ಅವರ ಅವಧಿಯಲ್ಲಿ ಐಟಿ, ಬಿಟಿ ಕ್ಷೇತ್ರದಲ್ಲಿನ ಸಾಧನೆಯಿಂದಾಗಿ ಕರ್ನಾಟಕ ವಿಶ್ವದಲ್ಲೇ ಹೆಸರಾಗುವಂತೆ ಮಾಡಿದ್ದರು. ಅಜಾತಶತ್ರುಗಳಾಗಿದ್ದ ಅವರ ನಡೆ ನುಡಿ, ಜೀವನ ಶೈಲಿ, ರಾಜಕೀಯದ ಹೆಜ್ಜೆಗಳು ಸದಾ ಅನುಕರಣೀಯ.

– ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ಮಾಜಿ ಮುಖ್ಯಮಂತ್ರಿ, ಮಾಜಿ ಕೇಂದ್ರ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಅವರ ನಿಧನದಿಂದ ತೀವ್ರ ದುಃಖವಾಗಿದೆ. ರಾಜ್ಯ ಹಾಗೂ ದೇಶದ ಅಭಿವೃದ್ಧಿಯಲ್ಲಿ ಮಹತ್ವಪೂರ್ಣ ಕಾರ್ಯಗಳನ್ನು ಕೈಗೊಂಡು, ಕೇಂದ್ರ ಸಚಿವರಾಗಿ, ರಾಜ್ಯದ ಮಂತ್ರಿಯಾಗಿ, ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ನಿಧನದಿಂದ ದೇಶಕ್ಕೆ ತುಂಬಲಾರದ ನಷ್ಟವಾಗಿದೆ

–ಥಾವರ್ ಚಂದ್ ಗೆಹ್ಲೋಟ್, ರಾಜ್ಯಪಾಲರು



ರಾಜಕೀಯ ರಂಗದಲ್ಲಿ ಮೇರು ವ್ಯಕ್ತಿತ್ವ ಎಸ್.ಎಂ.ಕೃಷ್ಣರದ್ದು, ಸರಳ ಹಾಗೂ ಆತ್ಮೀಯತೆಯ ಸ್ವಭಾವ. ಹೊಸಚಿಂತನೆಗಳ ಅನೇಕ ಜನಸ್ನೇಹಿ ಅಭಿವೃದ್ಧಿ ಯೋಜನೆಗಳ ಮೂಲಕ ನಾಡಿನ ವಿಕಾಸಕ್ಕೆ ಕೊಡುಗೆ ನೀಡಿದವರು. ಸುದೀರ್ಘ ರಾಜಕೀಯ ಜೀವನದಲ್ಲಿ ತಮ್ಮ ದೂರದೃಷ್ಟಿತ್ವ, ದಕ್ಷ ಆಡಳಿತದಿಂದ ಮಾದರಿಯಾದವರು.

– ದತ್ತಾತ್ರೇಯ ಹೊಸಬಾಳೆ, ಆರೆಸ್ಸೆಸ್ ಸರಕಾರ್ಯವಾಹ

ಕಠಿಣ ಸವಾಲುಗಳನ್ನು ಅತ್ಯಂತ ತಾಳ್ಮೆಯಿಂದ, ಪ್ರಬುದ್ಧತೆಯಿಂದ ಎದುರಿಸಿದವರು ಎಸ್.ಎಂ.ಕೃಷ್ಣ ಅವರು. ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಯ ಜತೆಗೆ ಐಟಿ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರಲು ಅವರ ಕೊಡುಗೆ ಅತಿ ಮುಖ್ಯವಾದುದು

–ಆಯೇಷಾ ಖಾನಂ, ಅಧ್ಯಕ್ಷೆ, ಕರ್ನಾಟಕ ಮಾಧ್ಯಮ ಅಕಾಡೆಮಿ

ಕರ್ನಾಟಕ ಕಂಡ ಮೇರು ವ್ಯಕ್ತಿತ್ವದ ಅಪ್ರತಿಮ ರಾಜಕಾರಣಿ, ದೂರದೃಷ್ಟಿಯುಳ್ಳ ಮುತ್ಸದ್ದಿ ನಾಯಕ. ಐಟಿ-ಬಿಟಿ ಕ್ಷೇತ್ರದಲ್ಲಿ ಕರ್ನಾಟಕವನ್ನು, ಪ್ರಮುಖವಾಗಿ ಬೆಂಗಳೂರು ನಗರವನ್ನು ವಿಶ್ವಕ್ಕೆ ಪರಿಚಯಿಸಿದರು. ಈ ಮೂಲಕ ರಾಜ್ಯದ ಲಕ್ಷಾಂತರ ಯುವಕರಿಗೆ ಉದ್ಯೋಗ ಕಲ್ಪಿಸಿದರು. ಅವರ ರಾಜಕೀಯ ಜೀವನ ನನಗೆ ಅನುಕರಣೀಯ.

–ಡಾ. ಜಿ.ಪರಮೇಶ್ವರ್, ಗೃಹಸಚಿವ

ಅಪರೂಪ

ಜಿಮ್ ದಾಖಲೆ

ಹೊರದೇಶದಲ್ಲಿರುವ ಮಹತ್ವದ ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಬಂದು ಕರ್ನಾಟಕದಲ್ಲಿ ಬೃಹತ್ ಬಂಡವಾಳವನ್ನು ಹೂಡಬೇಕೆಂದು ಯೋಚಿಸಿದ ದೂರದರ್ಶಿ ಕೃಷ್ಣ. ಇದಕ್ಕಾಗಿ ಅವರು ಬೆಂಗಳೂರಿನಲ್ಲಿ ಕಾಲು ಶತಮಾನದ ಹಿಂದೆಯೇ ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್ (ಜಿಮ್) ಅನ್ನು ಹಮ್ಮಿಕೊಂಡಿದ್ದರು.

ರಾಜಕೀಯದ ಜತೆಗೆ ಕಲೆ, ಸಾಹಿತ್ಯ, ಕ್ರೀಡೆಗಳಲ್ಲಿ ಆಸಕ್ತರಾಗಿದ್ದ ಎಸ್.ಎಂ.ಕೃಷ್ಣ ಅವರು ಯುವರಾಜಕಾರಣಿಗಳಿಗೆ ಆದರ್ಶ ಪ್ರಾಯರು. ಸಾಮಾಜಿಕ ಕಳಕಳಿ, ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿಯ ದೂರ ದೃಷ್ಟಿ ಹಾಗೂ ಕಟ್ಟುನಿಟ್ಟಿನ ಆಡಳಿತ ಶೈಲಿ ನಮ್ಮಂಥವರಿಗೆ ಸದಾ ಪ್ರೇರೇಪಣೆ ನೀಡುವಂಥದ್ದು.

–ಡಾ. ಎಂ.ಸಿ ಸುಧಾಕರ್, ಉನ್ನತ ಶಿಕ್ಷಣ ಸಚಿವ

ಎಸ್.ಎಂ ಕೃಷ್ಣ ಏಳುಕೋಟಿ ಕನ್ನಡಿಗರ ಪ್ರೀತಿಗೆ ಪಾತ್ರರಾಗಿದ್ದರು. ಅವರ ಅಗಲಿಕೆ ರಾಜ್ಯ -ರಾಷ್ಟ್ರದ ಜನರಿಗೆ ತುಂಬಲಾರದ ನಷ್ಟವಾಗಿದೆ. ತಮ್ಮ ತಾಳ್ಮೆ, ಸಂಯಮದಿಂದ ರಾಜ್ಯದ ಏಳಿಗೆಗೆ ಕೊಡುಗೆ ಸಾಕಷ್ಟು ನೀಡಿದ್ದಾರೆ. ಯಾವುದೇ ಹುದ್ದೆ ನೀಡಿದರೂ ಅತ್ಯಂತ ಜವಾಬ್ದಾರಿಯಿಂದ ನಿಭಾಯಿಸಿದ್ದಾರೆ.

– ಈಶ್ವರ ಖಂಡ್ರೆ, ಸಚಿವ

ಪಾಂಚಜನ್ಯ ಧಾರಿಯ ಕೃಷ್ಣ ಪಥ

ಹೀಗಿತ್ತು ಕೃಷ್ಣ ಗಾರುಡಿ

- ಎಸ್.ಎಂ.ಕೃಷ್ಣ ಅವರು 1999ರ ಅಕ್ಟೋಬರ್‌ನಲ್ಲಿ ಕರ್ನಾಟಕದ 16ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದಾಗ, ಅವರ ಕಟ್ಟಾಭಿಮಾನಿಗಳು, ನಿರ್ದಿಷ್ಟವಾಗಿ ಮಂಡ್ಯದ ಜನರು ಅಪಾರ ಹೆಮ್ಮೆ ಪಟ್ಟಿದ್ದುಂಟು. ಕಾರಣ ಅವರು ಮಂಡ್ಯದಿಂದ ಮುಖ್ಯಮಂತ್ರಿಯಾದ ಮೊದಲ ವ್ಯಕ್ತಿಯಾಗಿದ್ದರು. ತಮ್ಮ ಅಧಿಕಾರಾವಧಿಯಲ್ಲಿ ಹಲವು ಪ್ರಥಮಗಳಿಗೆ ಹಾಗೂ ಮಹತ್ತರ ಸಾಧನೆಗಳಿಗೆ ಕಾರಣರಾದ ಹೆಚ್ಚುಗಾರಿಕೆ ಕೃಷ್ಣರದ್ದು.
- ಮಹಿಳಾ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಬನೆಯ ಉದ್ದೇಶದೊಂದಿಗೆ 'ಸ್ತ್ರೀಶಕ್ತಿ ಸ್ವ-ಸಹಾಯ' ಸಂಘ ಆರಂಭಿಸಿದ್ದು ಇಂಥ ಸಾಧನೆಗಳಲ್ಲಿ ಎದ್ದುಕಾಣುವಂಥದ್ದು. ಈ ಯೋಜನೆ ಮನೆಮನೆಯನ್ನೂ ತಲುಪಿದ ಕಾರಣ ಕೋಟ್ಯಂತರ ಮಹಿಳೆಯರು ಸ್ವಾವಲಂಬಿ ಜೀವನ ನಡೆಸುವುದಕ್ಕೆ ಸಾಧ್ಯವಾಗಿದೆ.
- ರಾಜ್ಯದ ಅಸಂಘಟಿತ ವಲಯದ ಕಾರ್ಮಿಕರು, ಮಧ್ಯಮ ಮತ್ತು ಕಡಿಮೆ ಆದಾಯವಿರುವವರನ್ನು ಕೇಂದ್ರೀಕರಿಸಿ, ಇಂಥ ಎಲ್ಲರಿಗೂ ಕೈಗೆಟುಕುವ ಆರೋಗ್ಯ ಸೇವೆ ನೀಡಲೆಂದು 'ಯಶಸ್ವಿನಿ' ಯೋಜನೆಯನ್ನು ಕೃಷ್ಣ ಆರಂಭಿಸಿದರು.
- ಕೃಷ್ಣಾ ಮೇಲ್ದಂಡೆ ಯೋಜನೆಯಿಂದಾಗಿ ಭೂಮಿ ಕಳೆದುಕೊಂಡವರು ಪರಿಹಾರಕ್ಕಾಗಿ ಆಗ್ರಹಿಸಿ ಬಾಗಲಕೋಟೆಯಲ್ಲಿ ಬೃಹತ್ ಪ್ರತಿಭಟನೆ ನಡೆಸಿದಾಗ, ಸಚಿವ ಸಂಪುಟದ ಸಮೇತ ಅಲ್ಲಿಗೆ ತೆರಳಿದ ಕೃಷ್ಣ ಅವರು 638 ಕೋಟಿ ರು. ಪರಿಹಾರ ಘೋಷಿಸಿದರು.
- ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಶುರುವಾಗಿದ್ದು ಹಾಗೂ ರಾಜ್ಯದ ಮೊದಲ ಫ್ಲೈ ಓವರ್ ತಲೆಯೆತ್ತಿದ್ದು ಕೃಷ್ಣರ ಕಾಲದಲ್ಲೇ.
- ಸರಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದ ಯೋಜನೆಯನ್ನು ಆರಂಭಿಸಿದ್ದು, ಭೂದಾಖಲೆಗಳ ಡಿಜಿಟಲೀಕರಣ, ಕಾವೇರಿ ಮತ್ತು ಕೃಷ್ಣಾ ನದಿಗಳಿಗೆ ಸಂಬಂಧಿಸಿದ ವಿವಾದಿತ ವಿಷಯದಲ್ಲಿ ಕೈಗೊಂಡ ನಿಲುವು, ಜ್ಞಾನಾಧಾರಿತ ಅಭಿವೃದ್ಧಿಗೆ ಹಾಗೂ ಬೆಂಗಳೂರಿನಲ್ಲಿ 'ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ' ವಲಯಗಳ ಅಭಿವೃದ್ಧಿಗೆ ಕೊಟ್ಟ ಕೊಡುಗೆಯಿಂದಾಗಿ ಕೃಷ್ಣರು ಸಾರ್ವಜನಿಕ ವಲಯದಿಂದ ಪ್ರಶಂಸೆಗೆ ಪಾತ್ರರಾದರು.
- ವರನಟ ಡಾ.ರಾಜ್‌ಕುಮಾರ್ ಅವರು ಕಾಡುಗಳ್ಳ ವೀರಪ್ಪನ್‌ನಿಂದ ಅಪಹರಣಕ್ಕೊಳಗಾಗಿದ್ದು ಅವರು ಸಿಎಂ ಆಗಿದ್ದ ಅವಧಿಯಲ್ಲಿ ಘಟಿಸಿದ ಒಂದು ಮಹಾನ್ ಸಂಕಷ್ಟ. 108 ದಿನಗಳವರೆಗೆ ವೀರಪ್ಪನ್ ಹಿಡಿತದಲ್ಲಿದ್ದ 'ಅಣ್ಣಾವ್ರನ್ನು' ಬಿಡಿಸುವ ನಿಟ್ಟಿನಲ್ಲಿ ಕೃಷ್ಣರು ಮೆರೆದ ಸಂಯಮ, ತಾಳ್ಮೆ ಹಾಗೂ ಸಂಭಾವಿತ ವರ್ತನೆ, ಆಗಿನ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾರೊಂದಿಗೆ ನಡೆಸಿದ ಸಮಾಲೋಚನೆ ಇತ್ಯಾದಿಗಳು ಬಹುಜನರ ಮೆಚ್ಚುಗೆಗೆ ಪಾತ್ರವಾದವು.
- ಕೃಷ್ಣರ ದರ್ಬಾರಿನ ವೇಳೆ ರಾಜ್ಯಕ್ಕೆ ಕ್ಷಾಮ ಒದಗಿದಾಗ, ರಾಜ್ಯದ ಜನರ ಅದರಲ್ಲೂ ನಿರ್ದಿಷ್ಟವಾಗಿ ಕೃಷಿಕರ ಹಿತರಕ್ಷಣೆಗೆಂದು ಮೋಡಬಿತ್ತನೆ ಮಾಡಿಸಿ ಮಳೆ ತರಿಸುವ ಕಾರ್ಯಕ್ಕೆ ಕೃಷ್ಣ ಯೋಜಿಸಿದ್ದರು; ಆದರೆ ದುರದೃಷ್ಟವಶಾತ್ ಈ ಕಾರ್ಯಕ್ರಮ ಕೈಕೊಟ್ಟಿತು.

1932
ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಸೋಮನಹಳ್ಳಿಯಲ್ಲಿ ಜನನ. ತಂದೆ ಮಲ್ಲಯ್ಯ, ತಾಯಿ ತಾಯಮ್ಮ. ಮೈಸೂರಿನಲ್ಲಿ ಪ್ರಾಥಮಿಕ ಶಿಕ್ಷಣ. ನಂತರ ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಪ್ರೌಢಶಿಕ್ಷಣ. ಮೈಸೂರಿನ ಯುವರಾಜ ಕಾಲೇಜಿನಲ್ಲಿ ಪಿಯುಸಿ ಹಾಗೂ ಮಹಾರಾಜ ಕಾಲೇಜಿನಲ್ಲಿ ಪದವಿ. ನಂತರ ಬೆಂಗಳೂರಿನ ಸರಕಾರಿ ಕಾನೂನು ಕಾಲೇಜಿನಲ್ಲಿ ಅಧ್ಯಯನ.

1958
ಉನ್ನತ ವ್ಯಾಸಂಗಕ್ಕೆಂದು ಅಮೆರಿಕಕ್ಕೆ ಪಯಣ. ಅಲ್ಲಿನ ಟೆಕ್ಸಾಸ್ ರಾಜ್ಯದ ಸದರ್ನ್ ಮೆಥಡಿಸ್ಟ್ ವಿಶ್ವವಿದ್ಯಾಲಯದಲ್ಲಿ ಎಂ.ಸಿ.ಎಲ್. ಪದವಿ ಸ್ವೀಕಾರ; ಜಾರ್ಜ್ ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡುವಾಗ ಪ್ರತಿಷ್ಠಿತ 'ಫುಲ್‌ಬ್ರೈಟ್ ವಿದ್ಯಾರ್ಥಿ ವೇತನ' ಪಡೆದ ಹೆಗ್ಗಳಿಕೆ. ಆದರೆ ಅಲ್ಲಿ ಪಿಎಚ್‌ಡಿ ಮಾಡುವ ಮಹತ್ವಾಕಾಂಕ್ಷೆ ಪೂರ್ಣಗೊಳ್ಳಲಿಲ್ಲ.

1961
ಕೆನಡಿ ಭೇಟಿ. ಅಮೆರಿಕದಲ್ಲಿನ ವ್ಯಾಸಂಗಾವಧಿಯಲ್ಲಿ ಜಾನ್ ಎಫ್.ಕೆನಡಿ ಅವರ ಪ್ರಭಾವಕ್ಕೆ ಒಳಗಾಗಿ ರಾಜಕಾರಣದೆಡೆಗೆ ಆಕರ್ಷಿತರಾದರು ಕೃಷ್ಣ. ಭಾರತಕ್ಕೆ ಮರಳಿದ ನಂತರ ಬೆಂಗಳೂರಿನ ರೇಣುಕಾಚಾರ್ಯ ಕಾಲೇಜಿನಲ್ಲಿ ಕೆಲ ಕಾಲ 'ಅಂತಾರಾಷ್ಟ್ರೀಯ ನ್ಯಾಯ' ವಿಷಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಕೆ.

1962
ಚುನಾವಣಾ ರಾಜಕೀಯಕ್ಕೆ ಪದಾರ್ಪಣೆ. 'ಪ್ರಜಾ ಸೋಷಲಿಸ್ಟ್ ಪಕ್ಷ'ದ ಬೆಂಬಲದೊಂದಿಗೆ ಮದ್ದೂರು ವಿಧಾನಸಭಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಕೆ.ವಿ.ಶಂಕರಗೌಡರ ವಿರುದ್ಧದ ಆ ಹಣಾಹಣಿಯಲ್ಲಿ ಮೊದಲ ಯತ್ನದಲ್ಲೇ ಗೆಲುವಿನ ನಗು. ನಂತರ 'ಪ್ರಜಾ ಸೋಷಲಿಸ್ಟ್ ಪಕ್ಷ'ಕ್ಕೆ ಅಧಿಕೃತ ಸೇರ್ಪಡೆ.

1962-1971
ಪ್ರಜಾ ಸೋಷಲಿಸ್ಟ್ ಪಕ್ಷದೊಡನೆ ಒಡನಾಟ; 1967ರ ವಿಧಾನಸಭಾ ಚುನಾವಣೆಯಲ್ಲಿ ಎಂ.ಎಂ. ಗೌಡರಿಂದ ಸೋಲು.

1966
ಏಪ್ರಿಲ್ 29: ಪ್ರೇಮ ಅವರೊಂದಿಗೆ ವಿವಾಹ.



1968
ಚುನಾಯಿತ ಸದಸ್ಯರ ಸಾವಿನ ಕಾರಣದಿಂದಾಗಿ ನಡೆದ ಮಂಡ್ಯ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸಿ ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ ರೋಚಕ ಗೆಲುವು.

1971
ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಸೇರ್ಪಡೆ ಹಾಗೂ ಲೋಕಸಭಾ ಸದಸ್ಯರಾಗಿ ಪುನರಾಯ್ಕೆ. ತರುವಾಯ, ಕರ್ನಾಟಕದ ಮುಖ್ಯಮಂತ್ರಿ ದೇವರಾಜ ಅರಸರಿಂದ ರಾಜ್ಯಕ್ಕೆ ಬರುವಂತೆ ಆಹ್ವಾನ.

1972
ಸಂಸತ್ ಸ್ಥಾನಕ್ಕೆ ರಾಜೀನಾಮೆ ನೀಡಿಕೆ. ವಿಧಾನ ಪರಿಷತ್ತಿಗೆ ಕೃಷ್ಣರು ಆಯ್ಕೆಯಾಗುವಂತೆ ನೋಡಿಕೊಂಡ ಅರಸುರವರಿಂದ ಮಂತ್ರಿಗಿರಿಯ 'ಭಾಗ್ಯ' ಪ್ರಾಪ್ತಿ. ವಾಣಿಜ್ಯ, ಉದ್ಯಮ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಸಮರ್ಥ ಕಾರ್ಯನಿರ್ವಹಣೆ.

1980
ಪುನಃ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು.

1983
ಚುನಾವಣಾ ಕದನದಲ್ಲಿ ಗೆದ್ದು 3ನೇ ಬಾರಿ ಸಂಸದರೆನಿಸಿಕೊಂಡ ಸಾಧನೆಗೆ ಮಣೆ ಹಾಕಿದ ಪ್ರಧಾನಿ ಇಂದಿರಾ ಗಾಂಧಿ. ಅವರ ನೇತೃತ್ವದ ಕೇಂದ್ರ ಸರಕಾರದಲ್ಲಿ 1983ರಲ್ಲಿ ಉದ್ಯಮ ಖಾತೆಯ ಮತ್ತು 1984ರಲ್ಲಿ ಹಣಕಾಸು ಖಾತೆಯ ರಾಜ್ಯ ಸಚಿವರಾಗುವ ಮಾನ್ಯತೆ.

1984
ಲೋಕಸಭಾ ಚುನಾವಣೆಯಲ್ಲಿ ಕೆ.ವಿ.ಶಂಕರ ಗೌಡರಿಂದ ಪರಾಭವ.

1989
ಮದ್ದೂರು ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು. 1989 ಡಿಸೆಂಬರ್- 1993ರ ಜನವರಿ: ಕರ್ನಾಟಕ ವಿಧಾನ ಸಭೆಯ ಸ್ಪೀಕರ್ ಆಗಿ ಸೇವೆ ಸಲ್ಲಿಕೆ.

1993
ಜನವರಿ 21-1994ರ ಡಿಸೆಂಬರ್ 11: ಕರ್ನಾಟಕದ ಮೊದಲ ಉಪಮುಖ್ಯಮಂತ್ರಿಯಾಗಿ ಅಧಿಕಾರ ನಿರ್ವಹಣೆ .

1995
ವಿಧಾನಸಭಾ ಚುನಾವಣೆಯಲ್ಲಿ ಮದ್ದೂರು ಕ್ಷೇತ್ರದಿಂದ ಸ್ಪರ್ಧಿಸಿದ್ದ ಕೃಷ್ಣರು ಸೋಲಿನ ರುಚಿ ಉಣ್ಣಬೇಕಾಯಿತು; ಅಷ್ಟು ಹೊತ್ತಿಗಾಗಲೇ ರಾಜಕೀಯ ವಲಯದಲ್ಲಿ ಗಮನಾರ್ಹ ಸ್ತರದಲ್ಲೇ ಗುರುತಿಸಿಕೊಂಡಿದ್ದ ಅವರ ಈ ಸೋಲು ಹಲವರ ಹುಬ್ಬೇರಿಸಿತು.

1996
ರಾಜ್ಯಸಭಾ ಸದಸ್ಯರಾಗಿ ಆಯ್ಕೆ.



1999
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ ಶುರು. 1999ರ ವಿಧಾನಸಭಾ ಚುನಾವಣೆಯಲ್ಲಿ 'ಪಾಂಚಜನ್ಯ' ಮೊಳಗಿಸಿ ಗೆಲುವು.

1999
ಅಕ್ಟೋಬರ್ -2004ರ ಮೇ 8: ರಾಜ್ಯದ 16ನೇ ಮುಖ್ಯಮಂತ್ರಿಯಾಗಿ ದರ್ಬಾರು.

2004
ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರಿನ ಚಾಮರಾಜಪೇಟೆ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು. 2004 ಡಿಸೆಂಬರ್ 12- 2008ರ ಮಾರ್ಚ್ 5: ಮಹಾರಾಷ್ಟ್ರದ 18ನೇ ರಾಜ್ಯಪಾಲರಾಗಿ ಕಾರ್ಯನಿರ್ವಹಣೆ.

2010
ರಾಜ್ಯಸಭಾ ಸದಸ್ಯರಾಗಿ ಆಯ್ಕೆ. ಪ್ರಧಾನಮಂತ್ರಿ ಡಾ.ಮನಮೋಹನ್ ಸಿಂಗ್ ಸಂಪುಟದಲ್ಲಿ 27ನೇ ವಿದೇಶಾಂಗ ಖಾತೆ ಸಚಿವರಾಗಿ 2012ರ ಅಕ್ಟೋಬರ್ 28ರವರೆಗೆ ಕಾರ್ಯನಿರ್ವಹಣೆ. ವಿಶ್ವಸಂಸ್ಥೆಯಲ್ಲಿ ಒಮ್ಮೆ ಹಾಗೂ ಕಾಮನ್‌ವೆಲ್ತ್ ಒಕ್ಕೂಟದಲ್ಲಿ ಒಮ್ಮೆ ಭಾರತವನ್ನು ಪ್ರತಿನಿಧಿಸಿದ ಹೆಗ್ಗಳಿಕೆ.

2012
ವಿದೇಶಾಂಗ ಖಾತೆ ಸಚಿವರಾಗಿ ತಜಿಕಿಸ್ತಾನ್‌ಗೆ ನೀಡಿದ ಭೇಟಿ ಸೇರಿದಂತೆ ಹತ್ತು ಹಲವು ದೇಶಗಳ ಜತೆಗಿನ ಬಾಂಧವ್ಯ ವರ್ಧನೆಗೆ ಶ್ರಮಿಸಿ, ಆರ್ಥಿಕ ಮತ್ತು ಇಂಧನ ಸಂಬಂಧಿತ ವಲಯಗಳಲ್ಲಿನ ಒಡಂಬಡಿಕೆಗಳಿಗೆ ಮತ್ತಷ್ಟು ಬಲ ತುಂಬಿದ ಸಾಧನೆ.

2017
ಜನವರಿ 28: ಸುದೀರ್ಘ ಅವಧಿಯವರೆಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಲ್ಲಿದ್ದು ವೈವಿಧ್ಯಮಯ ರಾಜಕೀಯ ಚಟುವಟಿಕೆಗಳು ಮತ್ತು ವಿವಿಧ ಹೊಣೆಗಾರಿಕೆಗಳ ನಿರ್ವಹಣೆಯ ನಂತರ ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಪಕ್ಷದಿಂದ ನಿರ್ಗಮನ, ಮಾರ್ಚ್‌ನಲ್ಲಿ ಬಿಜೆಪಿಗೆ ಸೇರ್ಪಡೆ. ಕೆಲ ತಿಂಗಳಲ್ಲೇ ಸಕ್ರಿಯ ರಾಜಕಾರಣಕ್ಕೆ ನಿವೃತ್ತಿ ಘೋಷಣೆ.

2019
ಡಿಸೆಂಬರ್: 'ಸ್ಮೃತಿವಾಹಿನಿ' ಹೆಸರಿನ ಎಸ್.ಎಂ. ಕೃಷ್ಣ ಅವರ ಜೀವನಚರಿತ್ರೆ ಲೋಕಾರ್ಪಣೆ. ತಮ್ಮ ಅಧಿಕಾರಾವಧಿಯಲ್ಲಿ ಮೇರುನಟ ಡಾ.ರಾಜ್‌ಕುಮಾರ್ ರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿದಾಗ ತಾವು ಅನುಭವಿಸಿದ ತಾಕಲಾಟಗಳು, ರಾಜ್‌ಕುಮಾರ್ ಅವರ ಬಿಡುಗಡೆಯಾಗುವವರೆಗೂ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆದಿದ್ದು, ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ಕಾಂಗ್ರೆಸ್ ಪಕ್ಷವನ್ನು ಸೇರಲು ತುದಿಗಾಲಲ್ಲಿ ನಿಂತಿದ್ದು ಸೇರಿದಂತೆ ಅನೇಕ ಆಸಕ್ತಿದಾಯಕ ಘಟನೆಗಳನ್ನು ಕೃಷ್ಣ ಅವರು ಈ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

2023
ಕೇಂದ್ರ ಸರಕಾರದ ವತಿಯಿಂದ ನೀಡಲಾಗುವ 'ಪದ್ಮವಿಭೂಷಣ' ಪುರಸ್ಕಾರಕ್ಕೆ ಭಾಜನ. 2023 ಜುಲೈ 29: 'ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್' (ಬಿಎಂಎ) ವತಿಯಿಂದ ನೀಡಲಾದ 'ಜೀವಮಾನ ಸಾಧನೆ' ಪುರಸ್ಕಾರಕ್ಕೆ ಭಾಜನ.

2024
ಮಾರ್ಚ್ 3: ಮೈಸೂರು ವಿಶ್ವವಿದ್ಯಾಲಯ ನೀಡಿದ ಗೌರವ ಡಾಕ್ಟರೇಟ್ ಸ್ವೀಕಾರ.

2024 ಡಿಸೆಂಬರ್ 10: ಮುಂಜಾನೆ 2.30ರ ಸುಮಾರಿಗೆ ಬೆಂಗಳೂರಿನ ಸದಾಶಿವ ನಗರದ ನಿವಾಸದಲ್ಲಿ ನಿಧನ.

ಬಿಜೆಪಿಯಲ್ಲಿ ನಾಯಕನಾಗದ ಕೃಷ್ಣ

ರಾಜಕೀಯ ಸಂಧ್ಯಾಕಾಲದಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಹಿರಿಯ ರಾಜಕಾರಣಿ ಎಸ್.ಎಂ ಕೃಷ್ಣ, ನಂತರ ಸಕ್ರಿಯ ರಾಜಕೀಯದಲ್ಲಿ ಅಷ್ಟಾಗಿ ತೊಡಗಿಕೊಳ್ಳಲಿಲ್ಲ. ಆದರೂ ಎರಡು ಉಪ ಚುನಾವಣೆ ಮತ್ತು ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಬಿಜೆಪಿ ಪರ ಪ್ರಚಾರ ಮಾಡಿದ್ದರು. ನಾಲ್ಕೂವರೆ ದಶಕ ರಾಜಕಾರಣ ನಡೆಸಿದ್ದ ಕೃಷ್ಣ ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಬಂದು ಕೇವಲ 6 ವರ್ಷಕ್ಕೆ ರಾಜಕಾರಣಕ್ಕೆ ಗುಡ್ ಬೈ ಹೇಳಿದ್ದರು. ಹೀಗಿದ್ದರೂ ಕೃಷ್ಣ ಅವರ ಅನುಭವವನ್ನು ಬಿಜೆಪಿಗರು ಪಡೆದುಕೊಳ್ಳದಿದ್ದುದು ರಾಜಕೀಯ ದುರಂತ.

ಎಸ್‌ಎಂಕೆ ಅವರು ಕಾಂಗ್ರೆಸ್‌ನಿಂದ ರಾಜ್ಯಾಧ್ಯಕ್ಷ, ಶಾಸಕ, ಸಂಸದ, ಸಚಿವ, ಸ್ಪೀಕರ್, ಮುಖ್ಯಮಂತ್ರಿ, ಕೇಂದ್ರ ಸಚಿವ, ರಾಜ್ಯಪಾಲ ಹುದ್ದೆಯನ್ನು ಅಲಂಕರಿಸಿದ್ದರು. ಇದಾದ ನಂತರ 2017ರ ಮಾರ್ಚ್ 22 ರಂದು ದೆಹಲಿಯಲ್ಲಿ ಕೇಂದ್ರದ ನಾಯಕರ ಸಮ್ಮುಖದಲ್ಲಿ ಎಸ್.ಎಂ.ಕೃಷ್ಣ ಅಧಿಕೃತವಾಗಿ ಬಿಜೆಪಿ ಸೇರಿದರು. ನಂತರ ನಂಜನಗೂಡು ಮತ್ತು ಗುಂಡ್ಲುಪೇಟೆಯಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸುವುದಾಗಿ ಘೋಷಿಸಿ ಬಿಜೆಪಿ ಪರ ಮೊದಲ ಪ್ರಚಾರ ಕಾರ್ಯ ನಡೆಸಿದರು. ನಂತರ ಬಿಜೆಪಿಯ ಯಾವುದೇ ಹುದ್ದೆ ಹಾಗೂ ಜವಾಬ್ದಾರಿ ವಹಿಸಿಕೊಳ್ಳಲಿಲ್ಲ.

ಒಂದು ವರ್ಷ ಪಕ್ಷದಲ್ಲಿ ತಟಸ್ಥವಾಗಿಯೇ ಉಳಿದುಕೊಂಡಿದ್ದ ಕೃಷ್ಣ ನಂತರ 2018ರಲ್ಲಿ ನಡೆದ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದರು. ಒಕ್ಕಲಿಗ ಪ್ರಾಬಲ್ಯದ ತುಮಕೂರು, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ಹಾಸನ, ಮೈಸೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರಿನ ಮೂರು ಜಿಲ್ಲೆಗಳು, ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರಚಾರ ನಡೆಸಿದ್ದರು. ಬಳಿಕ 2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಪ್ರಚಾರ ಮಾಡಿದ್ದರು.

ರಾಜ್ಯ ಬಿಜೆಪಿ ನಾಯಕರ ಆಹ್ವಾನ ಸ್ವೀಕರಿಸಿದ್ದ ಕೃಷ್ಣ ಅವರು, ಒಕ್ಕಲಿಗ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಿದ್ದರು. ಮಂಡ್ಯದ ಪಕ್ಷೇತರ ಅಭ್ಯರ್ಥಿ ಸುಮಲತಾ ಅಂಬರೀಷ್‌ಗೆ ಬಿಜೆಪಿ ಬೆಂಬಲ ಘೋಷಿಸಿದ್ದರಿಂದ ಕೃಷ್ಣ ಸುಮಲತಾ ಪರವಾಗಿಯೇ ಮತಯಾಚನೆ ಮಾಡಿದ್ದರು. ಈ ಚುನಾವಣೆಯಲ್ಲಿ ಬಿಜೆಪಿಗೆ ಭರ್ಜರಿ ಗೆಲುವು ಸಿಕ್ಕಿತ್ತು. ಪಕ್ಷದ ಮಟ್ಟಿಗೆ ದಾಖಲೆ ಎನ್ನುವಂತೆ 25 ಸ್ಥಾನ ದಕ್ಕಿತ್ತು. ಈ ಸಾಧನೆಯಲ್ಲಿ ಕೃಷ್ಣ ಅವರ ಪಾತ್ರವೂ ಇದೆ ಎನ್ನುವುದನ್ನು ಬಿಜೆಪಿ ನಾಯಕರೇ ಒಪ್ಪಿಕೊಳ್ಳುತ್ತಾರೆ. ಇನ್ನು ರಾಜ್ಯ ಬಿಜೆಪಿ ಮಟ್ಟಿಗೆ ಕೃಷ್ಣ ಅವರ ಬಹುದೊಡ್ಡ ಕೊಡುಗೆ ಎಂದರೆ ರಾಜ್ಯದಲ್ಲಿ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರಕಾರ ಪತನಗೊಂಡು ಬಿಜೆಪಿ ಸರಕಾರ ರಚನೆಯಾಗಿದ್ದರ ಹಿಂದೆ ಮಾಡಿದ್ದ ಕೆಲಸ. 2019ರ ಲೋಕಸಭಾ ಚುನಾವಣೆ ಮುಗಿಯುತ್ತಿದ್ದಂತೆ ಕಾಂಗ್ರೆಸ್ ಹಾಗೂ ಜೆಡಿಎಸ್‌ನ 17 ಶಾಸಕರ ರಾಜೀನಾಮೆ ನೀಡಿದ್ದರು. ಆಗ ಮೈತ್ರಿ ಸರಕಾರ ಪತನಗೊಂಡು ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಸರಕಾರ ರಚನೆಯಾಗಿತ್ತು. ಈ ಬೆಳವಣಿಗೆಯಲ್ಲಿ ಕೃಷ್ಣ ತೆರೆಮರೆಯಲ್ಲಿ ಕಸರತ್ತು ನಡೆಸಿದ್ದರು. ಇದನ್ನು ಸ್ವತಃ ಕೃಷ್ಣ ಅವರೇ ಬಹಿರಂಗವಾಗಿ ಹೇಳಿಕೊಂಡಿದ್ದರು. ಉಪ ಚುನಾವಣೆ ವೇಳೆ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸುಧಾಕರ್ ಪರ ಪ್ರಚಾರ ಮಾಡಿದ್ದ ಮಾಜಿ ಸಿಎಂ ಎಸ್.ಎಂ. ಕೃಷ್ಣ 'ಶಾಸಕರ ರಾಜೀನಾಮೆ ಕೊಡಿಸುವಲ್ಲಿ ನಾನೂ ಪಾತ್ರಧಾರಿ' ಎಂದು ಹೇಳಿದ್ದರು. ಉಪ ಚುನಾವಣೆಯ ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ಹೆಸರು ಇರದೇ ಇದ್ದರೂ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಬಿಜೆಪಿ ಅಭ್ಯರ್ಥಿಗಳ ಪರ ಮತ ಯಾಚಿಸಿದ್ದರು.

ಬಳಸಿಕೊಳ್ಳದ ಬಿಜೆಪಿ

ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಕೃಷ್ಣರನ್ನು ಬಿಜೆಪಿಯಲ್ಲಿ ಕಡೆಗಣಿಸಲಾ ಗಿತ್ತು ಎನ್ನುವ ಆರೋಪವಿದೆ. ಯಾವುದೇ ಸ್ಥಾನಮಾನ, ಜವಾಬ್ದಾರಿ ನೀಡಲಿಲ್ಲ. ಪಕ್ಷದಲ್ಲಿ ಮೂಲೆಗುಂಪು ಮಾಡಲಾಗಿದೆ ಎನ್ನುವ ಮಾತುಗಳು ಕೇಳಿಬಂದಿದ್ದವು. ಆದರೆ ಇದರ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳದೇ ಇದ್ದ ಕೃಷ್ಣ ಅವರು ಮನೆಗೆ ಬರುವ ಬಿಜೆಪಿ ನಾಯಕರಿಗೆ ಗೌರವ ಪೂರ್ವಕ ಸ್ವಾಗತ ಕೋರುತ್ತಿದ್ದರು. ಬಿಜೆಪಿ ನಾಯಕರ ಮನೆ ಬಾಗಿಲಿನತ್ತ ಸುಳಿಯದೇ ಇದ್ದರೂ ಬಿಜೆಪಿ ನಾಯಕರೇ ತಮ್ಮ ನಿವಾಸಕ್ಕೆ ಬರುವಂತೆ ಮಾಡಿಕೊಂಡಿದ್ದು ಕೃಷ್ಣ ರಾಜಕೀಯ ಪ್ರೌಢಿಮೆಗೆ ಹಿಡಿದ ಕೈಗನ್ನಡಿಯಾಗಿತ್ತು.

ಕಾಂಗ್ರೆಸ್ ಹಡಗಿಗೆ ಕೃಷ್ಣ ಹತ್ತಿದ ಕತೆ

ಆರ್.ಟಿ.ವಿಠ್ಠಲಮೂರ್ತಿ

ಅವತ್ತು ದಿಲ್ಲಿಯಲ್ಲಿ ಪ್ರಧಾನಿ ಇಂದಿರಾ ಗಾಂಧಿ ನೇತೃತ್ವದಲ್ಲಿ ಸಭೆಯೊಂದು ಏರ್ಪಾಡಾಗಿತ್ತು. ಸಭೆಯೇನೋ ಆರಂಭವಾಯಿತು. ಆದರೆ ಸಭೆಯ ಕಾರ್ಯಸೂಚಿಯನ್ನು ಓದಬೇಕಿದ್ದ ಇಂದಿರಾ ಗಾಂಧಿ ಒಮ್ಮೆ ಗಂಟಲು ಸವರಿಕೊಂಡರು. ಅದೇಕೋ ಗಂಟಲು ಕೈ ಕೊಟ್ಟಿತ್ತು.

ಹೀಗಾಗಿ ತಮ್ಮೆದುರಿಗಿದ್ದ ಕಾರ್ಯಸೂಚಿಯನ್ನು ಓದಲಾಗದ ಇಂದಿರಾ ಗಾಂಧಿ ಮೌನವಾಗಿ ಸಭೆಯ ಸುತ್ತ ಕಣ್ಣಾಡಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಗಣ್ಯ ಅತಿಥಿಗಳು ತಮ್ಮತ್ತಲೇ ನೋಡುತ್ತಿದ್ದಾರೆ. ಹೀಗಾಗಿ ಮುಂದೇನು ಮಾಡಬೇಕು ಅಂತ ಇಂದಿರಾ ಯೋಚಿಸುತ್ತಿದ್ದಂತೆಯೇ ಸಭೆಯ ಕೊನೆಯಲ್ಲಿ ನಿಂತಿದ್ದ ಯುವ ಸಂಸದರೊಬ್ಬರು ಅವರ ಕಣ್ಣಿಗೆ ಕಾಣಿಸಿದ್ದಾರೆ. ಆ ಯುವ ಸಂಸದರ ಕತೆಯಾದರೂ ಅಷ್ಟೇ. ಅವರಿಗೆ ಸಭೆಯಲ್ಲಿ ಕೂರಲು ಕುರ್ಚಿ ಸಿಕ್ಕಿಲ್ಲ.

ಹೀಗಾಗಿ ಕುರ್ಚಿ ಹುಡುಕುತ್ತಿದ್ದ ಅವರಿಗೆ ಒಂದು ಕುರ್ಚಿ ಕಾಣಿಸಿದೆ. ಆದರೆ ಖಾಲಿ ಇದ್ದ ಕುರ್ಚಿ ಸ್ವತಃ ಪ್ರಧಾನಿ ಇಂದಿರಾ ಗಾಂಧಿ ಅವರ ಪಕ್ಕದ್ದು. ಹಾಗಂತಲೇ ಮುಂದೇನು ಮಾಡಬೇಕು ಎನ್ನುವಂತೆ ಅವರು ಇಂದಿರಾ ಕಡೆ ನೋಡಿದ್ದಾರೆ. ಆ ಕ್ಷಣದಲ್ಲಿ ಪ್ರಧಾನಿ ಇಂದಿರಾ ಮತ್ತು ಆ ಯುವ ಸಂಸದರ ಕಣ್ಣು ಪರಸ್ಪರ ಸಂಧಿಸಿವೆ. ಹೀಗೆ ಪರಸ್ಪರ ಒಬ್ಬರನ್ನೊಬ್ಬರು ನೋಡುತ್ತಿದ್ದಂತೆಯೇ ಒಂದು ವಿಸ್ಮಯ ಸಂಭವಿಸಿದೆ.

ಅದೆಂದರೆ ಇಂದಿರಾ ತಕ್ಷಣವೇ ಆ ಯುವ ಸಂಸದರನ್ನು ತಮ್ಮ ಬಳಿ ಬರುವಂತೆ ಸೂಚಿಸಿದ್ದಾರೆ. ಸ್ವತಃ ಪ್ರಧಾನಿಯೇ ತಮ್ಮ ಬಳಿ ಬರುವಂತೆ ಸೂಚಿಸಿದಾಗ ಆ ಯುವ ಸಂಸದರು ಬೆರಗಾಗಿದ್ದಾರಾದರೂ ಅದೇ ಕಾಲಕ್ಕೆ ಪುಳಕಿತರಾಗಿದ್ದಾರೆ. ಹೀಗಾಗಿ ಅದೇ ಭಾವದಲ್ಲಿ ಇಂದಿರಾ ಹತ್ತಿರ ಹೋದಾಗ ಅವರು ತಮ್ಮ ಪಕ್ಕದ ಕುರ್ಚಿಯಲ್ಲಿ ಕೂರುವಂತೆ ಸೂಚಿಸಿದ್ದಾರೆ.

ಹೀಗೆ ತಮ್ಮ ಪಕ್ಕ ಕುಳಿತ ಸಂಸದರ ಮುಂದೆ, ತಮ್ಮ ಮುಂದಿದ್ದ ಕಾರ್ಯಸೂಚಿಯನ್ನು ತಳ್ಳಿದ ಇಂದಿರಾ, ಸಭೆಯಲ್ಲಿ ಅದನ್ನು ಓದುವಂತೆ, ಸಭೆಯ ನಡಾವಳಿಗಳನ್ನು ನೋಡಿಕೊಳ್ಳಲು ಸೂಚಿಸಿದ್ದಾರೆ.

ದೇಶದ ಪ್ರಧಾನಿ ತಮಗೆ ನೀಡಿದ ಈ ಜವಾಬ್ದಾರಿಯನ್ನು ಆ ಸಂಸದರು ಎಷ್ಟು ಚೆನ್ನಾಗಿ ನಿರ್ವಹಿಸಿದರೆಂದರೆ ಅವರ ಅಸ್ಖಲಿತ ಭಾಷೆ ಇಂದಿರಾ ಸೇರಿದಂತೆ ಇಡೀ ಸಭೆಯನ್ನು ಮಂತ್ರಮುಗ್ಧಗೊಳಿಸಿದೆ. ಹಾಗಂತಲೇ ಸಭೆ ಮುಗಿದ ನಂತರ ಆ ಯುವ ಸಂಸದರನ್ನು ಮೆಚ್ಚುಗೆಯ ಕಣ್ಣುಗಳಿಂದ ನೋಡಿದ ಇಂದಿರಾ ತಮ್ಮ ಕೈಲಿದ್ದ ಒಂದು ಚೀಟಿಯನ್ನು ಕೊಟ್ಟಿದ್ದಾರೆ. ನೋಡಿದರೆ ಅದರಲ್ಲಿ 'ಕಮ್ ಆ್ಯಂಡ್ ಮೀಟ್ ಮೀ' ಅಂತ ಆಹ್ವಾನ.

ಹೀಗೆ ತಮ್ಮನ್ನು ಭೇಟಿ ಮಾಡಲು ಖುದ್ದು ಪ್ರಧಾನಿಯೇ ಆಹ್ವಾನ ನೀಡಿದ್ದಾರೆಂದರೆ ಸುಮ್ಮನಿರಲು ಸಾಧ್ಯವೇ? ಹೀಗಾಗಿ ಆ ಯುವ ಸಂಸದರು ನಿಗದಿತ ಸಮಯಕ್ಕೆ ಇಂದಿರಾ ಅವರ ಚೇಂಬರಿಗೆ ಹೋಗಿ ಭೇಟಿ ಮಾಡಿದ್ದಾರೆ. ಅಷ್ಟೊತ್ತಿಗಾಗಲೇ ಗಂಟಲು ಬೇನೆಯಿಂದ ಸ್ವಲ್ಪ ರಿಲೀಫ್ ಆಗಿದ್ದ ಇಂದಿರಾ ಆ ಯುವ ಸಂಸದರ ಪೂರ್ವಾಪರವನ್ನು ವಿಚಾರಿಸಿದ್ದಾರೆ.

ಅಗ ಆ ಯುವ ಸಂಸದರು, ''ಮೇಡಂ, ನನ್ನ ಹೆಸರು ಎಸ್.ಎಂ.ಕೃಷ್ಣ. ಕರ್ನಾಟಕದ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಪ್ರಜಾ ಸೋಷಲಿಸ್ಟ್ ಪಾರ್ಟಿಯ ಪ್ರತಿನಿಧಿಯಾಗಿ ಸಂಸತ್ತಿಗೆ ಆಯ್ಕೆಯಾಗಿದ್ದೇನೆ ಅಂತ ವಿವರಿಸಿದ್ದಾರೆ. ಆಗೆಲ್ಲ ತುಂಬ ವಿಶ್ವಾಸದಿಂದ ಮಾತನಾಡಿದ ಇಂದಿರಾ ಅವರು, ''ನೀವು ಪ್ರಜಾ ಸೋಷಲಿಸ್ಟ್ ಪಾರ್ಟಿಯವರು ಏಕೆ ಹೋರಾಡುತ್ತಿದ್ದೀರೋ, ಅದನ್ನು ಜಾರಿಗೊಳಿಸಲೆಂದೇ ನಮ್ಮ ಪಕ್ಷ, ಸರಕಾರ ಹೋರಾಡುತ್ತಿವೆ. ಹೀಗಾಗಿ ನೀವೆಲ್ಲ ಪ್ರತ್ಯೇಕವಾಗಿರುವ ಬದಲು ಕಾಂಗ್ರೆಸ್ ಪಕ್ಷಕ್ಕೇ ಬನ್ನಿ'' ಅಂತ ಆಹ್ವಾನ ನೀಡಿದ್ದಾರೆ.

ಹೀಗೆ ಪ್ರಧಾನಿ ನೀಡಿದ ಆಹ್ವಾನದ ಬಗ್ಗೆ ಪ್ರಜಾ ಸೋಷಲಿಸ್ಟ್ ಪಾರ್ಟಿಯ ಸಭೆಯಲ್ಲಿ ವಿವರಿಸಿದ್ದಾರಾದರೂ ಸಭೆ ಅದನ್ನು ಒಪ್ಪಿಲ್ಲ. ಹೀಗಾಗಿ ತಮ್ಮ ಪಕ್ಷದ ನಿಲುವನ್ನು ಕೃಷ್ಣ ಅವರು ಇಂದಿರಾಗೆ ಹೇಳಿದರೆ, ''ಯಾರೂ ಬರದಿದ್ದರೆ ನೀವಾದರೂ ಬನ್ನಿ. ನೀವು ಬೆಳೆಯುವ ದಾರಿ ದೊಡ್ಡದಿದೆ'' ಎಂದರಂತೆ.

ಇಂದಿರಾ ಗಾಂಧಿ ಅವರ ಈ ವಿಶ್ವಾಸಪೂರ್ವಕ ಆಹ್ವಾನವನ್ನು ತಿರಸ್ಕರಿಸಲು ಕೃಷ್ಣ ಅವರಿಗೆ ಸಾಧ್ಯವಾಗಲೇ ಇಲ್ಲ. ಹೀಗಾಗಿ ಒಂದು ದಿನ ಅವರು ಕಾಂಗ್ರೆಸ್ ಹಡಗು ಹತ್ತಿದರು. ಇಂದಿರಾ ಹೇಳಿದಂತೆ ತಮ್ಮ ಬದುಕಿನಲ್ಲಿ ಬಹುದೊಡ್ಡ ಹಾದಿಯನ್ನು ಕ್ರಮಿಸಿದರು.

ಕೆನಡಿ ಪರ ಪ್ರಚಾರ!

ಎಸ್. ಎಂ. ಕೃಷ್ಣ ಅಮೆರಿಕದ ಅಧ್ಯಕ್ಷ ಜಾನ್ ಎಫ್ ಕೆನೆಡಿ ಪರ ಪ್ರಚಾರ ನಡೆಸಿದ್ದರು. 1961ರಲ್ಲಿ ತಮ್ಮ 28ನೇ ವಯಸ್ಸಿನಲ್ಲಿ ಎಸ್.ಎಂ. ಕೃಷ್ಣ ಅಮೆರಿಕದ ಟೆಕ್ಸಾಸ್ ರಾಜ್ಯದಲ್ಲಿರುವ ಸದರ್ನ್ ಮೆಥಡಿಸ್ಟ್ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದರು. ಕೆನಡಿ ಪರ ಪ್ರಚಾರ ನಡೆಸಿದ್ದಲ್ಲದೆ ಅವರ ಪರ ಮತ ಚಲಾಯಿಸಿದ್ದರು.

ಮಲೆ ಮಹದೇಶ್ವರ ಭಕ್ತ

ಎಸ್.ಎಂ. ಕೃಷ್ಣ ಮಲೆ ಮಹದೇಶ್ವರನ ಪರಮ ಭಕ್ತರಾಗಿದ್ದು, ಇತ್ತೀಚೆಗೆವರೆಗೂ ದೇವಸ್ಥಾನಕ್ಕೆ ಹೋಗಿ ಮಲೆ ಮಹದೇಶ್ವರ ಸ್ವಾಮಿಯ ಆಶೀರ್ವಾದ ಪಡೆಯುತ್ತಿದ್ದರು. ಎಸ್.ಎಂ. ಕೃಷ್ಣ ಕೂಡ ತಮ್ಮ ಊರಿನವರ ಜೊತೆ ಹನೂರು ತನಕ ಬಸ್ ನಲ್ಲಿ ಹೋಗಿ ಬಳಿಕ ಕಾಲ್ನಡಿಗೆ ಮೂಲಕ ಬೆಟ್ಟಕ್ಕೆ ಹೋಗುತ್ತಿದ್ದರು.

ಸುಶಿಕ್ಷಿತ ಮುಖ್ಯಮಂತ್ರಿ

ಕರ್ನಾಟಕದ ಅತ್ಯಂತ ಹೆಚ್ಚು ಸುಶಿಕ್ಷಿತ ಮುಖ್ಯಮಂತ್ರಿಗಳಲ್ಲಿ ಕೃಷ್ಣ ಒಬ್ಬರಾಗಿದ್ದಾರೆ. ಅವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಪದವೀಧರರಾದ ನಂತರ ಬೆಂಗಳೂರಿನ ಸರಕಾರಿ ಕಾನೂನು ಕಾಲೇಜಿನಲ್ಲಿ ಪದವಿ ಪಡೆದು ಸದರ್ನ್ ಮೆಥಡಿಸ್ಟ್ ವಿಶ್ವವಿದ್ಯಾಲಯದಲ್ಲಿ ಎಲ್‌ಎಲ್‌ಎಂ ಮುಗಿಸಿದರು.

ಎರಡು ದಶಕಗಳ ಹಿಂದೆಯೇ ಬೆಂಗಳೂರಿನ ಅಭಿವೃದ್ಧಿಗೆ ನಾಂದಿ | ಕೈಗಾರಿಕೆ, ಮಾಹಿತಿ ತಂತ್ರಜ್ಞಾನಕ್ಕೆ ಹೆಚ್ಚುವರಿ ಆದ್ಯತೆ ನೀಡಲು ವಿಶೇಷ ನೀತಿ

ಸಿಲಿಕಾನ್ ವ್ಯಾಲಿಯಾದ ಉದ್ಯಾನ ನಗರಿ

ನಾಯಕನಾದವನಿಗೆ ಇತಿಹಾಸದ ಅರಿವು, ಪ್ರಸ್ತುತ ಸನ್ನಿವೇಶದ ಸ್ಪಷ್ಟತೆ ಹಾಗೂ ಭವಿಷ್ಯದ ಆಲೋಚನೆಗ ಳಿರಬೇಕು. ಈ ಮೂರನ್ನು ಸಮಾನವಾಗಿ ತೆಗೆದುಕೊಂಡು ಹೋಗುವವರು ಮಾತ್ರ ರಾಜ್ಯವನ್ನು ಸಮರ್ಥವಾಗಿ ಮುನ್ನಡೆಸಲು ಸಾಧ್ಯ.

ಮುತ್ಸದ್ದಿ ರಾಜಕಾರಣಿಯಾಗಿದ್ದ ಎಸ್.ಕೆ. ಕೃಷ್ಣ ಅವರಿಗೆ ಈ ಮೂರರ ಬಗ್ಗೆ ಸ್ಪಷ್ಟ ನಿಲುವಿತ್ತು. ಕರ್ನಾಟಕದ 10ನೇ ಮುಖ್ಯಮಂತ್ರಿಯಾಗಿ ಅಧಿಕಾರದ ಗದ್ದುಗೆ ಏರುವ ಮೊದಲೇ, ಮುಂದಿನ ಐದು ವರ್ಷದಲ್ಲಿ ಕರ್ನಾಟಕ ಅದರ ಲ್ಲಿಯೂ ರಾಜಧಾನಿ ಬೆಂಗಳೂ ರನ್ನು 'ಸಿಂಗಾಪುರ' ಮಾಡುವ, ಬೆಂಗಳೂರನ್ನು ಸಿಲಿಕ್ಯಾನ್ ವ್ಯಾಲಿ ಆಫ್ ಇಂಡಿಯಾ ಮಾಡುವ, ಮಾಹಿತಿ ತಂತ್ರಜ್ಞಾನದ ಕಂಪನಿಗಳ ತವರೂರು ಮಾಡಬೇಕೆನ್ನುವ ಸ್ಪಷ್ಟ ಗುರಿಯಿತ್ತು.

ರಾಜ್ಯದ ಅಭಿವೃದ್ಧಿಗೆ ಹಲವು ಯೋಜನೆ

ಎಸ್‌ಎಂಕೆ ಎಂದ ಕೂಡಲೇ 'ನಗರವಾಸಿಗಳ ಮುಖ್ಯಮಂತ್ರಿ' ಎನ್ನುವ ಮಾತೊಂದಿದೆ. ಒಂದು ಹಂತದಲ್ಲಿ ಅದು ನಿಜವೆನಿಸದೇ ಇರುವುದಿಲ್ಲ. ಆದರೆ ಮುಖ್ಯಮಂತ್ರಿಯಾಗಿದ್ದ ಐದು ವರ್ಷಗಳ ಕಾಲ ಬೆಂಗಳೂರಿನ ಸಮಗ್ರ ಅಭಿವೃದ್ಧಿಯ ಜತೆಜತೆಗೆ ಕರ್ನಾಟಕದ ಸಮಗ್ರ ಅಭ್ಯುದಯಕ್ಕೆ ಹಲವಾರು ಯೋಜನೆಗಳನ್ನು ರೂಪಿಸಿದರು. ಬೆಂಗಳೂರು ಜಾಗತಿಕ ಮಟ್ಟದಲ್ಲಿ ಐಟಿ ಹಬ್ ಆಗಿ ಪರಿವರ್ತನೆಯಾಗುವುದು ಮಾತ್ರವಲ್ಲದೇ, ರಾಜ್ಯದ ವಿವಿಧ ನಗರಗಳ ಅಭಿವೃದ್ಧಿಗೆ, ಕೈಗಾರಿಕೆಗಳ ಸ್ಥಾಪನೆಗೆ ಕೈಗಾರಿಕಾ ನೀತಿಯನ್ನೇ ಜಾರಿ ಗೊಳಿಸಿದ್ದು ಎಸ್‌ಎಂಕೆ ದೂರದೃಷ್ಟಿ ನಾಯಕತ್ವಕ್ಕೆ ಸಾಕ್ಷಿ.

1999ರಿಂದ 2004ರವರೆಗೆ ಮುಖ್ಯಮಂತ್ರಿಯಾ ಗಿದ್ದ ಎಸ್.ಎಂ. ಕೃಷ್ಣ ಅವರು, ಈ ಐದು ವರ್ಷದಲ್ಲಿ ಅನೇಕ ಮೈಲುಗಲ್ಲು ತೀರ್ಮಾನಗಳನ್ನು ಕೈಗೊಳ್ಳುವ ಮೂಲಕ ಆಡಳಿತಗಾರರಿಗೆ ಆದರ್ಶಪ್ರಾಯರಾಗಿ ಹೊರಹೊಮ್ಮಿದ್ದರು.

ನಮ್ಮ ಮೆಟ್ರೋ ಮತ್ತು ಎಸ್‌ಎಂಕೆ

ಉದ್ಯಾನನಗರಿ ಬೆಂಗಳೂರಿನ ಬಹುಪಾಲು ಜನರು ಸಂಚಾರಕ್ಕೆ ನಮ್ಮ ಮೆಟ್ರೋ ಬಳಸುತ್ತಾರೆ. ಮುಂದಿನ ಐದು ದಶಕದ ಯೋಚನೆಯನ್ನು ಮನದಲ್ಲಿಟ್ಟುಕೊಂಡು ಆರಂಭಿಸಿದ್ದು ಎಸ್.ಎಂ. ಕೃಷ್ಣ. ಆ ಸಮಯದಲ್ಲಿ ಬೆಂಗಳೂರಿಗೆ ಹೊಸಹೊಸ ಅಂತಾರಾಷ್ಟ್ರೀಯ ಉದ್ಯಮಗಳು ಬಂದಮೇಲೆ ಸಹಜವಾಗಿಯೇ ಜನಸಂದಣಿ ಹೆಚ್ಚಾಯಿತು. ಮುಂದಿನ ಯುಗಕ್ಕೆ ಬೆಂಗಳೂರಿನ ಸಾರಿಗೆಯನ್ನು ಉತ್ತಮಪಡಿಸಲು ಬೆಂಗಳೂರಿನಲ್ಲಿ ಮೆಟ್ರೋ ರೈಲು ಪ್ರಾರಂಭಿಸಬೇಕೆಂದು ಆಲೋಚಿಸಿ, ಸಂಬಂಧಪಟ್ಟ ಪ್ರಸ್ತಾವನೆಯನ್ನು ಯೋಜನಾ ಆಯೋಗಕ್ಕೆ ಕಳುಹಿಸಿದರು. ಆ ಸಮಯದಲ್ಲಿ ಸ್ಥಳೀಯ ರೈಲು ಮಾಡಬೇಕು, ಬಸ್ಸುಗಳನ್ನು ಹೆಚ್ಚಿಸಬೇಕು, ಮಾನೋರೈಲು ಮಾಡಬೇಕು ಎಂದೆಲ್ಲ ಹೇಳಿದ್ದರು. ಆದರೆ ಅದ್ಯಾವುದನ್ನು ಕೇಳದೇ, ಮೆಟ್ರೋ ಮಾಡಬೇಕು ಎಂದು ಕೃಷ್ಣ ಪಟ್ಟು ಹಿಡಿದಿದ್ದರು. ಇದಕ್ಕೆ ಕೃಷ್ಣ ಅವರು ಕೊಂಕಣ ರೈಲ್ವೆ ನಿರ್ಮಿಸಿದ ಪ್ರಖ್ಯಾತ ಎಂಜಿನಿಯರ್ ಶ್ರೀಧರನ್ ಅವರ ಸಹಾಯ ಪಡೆದಿದ್ದರು. ಅಂದಿನ ಹೋರಾಟದ ಫಲವಾಗಿ ಇಂದು ಬೆಂಗಳೂರಿನಲ್ಲಿ ಮೆಟ್ರೋ ರೈಲ್ವೆ ಜನಸಾಮಾನ್ಯರ ಜೀವನದ ಅವಿಭಾಜ್ಯ ಅಂಗವಾಗಿದೆ. ರಾಜಧಾನಿಯ ಸಂಚಾರ ದಟ್ಟಣೆಯನ್ನು ಗಣನೀಯವಾಗಿ ತಗ್ಗಿಸುವಲ್ಲಿ ಮೆಟ್ರೋ ಪಾತ್ರ ಅತ್ಯಂತ ಮಹತ್ವದ್ದು.

ಬ್ರ್ಯಾಂಡ್ ಬೆಂಗಳೂರು ಕಲ್ಪನೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಧಿಕಾರದ ಗದ್ದುಗೆ ಏರುತ್ತಿದ್ದಂತೆ ಬೆಂಗಳೂರಿನ ಸರ್ವಾಂಗೀಣ ಅಭಿವೃದ್ಧಿಗೆ ಬ್ರ್ಯಾಂಡ್ ಬೆಂಗಳೂರಿನ ಪರಿಕಲ್ಪನೆಯನ್ನು ಘೋಷಿಸಿ ಅನುದಾನ ನೀಡಿದರು. ಆದರೆ ನಿಜವಾದ ಅರ್ಥದಲ್ಲಿ ಕರ್ನಾಟಕಕ್ಕೆ ಅದರಲ್ಲಿಯೂ ಬೆಂಗಳೂರಿಗೆ ಬ್ರ್ಯಾಂಡ್ ಒದಗಿಸಿದ್ದು ಎಸ್.ಎಂ ಕೃಷ್ಣ ಎಂದರೆ ತಪ್ಪಾಗುವುದಿಲ್ಲ.

- ದಾಖಲೆಗಳ ಡಿಜಿಟಲೀಕರಣಕ್ಕೆ ಮಹತ್ವದ ಹೆಜ್ಜೆ
- ಬೆಂಗಳೂರನ್ನು ಐಟಿ ಹಬ್ ಮಾಡಲು ಅನುದಾನ, ಯೋಜನೆ ಜಾರಿ
- ರಾಜ್ಯದ ಕೈಗಾರಿಕೆಯ ಅಭಿವೃದ್ಧಿ ಕೈಗಾರಿಕಾ ನೀತಿ ಜಾತಿಗೆ
- ವಿಶ್ವದ ವಿವಿಧದೇಶಗಳ ಕೈಗಾರಿಕೋದ್ಯಮಿಗಳನ್ನು ರಾಜ್ಯದತ್ತ ಸೆಳೆಯಲು ಗ್ಲೋಬಲ್ ಸಮಿಟ್ ಸಭೆ
- ಬೆಂಗಳೂರಿನೊಂದಿಗೆ ರಾಜ್ಯದ 2ನೇ ಹಂತದ ನಗರಗಳಿಗೂ ಕೈಗಾರಿಕೆಗಳ ವಿಸ್ತರಣೆ

ಸಿಂಗಾಪುರದ ಕನಸು ಕಂಡಿದ್ದ ಮುತ್ಸದ್ದಿ

1999ರ ಸಮಯದಲ್ಲಿ ಎಸ್.ಎಂ. ಕೃಷ್ಣ ಅವರು ಬೆಂಗಳೂರು ಸಿಂಗಾಪುರವನ್ನು ಮೀರಿಸಲಿದೆ ಎನ್ನುವ ಮಾತು ಹೇಳುತ್ತಿದ್ದರು. ಆದರೆ ಅದನ್ನು ನಂಬುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ. ಆದರೀಗ ಆ ಮಾತು ನನಸಾಗಿದೆ. ಇದಕ್ಕೆ ಕಾರಣ ಕೃಷ್ಣ ಸರಕಾರದ ಅವಧಿಯಲ್ಲಿ ನೆರೆರಾಜ್ಯ ತೆಲಂಗಾಣದ ರಾಜಧಾನಿ ಹೈದರಾಬಾದ್‌ನಿಂದ ಐಟಿ ಕಂಪನಿಗಳನ್ನು ರಾಜ್ಯಕ್ಕೆ ಕರೆತರಲು ಹಾಕಿದ ಶ್ರಮ. ಅವರು ಮುಖ್ಯಮಂತ್ರಿ ಯಾಗಿದ್ದ ಸಮಯದಲ್ಲಿ ಕರ್ನಾಟಕಕ್ಕೆ ಬರ ಆವರಿಸಿತ್ತು. ರೈತರ ಆತ್ಮಹತ್ಯೆ, ವೀರಪ್ಪನ್ ಅಟ್ಟಹಾಸ ಸೇರಿದಂತೆ ಹಲವು ಸವಾಲುಗಳಿದ್ದರೂ, ಆ ಎಲ್ಲವನ್ನೂ ಮೀರಿ ಬೆಂಗಳೂರಿನ ಅಭಿವೃದ್ಧಿಗೆ ಶ್ರಮಿಸಿದ್ದರು.

ಬೆಂಗಳೂರು ಅಭಿವೃದ್ಧಿಗೆ ಟಾಸ್ಕ್‌ಫೋರ್ಸ್

ಸಿಂಗಾಪುರ ಮಾದರಿಯಲ್ಲಿ ಬೆಂಗಳೂರನ್ನು ಬೆಳೆಸುವ ಲೆಕ್ಕಾಚಾರದಲ್ಲಿದ್ದ ಎಸ್.ಎಂ. ಕೃಷ್ಣ ಅವರು ಅಧಿಕಾರಕ್ಕೆ ಬರುತ್ತಿದ್ದಂತೆ ಬೆಂಗಳೂರು ಅಭಿವೃದ್ಧಿಗೆ ಟಾಸ್ಕ್‌ಫೋರ್ಸ್ ರಚಿಸಲು ಚಿಂತನೆ ನಡೆಸಿದರು.

ಈ ಟಾಸ್ಕ್ ಫೋರ್ಸ್ ಬಗ್ಗೆ ತಮ್ಮ ಆತ್ಮಕಥನದಲ್ಲಿ ಬರೆದುಕೊಂಡಿರುವ ಕೃಷ್ಣ ಅವರು, ಬೆಂಗಳೂರು ಉದ್ಯಾನವನಗಳ ನಗರವೆಂದು ಅರವತ್ತರ ದಶಕದಲ್ಲಿ ಖ್ಯಾತವಾಗಿತ್ತು. ಆದರೆ ಬರುಬರುತ್ತಾ ಕಾಂಕ್ರೀಟ್ ಕಾಡು ಆಗುತ್ತಿತ್ತು. ಜನರಿಗೆ ವಾಕಿಂಗ್ ಹೋಗಲು ಬಡಾವಣೆಗಳಲ್ಲಿ ಸ್ಥಳವಿರಲಿಲ್ಲ. ಬಡಾವಣೆಗೊಂದು ಉದ್ಯಾನವನವಾದರೂ ಮಾಡಬೇಕೆಂಬುದು ನನ್ನ ಆಶಯ, ಬೆಂಗಳೂರಿಗೆ ಏನೇನು ಆಗಬೇಕು ಎಂದು ಯೋಜನೆಯ ರೂಪುರೇಷೆ ತಯಾರಿಸಲು ಟಾಸ್ಕ್‌ಫೋರ್ಸ್ ರಚಿಸಲು ನಿರ್ಧಾರ ಮಾಡಿದೆ. ಪ್ರತಿಭಾವಂತರನ್ನು ಆಯ್ಕೆ ಮಾಡಬೇಕು. ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಈ ಟಾಸ್ಕ್‌ಫೋರ್ಸ್ ರಚನೆಯಾದರೆ ಅದು ಅಧಿಕಾರಶಾಹಿಗಳ ತಂಡವಾಗಿ ಬಿಡುತ್ತದೆ. ಆಗ ನನಗೆ ಖ್ಯಾತ ಐಟಿ ದಿಗ್ಗಜ ನಂದನ್ ನೀಲೇಕಣಿ ಅವರ ಹೆಸರು ಜ್ಞಾಪಕಕ್ಕೆ ಬಂತು. ನನ್ನ ಅಳಿಯ ಸಿದ್ದಾರ್ಥನಿಗೆ ಅವರು ಆಪ್ತರು. 'ನೀನು ಹೋಗಿ ನಂದನ್ ನೀಲೇಕಣಿಯವರೊಡನೆ ಮಾತನಾಡು, ಅವರನ್ನು ಟಾಸ್ಕ್‌ಫೋರ್ಸ್ ಮುಖ್ಯಸ್ಥರನ್ನಾಗಿ ಮಾಡೋಣ' ಎಂದೆ. ಕೆಲಸ ಬಹಳ ಸುಲಲಿತವಾಯಿತು. ಅವರು ವಿಧಾನಸೌಧಕ್ಕೆ ಬಂದರು. ಅವರ ಜೊತೆಗೆ ಸವಿಸ್ತಾರವಾಗಿ ಮಾತನಾಡಿದೆ. ಟಾಟಾ ಇನ್ಸಿಟಿಟ್ಯೂಟ್‌ನಲ್ಲಿ ದೊಡ್ಡ ಆಡಿಟೋರಿಯಂ ಇದೆ. ಸದಾಶಿವನಗರದ ನಮ್ಮ ಮನೆ ಹತ್ತಿರವೇ ಇದೆ. ಬೆಂಗಳೂರು ಬಗ್ಗೆ ಆಸಕ್ತಿ ಇರುವ ಎಲ್ಲರನ್ನೂ ಅಲ್ಲಿ ಸೇರಿಸಿ ಬೆಂಗಳೂರು ಅಜೆಂಡಾ ಟಾಸ್ಕ್ ಫೋರ್ಸ್‌ನ ರೂಪುರೇಷೆಗಳನ್ನು ಸಿದ್ಧಮಾಡಲಾಯಿತು. ನಂದನ್ ನೀಲೇಕಣಿ ಜತೆಗೆ ನಾನೂ ಹೋದೆ. ಕಿಕ್ಕಿರಿದ ಜನ, ಬಿಡಿಎ, ವಿದ್ಯುಚ್ಛಕ್ತಿ, ಕಾರ್ಪೊರೇಶನ್, ಆಸ್ಪತ್ರೆಗೆ, ಕುಡಿಯುವ ನೀರು, ಒಳಚರಂಡಿ, ಕಸ ಹೀಗೆ ಹತ್ತಾರು ವಿಚಾರಗಳ ಬಗ್ಗೆ ಚರ್ಚೆ, ಸಲಹೆ ಬಂತು. ತುಂಬಾ ಜವಾಬ್ದಾರಿಯಿಂದಲೇ ಜನರು ಸಲಹೆ ಕೊಟ್ಟರು. ಈ ಪೈಕಿ ಅತ್ಯಂತ ಪ್ರಮುಖವಾಗಿ ಕೇಳಿಬಂದಿದ್ದು ಬೆಂಗಳೂರು ನಗರದ 112 ವಾರ್ಡ್‌ಗಳಲ್ಲೂ ಒಂದೊಂದು ಒಳ್ಳೆಯ ಉದ್ಯಾನವನ ಮಾಡಿಕೊಡಬೇಕು ಎನ್ನುವ ಬಗ್ಗೆ ದಿನಗಟ್ಟಲೇ ಮಾತನಾಡಿದ್ದು ಎಂಬುದನ್ನು ಕೃಷ್ಣ ತಮ್ಮ ಆತ್ಮಕಥನದಲ್ಲಿ ನೆನಪಿಸಿಕೊಂಡಿದ್ದಾರೆ.

ಸುಸಂಸ್ಕೃತ, ಮೇರು ವ್ಯಕ್ತಿತ್ವದ ನಾಯಕ

ಎಸ್.ಎಂ.ಕೃಷ್ಣ ಅವರ ನಿಧನವು ಐದು ದಶಕಗಳ ಕಾಲ ಗಣರಾಜ್ಯ ಮತ್ತು ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಮಹತ್ವದ ಪಾತ್ರ ವಹಿಸಿದ್ದ ಒಬ್ಬ ಸುಸಂಸ್ಕೃತ ಹಾಗೂ ಮೇರು ವ್ಯಕ್ತಿತ್ವದ ನಾಯಕನ ಅಂತ್ಯವಾದಂತಾಗಿದೆ. ನಾನು ಅವರನ್ನು ಮೊದಲು ಬಾರಿಗೆ 1982 ರಲ್ಲಿ ಮಂಡ್ಯ ಜಿಲ್ಲೆಯ ಎಸ್ಪಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ ಭೇಟಿಯಾಗಿದ್ದೆ. ಆ ಬಳಿಕ ಎಸ್. ಎಂ. ಕೃಷ್ಣ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದರು. ಸಾರ್ವಜನಿಕ ಜೀವನದಲ್ಲಿ ತಮ್ಮ ವೃತ್ತಿಜೀವನದುದ್ದಕ್ಕೂ ತಮ್ಮದೇಯಾದ ಅಪರೂಪದ ವ್ಯಕ್ತಿತ್ವದ ಮೂಲಕ ಎಲ್ಲರೊಂದಿಗೆ ಸುಸಂಸ್ಕೃತವಾಗಿ, ಮೃದುತನದೊಂದಿಗೆ ಮಾತನಾಡಿಸುತ್ತಾ ದಾರ್ಶನಿಕರಾಗಿದ್ದರು. ಬೆಂಗಳೂರಿನ ವೈಟ್ ಫೀಲ್ಡ್ ನಲ್ಲಿ ಐಟಿ ಪಾರ್ಕ್ ನಿರ್ಮಾಣ ಸಂಬಂಧಿಸಿದ ಕಾರ್ಯಗಳನ್ನು ತುಂಬಾ ಅಚ್ಚುಕಟ್ಟಾಗಿ ಮುಂದುವರಿಸಿಕೊಂಡು ಬಂದ ಕೀರ್ತಿ ಅವರಿಗೆ ಸಲ್ಲುತ್ತದೆ. ದೇವನಹಳ್ಳಿಯಲ್ಲಿ ಹೊಸ ವಿಮಾನ ನಿಲ್ದಾಣವನ್ನು ಸ್ಥಾಪಿಸುವಲ್ಲಿ ಮತ್ತು ಬೆಂಗಳೂರು ನಗರವನ್ನು ಭಾರತದ ಸಿಲಿಕಾನ್ ವ್ಯಾಲಿಯಾಗಿ ಪರಿವರ್ತಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು

-ಶಂಕರ್ ಬಿದರಿ, ನಿವೃತ್ತ ಡಿಜಿಪಿ

ಅಶ್ರುತರ್ಪಣ

ಮಿತಭಾಷೆಯನ್ನಾಡುವ , ಸೌಮ್ಯ ರಾಜಕಾರಣಿ, ಅಜಾತಶತ್ರುವಾಗಿದ್ದ ಪದ್ಮವಿಭೂಷಣ ಮಾಜಿ ಸಿಎಂ ಎಸ್.ಎಂ,ಕೃಷ್ಣ ನಿಧನದಿಂದ ರಾಷ್ಟ್ರ ಹಾಗೂ ರಾಜ್ಯ ಶ್ರೇಷ್ಠ ರಾಜಕೀಯ ಮುತ್ಸದ್ದಿಯನ್ನು ಕಳೆದುಕೊಂಡಿದೆ. ಅವರ ಶಿಸ್ತುಬದ್ಧ ಜೀವನ ಎಲ್ಲರಿಗೂ ಮಾದರಿ

-ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ

ಎಸ್.ಎಂ ಕೃಷ್ಣ ರಾಜಕಾರಣ ಮಾಡಿದವರು. ನನ್ನನ್ನು ಯಾವಾಗಲೂ ಸಿನಿಮಾ ನಟಿಯನ್ನಾಗಿ ನೋಡಿಲ್ಲ. ಒಬ್ಬ ಕಾಂಗ್ರೆಸ್ ಕಾಯಕರ್ತೆಯಾಗಿ ನೋಡಿ ಸಂಘಟನೆಯಲ್ಲಿ ತೊಡಗಿಸಿದ್ದರು. ಜಾತಿರಹಿತವಾಗಿ, ಧರ್ಮರಹಿತವಾಗಿ ಬದ್ಧತೆಯಿಂದ ನಡೆದುಕೊಳ್ಳುತ್ತಿದ್ದರು. ಬೆಂಗಳೂರು ನಗರವನ್ನು ವಿಶ್ವಮಟ್ಟದಲ್ಲಿ ತೋರಿಸಿದವರು. ಅವರ ಅಗಲಿಕೆ ನೋವು ತಂದಿದೆ

-ಉಮಾಶ್ರೀ, ಮೇಲ್ಮನೆ ಸದಸ್ಯೆ

ಹೊರರಾಜ್ಯಗಳಿಗೆ ಹೋಗುತ್ತಿರುವ ಐಟಿ-ಬಿಟಿ ಕಂಪನಿಗಳನ್ನು ಬೆಂಗಳೂರು ಬಿಟ್ಟು ಹೋಗದಂತೆ ನೋಡಿಕೊಂಡವರು ಎಸ್.ಎಂ.ಕೃಷ್ಣ. ಒಂದು ದೊಡ್ಡ ಶಕ್ತಿಯಾಗಿ ಕೆಲಸ ಮಾಡಿದವರು. ಕೊಡುಗೆ ರಾಜ್ಯಕ್ಕೆ ಬಹಳಷ್ಟಿದೆ. ಅವರ ಅಗಲಿಕೆ ನೋವು ತಂದಿದೆ. ಕುಟುಂಬಕ್ಕೆ ದು:ಖ ಭರಿಸುವ ಶಕ್ತಿ ಕೊಡಲಿ

-ಟಿ.ಎಸ್.ಶರವಣ, ವಿಧಾನ ಪರಿಷತ್ ಸದಸ್ಯ

ಎಸ್.ಎಂ.ಕೆ 1999 ರಿಂದ 2004ರಲ್ಲಿ ಸಿಎಂ ಆಗಿದ್ದಾಗ, ಬಾಗಲಕೋಟೆ ಜಿಲ್ಲೆಯಲ್ಲಿ ಜನರು ಯುಕೆಪಿ ಪ್ರಾಜೆಕ್ಟ್‌ನಲ್ಲಿ ಮುಳುಗಡೆ ಪ್ರದೇಶದಿಂದ ಮನೆಗಳನ್ನು ಕಳೆದುಕೊಂಡ ನಿರಾಶ್ರಿತರಾಗಿದ್ದರು. ಆಗ 638ಕೋಟಿ ರು. ಪ್ಯಾಕೇಜ್ ಘೋಷಿಸಿದ್ದು ಎಸ್.ಎಂ ಕೃಷ್ಣ ಅವರು.

-ಕೆ.ಎಚ್. ಪೂಜಾರ, ಬಾಗಲಕೋಟೆ ಪರಿಷತ್ ಸದಸ್ಯ



ರಾಜ್ಯದಲ್ಲಿ 84 ಲಕ್ಷ ಮಕ್ಕಳು ಬಿಸಿಯೂಟ ಮಾಡುತ್ತಿದ್ದಾರೆ. ಅವರು ಸಿಎಂ ಆಗಿದ್ದಾಗ ಯುನಿಸೆಫ್‌ನಿಂದ ಹಣ ತಂದು, 36 ಸಾವಿರ ಶಾಲೆಗಳ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿಸಿದವರು. ಸ್ತ್ರೀಶಕ್ತಿ ಮೂಲಕ 2 ಸಾವಿರ ಕೋಟಿ ಉಳಿತಾಯ ಆಗುವ ಹಾಗೆ ಮಾಡಿದ್ದಾರೆ. ರಾಜ್ಯದ ಆರ್ಥಿಕತೆ ಬೆಳವಣಿಗೆಯಲ್ಲಿ ಎಸ್.ಎಂ.ಕೃಷ್ಣ ಕೊಡುಗೆ ಅಪಾರ.

-ಎಚ್.ವಿಶ್ವನಾಥ್, ಪರಿಷತ್ ಸದಸ್ಯ

ಜನನ-ಮರಣ- ಜೀವನ ಈ 3 ಅಕ್ಷರಗಳು ನಮ್ಮ ಕೈಯಲ್ಲಿ ಇಲ್ಲ. ಎಸ್.ಎಂ.ಕೃಷ್ಣ ಅವರು ವಿದ್ಯಾವಂತರು ಹಾಗೂ ಬುದ್ಧಿವಂತರು ಹೌದು. ಡಾ. ರಾಜಕುಮಾರ್ ಅಪಹರಣ ಪ್ರಕರಣವನ್ನು ನಿಭಾಯಿಸಿದ ರೀತಿ ಜಾಣ್ಮೆಯಿಂದ ಕೂಡಿದೆ. ಇಲ್ಲದಿದ್ದರೆ ದೊಡ್ಡ ಅನಾಹುತ ಆಗುತ್ತಿತ್ತು. ಬೆಂಗಳೂರು ಗಾರ್ಡನ್ ಸಿಟಿ ಮಾಡಿದ್ದು ಎಸ್.ಎಂ.ಕೆ.

-ಸಿ.ಟಿ.ರವಿ, ಮಾಜಿ ಸಚಿವ

ಅಪರೂಪ

ಪ್ರಧಾನಮಂತ್ರಿಗೆ ನನ್ನ ಹೆಸರು

ಡಾ. ಮನಮೋಹನ ಸಿಂಗ್‌ನವರು ತಮ್ಮ ಸಹಪಾಠಿಗಳಾಗಿದ್ದ ಪ್ರೊ. ಕೆ. ವೆಂಕಟಗಿರಿ ಗೌಡರವರ ಜೊತೆಯಲ್ಲಿ ಹಂಚಿಕೊಂಡಂತೆ 'ಕರ್ನಾಟಕದಲ್ಲಿ ಎಸ್.ಎಂ. ಕೃಷ್ಣ ಉತ್ತಮ ವಾದಂತಹ ಕೆಲಸ ಮಾಡುತ್ತಿದ್ದಾರೆ. 2004ರಲ್ಲಿ ಯುಪಿಎ ಸರಕಾರ ಬಂದರೆ ಕೃಷ್ಣ ಅಥವಾ ನಾನು ಪ್ರಧಾನಮಂತ್ರಿ ಯಾಗುತ್ತೇವೆ, ಖಂಡಿತ ಸೋನಿಯಾ ಗಾಂಧಿಯವರು ಆ ಹುದ್ದೆಯ ಆಕಾಂಕ್ಷಿಯಲ್ಲ.' ಈ ವಿಚಾರವನ್ನು ಪ್ರೊ. ವೆಂಕಟಗಿರಿಗೌಡ ತಮ್ಮ ಆಪ್ತವಲಯದಲ್ಲಿ ಹೇಳಿಕೊಂಡಿದ್ದರು.

ಎಸ್.ಎಂ.ಕೃಷ್ಣ ಅತ್ಯಂತ ಸೌಮ್ಯ ಸ್ವಭಾವದ ವ್ಯಕ್ತಿತ್ವ ಹೊಂದಿರುವ ಮೃದು ಭಾಷೆಯ ಉತ್ತಮ ಡ್ರೆಸ್ ಕೋಡ್ ಹೊಂದಿದ್ದ ಅವರು 1971 ರಲ್ಲಿ ಉದ್ಯಮಗಳು ಪ್ರಾರಂಭವಾದಾಗ ವಿದ್ಯಾಥಿಗಳಿಗೆ ಉದ್ಯೋಗ ಕೊಟ್ಟ ಮಹಾನುಭಾವರಾಗಿದ್ದರು

-ಹರಿಪ್ರಸಾದ್, ಪರಿಷತ್ ಸದಸ್ಯ

ನಂಜುಡಪ್ಪ ವರದಿಯನ್ವಯ 175 ನೇ ತಾಲೂಕು ದೇವದುಗದಲ್ಲಿ ಸೂಚ್ಯಂಕದ ಪ್ರಕಾರ ಅಭಿವೃದ್ಧಿಗೆ ಕೃಷ್ಣ ವಿಶೇಷ ಆಸಕ್ತಿ ವಹಿಸಿದ್ದರು. 174 ನೇ ತಾಲೂಕು ಚಿಂಚೋಳಿ - ಜೇವಗಿಯಲ್ಲಿ ಬಿಸಿಯೂಟದ ಯೋಜನೆ ಆರಂಭಿಸಿದ್ದರು. ಕ್ರೀಡೆಗೆ ಹೆಚ್ಚಿನ ಆಸಕ್ತಿ ಕೊಟ್ಟಿದ್ದರು. ಅವರ ರಾಜಕೀಯ ಜೀವನ ನೋಡಿ ಕಲಿಯುವುದು ತುಂಬಾ ಇದೆ.

-ಶಶಿ ನಮೋಶಿ, ಪರಿಷತ್ ಸದಸ್ಯ

ಆಡಳಿತ ಸುಧಾರಣೆಗೆ ಒತ್ತು ನೀಡಲು ಆಯೋಗ ರಚನೆ | ರಾಜ್ಯದ ರಸ್ತೆಗಳ ಅಭಿವೃದ್ಧಿಗೆ ಟೊಂಕ ಕಟ್ಟಿದ್ದ ಕೃಷ್ಣ | ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮ

ಬೆಂಗಳೂರಿಗೆ ಸೀಮಿತವಾಗದ ಅಭಿವೃದ್ಧಿ ಕಾರ್ಯ

ಎಸ್.ಎಂ. ಕೃಷ್ಣ ಎಂದ ಕೂಡಲೇ ನಗರಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದರು, ಬೆಂಗಳೂರು, ಐಟಿ ಹಬ್ ಗೆ ಸೀಮಿತಗೊಂಡಿದ್ದರು ಎನ್ನುವ ಮಾತಿದೆ. ಆದರೆ ಬೆಂಗಳೂರಿನ ಅಭಿವೃದ್ಧಿಗೆ ನೀಡಿದಷ್ಟೇ ಪ್ರಾಮುಖ್ಯತೆ ಯನ್ನು ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ನೀಡಿದ್ದರು ಎಂದರೆ ತಪ್ಪಾಗದು.

ಜನಮಾನಸದಲ್ಲಿ ಉಳಿದ ಯೋಜನೆಗಳು:

ಕೃಷ್ಣ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರಚಿಸಿದ್ದ ತೆರಿಗೆ ಸುಧಾರಣಾ ಆಯೋಗ, ಆಡಳಿತ ಸುಧಾರಣಾ ಆಯೋಗ, ಬಂಡವಾಳ ಹೂಡಿಕೆದಾರರ ಜಾಗತಿಕ ಸಮಾವೇಶ, ಐಟಿ ಮತ್ತು ಬಿಟಿ ಉದ್ಯಮಕ್ಕೆ ಕೊಟ್ಟ ಪ್ರೋತ್ಸಾಹ, ಗ್ರಾಮೀಣ ಪ್ರದೇಶದಲ್ಲಿ ವಸತಿ ನಿರ್ಮಾಣದಂತಹ ಯೋಜನೆಗಳು ಯಾವುದೇ ಒಂದು ಸರಕಾರ ಮಾಡಬಹುದಾದ ಬಹುದೊಡ್ಡ ಯೋಜನೆ ಗಳಾಗಿವೆ. ಅದರಲ್ಲೂ ಎಸ್.ಎಂ. ಕೃಷ್ಣರ ಅಧಿಕಾರಾ ವಧಿಯಲ್ಲಿ ಜಾರಿಗೊಳಿಸಲಾಗಿರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ, ರೈತರಿಗೆ ಯಶಸ್ವಿನಿ ವಿಮೆ ಯೋಜನೆ, ಸ್ತ್ರೀಶಕ್ತಿ ಯೋಜನೆಗಳು ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿವೆ.

ಮಕ್ಕಳಿಗೆ ಬಿಸಿಯೂಟ ಯೋಜನೆ :

ಸಿರಿವಂತ ಕುಟುಂಬದಿಂದ ಕೃಷ್ಣ ಅವರು ಬಂದಿದ್ದರೂ, ಬಡತನದ ಕಷ್ಟ ಅವರಿಗೆ ಗೊತ್ತಿತ್ತು. ಒಮ್ಮೆ ಶಾಲಾ ವಿದ್ಯಾರ್ಥಿಗಳೊಂದಿಗೆ ಮಾತನಾಡುವಾಗ ಸುಮಾರು 10 ಗಂಟೆ ಊಟವಿಲ್ಲದೇ ಮಕ್ಕಳು ಶಾಲೆಗೆ ಬರುತ್ತಿದ್ದಾರೆ ಎನ್ನುವ ವಿಷಯ ತಿಳಿಯುತ್ತಿದ್ದಂತೆ, ಕ್ರಾಂತಿಕಾರಿಕ ಬಿಸಿಯೂಟದ ಯೋಜನೆಯನ್ನು ಆರಂಭಿ ಸಿದರು. ಬಳಿಕ ಕೇಂದ್ರ ಸರಕಾರ ಯಥಾವತ್ತಾಗಿ ಈ ಯೋಜನೆಯನ್ನು ಜಾರಿಗೊಳಿಸಿದ್ದು ಇತಿಹಾಸ. ಹಸಿದ ಹೊಟ್ಟೆಯಲ್ಲಿ ಕಲಿಕೆ ಕಷ್ಟ ಎಂದು ಮನವರಿಕೆ ಮಾಡಿಕೊಂಡು ಮಧ್ಯಾಹ್ನದ ಊಟವನ್ನು ದೊಡ್ಡ ಪ್ರಮಾಣದಲ್ಲಿ ಮಕ್ಕಳಿಗೆ ದಿನನಿತ್ಯ ಒದಗಿಸುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಿದ ಹೆಗ್ಗಳಿಕೆ ಕೃಷ್ಣ ಅವರಿಗೆ ಸಲ್ಲುತ್ತದೆ. ಆ ದೂರದೃಷ್ಟಿ ಯೋಜನೆ ಈಗಲೂ ಜಾರಿಯಲ್ಲಿದ್ದು, ಮಕ್ಕಳಿಗೆ ಅಕ್ಷರ ದಾಸೋಹದೊಂದಿಗೆ ಅನ್ನದಾಸೋಹವನ್ನು ಪರಿಚಯಿಸಿಕೊಟ್ಟ ದೂರದರ್ಶಿ ಯೋಜನೆಯಾಗಿದೆ. ಈಗಲೂ ರಾಜ್ಯದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಮಧ್ಯಾಹ್ನದ ಬಿಸಿಯೂಟ ಯೋಜನೆ ಮೂಲಕ ಅನ್ನದಾಸೋಹದ ಜೊತೆ ಅಕ್ಷರ ದಾಸೋಹದ ಮಹತ್ವವನ್ನು ಮನಗಾಣಿಸಿದರು.

ಸಿದ್ದಗಂಗಾ- ಸುತ್ತೂರು ಮಠದ ಪ್ರೇರಣೆ

ತುಮಕೂರಿನ ಸಿದ್ದಗಂಗಾ ಮಠ ಮತ್ತು ಸುತ್ತೂರು ಮಠಗಳ ಭಕ್ತರಾಗಿದ್ದ ಎಸ್.ಎಂ.ಕೃಷ್ಣ, ಅಲ್ಲಿನ ಅಕ್ಷರ ದಾಸೋಹ ಅನ್ನದಾಸೋಹದಿಂದ ಪ್ರೇರಣೆ ಪಡೆದರು. ಆ ಕಾರಣದಿಂದಲೇ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಶಾಲಾ ಮಕ್ಕಳು ಹಸಿವಿನಿಂದ ಬಳಲ ಬಾರದು ಎಂದು 2001ರಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆ ಜಾರಿಗೆ ತಂದರು. ತಮ್ಮ ಆಡಳಿತಾವಧಿಯಲ್ಲಿ ಮಳೆ, ಬೆಳೆ ಇಲ್ಲದೆ, ಭೀಕರ ಬರ, ಅಶಾಂತಿಯ ವಾತಾವರಣ ಸೇರಿದಂತೆ ಹಲವು ಆರ್ಥಿಕ ಸಂಕಷ್ಟಗಳು ಎದುರಾಗಿದ್ದವು. ಆ ಸಂದರ್ಭದಲ್ಲಿ ಹಣಕಾಸು ಇಲಾಖೆ ಅಧಿಕಾರಿಗಳಿಗೆ ನಮ್ಮ ಯಾವ ಕಾರ್ಯಕ್ರಮಗಳು ನಿಂತರೂ ಚಿಂತೆಯಿಲ್ಲ, ಯಾವುದೇ ಕಾರಣಕ್ಕೂ ಮಧ್ಯಾಹ್ನದ ಬಿಸಿಯೂಟ ಯೋಜನೆ ನಿಲ್ಲಬಾರದು ಎಂದು ಸೂಚಿಸಿದ್ದರು. ಇದು ಕೃಷ್ಣರ ಜನಪರ ಕಾಳಜಿ, ಬದ್ಧತೆಗೆ ಹಿಡಿದ ಕೈಗನ್ನಡಿಯಾಗಿತ್ತು.

ಸರಕಾರಿ ಶಾಲಾ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ಯೋಜನೆಯನ್ನು ಎಸ್.ಎಂ. ಕೃಷ್ಣ ಅವರು ರಾಯಚೂರಿನಲ್ಲಿ ಮೊದಲ ಬಾರಿಗೆ ಉದ್ಘಾಟಿಸಿದರು.

- ವಿಧಾನಸೌಧಕ್ಕೆ ನಿತ್ಯ ಭೇಟಿಕೊಡುವ ಮೂಲಕ ಶಕ್ತಿಸೌಧಕ್ಕೆ ನಿಜವಾದ ಶಕ್ತಿ ತುಂಬುವ ಕೆಲಸ.
- ಆಡಳಿತದಲ್ಲಿ ತಂತ್ರಜ್ಞಾನ ಅಳವಡಿಸುವು ದರೊಂದಿಗೆ ಯೋಜನೆಗಳ ವಿಳಂಬ ಮಾಡದಂತೆ ಕ್ರಮ
- ಗ್ರಾಮೀಣ ಜನರಿಗೆ ಭೂಮಿ ತಂತ್ರಜ್ಞಾನ ಪರಿಚಯಿಸಿದ ಕೀರ್ತಿ ಕೃಷ್ಣ ಅವರದ್ದು
- ಬೆಂಗಳೂರಿನ ಜನರು ವಿದ್ಯುತ್, ನೀರು, ಟೆಲಿಫೋನ್ ಸೇರಿದಂತೆ ಹಲವು ಬಿಲ್ ಕಟ್ಟುಲು ಅನುಕೂಲವಾಗುವಂತೆ ಬೆಂಗಳೂರು ಒನ್ ಕೇಂದ್ರಗಲ ಸ್ಥಾಪನೆ.
- ಕರ್ನಾಟಕದ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ವಿಶ್ವಬ್ಯಾಂಕ್ ನೆರವಿನೊಂದಿಗೆ ಆರೇ ತಿಂಗಳಲ್ಲಿ ಗುಂಡಿ ಮುಚ್ಚುವ ಕಾರ್ಯದಲ್ಲಿ ಯಶಸ್ಸು
- ರಾಜ್ಯದಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ಪಾರದರ್ಶಕ ಆಡಳಿತ ಜಾರಿಗೆ ಲೋಕಾಯುಕ್ತಕ್ಕೆ ಬಲತುಂಬಿದ್ದ ಕೃಷ್ಣ
- ಅಂದು ಆಡಳಿತದಲ್ಲಿ ತುಂಬಿದ್ದ ಜಡತ್ವವನ್ನು ತೊಳೆಯಲು ಆಡಳಿತ ಸುಧಾರಣಾ ಆಯೋಗದ ರಚನೆ
- ಉನ್ನತ ಶಿಕ್ಷಣ ಇಲಾಖೆಯಲ್ಲಿನ ಸುಧಾರಣೆ ತರುವ ಉದ್ದೇಶದಿಂದ ಶ್ರೀನಿವಾಸ್ ಅವರ ಅಧ್ಯಕ್ಷತೆಯಲ್ಲಿ ಜ್ಞಾನ ಆಯೋಗದ ರಚನೆ
- ಕೈಗಾರಿಕೋದ್ಯಮಿಗಳು ಬರಲು ಬೇಕಿರುವ ಮೂಲಸೌಕರ್ಯ ಒದಗಿಸಲಿ, ಫ್ಲೈಓವರ್, ಅಂಡರ್‌ಪಾಸ್, ರಸ್ತೆ ಸೇರಿದಂತೆ ಹಲವು ಯೋಜನೆಗಳ ಜಾರಿ
- ಜನಪರ ಯೋಜನೆಗಳ ಜಾರಿಗೆ ಸಚಿವರಿಗಿಂತ ಹೆಚ್ಚಾಗಿ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುತ್ತಿದ್ದ ಕೃಷ್ಣ.

ರೈತರಿಗೆ ವರವಾದ ಯಶಸ್ವಿನಿ ಯೋಜನೆ

ಎಸ್.ಎಂ.ಕೃಷ್ಣ ತಮ್ಮ ಅಧಿಕಾರವಧಿಯಲ್ಲಿ ತೆಗೆದುಕೊಂಡ ಮತ್ತೊಂದು ಕ್ರಾಂತಿಕಾರಿಕ ಹೆಜ್ಜೆ ಯಶಸ್ವಿನಿ ಯೋಜನೆ. ಈ ಯೋಜನೆ ರೈತರಿಗೆ ಪ್ರಥಮ ಬಾರಿಗೆ ಆರೋಗ್ಯ ಸೇವೆಯನ್ನು ಕಲ್ಪಿಸುವ ಯಶಸ್ವಿನಿ ಯೋಜನೆಯನ್ನು ಜಾರಿಗೆ ತಂದರು. ಇದು ರಾಜ್ಯದ ಅತ್ಯಂತ ಜನಪ್ರಿಯ ಯೋಜನೆಯಗಳಲ್ಲಿ ಒಂದಾಗಿತ್ತು. ರೈತರಿಗೆ ಯಾವುದೇ ಆರೋಗ್ಯ ವಿಮೆ ಇಲ್ಲದ ಸಂದರ್ಭ ದಲ್ಲಿ ಕೃಷ್ಣ ಮುನ್ನೋಟದ ಯಶಸ್ವಿನಿ ಯೋಜನೆ ಜಾರಿಗೆ ತಂದಿದ್ದರು.

ರೈತರಿಗೆ ಆರೋಗ್ಯ ಸಮಸ್ಯೆ ಉಂಟಾದರೆ ಸುಲಭವಾಗಿ, ಉಚಿತವಾಗಿ ಚಿಕಿತ್ಸಾ ಸೌಲಭ್ಯ ಸಿಗಲಿ ಎಂಬ ಉದ್ದೇಶದಿಂದ ಯಶಸ್ವಿನಿ ಯೋಜನೆ ಜಾರಿಗೆ ತರಲಾಗಿತ್ತು. ಇದು ಅತ್ಯಂತ ಯಶಸ್ವಿ ಆರೋಗ್ಯ ಸೇವೆಯಾಗಿ ಹೊರಹೊಮ್ಮಿತ್ತು. ಈ ಸಂಬಂಧ ವೈದ್ಯರು ಹಾಗೂ ರೈತರೊಂದಿಗೆ ಸಮಾಲೋಚನೆ ನಡೆಸಿ ನೀತಿಯನ್ನು ರೂಪಿಸಿ ಯೋಜನೆ ಜಾರಿಗೆ ತಂದಿದ್ದು ಕೃಷ್ಣ ಅವರಿಗೆ ರೈತರ ಬಗೆಗಿದ್ದ ಕಾಳಜಿಗೆ ಸಾಕ್ಷಿಯಾಗಿದೆ.

ಮಹಿಳೆಯರ ಕೈ ಬಲಪಡಿಸಿದ ಸ್ತ್ರೀಶಕ್ತಿ ಯೋಜನೆ

ಮಹಿಳೆಯರ ಕೈ ಬಲಪಡಿಸಬೇಕು ಎನ್ನುವ ಉದ್ದೇಶ ದಿಂದ ಸ್ತ್ರೀ ಶಕ್ತಿ ಸಂಘಗಳ ಸ್ಥಾಪನೆಗೆ ಮುಂದಾಗಿದ್ದು ಕೃಷ್ಣ ಸರಕಾರ. ಈ ಯೋಜನೆ ಇಂದು ಹೆಮ್ಮರವಾಗಿ ಬೆಳೆದು ನಿಂತು, ಲಕ್ಷಾಂತರ ಮನೆಗಳಿಗೆ ದಾರಿದೀಪವಾ ಗಿದೆ. ರಾಜ್ಯದ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸಬಲೀಕರಣಕ್ಕಾಗಿ ಸ್ತ್ರೀಶಕ್ತಿ ಯೋಜನೆ ಯನ್ನು 2000-01ರಲ್ಲಿ ಜಾರಿಗೊಳಿಸಲಾಗಿತ್ತು. ರಾಜ್ಯದಲ್ಲಿ 176 ತಾಲೂಕುಗಳ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸ್ತ್ರೀಶಕ್ತಿ ಗುಂಪುಗಳನ್ನು ರಚನೆ ಮಾಡಲಾ ಗಿತ್ತು. ಯೋಜನೆಯ ಮೂಲಕ ಮಹಿಳೆಯರ ಅಭಿವೃದ್ಧಿ ಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳಿಗೆ ಅನುದಾನವನ್ನು ಮೀಸಲಿಟ್ಟು ಬೃಹತ್ ಪ್ರಮಾಣದಲ್ಲಿ ಮಹಿಳೆಯರನ್ನು ಸಂಘಟಿಸಲು ಪ್ರಯತ್ನಿಸುವ ಮೂಲಕ ಒಂದು ಕ್ರಾಂತಿಕಾರಿ ಹೆಜ್ಜೆ ಇಟ್ಟದ್ದರು.

ಕೃಷ್ಣ ಸಂಪುಟದ ಮೊದಲ ತೀರ್ಮಾನ

ಸಚಿವ ಸಂಪುಟ ರಚನೆಗೊಂಡ ಮೊದಲ ದಿನವೇ ಕೃಷ್ಣಾ ಮೇಲ್ದಂಡೆ ಯೋಜನೆಯ ತುಂಡು ಕಾಮಗಾರಿಯಲ್ಲಿ ನಡೆದ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ವರದಿ ಕೈಸೇರಿತ್ತು. ಇದರನ್ವಯ ಅಂದಿನ ಜನತಾದಳದ ನಾಯಕರರಿಗೆಲ್ಲಾ ತುಂಬಾ ತೊಂದರೆಯಾಗುತ್ತಿತ್ತು. ಆದರೆ ಈ ವಿಷಯ ಮುಂದಿಟ್ಟುಕೊಂಡು ಕೃಷ್ಣ ದ್ವೇಷದ ರಾಜಕೀಯ ಮಾಡಲಿಲ್ಲ. ಬದಲಿಗೆ ಅಂದಿನ ಸರಕಾರ ಹಾಗೂ ಮುಖ್ಯಮಂತ್ರಿಗಳು ನೀಡಿದ ತುಂಡು ಗುತ್ತಿಗೆಯಲ್ಲಿ ತಾಂತ್ರಿಕ ದೋಷವಿರಬಹುದು. ಆದರೆ ಹಿಂದಿನ ಸರಕಾರದ ಉದ್ದೇಶವನ್ನು ಪ್ರಶ್ನೆ ಮಾಡು ವಂತಿಲ್ಲ. ಇದರಿಂದ ಯಾವುದೇ ಅಭಿವೃದ್ಧಿ ಕಾರ್ಯವಾ ಗುವುದಿಲ್ಲ. ಆದ್ದರಿಂದ ಆ ಕಡತದ ಮೇಲೆ ಸಿಬಿಐಗೆ ಪ್ರಸ್ತುತ ಪ್ರಕರಣವನ್ನು ಒಪ್ಪಿಸುವ ಅಗತ್ಯವಿಲ್ಲವೆಂದು ಬರೆದು ಹಿಂದಿರುಗಿಸಿದ್ದರು. ಈ ಮೂಲಕ ರಾಜಕೀಯದಲ್ಲಿ ಮೇಲ್ಪಂಕ್ತಿ ಹಾಕಿಕೊಟ್ಟರು.

ಮುಖ್ಯಮಂತ್ರಿಯಾಗಿ ಪ್ರಮಾಣವಚನ

1999ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಬಳಿಕ, ಕರ್ನಾಟಕದ ಉಸ್ತುವಾರಿ ವಹಿಸಿದ್ದ ಗುಲಾಂ ನಬೀ ಆಜಾದ್ ಅವರು, ಶಾಸಕರ ಅಭಿಪ್ರಾಯ ಸಂಗ್ರಹಿಸಿ, ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಅವರಿಗೆ ಎಸ್.ಎಂ. ಕೃಷ್ಣ ಅವರನ್ನು ಮುಖ್ಯಮಂತ್ರಿ ಮಾಡುವುದು ಸೂಕ್ತ ಎನ್ನುವ ಸಂದೇಶ ರವಾನಿಸಿದ್ದರು. ಇದಾದ ಬಳಿಕ ನಡೆದ ಪ್ರಮಾಣವಚನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಯಾಗಿ ಕೃಷ್ಣ ಅವರು ಅಧಿಕಾರ ಸ್ವೀಕರಿಸಿದ ಕ್ಷಣಕ್ಕೆ ಸೋನಿಯಾ ಗಾಂಧಿ ಸೇರಿದಂತೆ ಕಾಂಗ್ರೆಸ್ ಬಹುತೇಕ ನಾಯಕರು ಸಾಕ್ಷಿಯಾಗಿದ್ದರು. ಪ್ರಮಾಣವಚನದ ಬಳಿಕ ಧರ್ಮಸಿಂಗ್, ಮಲ್ಲಿಕಾರ್ಜುನ ಖರ್ಗೆ, ಕೆ.ಎಚ್. ರಂಗನಾಥ್, ಎಂ,ವೈ, ಘೋರ್ಪಡೆ, ಎಚ್.ಸಿ. ಶ್ರೀಕಂಠಯ್ಯ, ಡಿ.ಬಿ. ಚಂದ್ರೇಗೌಡ, ಕಾಗೋಡು ತಿಮ್ಮಪ್ಪ, ಆರ್. ವಿ. ದೇಶಪಾಂಡೆ ಸೇರಿದಂತೆ ಹಲವರನ್ನು ಕೃಷ್ಣ ತಮ್ಮ ಸಂಪುಟಕ್ಕೆ ಸೇರಿಸಿಕೊಂಡರು.



ಎಸ್‌ಎಂಕೆ ಕುರಿತಾಗಿ ಆರು ಕೃತಿ ರಚನೆ

ರಾಜಕೀಯದಲ್ಲಿ ಎಸ್.ಎಂ. ಕೃಷ್ಣ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅವರ ಜೀವನ ಕುರಿತಾಗಿ 6 ಕೃತಿಗಳು ರಚನೆಯಾಗಿವೆ. ಅವರ ಜೀವನ ಚರಿತ್ರೆ 'ಚಿತ್ರದೀಪ ಸಾಲು', ಎಸ್.ಎಂ. ಕೃಷ್ಣ ನೆನಪುಗಳ ಸಂಕಲನ 'ಸ್ಮೃತಿ ವಾಹಿನಿ', ಜೀವನ ಚರಿತ್ರೆ 'ಕೃಷ್ಣ ಪಥ', ಅವರ ಚಿಂತನೆಗಳ ಸಂಕಲನ 'ಭವಿಷ್ಯ ದರ್ಶನ', ಇಂಗ್ಲಿಷ್ ಕೃತಿಗಳಾದ 'ಡೌನ್ ಮೆಮೊರಿ ಲೇನ್', 'ಸ್ಟೇಟ್ಸ್‌ಮನ್ ಎಸ್.ಎಂ. ಕೃಷ್ಣ' ಕೃತಿಗಳು ರಚನೆಯಾಗಿವೆ.

ಮೊದಲ ಬಾರಿಗೆ ಪಕ್ಷೇತರವಾಗಿ ಆಯ್ಕೆ

1962ರಲ್ಲಿ ಮೊದಲ ಬಾರಿಗೆ ಚುನಾವಣಾ ಅಖಾಡಕ್ಕೆ ಧುಮಿಕ್ಕಿದ್ದ ಎಸ್.ಎಂ. ಕೃಷ್ಣ ಅವರು ತಮ್ಮ ಮೊದಲ ಚುನಾವಣೆಯನ್ನು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಗೆಲುವು ಸಾಧಿಸಿದ್ದರು. ಇದಾದ ಬಳಿಕ ಸೋಷಿಯಲ್ ಪಕ್ಷದಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ಇದಾದ ಬಳಿಕ ಕಾಂಗ್ರೆಸ್ ಪಕ್ಷ ಸೇರಿ ರಾಜ್ಯ ಹಾಗೂ ದೇಶದಲ್ಲಿ ವಿವಿಧ ಆಯಕಟ್ಟಿನ ಹುದ್ದೆಗಳನ್ನು ಅಲಂಕರಿಸಿದರು.

ಅಶ್ರುತರ್ಪಣ

34 ಸಾವಿರ ಕೋಟಿ ಬಜೆಟ್ ಮಂಡನೆ ಮಾಡಿದವರು. ಅವರು ನಮಗೆಲ್ಲಾ ಮಾದರಿ. ಸಾಹಿತ್ಯದಲ್ಲಿ ಕೃಷ್ಣ ರಿಗೆ ಆಸಕ್ತಿ ಹೆಚ್ಚಿತ್ತು. ಮಿತಭಾಷಿಯಾಗಿದ್ದ ಅವರು, 4 ಸದನಗಳನ್ನು ನೋಡಿದ್ದರು. ದೊರೆತ ಎಲ್ಲಾ ಸ್ಥಾನಗಳಿಗೂ ಗೌರವ ಕೊಟ್ಟಿದ್ದಾರೆ. ಹುಟ್ಟಿದಾಗ ಉಸಿರು ಇರುತ್ತದೆ ಹೆಸರು ಇರುವುದಿಲ್ಲ, ಸತ್ತಾಗ ಹೆಸರಿರುತ್ತದೆ ಉಸಿರಿರುವುದಿಲ್ಲ. ಅವರ ಬಗ್ಗೆ ಎಲ್ಲರು ಮೆಚ್ಚುಗೆ ವ್ಯಕ್ತಪಡಿಸುತ್ತಿರುವುದು ಅವರಿಗೆ ಸಲ್ಲಿಸಿದ ದೊಡ್ಡ ಗೌರವವಾಗಿದೆ.

-ಭೋಜೇಗೌಡ, ಪರಿಷತ್ ಸದಸ್ಯ

ಉಪಮುಖ್ಯಮಂತ್ರಿಯಾಗಿ ಬಂದ ವರು ಮೊದಲು ಎಸ್.ಎಂ.ಕೃಷ್ಣ ಅವರು. ಯುವಕರು ರಾಜ್ಯದಲ್ಲಿ ಉತ್ತಮ ರಾಜಕಾರಣ ಮಾಡಬೇಕು ಎಂದು ಕನಸು ಕಂಡಿದ್ದರು. ಸಿಎಂ ಆಗಿದ್ದ ಸಂಧಭದಲ್ಲಿ ರಾಜ್ಯದಲ್ಲಿ ಬರಗಾಲ, ಕಾವೇರಿ ಸಮಸ್ಯೆ, ವೀರಪ್ಪನ್ ಅಪಹರಣ ಆಗಿದ್ದವು. ದೇಶದ ಪ್ರಧಾನಿ ಆಗಬೇಕಿತ್ತು. ಆದರೆ ಆಗಲಿಲ್ಲ

-ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ನಾಯಕ



ಸಾವಿರಾರು ಕೆರೆಗಳ ಅಭಿವೃದ್ಧಿ ಮಾಡಿದ ಕೃಷ್ಣ ನಾಡು ಕಂಡ ದೂರದೃಷ್ಟಿವುಳ್ಳ ರಾಜಕಾರಣಿ. ಇದಕ್ಕಾಗಿ ಕೆ-ಶಿಪ್, ಕೆಬಿಜೆಎನ್ ಎಲ್, ಪ್ರಾರಂಭಿಸಿ ಆಲಮಟ್ಟಿ, ಕಾವೇರಿ, ರೈತರ ವಿಷಯದಲ್ಲಿ ಅಪಾರವಾದ ಕಾಳಜಿ ಹೊಂದಿದ್ದರು. ರಾಯಚೂರಿನಲ್ಲಿ ಸ್ತ್ರೀಶಕ್ತಿ ಗುಂಪು ಮಾಡಿ, ಸೋನಿಯಾ ಗಾಂಧಿ ಅವರನ್ನು ಕರೆಸಿದ್ದರು.

-ಬೋಸರಾಜು, ಸಚಿವ

ಎಸ್.ಎಂ.ಕೃಷ್ಣಅವರು ಮೊದಲಿನಿಂದಲೂ ನಮ್ಮ ಕುಟುಂಬಕ್ಕೆ ಆತ್ಮೀಯರು. ಸಂಗೀತ ಕ್ಷೇತ್ರದ ಬಗ್ಗೆ ಅಪಾರ ಒಲವಿಟ್ಟುಕೊಂಡಿದ್ದವರು. ಅವರ ಅಗಲಿಕೆ ನೋವು ತಂದಿದೆ.

-ಶಿವರಾಜ್‌ಕುಮಾರ್, ನಟ

ಎಸ್.ಎಂ.ಕೃಷ್ಣ ಅವರು ಸ್ನೇಹ ಜೀವಿ ಹಾಗೂ ಹಿರಿಯ ರಾಜಕಾರಣಿ. ಅದಮ್ಯ ಚೇತನಕ್ಕೆ ಅಡುಗೆ ವ್ಯವಸ್ಥೆಗೆ ಎರಡೇ ದಿನದಲ್ಲಿ ಜಾಗದ ವ್ಯವಸ್ಥೆ ಮಾಡಿಕೊಟ್ಟಿದ್ದರು. ಅನಂತ್ ಕುಮಾರ್ ಕೇಂದ್ರ ಸಚಿವರಾಗಿದ್ದಾಗ, ಎಸ್.ಎಂ.ಕೃಷ್ಣಾ ಸಿಎಂ ಆಗಿದ್ದರು.ಇಬ್ಬರೂ ಸೇರಿ ಬೆಂಗಳೂರಿಗೆ ಮಹತ್ವದ ಕೊಡುಗೆಗಳನ್ನು ನೀಡಿದ್ದರು .

-ತೇಜಸ್ವಿನಿ ಅನಂತಕುಮಾರ್, ಮುಖ್ಯಸ್ಥೆ, ಅದಮ್ಯ ಚೇತನ ಸಂಸ್ಥೆ

ಅಪರೂಪ

ಸುಪ್ರೀಂ ಸದ್ದು ಹೊಡೆದ ಕೃಷ್ಣ

ತೀವ್ರ ಬರಗಾಲದಿಂದ ಕರ್ನಾಟಕ ಬಳಲುತ್ತಿದ್ದ ಸಮಯದಲ್ಲಿ ಕಾವೇರಿ ನೀರು ತಮಿಳುನಾಡಿಗೆ ಹರಿಸುವಂತೆ ಸುಪ್ರೀಂ ಕೋರ್ಟ್ ಸೂಚನೆ ನೀಡಿತ್ತು. ಆದರೆ ಇದನ್ನು ಒಪ್ಪಲು ಸಾಧ್ಯವಿಲ್ಲವೆಂದು ಪಾದಯಾತ್ರೆ ಆರಂಭಿಸಿದ್ದ ಕೃಷ್ಣ ಅವರ ನಡೆ ಸುಪ್ರೀಂ ಕೋರ್ಟ್ ಕೆಂಗಣ್ಣಿಗೆ ಗುರಿಯಾಗಿತ್ತು. ಬಳಿಕ ಕ್ಷಮಾಪಣೆ ಕೇಳಿ ನೀರು ಬಿಟ್ಟರೂ, ಕೃಷ್ಣ ಅವರ ಅಂದಿನ ತೀರ್ಮಾನ ಭಾರಿ ಸದ್ದು ಮಾಡಿತ್ತು.



ಎಸ್.ಎಂ.ಕೃಷ್ಣ ಅವರು ಸೊಗಸುಗಾರ ರಾಜಕಾರಣಿ. ನನಗೂ ಅವರುಗೂ ಸುಮಾರು ವರ್ಷದ ಬಾಂಧವ್ಯವಿತ್ತು. ಜಾತಿಯ ಸೋಂಕಿಲ್ಲದೆ ಪ್ರೀತಿ ವಿಶ್ವಾಸದಲ್ಲಿದ್ದವರು. ಗೌರವಯುತವಾಗಿ ಆದರ್ಶದ ರಾಜಕಾರಣ ಮಾಡಿದವರು.

-ವಾಟಾಳ್ ನಾಗರಾಜ್, ಕನ್ನಡಪರ ಹೋರಾಟಗಾರ

ಎಸ್.ಎಂ.ಕೃಷ್ಣ ಅವರು ಕೊನೆಯ ದಿನಗಳಲ್ಲಿ ಕಾಂಗ್ರೆಸ್ ನಾಯಕತ್ವ ದಿಂದ ಅಸಮಾಧಾನಗೊಂಡು, ನರೇಂದ್ರ ಮೋದಿಯವರ ನಾಯಕತ್ವ ಮೆಚ್ಚಿ ಬಿಜೆಪಿಗೆ ಸೇರಿದ್ದರು. 2018ರ ಚುನಾವಣೆಯಲ್ಲಿ ಬಿಜೆಪಿ ಹೆಚ್ಚಿನ ಸ್ಥಾನ ಗೆಲ್ಲಲು ಅವರ ಪಾತ್ರ ಹೆಚ್ಚಿತ್ತು. ನಮಗೆ ಅವರು ಸಾಕಷ್ಟು ಮಾರ್ಗದರ್ಶನ ಮಾಡಿದ್ದರು

-ಅರವಿಂದ್ ಲಿಂಬಾವಳಿ, ಮಾಜಿ ಸಚಿವ

ಉತ್ತಮವಾದ ರಾಜಕಾರಣಿ ಎಸ್.ಎಂ ಕೃಷ್ಣರವರು ಅವರನ್ನು ಕಳೆದುಕೊಂಡಿದ್ದು ದೇಶಕ್ಕೆ ಲಾಸ್. ರಾಜ್ಯದ ರಾಜಕಾರಣದಲ್ಲಿ ಬದಲಾವಣೆ ತಂದವರು. ತಂದೆಯ ಜೊತೆಗಿನ ಕೃಷ್ಣ ಅವರ ಒಡನಾಟ ಹೇಳೋಕೆ ಆಗ ನಾನು ಚಿಕ್ಕವನಿದ್ದೆ, ಆದರೆ 1998ರಲ್ಲಿ ಮಂಡ್ಯ ಕಡೆ ಅವರೊಂದಿಗೆ ಕ್ಯಾಂಪೇನ್ ಮಾಡಿದ್ವಿ. ನಮ್ಮ ತಂದೆಯವರಿಗೆ ಅವರು ಸಿಎಂ ಆಗಬೇಕು ಆಸೆಯಿತ್ತು. ಅದು ಹಾಗೇ ಕೂಡ ನಡೆಯಿತು.

-ಅಭಿಷೇಕ್ ಅಂಬರೀಶ್, ನಟ

ಕಾವೇರಿ ತೀರದ ಕನಸುಗಾರ, ಅಭಿವೃದ್ಧಿಯ ಹರಿಕಾರ, ಸೊಗಸುಗಾರ ಎಸ್.ಎಂ.ಕೃಷ್ಣ

ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿಗಳು

ರಾಜಕೀಯದಲ್ಲಿ ನಾವಿನ್ನು ಪೈರುಗಳಾಗಿ ಬೆಳೆಯುತ್ತಿರುವ ಹೊತ್ತಿನಲ್ಲಿ ಅಗಾದ ಮರವಾಗಿ ಬೆಳೆದು ನಿಂತಿದ್ದವರು ಎಸ್.ಎಂ.ಕೃಷ್ಣ. 1989ರಲ್ಲಿ ನಾನು ಸಾತನೂರಿನಿಂದ ಗೆದ್ದು ಶಾಸಕನಾಗಿದ್ದೆ. ಆಗ ವಿಧಾನಸಭೆಯ ಸ್ಪೀಕರ್ ಹುದ್ದೆಯಲ್ಲಿ ಮಿಂಚಿ, ನಮಗೆಲ್ಲ ರಾಜಕೀಯದ ಪಾಠ ಮಾಡಿದವರು. ಅಚ್ಚುಕಟ್ಟುತನ, ಸಂಯಮ, ಜಾಣ್ಮೆ, ನಯ-ನಾಜೂಕು, ಆಡಳಿತ-ವಿರೋಧ ಪಕ್ಷ ಎನ್ನದೇ ಸರ್ವರಿಗೂ ಸಮಾನ ಅವಕಾಶ ಕಲ್ಪಿಸುವ ಮೂಲಕ ಸ್ಪೀಕರ್ ಹುದ್ದೆಗೆ ಘನತೆ ತಂದವರು. ವ್ಯಂಗ್ಯಭರಿತ ಮೊನಚು ಮಾತುಗಳಿಂದ ಇಬ್ಬರಿಗೂ ಅವರು ಹೂಡುತ್ತಿದ್ದ ಬಾಣ ಗುರಿ ತಪ್ಪುತ್ತಿರಲಿಲ್ಲ. ಅವರ ವಾಕ್ಚಾತುರ್ಯಕ್ಕೆ ತಲೆದೂಗದವರೇ ಇಲ್ಲ.

ಕಾವೇರಿ ತೀರದ ಕನಸುಗಾರ, ಸೊಗಸುಗಾರ, ಅಭಿವೃದ್ಧಿಯ ಹರಿಕಾರ. ಮೂವತ್ತನೇ ವಯಸ್ಸಿಗೆ ವಿಧಾನಸಭೆ ಪ್ರವೇಶ ಮಾಡಿದ ಸೈಲೆಂಟ್ ಲೀಡರ್ ಎಸ್.ಎಂ.ಕೃಷ್ಣ ಅವರು. ಎಂಥಹದೇ ಪರಿಸ್ಥಿತಿಯಲ್ಲೂ ಧೃತಿಗೆಡದ ಸ್ಥಿತಪ್ರಜ್ಞ. ಕರ್ನಾಟಕದ ರಾಜಕೀಯ ಕಂಡ ವಿಭಿನ್ನ, ವಿಶಿಷ್ಟ ವ್ಯಕ್ತಿ. ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ- ಹೀಗೆ ನಾನಾ ವಿದ್ವತ್ತುಗಳು ಮೇಳೈಸಿದ ವ್ಯಕ್ತಿತ್ವ. ರಾಜಪ್ರಭುತ್ವ ಹಾಗೂ ಪ್ರಜಾಪ್ರಭುತ್ವವನ್ನು ಕಂಡಿದ್ದ ಮನೆತನದ ಕೊಂಡಿ. ವಿದೇಶಾಂಗ ಸಚಿವರಾಗಿದ್ದಾಗ ಭಾರತದ ಸಾರ್ವಭೌಮತ್ವ ಎತ್ತಿ ಹಿಡಿದ 'ಸಂವಿಧಾನ ಪ್ರೇಮಿ'!

ಸರಕಾರಿ ಶಾಲಾ ಮಕ್ಕಳ ಹಸಿವು ಕಣ್ಣಾರೆ ಕಂಡು ಮರುಗಿದ 'ಮಾತೃ ಹೃದಯಿ'. ಗ್ರಾಮೀಣ ಭಾಗದ ಹೆಣ್ಣುಮಕ್ಕಳ ಆರ್ಥಿಕ ಕಷ್ಟ ದೂರ ಮಾಡಬೇಕು ಎಂದು ಆಲೋಚಿಸಿದವರು. 'ಕರ್ನಾಟಕ ಕಂಗೊಳಿಸುತ್ತಿದೆ' ಎನ್ನುವ ಘೋಷವಾಕ್ಯದ ಮೂಲಕ ಕರ್ನಾಟಕಕ್ಕೆ ಬ್ರಾಂಡ್ ಮೌಲ್ಯ ತಂದುಕೊಟ್ಟ ವ್ಯವಹಾರ ಚತುರ. ಗಾಂಧಿವಾದಿಯಾಗಿದ್ದ ತಂದೆ ಮಲ್ಲಯ್ಯ ಅವರಿಂದ ಬಳುವಳಿಯಾಗಿ ಬಂದಿದ್ದ ಸಜ್ಜನಿಕೆ ಅವರನ್ನು ದೂರದೃಷ್ಟಿಯ ನಾಯಕನನ್ನಾಗಿ ಮಾಡಿತು. ವಿದೇಶ ಶಿಕ್ಷಣ ವರ್ಣರಂಜಿತ ವ್ಯಕ್ತಿತ್ವವನ್ನು ರೂಪಿಸಿತು. ಆದರೆ, ಹಳ್ಳಿ ಮತ್ತು ನಗರವಾಸಿಗಳ ಬಗ್ಗೆ ಅವರಿಗಿದ್ದ ಸಮಾನ ಭಾವ, ಅವರ ಅನೇಕ ತೀರ್ಮಾನಗಳು, ನಿಲುವುಗಳು ನನಗೆ ಅವರಲ್ಲೊಬ್ಬ 'ರಾಜಕೀಯ ಸಂತ'ನ ದರ್ಶನ ಮಾಡಿಸಿದೆ.

ಅಜಾತಶತ್ರುವಾಗಿ ರಾಜಕೀಯದ ಒಂದೊಂದೇ ಮೆಟ್ಟಿಲುಗಳನ್ನು ಸಾವಧಾನವಾಗಿ ಏರಿದ ಕೃಷ್ಣ ಅವರು ಕೆಂಪೇಗೌಡರು ನಿರ್ಮಿಸಿದ ಬೆಂಗಳೂರನ್ನು ಇಡೀ ಜಗತ್ತೇ ತಿರುಗಿನೋಡುವಂತೆ ಪರಿವರ್ತಿಸಿದರು. ಐಟಿಬಿಟಿ ಮೂಲಕ ಬೆಂಗಳೂರನ್ನು ಸಿಲಿಕಾನ್ ಸಿಟಿಯಾಗಿಸಿ ದೇಶದ ಆರ್ಥಿಕತೆಗೆ ಅತಿದೊಡ್ಡ ಕೊಡುಗೆ ಸಿಗುವಂತೆ ಮಾಡಿದವರು ಎಸ್.ಎಂ.ಕೃಷ್ಣ ಅವರು.

ದ್ವಾಪರಯುಗದ ಕೃಷ್ಣನ ಬಗ್ಗೆ ಕಥೆಗಳಲ್ಲಿ ಕೇಳಿದ್ದೇವೆ, ಓದಿದ್ದೇವೆ. ರಾಜಕೀಯ ಚಾಣಾಕ್ಷತೆ, ಸತ್ಯನಿಷ್ಠೆ ವಿಚಾರದಲ್ಲಿ ಆ ಕೃಷ್ಣನ ಪ್ರತಿರೂಪವೇ ನಮ್ಮ ಈ ಕೃಷ್ಣ. ರಾಜ್ಯದ ವಿಚಾರ ಬಂದಾಗ ಎಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಸರ್ವರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುತ್ತಿದ್ದರು. ಸದಾ ಅಭಿವೃದ್ಧಿ, ರಾಷ್ಟ್ರ ಹಾಗೂ ರಾಜ್ಯದ ಪರ ಯೋಚನೆ ಮಾಡುತ್ತಿದ್ದ ಕಾಯಕ ಜೀವಿ. ಕಾವೇರಿ ವಿಚಾರದಲ್ಲಿ ಅಧಿಕಾರ ಹೋದರೂ ಚಿಂತೆಯಿಲ್ಲ ಎಂದು ನಾಡಿನ ಹಿತಕ್ಕಾಗಿ ಹೋರಾಡಿದರು.

ಹಿಂದೆ ಎಸ್.ಎಂ.ಕೃಷ್ಣ ಅವರ ಜನ್ಮದಿನದಂದು ಅವರ ಜತೆ ಪುಟ್ಟಪರ್ತಿಗೆ ತೆರಳಿದ್ದೆ. ನನ್ನನ್ನು ಕಂಡ ಸಾಯಿಬಾಬಾ ಅವರು ಎಸ್.ಎಂ.ಕೃಷ್ಣ ಅವರನ್ನು ಉದ್ದೇಶಿಸಿ, ನೀನು ಈ ಹುಡುಗನನ್ನು ಬಿಡುವುದಿಲ್ಲ, ಕೊನೆಯವರೆಗೂ ಜತೆಯಲ್ಲೇ ಉಳಿಸಿಕೊಳ್ಳುವೆ ಎಂದರು. ಅವರು ಯಾವ ಅರ್ಥದಲ್ಲಿ ಇದನ್ನು ಹೇಳಿದ್ದರೋ ಗೊತ್ತಿಲ್ಲ, ಅವರ ಮಾತಂತೂ ನಿಜವಾಯಿತು. ರಾಜಕೀಯ ಮೀರಿಯೂ ಕೊನೆಗಾಲದವರೆಗೂ ಅವರ ಜತೆಯಲ್ಲೇ ಇದ್ದೆ ಎಂಬುದೇ ನನ್ನ ಸೌಭಾಗ್ಯ.

ಬಂಗಾರಪ್ಪ ಅವರ ಗರಡಿಯಲ್ಲಿ ಬೆಳೆದಿರುವ ಡಿ.ಕೆ.ಶಿವಕುಮಾರ್ ಎಸ್.ಎಂ.ಕೃಷ್ಣ ಅವರ ನೀಲಿ ಕಣ್ಣಿನ ಹುಡುಗನಾಗಿದ್ದಾರೆ ಎಂದು ಮಾಧ್ಯಮಗಳು, ರಾಜಕೀಯ ಪಂಡಿತರು ವಿಶ್ಲೇಷಣೆ ಮಾಡಿದ್ದರು. ಆದರೆ ನಾನು ಕೃಷ್ಣ ಅವರ ಕಣ್ಣುಗಳಲ್ಲಿ ಅಭಿವೃದ್ಧಿ, ದೂರದೃಷ್ಟಿ, ಮುನ್ನೋಟ, ಧೃಢತೆ, ರಾಜ್ಯ, ದೇಶದ ಅಭಿವೃದ್ಧಿ ಕುರಿತ ಆಲೋಚನೆ, ಕನಸುಗಳನ್ನು ನೋಡುತ್ತಿದ್ದೆ. ಇದಕ್ಕೆ ಪೂರಕವಾಗಿ ಈ ಘಟನೆ ನನಗೆ ಈಗಲೂ ನೆನಪಿದೆ.



ಬೆಂಗಳೂರು ಟ್ರಾಫಿಕ್ ಸಮಸ್ಯೆಗೆ ಪರಿಹಾರವಾಗಿ ಮಾಜಿ ಸಿಎಂ ಜೆ.ಎಚ್.ಪಟೇಲರು ಮೋನೋ ರೈಲು ತರಲು ಮುಂದಾಗಿದ್ದರು. ಕೃಷ್ಣ ಅವರು ಸಹ ಮೋನೋ ರೈಲು ಪರವಾಗಿದ್ದರು. ಆಗ ನಾನು ಅದು ಬೇಡ, ಮೆಟ್ರೋ ರೈಲು ಬೇಕು ಎಂದು ಪಟ್ಟು ಹಿಡಿದೆ. ನಂತರ ವಿದೇಶಗಳಲ್ಲಿ ಮೆಟ್ರೋ ಬಗ್ಗೆ ಅಧ್ಯಯನ ಮಾಡಿ ವರದಿ ಕೊಟ್ಟೆ. ಅದರ ಆಧಾರದ ಮೇಲೆ ಮೆಟ್ರೋ ಬಗ್ಗೆ ಯೋಚನೆ ಮಾಡಿದರು. ಅಷ್ಟೇ ಅಲ್ಲದೇ ಅಂದಿನ ಕೇಂದ್ರ ಸಚಿವ ಅನಂತ ಕುಮಾರ್ ಅವರ ಜತೆ ದೆಹಲಿಗೆ ಹೋಗಿ ಪ್ರಧಾನಿ ವಾಜಪೇಯಿ ಅವರನ್ನು ಭೇಟಿ ಮಾಡಿ ಬೆಂಗಳೂರಿಗೆ ಮೆಟ್ರೋ ರೈಲು ಯೋಜನೆ ತಂದರು. ಆಗ ನಾನೂ ಅವರ ಜತೆಗಿದ್ದೆ. ಯಾರು ಏನೇ ಹೇಳಿದರೂ 'ನಮ್ಮ ಮೆಟ್ರೋ' ಎಸ್.ಎಂ.ಕೃಷ್ಣ ಅವರ ಕೊಡುಗೆ. ಅದೀಗ 10 ವರ್ಷಗಳನ್ನು ಪೂರೈಸಿದೆ.

ನನ್ನ ರಾಜಕೀಯ ಗುರು ಬಂಗಾರಪ್ಪ ಅವರು ತಮ್ಮ ಸಂಪುಟದಲ್ಲಿ ಬಂದೀಖಾನೆ ಸಚಿವನನ್ನಾಗಿ ಮಾಡಿ ಮೊದಲ ಬಾರಿಗೆ ನನಗೆ ಜವಾಬ್ದಾರಿ ಕೊಟ್ಟರು. ನಾನು ಇಲಾಖೆಯನ್ನು ನಿಭಾಯಿಸುತ್ತಿದ್ದ ರೀತಿ, ಪಕ್ಷ ನಿಷ್ಠೆ, ನನ್ನ ದುಡಿಮೆಯನ್ನು ಹತ್ತಿರದಿಂದ ಕಂಡ ಕೃಷ್ಣ ಅವರು ಮುಖ್ಯಮಂತ್ರಿಗಳಾದಾಗ ನನಗೆ ಅನೇಕ ಗುರುತರ ಜವಾಬ್ದಾರಿಗಳನ್ನು ನೀಡಿದರು. ನಗರಾಭಿವೃದ್ಧಿ ಸಚಿವನನ್ನಾಗಿ ಮಾಡಿದ್ದೂ ಈಗ ಇತಿಹಾಸ. ಅವರು ನಿಭಾಯಿಸಿದ ಹುದ್ದೆಗಳನ್ನು ನಾನು ನಿಭಾಯಿಸಿದ್ದು ಮಾತ್ರ ಕಾಕತಾಳೀಯ.

ವೀರಪ್ಪ ಮೊಯ್ಲಿ ಅವರು ಸಿಎಂ ಆಗಿದ್ದಾಗ ಕೃಷ್ಣ ಅವರು ಉಪಮುಖ್ಯಮಂತ್ರಿ. ಜತೆಗೆ ವಿದ್ಯುತ್ ಮತ್ತು ನೀರಾವರಿ ಸಚಿವರಾಗಿ ಕ್ರಾಂತಿಕಾರಕ ಯೋಜನೆಗಳನ್ನು ಜಾರಿಗೆ ತಂದರು. ಅವರು 25 ವರ್ಷಗಳ ಹಿಂದೆ ಅಡಿಪಾಯ ಹಾಕಿದ್ದ ಯೋಜನೆಗಳು ಮುಂದಿನ 50 ವರ್ಷಗಳ ದೂರದೃಷ್ಟಿಯನ್ನು ಹೊಂದಿವೆ. ಅವರು ನಿಭಾಯಿಸಿದ ಹುದ್ದೆ ಮತ್ತು ಖಾತೆಗಳನ್ನು ನಾನೂ ನಿಭಾಯಿಸಿದ್ದು, ನಿಭಾಯಿಸುತ್ತಿರುವುದು ಕಾಕತಾಳೀಯ.

ನಾನು ಇಂದು ಉಪಮುಖ್ಯಮಂತ್ರಿ ಹುದ್ದೆ ಅಲಂಕರಿಸಿದ್ದೇನೆ. ನೀರಾವರಿ ಇಲಾಖೆಯ ಜವಾಬ್ದಾರಿ ವಹಿಸಿಕೊಂಡಿದ್ದೇನೆ. ಈ ಹಿಂದೆ ಇಂಧನ ಸಚಿವನಾಗಿ ಸೇವೆ ಸಲ್ಲಿಸಿದ್ದೇನೆ. ಕೆಪಿಸಿಸಿ ಅಧ್ಯಕ್ಷನಾಗಿದ್ದೇನೆ. ಇದನ್ನೇ ನಾನು ಕಾಕತಾಳೀಯ ಎಂದು ಹೇಳಿದ್ದು.

ರಾಜಕಾರಣಿ ಆದವನು ಆ ಕ್ಷಣದ ಅಭಿಲಾಷೆಗಳಿಗಿಂತ ಭವಿಷ್ಯದ ಬೆಳವಣಿಗೆಯ ಮೇಲೆ ನಂಬಿಕೆ ಇಟ್ಟಿರಬೇಕು. ಈ ನೆಲದ ಗುಣವನ್ನು ಅರಿತು ಕೆಲಸ ಮಾಡಬೇಕು. ಈ ದೇಶ ಎಂದರೆ ಕೇವಲ ಮಣ್ಣಲ್ಲ, ಜನ ಎಂಬ ಕವಿ ಮಾತೊಂದಿದೆ. ಈ ಮಾತಿಗೆ ಅನ್ವರ್ಥದಂತೆ ಜನಸಾಮಾನ್ಯರ ಬದುಕಿನ ಏಳಿಗೆಗಾಗಿ ದುಡಿದವರು ಎಸ್.ಎಂ.ಕೃಷ್ಣ. ಕೃಷ್ಣ ಅವರ ಅವಧಿಯಲ್ಲಿ ಸಾವಿರಾರು ಸ್ತ್ರೀ ಶಕ್ತಿ ಸಂಘಗಳು ರಚನೆಯಾದವು. ರೈತರ ಜಮೀನಿನ ದಾಖಲೆಗಳು ಭೂಮಿ ತಂತ್ರಾಂಶದ ಮೂಲಕ ಡಿಜಿಟಲ್ ರೂಪ ಪಡೆದವು. ಲಕ್ಷಾಂತರ ರೈತರ, ಕಾರ್ಮಿಕರ ಮಕ್ಕಳು ಸಾಫ್ಟ್‌ವೇರ್ ಎಂಜಿನಿಯರುಗಳಾದರು. ರೈತರ ಆರೋಗ್ಯ ಕಾಪಾಡಲು ಯಶಸ್ವಿನಿ ಜಾರಿಗೆ ತಂದು ಜನರ ಜೀವ, ಜೀವನ ಕಾಪಾಡಿದರು. ಹಾಜರಾತಿ ಕುಸಿಯುತ್ತಿದ್ದ ವೇಳೆ ಮಕ್ಕಳನ್ನು ಶಾಲೆಗಳತ್ತ ಮರಳಿ ತರಲು ಮಧ್ಯಾಹ್ನ ಬಿಸಿಯೂಟ ಯೋಜನೆಯನ್ನು ದೇಶದಲ್ಲಿ ಮೊದಲ ಬಾರಿಗೆ ಜಾರಿಗೆ ತಂದರು. ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ಮಾತನಾಡಿದಂತೆ ಎಸ್.ಎಂ.ಕೃಷ್ಣ ಅವರ ಯೋಜನೆಗಳ ಬಗ್ಗೆ ಹತ್ತಾರು ವ್ಯಾಖ್ಯಾನ ಬಂದವು. ಆದರೆ ಮೊದಲು ಉತ್ತರ ಕರ್ನಾಟಕ ಭಾಗದಲ್ಲಿ ಆರಂಭಿಸಿ, ನಂತರ ರಾಜ್ಯಾದ್ಯಂತ ವಿಸ್ತರಣೆ ಮಾಡಲಾಯಿತು. ಈ ಯೋಜನೆ ಇಡೀ ದೇಶಕ್ಕೆ ಮಾದರಿಯಾಯಿತು. ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಾಯಿತು, ಹಸಿವಿನ ಪ್ರಮಾಣ ಕಡಿಮೆಯಾಯಿತು. 25 ವರ್ಷಗಳ ಹಿಂದೆ ಪ್ರಾರಂಭ ಮಾಡಿದ ಯೋಜನೆ ಇಂದಿಗೂ ಜೀವಂತವಾಗಿದೆ. 190 ಕಾಯ್ದೆಗಳನ್ನು ಜಾರಿಗೆ ತಂದ ಕೀರ್ತಿ ಕೃಷ್ಣ ಅವರದು.

ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣ ಮಾಡಿ ಮದ್ದೂರು ತಾಲೂಕಿನ 30 ಸಾವಿರ ಎಕರೆ ಪ್ರದೇಶಕ್ಕೆ ಶಾಶ್ವತ ನೀರಾವರಿ ಸೌಲಭ್ಯ ನೀಡಿದರು. ಕೃಷ್ಣ ಜಲಭಾಗ್ಯ ನಿಗಮ ಸ್ಥಾಪನೆ ಮಾಡಿ ಉತ್ತರ ಕರ್ನಾಟಕ ಭಾಗದ ರೈತರ ಬಾಳಿಗೆ ಬೆಳಕಾದರು. ಇದರ ಜತೆಗೆ ಇಂಧನ ಇಲಾಖೆಗೆ ಸರ್ಜರಿ ಮಾಡಿ ಕತ್ತಲು ಓಡಿಸಿದರು. 1989 ರಿಂದ 1994 ರ ಅವಧಿಯಲ್ಲಿ ಸುಮಾರು 1,100 ಮೆ.ವ್ಯಾ ವಿದ್ಯುತ್ ಉತ್ಪಾದನೆ ಹೆಚ್ಚಳ ಮಾಡಿದರು. ರಾಯಚೂರು ಉಷ್ಣ ವಿದ್ಯುತ್ ಸ್ಥಾವರ ನಾಲ್ಕನೇ ಘಟಕ, ಕಾಳಿನದಿ ಜಲವಿದ್ಯುತ್ ಸ್ಥಾವರದ ಮೂರನೇ ಘಟಕ, ಯಲಹಂಕ ಡೀಸೆಲ್ ಜನರೇಟರ್ ಸ್ಥಾವರ, ಕದ್ರಾ ಯೋಜನೆ, ಕೊಡಸಳ್ಳಿ ಯೋಜನೆ, ಗೇರುಸೊಪ್ಪ ಯೋಜನೆ ಸೇರಿದಂತೆ ಅನೇಕ ಯೋಜನೆಗಳಿಗೆಂದೇ 1200 ಕೋಟಿ ರು. ವೆಚ್ಚ ಮಾಡಿದ ಪರಿಣಾಮ ಕರ್ನಾಟಕ ರಾಜ್ಯ ಇಂದಿಗೂ ವಿದ್ಯುತ್ ಕೊರತೆ ಕಾಣದಂತೆ ಪ್ರತಿ ಮನೆಯ ಗೃಹಜ್ಯೋತಿ ಬೆಳಗುತ್ತಿದೆ. ಎಸ್ಕಾಂ ಸ್ಥಾಪನೆ ಮಾಡಿ ವಿದ್ಯುತ್ ಸುಧಾರಣಾ ಕಾಯ್ದೆ ಜಾರಿಗೆ ತಂದರು. ವಿದ್ಯುತ್ ಕಳ್ಳತನ ತಡೆಗೆ ಕಾನೂನು ರೂಪಿಸಿದರು. ಪಾಂಚಜನ್ಯ ಯಾತ್ರೆಯ ಸ್ಫೂರ್ತಿ ಈಗಲೂ ನನ್ನಲ್ಲಿದೆ. ಕರ್ನಾಟಕದಲ್ಲಿ ಸೊರಗಿದ್ದ ಕಾಂಗ್ರೆಸ್ ಪಕ್ಷವನ್ನು 1996ರಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಸಂಘಟಿಸಿದರು, ಬಲ ತುಂಬಿದರು. ಪಾಂಚಜನ್ಯ ಯಾತ್ರೆ ಮೂಲಕ ರಾಜಕೀಯ ಕಹಳೆ ಮೊಳಗಿಸಿದರು. ಪ್ರತಿ ಊರಿಗೆ ಹೋದಾಗಲೂ ಅವರು ಹೇಳುತ್ತಿದ್ದ ಮಾತುಗಳನ್ನು ನಾನಿನ್ನೂ ಮರೆತಿಲ್ಲ. ನಿಮ್ಮ ಊರಿಗೆ ನಾನು ಬಂದಾಗ ನಿಮ್ಮ ಹಾರ, ತುರಾಯಿ, ಶಾಲು ಬೇಡ. ಬದಲಾಗಿ ಪಕ್ಷ ಸಂಘಟನೆಗೆ ನಿಮ್ಮ ಸಹಕಾರ ನೀಡಿ ಸಾಕು ಎನ್ನುತ್ತಿದ್ದರು.

ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ತಮಿಳುನಾಡಿಗೆ ನೀರು ಹರಿಸಲೇಬೇಕು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದ ಸಮಯ. ಒಂದು ಕ್ಷಣ ಕಣ್ಣು ಮುಚ್ಚಿ ಕುಳಿತವರು ಮರು ಕ್ಷಣವೇ, ಬನ್ನಿ ಮಂಡ್ಯವರೆಗೂ, ಕಾವೇರಿ ಉಳಿವಿಗಾಗಿ ಪಾದಯಾತ್ರೆ ಮಾಡೋಣ ಎಂದು ಎದ್ದು ಕುಳಿತರು. 72ರ ವಯಸ್ಸಿನಲ್ಲೂ ಬಿಸಿಲನ್ನೂ ಲೆಕ್ಕಿಸದ ಅವರ ಉತ್ಸಾಹ ಕಂಡು ಬೆರಗಾಗಿದ್ದೆ. ಅಧಿಕಾರ ಅವಧಿ ಮುಗಿಯುವ ಮೊದಲೇ ಚುನಾವಣೆಗೆ ಹೋಗುವ ವಿಚಾರವಾಗಿ ನಾನು ಕೃಷ್ಣ ಅವರಿಗೆ ಬಲವಾದ ಆಕ್ಷೇಪ ಸಲ್ಲಿಸಿದ್ದೆ. ಆದರೂ ಅವರು ನಿಲುವು ಬದಲಿಸಲಿಲ್ಲ. ಆರು ತಿಂಗಳು ಮುಂಚಿತವಾಗಿ ಚುನಾವಣೆಗೆ ಹೋದರು. ಕಾಂಗ್ರೆಸ್‌ಗೆ 65 ಸ್ಥಾನಗಳು ಮಾತ್ರ ಬಂದವು. ಅದಾದ ನಂತರ ಅವರ ಮನೆಗೆ ಹೋದೆ. ನಾನು ಚುನಾವಣೆ ವಿಚಾರದಲ್ಲಿ ನಿನ್ನ ಮಾತು ಕೇಳಬೇಕಿತ್ತು ಎಂದರು. ಆದರೆ ಕಾಲ ಮಿಂಚಿತ್ತು, ಇತಿಹಾಸದ ಪುಟ ಸೇರಿತ್ತು.

ಸತತ ಬರ, ಕಂಬಾಲಪಲ್ಲಿ ದುರಂತ, ಕಾವೇರಿ ಸಮಸ್ಯೆ, ಡಾ. ರಾಜ್‌ಕುಮಾರ್ ಅವರ ಅಪಹರಣ ಮತ್ತಿತರ ಸವಾಲುಗಳ ಮಧ್ಯೆ ಆಡಳಿತ ನಿರ್ವಹಣೆಯಲ್ಲಿ ಯಶಸ್ಸು ಕಂಡು, ಕೃಷ್ಣ ಅವರ ಕಾಲ ಎಂದೇ ಜನ ಈಗಲೂ ಸ್ಮರಿಸುತ್ತಾರೆ. ಯಾವುದೇ ಆರೋಪಗಳಿಗೆ ತಲೆಕೆಡಿಸಿಕೊಳ್ಳದೆ, ಅಷ್ಟೇ ನಯವಾಗಿ ಎದುರಾಳಿಗಳಿಗೆ ಉತ್ತರಿಸುತ್ತಾ ನಡೆಮುಂದೆ, ನಡೆಮುಂದೆ ನುಗ್ಗಿ ನಡೆಮುಂದೆ ಎಂದು ಮುನ್ನುಗ್ಗಿದವರು ಎಸ್.ಎಂ.ಕೃಷ್ಣ.

ನಾವಿಂದು ಎಸ್.ಎಂ.ಕೃಷ್ಣ ಅವರ ಕಾರಣಕ್ಕೆ ಮೆಟ್ರೋದಲ್ಲಿ ಓಡಾಡುತ್ತಿದ್ದೇವೆ. ಜಗತ್ತಿನ ಎಲ್ಲ ಮೂಲೆಗಳಿಗೂ ಬೆಂಗಳೂರಿನಿಂದ ವಿಮಾನ ಸೌಲಭ್ಯ ಕಲ್ಪಿಸಿರುವ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ವಿಶ್ವದಲ್ಲಿಯೇ ಉತ್ಕೃಷ್ಟವಾಗಿದೆ. ಇಡೀ ಐಟಿ ಬಿಟಿ ಜಗತ್ತು ಬೆಂಗಳೂರಿನಿಂದಲೇ ಉಸಿರಾಡುತ್ತಿದೆ. ಬೆಂಗಳೂರಿನ ಜನ ನಿರಾತಂಕವಾಗಿ ಕಾವೇರಿ ನೀರು ಕುಡಿಯುತ್ತಿದ್ದಾರೆ.

ವೈಟ್ ಕಾಲರ್ ರಾಜಕಾರಣಿ ಎಂದು ತಮ್ಮನ್ನು ಬಣ್ಣಿಸಿದಾಗ ನಸುನಕ್ಕು, ನನ್ನಲ್ಲಿ ಮಂಡ್ಯ ಮಣ್ಣಿನ ಗುಣವಿದೆ ಎಂದಿದ್ದರು. ಈ ಮಣ್ಣಿನ ಗುಣದ ರಾಜಕಾರಣಿ ಈಗ ದೈಹಿಕವಾಗಿ ಮಾತ್ರ ನಮ್ಮಿಂದ ದೂರಾಗಿದ್ದಾರೆ. ಆದರೆ ಹೆಮ್ಮರವಾಗಿ ನಮ್ಮೆಲ್ಲರ ಮನದಲಿ ಶಾಶ್ವತವಾಗಿ ಉಳಿದಿದ್ದಾರೆ. ದೇಶ, ರಾಜ್ಯದ ಬಗ್ಗೆ ಅವರ ಕನಸು, ಆಶಯಗಳನ್ನು ನೆನೆದು ಮುನ್ನಡೆಯೋಣ. ಅನುಷ್ಠಾನಕ್ಕೆ ತರೋಣ. ಅದುವೇ ನಿಜವಾಗಿಯೂ ನಾವು ಅವರಿಗೆ ಸಲ್ಲಿಸಬಹುದಾದ ನೈಜ ಶ್ರದ್ಧಾಂಜಲಿ.

ನೂರಾರು ಕನಸು ಹೊತ್ತ ಕನಸುಗಾರನ ವರ್ಣರಂಜಿತ ಜೀವನ

ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ 1932ರಲ್ಲಿ ಮಂಡ್ಯದ ಮದ್ದೂರಿನ ಸೋಮನಹಳ್ಳಿಯಲ್ಲಿ ವ್ಯಕ್ತಿ ಮುಂದೊಂದು ದಿನ ಬ್ರಿಟಿಷರ ನಾಡಿಗೆ ವಿದೇಶಾಂಗ ಸಚಿವನಾಗಿ ಹೋಗುತ್ತಾನೆಂದು ಯಾರೂ ಊಹಿಸಿರಲಿಲ್ಲ. ಮೈಸೂರಿನ ರಾಮಕೃಷ್ಣ ವಿದ್ಯಾಶಾಲಾದಲ್ಲಿ ಶಿಕ್ಷಣ ಪಡೆದು, ಮಹಾರಾಜ ಕಾಲೇಜಿನಲ್ಲಿ ಕಲಿತ ಯುವಕ ಮುಂದೊಂದು ದಿನ ಬಡ ವಿದ್ಯಾರ್ಥಿ ಗಳಿಗೆಂದು 'ಬಿಸಿಯೂಟ' ಎನ್ನುವ ಪರಿಕಲ್ಪನೆ ಆರಂಭಿಸುತ್ತಾರೆಂದು ಯಾರೂ ಕನಸಿನಲ್ಲಿಯೂ ಯೋಚಿಸರಲಿಲ್ಲ. ಈ ಎಲ್ಲವನ್ನು ಸಾಕಾರಗೊಳ್ಳುವಂತೆ ಮಾಡಿದ್ದೇ ಸೋಮನಹಳ್ಳಿ ಮಲ್ಲಯ್ಯ ಕೃಷ್ಣ.

ಹೌದು, ಎಸ್.ಎಂ.ಕೃಷ್ಣ ಅವರು ಹುಟ್ಟಿದ್ದು ಮಂಡ್ಯ ಮದ್ದೂರಿನಲ್ಲಾದರೂ ಅವರ ಆಲೋಚನಾ ಲಹರಿಗಳು ಇದ್ದಿದ್ದು ವಿಶ್ವ ಮಟ್ಟದಲ್ಲಿ. ಕಾನೂನು ವಿಶ್ವವಿದ್ಯಾಲಯ (ಸರಕಾರಿ ಕಾನೂನು ಕಾಲೇಜು) ದಲ್ಲಿ ಕಾನೂನು ಪದವಿ ಪಡೆದು ಡಲ್ಲಾಸ್, ಟೆಕ್ಸಾಸ್, ವಾಷಿಂಗ್ಟನ್‌ನಲ್ಲಿ ಉನ್ನತ ಶಿಕ್ಷಣ ಪಡೆದ ಕೃಷ್ಣ ಅವರು, ವಾಪಸು ರಾಜ್ಯಕ್ಕೆ ಬಂದು ತಮ್ಮ ಜನಸೇವೆ ಆರಂಭಿಸಿದರು.

ನಾನಾ ಹುದ್ದೆ ಅಲಂಕರಿಸಿದ್ದರು: ಅಮೆರಿಕದಿಂದ ಸ್ವದೇಶಕ್ಕೆ ವಾಪಸಾದ ಬಳಿಕ ಪಕ್ಷೇತರವಾಗಿ 1962 ರಲ್ಲಿ ಮದ್ದೂರಿನಿಂದ ಆರಿಸಿಬಂದ ಅವರು, ಬಳಿಕ ಪ್ರಜಾ ಸೋಷಿಯಲಿಸ್ಟ್ ಪಕ್ಷಕ್ಕೆ ಸೇರಿದರು. 1969ರ ಉಪಚುನಾವಣೆ ಬಳಿಕ ಕಾಂಗ್ರೆಸ್‌ಗೆ ಬಂದ ಅವರು, 1972ರ ಚುನಾವಣೆಯಲ್ಲಿ ಗೆಲುವು ಸಾಧಿಸಿ, ದೇವರಾಜ ಅರಸು ಸಂಪುಟದಲ್ಲಿ ಸಚಿವರಾಗಿ ಕಾರ್ಯ ನಿರ್ವಹಿಸಿದರು. ಬಳಿಕ ಉಪಮುಖ್ಯಮಂತ್ರಿ, ವಿಧಾನಸಭಾ ಸ್ಪೀಕರ್, ಮುಖ್ಯಮಂತ್ರಿ, ರಾಜ್ಯಪಾಲರು, ವಿದೇಶಾಂಗ ಸಚಿವ ಸೇರಿದಂತೆ ವಿವಿಧ ಹುದ್ದೆಗಳನ್ನು ಅಲಂಕರಿಸಿದ ಅವರು, ಕಳೆದ ಐದು ವರ್ಷದಿಂದ ಸಕ್ರಿಯ ರಾಜಕಾರಣದಿಂದ ದೂರ ವಿದ್ದರು.

ವರ್ಣರಂಜಿತ ರಾಜಕಾರಣಿ: ಕೃಷ್ಣ ಅವರ ಹೆಸರು ಹೇಳುತ್ತಿದ್ದಂತೆ ಎಲ್ಲರಿಗೂ ಅವರ ಕಲರ್‌ಫುಲ್ ರಾಜಕಾರಣ ನೆನಪಾಗುತ್ತದೆ. ನೀಟಾಗಿ ಡ್ರೆಸ್ ಮಾಡಿಕೊಳ್ಳುವ, ಮುಖದಲ್ಲೊಂದು ಕಿರುನಗೆ ಬೀರುವ, ಕರಾರುವಕ್ಕಾಗಿ ಅಗತ್ಯಕ್ಕೆ ತಕ್ಕಷ್ಟು ಮಾತನಾಡುವ ಕೃಷ್ಣ, ಪ್ರತಿಪಕ್ಷದವರು ಎಷ್ಟೇ ಬಿರುಸಾಗಿ ಮಾತನಾಡಿದರೂ ಸಹನೆ ಕಳೆದು ಕೊಳ್ಳುವುದಿಲ್ಲ. ಇತರರಂತೆ ಅಂಗಿ ಪರಚಿ ಕೂಗಾಡು ವುದಿಲ್ಲ. ಸಮ ಯಕ್ಕೆ ತಕ್ಕಂತೆ, ವಿಷಯಾಧಾರಿತವಾಗಿ ಮಾರುತ್ತರ ನೀಡುತ್ತಾರೆ. ಇದೇ ಅವರ ಹೆಗ್ಗಳಿಕೆ. ಇಂತಹ ಧೀಮಂತ ನಾಯಕ ರಾಜಕೀಯ ಮೀರಿ ಕ್ರೀಡೆ, ಕಲೆ ಸಾಹಿತ್ಯ, ಪ್ರವಾಸ ಸೇರಿದಂತೆ ಹಲವು ಹವ್ಯಾಸ ಗಳನ್ನು ಹೊಂದಿದ್ದರು ಎನ್ನುವುದು ಸತ್ಯ. ಧೀಮಂತ ನಾಯಕನ ಕಲರ್‌ಫುಲ್ ಜೀವನ ಕೆಲವೊಂದಷ್ಟು ಕುತೂಹಲಕಾರಿ ಅಂಶಗಳು ಇಲ್ಲಿವೆ.

ಸಂಗೀತ ಕಛೇರಿಯಲ್ಲೂ ಆಸಕ್ತಿ: ಐಟಿ-ಬಿಟಿಯಲ್ಲಿ ಕ್ರಾಂತಿ ಮಾಡುವ ಕ್ರಾಂತಿಕಾರಿಕ ಮನಸ್ಸಿನಲ್ಲಿ ಕಲೆ, ಸಂಸ್ಕೃತಿಯ ಬಗ್ಗೆ ಅಷ್ಟೇ ಆಸಕ್ತಿಯಿತ್ತು. ಹಲವು ದಶಕಗಳ ಕಾಲ, ತಾವಿರುವ ಸ್ಥಳದಲ್ಲಿ ಯಾವುದೇ ಸಂಗೀತ ಕಛೇರಿ ನಡೆದರೂ, ತಪ್ಪಿಸಿಕೊಳ್ಳದೇ ಭಾಗ ವಹಿಸುತ್ತಿದ್ದರು. ಹಿಂದೂಸ್ತಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತವೆಂದರೆ ಗಂಟೆಗಟ್ಟಲೇ ಕೂತು ಆಲಿಸುತ್ತಿದ್ದರು. ಇದಿಷ್ಟೇ ಅಲ್ಲದೇ, ರಿದಮಿಕ್ ಟ್ಯೂನ್‌ಗಳನ್ನು ಆಸ್ವಾದಿಸುತ್ತಿದ್ದರು. ಹಿರಿಯ ಕಲಾವಿದರಾದ ಡಾ.ಎಂ. ಬಾಲಮುರಳಿಕೃಷ್ಣ, ಸುಧಾ ರಘುನಾಥನ್ ಅವರ ಸಂಗೀತಕ್ಕೆ ಸದಾ ಮಾರುಹೋಗುತ್ತಿದ್ದರು.

ಸಿಸಿಡಿ ಕಾಫಿಗೆ ಫಿದಾ ಆಗಿದ್ದ ಎಸ್‌ಎಂಕೆ: ಮಂಡ್ಯದ ಮದ್ದೂರಿನಲ್ಲಿ ಜನಿಸಿದರೂ, ಎಸ್.ಎಂ. ಕೃಷ್ಣ ಅವರಿಗೆ ಕಾಫಿ ಎಂದರೆ ಪಂಚಪ್ರಾಣ. ಅದರಲ್ಲಿಯೂ ಮೈಸೂರು-ಬೆಂಗಳೂರು ಮಧ್ಯೆಯಿರುವ ಮದ್ದೂರಿನಲ್ಲಿ ಸಿದ್ದಾರ್ಥ್ ಒಡೆತನದ ಕಫೆ ಕಾಫಿ ಡೇಗೆ ಒಂದು ಭೇಟಿ ನೀಡುತ್ತಿದ್ದರು. ತಮ್ಮೂರಿಂದ ಬೆಂಗಳೂರಿಗೆ ಬರುವಾಗ ಅಥವಾ ಬೆಂಗಳೂರಿನಿಂದ ಮದ್ದೂರಿಗೆ ಹೋಗುವಾಗ ಈ ಸಿಸಿಡಿಯಲ್ಲಿ ಕಾಫಿ ಸೇವಿಸಿ ಮುಂದೆ ಹೋಗುತ್ತಿದ್ದರು.

ಟೆನಿಸ್ ಪ್ರೇಮಿ

ರಾಜಕಾರಣಿಗಳಿಗೆ ಮನೆಯಲ್ಲಿಯೇ ನಿತ್ಯ ಯೋಗ ಮಾಡುವುದಕ್ಕೂ ಪುರುಸೊತ್ತು ಇರುವುದಿಲ್ಲ ಎನ್ನುವ ಮಾತಿದೆ. ಆದರೆ ಈ ಮಾತಿಗೆ ಕೃಷ್ಣ ಅವರು ವಿರೋಧಾಭಾಸ ಎಂದರೆ ತಪ್ಪಾಗುವುದಿಲ್ಲ. ವಿದೇಶದಲ್ಲಿ ಓದುವಾಗ ಟೆನಿಸ್ ಆಟವನ್ನು ಪ್ರೀತಿಸುತ್ತಿದ್ದ ಎಸ್‌ಎಂಕೆ, ಅಲ್ಲಿಯೇ ತರಬೇತಿ ಪಡೆದರು. ದೇಶಕ್ಕೆ ವಾಪಸಾದ ಬಳಿಕವೂ, ಟೆನ್ನಿಸ್ ಮೇಲಿನ ಮೋಹವನ್ನು ಬಿಡದ ಅವರು, ನಿತ್ಯ ಟೆನ್ನಿಸ್ ಆಡುತ್ತಿದ್ದರು. ಮುಖ್ಯಮಂತ್ರಿಯಾಗಿದ್ದಾಗಲೂ, ಬೆಂಗಳೂರಿನ ಕಬ್ಬನ್‌ಪಾರ್ಕ್‌ನಲ್ಲಿರುವ ಟೆನಿಸ್ ಮೈದಾನಕ್ಕೆ ಕೃಷ್ಣ ಅವರು ಕಾಯಂ ಹಾಜರಿ ಇರುತ್ತಿತ್ತು. ಇದಿಷ್ಟೇ ಅಲ್ಲದೇ, ವಿಂಬಲ್ಡನ್ ಸೇರಿದಂತೆ ಹಲವು ಪ್ರತಿಷ್ಠಿತ ಟೂರ್ನಿಗಳನ್ನು ವೀಕ್ಷಿಸಲು ವಿದೇಶಗಳಿಗೂ ಹೋಗಿದ್ದುಂಟು.

ವಿಗ್‌ನಿಂದ ಹೊರಬರದ ಕೃಷ್ಣ: ಸುಮಾರು ಐದಾರು ದಶಕಗಳ ಸುದೀರ್ಘ ರಾಜಕೀಯ ಜೀವನದಲ್ಲಿದ್ದ ಕೃಷ್ಣ ಅವರದ್ದು ಒಂದೇ ವೇಷಭೂಷಣ. ವಿಗ್ ಹಾಕಿಕೊಂಡಿದ್ದ ಅವರು, ಸಾರ್ವಜನಿಕ ಜೀವನವಷ್ಟೇ ಅಲ್ಲದೇ, ಆಪ್ತರ ಮುಂದೆಯೂ ಆ ವಿಗ್ ಇಲ್ಲದೇ ಕಾಣಿಸಿಕೊಂಡಿದ್ದೇ ಇಲ್ಲ. ಪ್ರತಿಯೊಂದರಲ್ಲಿಯೂ 'ಪರಿಪೂರ್ಣ'ತೆ ಹುಡುಕುತ್ತಿದ್ದ ಕೃಷ್ಣ ಅವರು, ತಮ್ಮ ವೇಷಭೂಷಣದ ಬಗ್ಗೆಯೂ ಅಷ್ಟೇ ನಿಗಾವಹಿಸಿದ್ದು ವಿಶೇಷ.

ವಾಕಿಂಗ್ ಸ್ಟಿಕ್‌ನಲ್ಲಿಯೂ ಕ್ಲಾಸ್ ಲುಕ್: ಇತ್ತೀಚಿಗೆ ಕೆಲ ವರ್ಷಗಳಿಂದ ವಯೋಸಹಜ ಕಾರಣದಿಂದ ಎಸ್.ಎಂ. ಕೃಷ್ಣ ಅವರು ವಾಕಿಂಗ್ ಸ್ಟಿಕ್ ಬಳಸಲು ಆರಂಭಿಸಿದ್ದರು. ಆ ವಾಕಿಂಗ್ ಸ್ಟಿಕ್‌ಗೂ ಸ್ಟೈಲಿಷ್ ಲುಕ್ ಇತ್ತು. ಮರದ ಸ್ಟಿಕ್‌ಗೆ ಬಂಗಾರ ಲೇಪಿತ ಹಿಡಿಕೆಯನ್ನು ಅಳವಡಿಸಿಕೊಂಡಿದ್ದರು.

ಟೋಪಿ, ಕನ್ನಡಕದೊಂದಿಗೆ: ಸದಾ ಹಸನ್ಮುಖಿಯಾಗಿರುತ್ತಿದ್ದ ಕೃಷ್ಣ ಅವರಿಗೆ ವಿವಿಧ ವಿನ್ಯಾಸಗಳು ಮತ್ತಷ್ಟು ಮೆರುಗನ್ನು ನೀಡಿತ್ತು. ಕೆಲವರ್ಷಗಳಿಂದ ಕಪ್ಪು ಫ್ರೇಮ್‌ನ ಕನ್ನಡಕದಲ್ಲಿ ಯುವಕರು ನಾಚುವಂತೆ ಸ್ಟೈಲಿಶ್ ಆಗಿದ್ದರು. ಕೊನೆಯ ದಿನಗಳಲ್ಲಿ ಈ ಕನ್ನಡಕದೊಂದಿಗೆ ಟೋಪಿ ಹಾಕಿಕೊಂಡೇ ಸಾರ್ವಜನಿಕ ಜೀವನದಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಅಂತಿಮ ದರ್ಶನದ ಸಮಯದಲ್ಲಿಯೂ ಕೃಷ್ಣ ಅವರ ಜತೆಯಾಗಿ ಇವುಗಳಿದ್ದವು..!

ಕುಟುಂಬದೊಂದಿಗೆ ಪ್ರವಾಸ: ಇಷ್ಟದ ಕಾರ್ಯ: ಎಸ್‌ಎಂ ಕೃಷ್ಣ ಎಂದರೆ ನೆನಪಾಗುವುದು ರಾಜಕೀಯ ಜೀವನದ ವಿವಿಧ ಮಜಲುಗಳು. ಸುದೀರ್ಘ ರಾಜಕೀಯ ಜೀವನದಲ್ಲಿದ್ದರೂ, ಎಂದಿಗೂ ತಮ್ಮ ಕುಟುಂಬವನ್ನು 'ನಿರ್ಲಕ್ಷ್ಯ' ಮಾಡಿರಲಿಲ್ಲ. ಹೆಂಡತಿ, ಇಬ್ಬರು ಮಕ್ಕಳು, ಮೊಮ್ಮಕ್ಕಳೊಂದಿಗೆ ಸಮಯ ಕಳೆಯುತ್ತಿದ್ದರು. 1964ರಲ್ಲಿ ಪ್ರೇಮಾ ಅವರೊಂದಿಗೆ ವಿವಾಹವಾ ದರು. ಬಳಿಕ ಸುತ್ತಾಟ, ಪಕ್ಷ ಕಟ್ಟುವ ಕೆಲಸದ ಹೊಣೆಗಾರಿಕೆಯ ಜತೆಜತೆಗೆ, ಕೌಟುಂಬಿಕ ಜೀವನಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುತ್ತಿದ್ದರು. ಕೃಷ್ಣ ಅವರು ಅನೇಕ ಸಮಯದಲ್ಲಿ ವಿದೇಶಕ್ಕೆ ಹೋಗುವಾಗ ಪತ್ನಿಯನ್ನು ಜತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಪ್ರೇಮಾ ಅವರೇ ಒಂದು ಸಂದರ್ಶನದಲ್ಲಿ ಹೇಳಿರುವಂತೆ 50 ವರ್ಷದ ದಾಂಪತ್ಯ ಜೀವನದಲ್ಲಿ 89 ದೇಶಗಳನ್ನು ಸುತ್ತಾಡಿದ್ದೇನೆ. ಪತಿಯ ಕೆಲಸದಲ್ಲಿ ಯಾವತ್ತೂ ಮೂಗು ತೂರಿಸಿಲ್ಲ. ಮನೆಯಲ್ಲಿ ಅವರು ಯಾವತ್ತೂ ಕೋಪ ಮಾಡಿಕೊಂಡಿದ್ದು ನಾನು ನೋಡಿಲ್ಲ. ನಾವೇನಾದರೂ ಸಲಹೆ ಕೊಟ್ಟರೆ ಸಂಯಮದಿಂದ ಕೇಳಿಸಿಕೊಂಡು ಸಾಧ್ಯವಾದರೆ ಅದನ್ನು ತಮಗೆ ಅನುಕೂಲಕ್ಕೆ ತಕ್ಕಂತೆ ಅಳವಡಿಸಿಕೊಳ್ಳುತ್ತಾರೆ ಎಂದು ನೆನಪಿಕೊಂಡಿದ್ದರು.

ಗಾಯಕ ಯೇಸುದಾಸ್ ಜತೆ ಎಸ್.ಎಂ. ಕೃಷ್ಣ ಕುಟುಂಬ.

ಇದರೊಂದಿಗೆ ಯುರೋಪ್‌ನ ಬುಡಾಪೇಸ್ಟ್ ಪ್ರದೇಶ ಎಂದರೆ ಕೃಷ್ಣ ಅವರಿಗೆ ಪಂಚ ಪ್ರಾಣವಂತೆ. ಅಲ್ಲಿ ಬೋಟ್‌ನಲ್ಲಿ ಕುಟುಂಬ ದೊಂದಿಗೆ ಪ್ರಯಾಣ ಮಾಡುವುದು ಎಂದರೆ ಕೃಷ್ಣ ಅವರಿಗೆ ತುಂಬಾ ಖುಷಿ.

ಕಾಂಗ್ರೆಸ್ ತೊರೆದ ಎಸ್ಎಂಕೆ

ಸುಮಾರು ನಾಲ್ಕೈದು ದಶಕಗಳ ಕಾಲ ಕಾಂಗ್ರೆಸ್‌ನಲ್ಲಿದ್ದುಕೊಂಡು, ಗಾಂಧಿ ಕುಟುಂಬಕ್ಕೆ ಅತ್ಯಾಪ್ತರಾಗಿ ಗುರುತಿಸಿಕೊಂಡಿದ್ದರು. 2017 ರಂದು ಕಾಂಗ್ರೆಸ್ ಸದಸ್ಯತ್ವಕ್ಕೆ ಅಧಿಕೃತವಾಗಿ ರಾಜೀನಾಮೆ ನೀಡಿದ ಎಸ್.ಎಂ ಕೃಷ್ಣ ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾಗಿದ್ದರು.

ಡಿಸಿಎಂ ಆದ ಎಸ್ಎಂಕೆ

1992ರಲ್ಲಿ ಎಸ್. ಬಂಗಾರಪ್ಪರನ್ನು ಸಿಎಂ ಸ್ಥಾನದಿಂದ ಇಳಿಸಿದ ಬಳಿಕ ಯಾರು ಸಿಎಂ ಎಂಬ ಚರ್ಚೆ ನಡೆದಿತ್ತು. ಆ ವೇಳೆ ಎಸ್.ಎಂ. ಕೃಷ್ಣ ಪರ ಕೆಲ ಶಾಸಕರು ಬ್ಯಾಟಿಂಗ್ ಮಾಡಿದರೆ, ಇನ್ನೂ ಕೆಲವರು ರಾಜಶೇಖರ್ ಪರ ಬ್ಯಾಟಿಂಗ್ ಮಾಡಿದ್ದರು. ಎಸ್.ಎಂ. ಕೃಷ್ಣ ರಾಜ್ಯದ ಮೊದಲ ಉಪಮುಖ್ಯಮಂತ್ರಿ ಸ್ಥಾನಕ್ಕೆ ತೃಪ್ತಿ ಪಡೆದರು.

ವಾಚ್ ಪವಾಡ

1983ರಲ್ಲಿ ಎಸ್.ಎಂ.ಕೃಷ್ಣ ಅವರು ತಿರುಪತಿಗೆ ಹೋಗಿದ್ದಾಗ, ವೆಂಕಟೇಶ್ವರ ಸ್ವಾಮಿಯ ಮಂಗಳಾರತಿ ತೆಗೆದುಕೊಳ್ಳಬೇಕಾದರೆ ಆಚಾನಕ್ ಆಗಿ ಅವರ ವಾಚು ಕಳಚಿತ್ತು. ಅರ್ಚಕರು ಇದನ್ನು ಗಮನಿಸಿ ಆ ವಾಚ್ ದೇವರ ಹುಂಡಿಗೆ ಹಾಕಿ ಎಂದು ಸಲಹೆ ನೀಡಿದರು. ಎಸ್ಎಂಕೆ ಮರುಮಾತನಾಡದೆ ವಾಚನ್ನು ದೇವರಿಗರ್ಪಿಸಿದರು.

vishwavani.news

ಐದು ವರ್ಷದಲ್ಲಿ ಸಮರ್ಥ ಆಡಳಿತ ನೀಡಿದ ಯಶಸ್ವಿ ಮುಖ್ಯಮಂತ್ರಿ ಹೆಗ್ಗಳಿಕೆಗೆ ಪಾತ್ರ

ನಿರಂತರ ಸವಾಲು ಎದುರಿಸಿ ಗೆದ್ದ ಕೃಷ್ಣ

ಇತಿಹಾಸದ ಪುಟದಲ್ಲಿ ಎಸ್.ಎಂ ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ರಾಜ್ಯದ ಕೈಗಾರಿಕೆ, ಐಟಿ-ಬಿಟಿ, ಬೆಂಗಳೂರು ಅಭಿವೃದ್ಧಿ ಸೇರಿದಂತೆ ಹಲವು ವಿಷಯದಲ್ಲಿ ಅಚ್ಚಳಿಯದಂತೆ ಉಳಿದಿರುವುದು ಸುಳ್ಳಲ್ಲ. ಆದರೆ ಈ ಎಲ್ಲದರ ಹೊರತಾಗಿ ಐದು ವರ್ಷದ ಅವಧಿಯಲ್ಲಿ ಎಸ್ಎಂಕೆ ಅವರು ಸರಣಿ ಸವಾಲುಗಳನ್ನು ಎದುರಿಸಿದ್ದರು. ಈ ಎಲ್ಲ ಸವಾಲುಗಳನ್ನು ಎದುರಿಸಿ, ಐದು ವರ್ಷದಲ್ಲಿ ಸಮರ್ಥ ಆಡಳಿತ ನೀಡುವ ಮೂಲಕ 'ಯಶಸ್ವಿ ಮುಖ್ಯಮಂತ್ರಿ' ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದು ಇತಿಹಾಸ.

ಕೃಷ್ಣ ತಮ್ಮ ಅಧಿಕಾರಾವಧಿಯಲ್ಲಿ ಪ್ರಮುಖವಾಗಿ ರಾಜಕುಮಾರ್ ಅಪಹರಣ ಪ್ರಕರಣ ಎದುರಾದರೆ, ಇನ್ನೊಂದು ಸತತ ನಾಲ್ಕೈದು ವರ್ಷಗಳ ಕಾಲ ಕಾಡಿದ ಬರಗಾಲ ಹಾಗೂ ಕಾವೇರಿ ನೀರು ಹಂಚಿಕೆ ವಿಷಯದಲ್ಲಿ ತೀವ್ರ ವಿವಾದದ ಸುಳಿಯನ್ನು ಸೃಷ್ಟಿಸಿತ್ತು. ನೆರೆರಾಜ್ಯ ತಮಿಳುನಾಡಿನ ಕಾವೇರಿ ನೀರು ಹಂಚಿಕೆಗೆ ಸಡ್ಡು ಹೊಡೆದು, ಕಾವೇರಿಗಾಗಿ ಪಾದಯಾತ್ರೆಯ ಮೂಲಕ ಹಳೇ ಮೈಸೂರು ಭಾಗದಲ್ಲಿ ತಮ್ಮದೇ ಛಾಪನ್ನು ಮೂಡಿಸಿದ್ದರು.

ಬರ ಪರಿಸ್ಥಿತಿ ನಿರ್ವಹಣೆ

ಒಂದು ವರ್ಷ ನಿರೀಕ್ಷಿತ ಮಳೆಯಾಗದಿದ್ದರೆ ಕರ್ನಾಟಕ-ತಮಿಳುನಾಡು ನಡುವೆ ಕಾವೇರಿ ವಿವಾದ ಸೃಷ್ಟಿಯಾಗುತ್ತದೆ. ಅಂತಹದರಲ್ಲಿ ನಾಲ್ಕು ವರ್ಷ ಬರ ಕಾಣಿಸಿಕೊಂಡಿದ್ದರಿಂದ ರಾಜ್ಯದ ಜಲಮೂಲಗಳೆಲ್ಲ ಬತ್ತಿದ್ದವು. ಇದರಿಂದಾಗಿ ರೈತರು ಕಂಗಾಲಾಗಿದ್ದರು. ಈ ಎಲ್ಲ ಸಮಸ್ಯೆಗಳ ನಡುವೆಯೂ ರಾಜ್ಯವನ್ನು ಸಮರ್ಥವಾಗಿ ಮುನ್ನಡೆಸಿದ್ದು ಕೃಷ್ಣ ಎಂದರೆ ತಪ್ಪಾಗುವುದಿಲ್ಲ.

ಕಾವೇರಿ - ಸುಪ್ರೀಂ ಕೋರ್ಟ್

ಕಾವೇರಿ ನೀರು ಬಿಡಬೇಕು ಎನ್ನುವ ಸುಪ್ರೀಂ ಕೋರ್ಟ್ ಸೂಚನೆಯನ್ನು ಮೀರಿ ನೀರು ಬಿಡುವುದಿಲ್ಲ ಎನ್ನುವ ಗಟ್ಟಿ ನಿರ್ಧಾರವನ್ನು ಕೈಗೊಂಡಿದ್ದರು. ಬಳಿಕ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಪಾದಯಾತ್ರೆ ನಡೆಸುವ ಮೂಲಕ ದೇಶದ ಗಮನ ಸೆಳೆದಿದ್ದರು. ಆದರೆ, ಸುಪ್ರೀಂಕೋರ್ಟ್ ಚಾಟಿಗೆ ತಲೆಬಾಗಿ, ನ್ಯಾಯಾಲಯಕ್ಕೆ ಕ್ಷಮೆಯಾಚಿಸಿ ನೀರು ಬಿಡಲೇಬೇಕಾಯಿತು.

1999 ರಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಎಸ್.ಎಂ ಕೃಷ್ಣರಿಗೆ ಸಾಲು ಸಾಲು ಸಂಕಷ್ಟಗಳು ಎದುರಾಗಿದ್ದವು. ಒಂದೆಡೆ ಸತತ ಮೂರು ವರ್ಷ ಬರ ಎದುರಿಸುತ್ತಿದ್ದರೆ, ಇತ್ತ ಕಾವೇರಿ ವಿವಾದದ ಕೂಡ ಭುಗಿಲೆದಿತ್ತು. 2002 ರಲ್ಲಿ ರಾಜ್ಯದಲ್ಲಿ ತೀವ್ರ ಮಳೆ ಕೊರತೆಯಾಗಿ ಬರಗಾಲ ಸೃಷ್ಟಿಯಾಯಿತು. ತಮಿಳುನಾಡಿಗೆ ವಾಡಿಕೆಯಂತೆ ಕಾವೇರಿ ನೀರು ಬಿಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ನೀರಿನ ಕೊರತೆಯಿಂದಾಗಿ ರಾಜ್ಯದಿಂದ ತಮಿಳುನಾಡಿಗೆ ನೀರು ಹರಿಸಲಿಲ್ಲ. ಇದರಿಂದ ತಮಿಳುನಾಡು ಸರಕಾರ ಕಾವೇರಿ ನೀರಿಗಾಗಿ ಸುಪ್ರೀಂ ಕೋರ್ಟ್ ಕದತಟ್ಟಿತು. ತಮಿಳುನಾಡು ಕೋರಿಕೆ ಪರಿಗಣಿಸಿದ ಸುಪ್ರೀಂಕೋರ್ಟ್ ಸಂಕಷ್ಟದ ಸಮಯದಲ್ಲಿಯೂ ಪ್ರತಿದಿನ 1.25 ಟಿಎಂಸಿ ನೀರು ಬಿಡುವಂತೆ ಕರ್ನಾಟಕ ಸರಕಾರಕ್ಕೆ ಆದೇಶಿಸಿತ್ತು.

ತಮಿಳುನಾಡಿಗೆ ನೀರು ಹರಿಸಬೇಕು ಎನ್ನುವ ಸುಪ್ರೀಂ ಕೋರ್ಟ್ ಆದೇಶ ವಿರೋಧಿಸಿ ರಾಜ್ಯಾದ್ಯಂತ ವಿಶೇಷವಾಗಿ ಕಾವೇರಿ ಕೊಳ್ಳದ ಭಾಗದಲ್ಲಿ ತೀವ್ರ ಹೋರಾಟ, ಪ್ರತಿಭಟನೆಗಳು ನಡೆದು ಹಿಂಸಾಚಾರ ಶುರುವಾಯಿತು. ರಾಜ್ಯ ಬಂದ್ ಕೂಡ ನಡೆಯಿತು. ರೈತರ ಹೋರಾಟದ ನಡುವೆಯೇ ಸುಪ್ರೀಂ ಕೋರ್ಟ್ ಆದೇಶ ಪಾಲಿಸಲು ರಾಜ್ಯ ಸರಕಾರ ನೀರು ಬಿಟ್ಟಿತು. ನೀರು ಹರಿಸುವುದನ್ನು ಖಂಡಿಸಿ ಗುರುಸ್ವಾಮಿ ಎನ್ನುವ ರೈತ ಕಬಿನಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ. ಇದರಿಂದ ಪರಿಸ್ಥಿತಿ ಮತ್ತಷ್ಟು ವಿಕೋಪಕ್ಕೆ ತಿರುಗಿ, ರೈತರ ಹೋರಾಟಕ್ಕೆ ಮಣಿದ ಸಿಎಂ ಆಗಿದ್ದ ಎಸ್. ಎಂ. ಕೃಷ್ಣ ತಕ್ಷಣವೇ ನೀರು ನಿಲ್ಲಿಸಿ ತಮಿಳುನಾಡಿಗೆ ನೀರು ಹರಿಸುವುದಿಲ್ಲ ಎಂದು ಘೋಷಿಸಿದ್ದರು.

ಪಾದಯಾತ್ರೆ ನಡೆಸಿದ್ದ ಕೃಷ್ಣ

ಕಾವೇರಿಗಾಗಿ ಸ್ವತಃ ಮುಖ್ಯಮಂತ್ರಿಯಾಗಿದ್ದ ಎಸ್.ಎಂ ಕೃಷ್ಣ 2002 ಅ.7ರಿಂದ ಅ.11ರ ವರೆಗೆ 6 ದಿನಗಳ ಬೆಂಗಳೂರಿನ ರಾಜರಾಜೇಶ್ವರಿ ನಗರದಿಂದ ಮಂಡ್ಯದವರೆಗೆ 100 ಕಿ. ಮೀ. ದೂರ ಪಾದಯಾತ್ರೆ ನಡೆಸಿದ್ದರು. ನೀರು ಹಂಚಿಕೆ ವಿಚಾರ ಸುಪ್ರೀಂಕೋರ್ಟ್ ಮುಂದೆ ಇದ್ದಿದ್ದರಿಂದ ಈ ಪಾದಯಾತ್ರೆಗೆ ಭಾರಿ ಆಕ್ಷೇಪ ವ್ಯಕ್ತವಾಯಿತು. ಕಾವೇರಿ ವಿವಾದಕ್ಕೆ ಸಂಬಂಧಿಸಿದಂತೆ ಸ್ವತಃ ಮುಖ್ಯಮಂತ್ರಿಯಾಗಿದ್ದ ಕೃಷ್ಣ ಅವರೇ ಕೆಆರ್‌ಎಸ್‌ಗೆ ಪಾದಯಾತ್ರೆ ನಡೆಸಿದ್ದರಿಂದ ತಮಿಳುನಾಡು ಸರಕಾರ, ಕರ್ನಾಟಕದ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿತ್ತು. ಈ ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಕರ್ನಾಟಕ ಸರಕಾರದ ಈ ನಡೆಗೆ ಛೀಮಾರಿ ಹಾಕಿ ತಮಿಳುನಾಡಿಗೆ ನೀರು ಬಿಡಲು ತಾಕೀತು ಮಾಡಿತ್ತು. ಕೋರ್ಟ್‌ನ ಆದೇಶ ಪಾಲನೆ ಮಾಡಲು ಸಾಧ್ಯವಾಗದಿದ್ದಲ್ಲಿ ಅಧಿಕಾರದಿಂದ ಕೆಳಗಿಳಿಯುವಂತೆಯೂ ತೀಕ್ಷ್ಣವಾಗಿ ಸೂಚಿಸಿತ್ತು. ಹೀಗಾಗಿ, ಪಾದಯಾತ್ರೆ ಮೊಟಕುಗೊಳಿಸಿದ್ದ ಕೃಷ್ಣ ನೀರು ಬಿಡುವಂತಾಗಿತ್ತು. ಕಾವೇರಿ ನೀರು ಬಿಡುವ ನಿರ್ದೇಶನ ಪಾಲನೆ ಮಾಡದೆ ನ್ಯಾಯಾಂಗ ನಿಂದನೆ ಮಾಡಿದ್ದರಿಂದಾಗಿ ಒಂದು ನ್ಯಾಯಾಲಯದ ಕ್ಷಮೆ ಕೇಳಬೇಕು ಅಥವಾ ಅಧಿಕಾರದಿಂದ ಕೆಳಗಿಳಿದು ಜೈಲಿಗೆ ಹೋಗಬೇಕು ಎನ್ನುವ ಆಯ್ಕೆ ಮಾತ್ರ ಕೃಷ್ಣ ಮುಂದಿತ್ತು. ನಾಡಿನ ಹಿತಾಸಕ್ತಿ ಗಮನಿಸಿದ್ದ ಕೃಷ್ಣ ನ್ಯಾಯಾಲಯದ ಕ್ಷಮೆ ಕೇಳಿ ತಮಿಳುನಾಡಿಗೆ ನೀರು ಬಿಟ್ಟಿದ್ದರು. ಇದಕ್ಕೂ ಮೊದಲು ಬಂಗಾರಪ್ಪ ಸುಗ್ರೀವಾಜ್ಞೆ ಮೂಲಕ ಕಾವೇರಿ ನೀರು ಹರಿಸದಿರುವ ಗಟ್ಟಿ ನಿಲುವು ತಳೆದಿದ್ದಂತೆ ಎಸ್.ಎಂ ಕೃಷ್ಣ ಕೂಡ ಕಾವೇರಿ ವಿಚಾರದಲ್ಲಿ ಬದ್ಧತೆಯೊಂದಿಗೆ ಗಟ್ಟಿ ನಿಲುವು ತಳೆದಿದ್ದರು.

- ಕಾವೇರಿಗಾಗಿ 6 ದಿನಗಳ ಬೆಂಗಳೂರಿನ ರಾಜರಾಜೇಶ್ವರಿ ನಗರದಿಂದ ಮಂಡ್ಯದವರೆಗೆ 100 ಕಿ. ಮೀ. ದೂರ ಪಾದಯಾತ್ರೆ
- ಕಾವೇರಿಗಾಗಿ ಪಾದಯಾತ್ರೆಯ ಮೂಲಕ ಹಳೇ ಮೈಸೂರು ಭಾಗದಲ್ಲಿ ತಮ್ಮದೇ ಛಾಪನ್ನು ಮೂಡಿಸಿದ್ದರು.
- ರಾಜ್ಯದಲ್ಲಿ ನಾಲ್ಕು ವರ್ಷ ಬರ ಪರಿಸ್ಥಿತಿ ನಿರ್ವಹಣೆ

ಮಹಿಳಾ ವಿವಿಗಳ ಸ್ಥಾಪನೆಗೆ ಒತ್ತು

ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಎನ್ನುವುದು ಎಸ್.ಎಂ. ಕೃಷ್ಣರ ಧ್ಯೇಯವಾಗಿತ್ತು. ಆದ್ದರಿಂದ ಡಾ. ನಂಜುಂಡಪ್ಪ ವರದಿಯನ್ವಯ ಹಿಂದುಳಿದ ಪ್ರದೇಶಗಳಲ್ಲಿ ಶೈಕ್ಷಣಿಕ ಸೌಲಭ್ಯ ನೀಡುವುದು ಸರಕಾರದ ಉದ್ದೇಶವಾಗಿತ್ತು. ಅದಕ್ಕಾಗಿ ವಿಜಯಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯವನ್ನು ಆರಂಭಿಸಲಾಯಿತು. ಇದರೊಂದಿಗೆ ತುಮಕೂರಿನಲ್ಲಿ ವಿಶ್ವವಿದ್ಯಾನಿಲಯ ಮತ್ತು ಬೀದರ್‌ನಲ್ಲಿ ಪಶುವೈದ್ಯಕೀಯ ಮತ್ತು ಪ್ರಾಣಿ ಸಂರಕ್ಷಣಾ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಯಿತು. ಉನ್ನತ ಶಿಕ್ಷಣವನ್ನು ಗ್ರಾಮೀಣ ಪರಿಸರಕ್ಕೆ ಕರೆದೊಯ್ಯಬೇಕೆಂಬ ಉದ್ದೇಶದಿಂದ ಮತ್ತು ಡಾ. ಡಿ.ಎಂ. ನಂಜುಂಡಪ್ಪ ಪ್ರಾದೇಶಿಕ ಅಸಮತೋಲನ ಅಧ್ಯಯನ ಸಮಿತಿಯ ಶಿಫಾರಸಿನಂತೆ ಬೀದರಿನಲ್ಲಿ ಹೊಸ ವಿಶ್ವವಿದ್ಯಾನಿಲಯ ಸ್ಥಾಪಿಸಲಾಯಿತು. ಮಹಿಳೆಯರ ಸಬಲೀಕರಣ ಅವರ ಸರಕಾರದ ಆದ್ಯತೆಯಾಗಿತ್ತು.

ವಿಕಾಸಸೌಧದ ನಿರ್ಮಾತೃ ಎಸ್ಎಂಕೆ

ರಾಜ್ಯದ ಶಕ್ತಿಸೌಧ ಎನಿಸಿರುವ ವಿಧಾನಸೌಧವನ್ನು ಕೆಂಗಲ್ ಹನುಮಂತಯ್ಯ ಅವರು ನಿರ್ಮಿಸಿದ್ದರು. ಆದರೆ ದಿನದಿಂದ ದಿನಕ್ಕೆ ಇಲಾಖೆಗಳ ಕಾರ್ಯದೊತ್ತಡ ಹೆಚ್ಚಾದ ಹಿನ್ನೆಲೆಯಲ್ಲಿ ವಿಧಾನಸೌಧದಲ್ಲಿ ಸ್ಥಳಾವಕಾಶದ ಕೊರತೆ ಎದುರಾಯಿತು. ಇದನ್ನು ಮನಗಂಡು ಎಸ್.ಎಂ.ಕೃಷ್ಣ ಅವರು ವಿಧಾನಸೌಧದ ಪಕ್ಕದಲ್ಲಿಯೇ ವಿಕಾಸಸೌಧವನ್ನು ನಿರ್ಮಿಸಲು ತೀರ್ಮಾನಿಸಿದರು. ವಿಧಾನಸೌಧವನ್ನೇ ಹೋಲುವ, ಇನ್ನಷ್ಟು ವಿಸ್ತೀರ್ಣವಾಗಿ ನಿರ್ಮಿಸಲು ಅಡಿಗಲ್ಲು ಹಾಕಿದರು. ಆದರೆ ದುರದೃಷ್ಟವಶಾತ್ ವಿಕಾಸಸೌಧದ ನಿರ್ಮಾಣ ಮುಗಿಯುವ ವೇಳೆಗೆ ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದ್ದರು. ಆದ್ದರಿಂದ ಕನಸಿನ ವಿಕಾಸಸೌಧದಲ್ಲಿ ಒಂದು ದಿನವೂ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಲಾಗಲಿಲ್ಲ.

ಸುರ ಸನ್ಯಾಸಿ ಎಸ್.ಎಂ. ಕೃಷ್ಣ

Saint in a Suit ಎಂಬ ಮಾತು ಎಸ್.ಎಂ. ಕೃಷ್ಣರವರಿಗೆ ಸರಿಯಾಗಿ ಹೊಂದುವ ಮಾತು. ಸುರ ಎಂದರೆ ರಾಜ, ರಾಜ ಸನ್ಯಾಸಿ ಎಂದರೇನು ಎಂದು ಕೆಲವರು ಗೊಂದಲಕ್ಕೀಡಾ ಗಬಹುದು ಸನ್ಯಾಸಿಯ ಜೀವನಕ್ಕೂ ರಾಜನ ಜೀವನಕ್ಕೂ ವಿರುದ್ಧವಾಗಿರುತ್ತದೆ. ಎಸ್ ಎಂ ಕೃಷ್ಣರವರಿಗೆ ಏಕೆ ಸುರ ಸನ್ಯಾಸಿ ಎಂದು ಕರೆದಿದ್ದೇನೆ ಎಂದರೆ ಕೃಷ್ಣರವರು ಹುಟ್ಟಿನಿಂದಲೂ ರಾಜನ ರೀತಿ ಭೋಗದ ಜೀವನವನ್ನು ನಡೆಸಿಕೊಂಡು ಬಂದವರು.

ಯಾವ ರೀತಿ ಭೋಗದ ಜೀವನವೆಂದರೆ ಎಸ್. ಎಂ. ಕೃಷ್ಣರವರು ಉಪಯೋಗಿಸುತ್ತಿರುವ ವಸ್ತುಗಳ ಬ್ರಾಂಡ್ ಹೆಸರುಗಳು ಕರ್ನಾಟಕದ ಯಾವುದಾದರು ರಾಜಕಾರಣಿಗಳಿಗೆ ಅಥವಾ ಸಿನಿಮಾ ನಟರಿಗೆ ತಿಳಿದಿದ್ದಿಯೋ ಇಲ್ಲವೋ ಗೊತ್ತಿಲ್ಲ. (Stefano Ricci, Prada, Louis Vuitton, Moreschi, Fratelli Rossetti, Gucci, Herringbone etc.) ರೀತಿಯ ಬ್ರಾಂಡ್‌ಗಳನ್ನು ಅವರು ಉಪಯೋಗಿಸುತ್ತಿದ್ದರು.

ಉದಾಹರಣೆಗೆ ಹೇಳಬೇಕೆಂದರೆ ಎಸ್ ಎಂ ಕೃಷ್ಣರವರ ಒಂದು Stefano Ricci Crocodile Leather Shoes ನ ಬೆಲೆ ಹೆಚ್ಚು ಕಡಿಮೆ 3 ಲಕ್ಷ ರು. ಗಳು ಇನ್ನೂ ಅವರು ಉಪಯೋಗಿಸುತ್ತಿರುವ ಸೂಟ್‌ಗಳು, ಕನ್ನಡಕಗಳು, ಮದ್ಯದ ಬಾಟಲ್‌ಗಳ ಬೆಲೆಯನ್ನು ನೀವೆ ಊಹಿಸಬಹುದು. ಅವರು ಉಪಯೋಗಿಸುತ್ತಿರುವುದು ಎಲ್ಲಾ Luxury ಬ್ರಾಂಡ್‌ಗಳೆ. ಈ ರೀತಿಯ ಭೋಗದ ಜೀವನವನ್ನು ನಡೆಸುತ್ತಿದ್ದಾರೆ. ಆದರೆ , ಮನಸ್ಸು ಮಾತ್ರ ಋಷಿಮುನಿಗಳ ರೀತಿ ಪ್ರಶಾಂತತೆಯಿಂದ ಇರುತ್ತದೆ. ಎಂತಹ ಪ್ರಶಾಂತತೆಯೆಂದರೆ ತಪಸ್ಸು ಮಾಡಿದರೂ ದೊರಕದ ಶಾಂತಿ ಅವರಿಗೆ ದೇವರು ಕರುಣಿಸಿರುವ ವರವೇ ಆಗಿದೆ. ಎಂದಿಗೂ ಯಾರ ಮೇಲು ಕೋಪ ಮಾಡಿಕೊಂಡವರಲ್ಲ ರಾಜಕಾರಣಿಗಳೆಂದರೆ ಸದನದಲ್ಲಿ ಒಬ್ಬರ ಮೇಲೊಬ್ಬರು ತೊಡೆತಟ್ಟಿ, ಹಲ್ಲು ಮಸೆದು ಕೆಲವು ಭಾರಿ ಸೀಮಿತ ತಪ್ಪಿ ಅವಾಚ್ಯ ಶಬ್ದಗಳು ಕೂಡ ಹೊರ ಬರುತ್ತವೆ ಆದರೆ ಕೃಷ್ಣ ಸಾಹೇಬರು ಕೋಪಮಾಡಿಕೊಂಡರೆ ಯಾವರೀತಿ ಕಾಣುತ್ತಾರೆ ಎಂಬುದನ್ನು ಕೂಡ ಊಹಿಸಲು ಸಾಧ್ಯವಿಲ್ಲ.. ಕೃಷ್ಣ ಸಾಹೇಬರದ್ದು ಯಾವಾಗಲೂ ಶಾಂತ ಸ್ವರೂಪದ ವ್ಯಕ್ತಿತ್ವ ಉದಾಹರಣೆಗೆ ಒಂದು ಭಾರಿ ಅವರ ಮನೆ ಕೆಲಸದ ಹುಡುಗನೊಬ್ಬನನ್ನು ಕರೆದು ಅವರು ಉಪಯೋಗಿಸುತ್ತಿದ್ದ Macallan oscuro ಎಂಬ ವಿಸ್ಕಿಯನ್ನು ಗ್ಲಾಸ್ ಗೆ ಹಾಕಿ ಕೊಡಲು ಕೇಳಿದ್ದಾರೆ ಆ ಬಾಟಲ್ ಯಾವ ರೀತಿ ತೆರೆಯಬೇಕೆಂದು ತಿಳಿಯದ ಕೆಲಸಗಾರನು ಅದನ್ನು ತೆರೆಯುವ ಪ್ರಯತ್ನದಲ್ಲಿ ಹೆಚ್ಚು ಕಡಿಮೆ ಅರ್ಧ ಬಾಟಲ್ ವಿಸ್ಕಿಯನ್ನು ಕೃಷ್ಣ ಸಾಹೇಬರ ಮೇಲೆ ಚಲ್ಲಿದ್ದಾನೆ ಆ ಒಂದು ಬಾಟಲ್ ವಿಸ್ಕಿಯ ಬೆಲೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಈ ರೀತಿಯ ತಪ್ಪುಗಳಾದ ಸಂದರ್ಭದಲ್ಲಿ ಎಂತವರಿಗೂ ತಕ್ಷಣಕ್ಕಾದರೂ ಕೋಪ ಬಂದು ನಿಂದಿಸುತ್ತಾರೆ. ಆದರೆ, ಕೃಷ್ಣ ಸಾಹೇಬರು ಸಮಾಧಾನ ಚಿತ್ತದಿಂದ ಹುಷಾರಪ್ಪ ನಿನ್ನ ಕೈಗೇನಾದರೂ ಏಟಾಯಿತಾ ಎಂದು ತಕ್ಷಣಕ್ಕೆ ಕೇಳುವ ಮೂಲಕ ತೋರಿದ ಸಂಯಮ ನಿಜಕ್ಕೂ ದೊಡ್ಡದು ಇದೊಂದು ಉದಾಹರಣೆಯಷ್ಟೇ ಈ ರೀತಿ ಹಲವಾರು ಪ್ರಸಂಗಗಳು ನಡೆದಿವೆ.

ಓಂಕಾರಗೌಡ, ಎಸ್.ಎಂ. ಕೃಷ್ಣ ಆಪ್ತ ಕಾರ್ಯದರ್ಶಿ



ಅಶ್ರುತರ್ಪಣ

ಕನ್ನಡ ನಾಡಿನ ಹೆಮ್ಮೆಯ ಮುಖ್ಯಮಂತ್ರಿಯಾಗಿ ಹತ್ತು ಹಲವು ಜನಪರ ಕಾರ್ಯಕ್ರಮಗಳನ್ನು ನೀಡಿ ಇಂದಿಗೂ ಜನಮಾನಸದಲ್ಲಿ ಅಜರಾಮರ. ಅವರ ಅಗಲಿಕೆಯ ನೋವು ಭರಿಸುವ ಶಕ್ತಿ ಅವರ ಕುಟುಂಬಕ್ಕೆ ಭಗವಂತ ಕರುಣಿಸಲಿ.

ಪ್ರದೀಪ್ ಈಶ್ವರ್, ಶಾಸಕ

ಎಸ್.ಎಂ.ಕೆ ಮುತ್ಸದ್ದಿ ರಾಜಕಾರಣಿಯಾಗಿದ್ದರು. ಐಟಿ-ಬಿಟಿ, ಮೆಟ್ರೋ ರೈಲು ತರುವಲ್ಲಿ ಹಾಗೂ ಬೆಂಗಳೂರು ಅಭಿವೃದ್ಧಿಗೆ ಪ್ರಮುಖ ಪಾತ್ರ ವಹಿಸಿ ಯಶಸ್ವಿಯಾಗಿದ್ದರು. ಮಹಾರಾಷ್ಟ್ರದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದು, ಅಪಾರ ಆಡಳಿತ ಅನುಭವ ಹೊಂದಿದ್ದರು.

-ಸಯ್ಯದ್ ಅಜ್ಜಂಪೀರ್ ಎಸ್ ಖಾದ್ರಿ, ಹೆಸ್ಕಾಂ ಅಧ್ಯಕ್ಷ

ಎಸ್.ಎಂ.ಕೃಷ್ಣರ ನಿಧನದಿಂದ ರಾಜ್ಯವೂ ಓರ್ವ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡಂತಾಗಿದೆ. ಮುಖ್ಯಮಂತ್ರಿಯಾಗಿ, ರಾಜ್ಯಪಾಲರಾಗಿ, ಕೇಂದ್ರ ಸಚಿವರಾಗಿ ಅತ್ಯುತ್ತಮ ಕಾರ್ಯವನ್ನ ಮಾಡಿದ್ದ ಎಸ್.ಎಂ.ಕೃಷ್ಣ ಅವರ ಆತ್ಮಕ್ಕೆ ಶಾಂತಿ ಸಿಗಲಿ

-ಶಂಕರ ಪಾಟೀಲ್ ಮುನೇನಕೊಪ್ಪ,ಮಾಜಿ ಸಚಿವ

ರಾಜ್ಯದ ಮುತ್ಸದ್ದಿ ರಾಜಕಾರಣಿ ಎಸ್.ಎಂ ಕೃಷ್ಣ ಅವರ ನಿಧನದಿಂದಾಗಿ ನಾಡು ಒಬ್ಬ ಅದ್ಭುತ ಆಡಳಿಗಾರರನ್ನು ಕಳೆದುಕೊಂಡಿದೆ. ಆಡಳಿತದಲ್ಲಿ ಅಪಾರ ಅನುಭವ ಹೊಂದಿದ್ದರು. ಬೆಂಗಳೂರು ವಿದೇಶ ಮಟ್ಟದಲ್ಲಿ ಹೆಸರು ಮಾಡಲು ಅವರ ಪರಿಶ್ರಮವಿದೆ.

- ರಾಧಾಕೃಷ್ಣ ದೊಡ್ಡಮನಿ, ಲೋಕಸಭಾ ಸದಸ್ಯ

ನಾಡಿನ ಪ್ರಗತಿಗೆ ಶ್ರಮಿಸಿದ, ದೂರದೃಷ್ಟಿಯ ನಾಯಕ ಮಾಜಿ ವಿದೇಶಾಂಗ ಸಚಿವರು, ಮಾಜಿ ಮುಖ್ಯಮಂತ್ರಿಗಳು ಎಸ್.ಎಂ. ಕೃಷ್ಣಾ ಅವರ ನಿಧನ ದುಖಃ ತಂದಿದೆ. ಅವರ ದೂರದೃಷ್ಟಿಯಿಂದ ರಾಜ್ಯ ಹಾಗೂ ರಾಷ್ಟ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ. ಭಗವಂತ ಕುಟುಂಬಕ್ಕೆ ದುಖಃ ಭರಿಸುವ ಶಕ್ತಿ ನೀಡಲಿ.

- ಬಸವರಾಜ ಮತ್ತಿಮಡು, ಶಾಸಕ

ನಾನು ಮಾಜಿ ಸಿಎಂ ಎಸ್.ಎಂ ಕೃಷ್ಣ ಅವರ ದೊಡ್ಡ ಅಭಿಮಾನಿಯಾಗಿದ್ದೆ. ಅವರೊಬ್ಬ ಸ್ಟೈಲಿಶ್ ರಾಜಕಾರಣಿಯಾಗಿದ್ದರು. ಅವರು ತಮ್ಮ ಬಟ್ಟೆಗಳನ್ನು ತಾವೇ ವಿನ್ಯಾಸ ಮಾಡಿಕೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದರು. ಅನೇಕ ರಾಜಕಾರಣಿಗಳಿಗೆ ಮಾರ್ಗದರ್ಶನ ಮಾಡಿ ಉನ್ನತ ಸ್ಥಾನದಲ್ಲಿ ಕುಳಿತುಕೊಳ್ಳುವಂತೆ ಮಾಡಿದ್ದಾರೆ.

- ಜಮೀರ್ ಅಹಮದ್ ಖಾನ್, ವಸತಿ ಸಚಿವ

ಅಪರೂಪ

ನಾಲ್ಕು ಸದನದಲ್ಲಿದ್ದ ಎಸ್ಎಂಕೆ

ರಾಜ್ಯ ರಾಜಕೀಯದಲ್ಲಿದ್ದರೆ ವಿಧಾನಸಭೆ ಅಥವಾ ಪರಿಷತ್‌ಗೆ, ರಾಷ್ಟ್ರ ರಾಜಕಾರಣದಲ್ಲಿದ್ದರೆ ಲೋಕಸಭೆ ಅಥವಾ ರಾಜ್ಯಸಭೆಗೆ ಆಯ್ಕೆಯಾಗುವುದು ನಿಶ್ಚಿತ. ಕೆಲವೊಮ್ಮೆ ಉಭಯ ಸದನಗಳನ್ನು ಪ್ರವೇಶಿಸುತ್ತಾರೆ. ಆದರೆ ಎಸ್.ಎಂ. ಕೃಷ್ಣ ಅವರು ವಿಧಾನಸಭೆ, ವಿಧಾನಪರಿಷತ್, ಲೋಕಸಭೆ ಹಾಗೂ ರಾಜ್ಯಸಭೆಗೆ ಆಯ್ಕೆಯಾಗಿದ್ದು ವಿಶೇಷ.

ದಿ.ಎಸ್.ಎಂ ಕೃಷ್ಣ ಅವರು ವಿದ್ಯಾರ್ಥಿ ದೆಸೆಯಿಂದಲೇ ರಾಜಕಾರಣಕ್ಕೆ ಪ್ರವೇಶ ಪಡೆದರು. ಅಮೇರಿಕಾದಲ್ಲಿ ಅಲ್ಲಿ ಜಾನ್ ಆಫ್ ಕೆನಡಿ ಅವರ ಪರ ಪ್ರಚಾರ ನಡೆಸಿದರು. ಅಲ್ಲಿಂದಲೇ ರಾಜಕೀಯ ಪ್ರಾರಂಭಿಸಿದರು.

- ಟಿ.ಬಿ ಜಯಚಂದ್ರ, ಶಾಸಕ

ಎಸ್.ಎಂ ಕೃಷ್ಣ ಅವರು ನಮ್ಮ ತೀರ್ಥಹಳ್ಳಿಯ ಅಳಿಯ ಆಗಿದ್ದರು. ಅವರು ಸಿಎಂ ಆಗಿದ್ದಾಗ ನನಗೆ ಬಹಳ ಖುಷಿ ಆಗಿತ್ತು. ಸಾರ್ವಜನಿಕ ಹಾಗೂ ಖಾಸಗಿ ಜೀವನದಲ್ಲಿ ಯಾರನ್ನು ದ್ವೇಷ ಮಾಡಿದವರಲ್ಲ, ಸಜ್ಜನ ರಾಜಕಾರಣಿ, ಎತ್ತರದ ನಡುವಳಿಕೆ, ಸುಸಂಸ್ಕೃತ ವ್ಯಕ್ತಿತ್ವ ಹೊಂದಿದರು. ಸಾರ್ವಜನಿಕ ಬದುಕಲ್ಲಿ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ.

- ಆರಗ ಜ್ಞಾನೇಂದ್ರ, ಶಾಸಕ



ಕ್ರಿಕೆಟ್ ಹುಚ್ಚಿಗೆ ಚುನಾವಣೆ ಸೋತ ಎಸ್‌ಎಂಕೆ

1967ರ ಚುನಾವಣೆಯಲ್ಲಿ ಮದ್ದೂರು ಕ್ಷೇತ್ರದಲ್ಲಿ ಎಸ್.ಎಂ. ಕೃಷ್ಣ ಅವರು ತಮ್ಮ ಕ್ರಿಕೆಟ್ ಕ್ರೇಜ್‌ನಿಂದಾಗಿ ಸೋಲು ಅನುಭವಿಸಿದ ಘಟನೆ ನಡೆದಿತ್ತು. ಅದೇ ಸಮಯದಲ್ಲಿ ಮದ್ರಾಸ್ ನಲ್ಲಿ ವೆಸ್ಟ್‌ಇಂಡೀಸ್- ಭಾರತದ ನಡುವೆ ಐದು ದಿನಗಳ ಕ್ರಿಕೆಟ್ ಪಂದ್ಯ ನಡೆಯುತ್ತಿತ್ತು. ಅಗಾಧ ಕ್ರಿಕೆಟ್ ಅಭಿಮಾನಿಯಾಗಿದ್ದ ಎಸ್.ಎಂ.ಕೃಷ್ಣ ಚುನಾವಣೆ ಪ್ರಚಾರ ಬಿಟ್ಟು ಮದ್ರಾಸ್ ಗೆ ತೆರಳಿ ಐದು ದಿನ ಕ್ರಿಕೆಟ್ ಪಂದ್ಯ ವೀಕ್ಷಿಸಿದ್ದರು. ಇದು ಅವರಿಗೆ ಚುನಾವಣೆಯಲ್ಲಿ ದುಬಾರಿಯಾಗಿ ಪರಿಣಮಿಸಿ ಮದ್ದೂರು ಕ್ಷೇತ್ರದಲ್ಲಿ ಸೋಲು ಅನುಭವಿಸಬೇಕಾಯಿತು. ಮದ್ದೂರು ಜನ ನನ್ನನ್ನು ಗೆದ್ದೇ ಗೆಲ್ಲಿಸುತ್ತಾರೆ ಎಂಬ ಅತಿಯಾದ ಆತ್ಮವಿಶ್ವಾಸ ಹೊಂದಿದ್ದ ಅವರಿಗೆ ಕ್ರಿಕೆಟ್ ಪ್ರೇಮ ಸೋಲಿನ ರುಚಿ ಕಾಣಿಸಿತ್ತು ಎಂದು ಸಂದರ್ಭವೊಂದರಲ್ಲಿ ತಿಳಿಸಿದ್ದರು.

ಮೊದಲ ಗೆಲುವಿಗೆ ಅಸಿಂಧು ಕುಣಿಕೆ

ಕೃಷ್ಣ ಸ್ವತಂತ್ರ ಅಭ್ಯರ್ಥಿಯಾಗಿ ನಿಂತು ಮೊದಲ ಗೆಲುವು ಸಾಧಿಸಿದ್ದು ಅಸಿಂಧು ಕುಣಿಕೆಗೆ ಸಿಲುಕುವಂತಾಯಿತು. 1962ರಲ್ಲಿ ಮೊದಲ ಬಾರಿ ಮದ್ದೂರಿನಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ನಿಂತು ಕಾಂಗ್ರೆಸ್‌ನ ಪ್ರಭಾವಿ ನಾಯಕ ವೀರಣ್ಣ ಗೌಡರನ್ನು ಸೋಲಿಸಿದ್ದರು. ಆದರೆ, ವೀರಣ್ಣಗೌಡರು ಸೆಷನ್ ನ್ಯಾಯಾಲಯದಲ್ಲಿ ತಕರಾರು ಅರ್ಜಿ ಹಾಕಿ, ಶಾಸಕತ್ವ ರದ್ದು ಪಡಿಸಬೇಕು ಎಂದು ಅಪೀಲು ಹಾಕಿದ್ದರು.

ಅಶ್ರುತರ್ಪಣ



ತಮ್ಮ ಆಡಳಿತಾವಧಿಯಲ್ಲಿ ದೇಶದಲ್ಲಿ ನಂ.1 ಮುಖ್ಯಮಂತ್ರಿ ಎನ್ನಿಸಿಕೊಂಡಿದ್ದ ಎಸ್‌ಎಂಕೆ ಅವರು, ಹಿರಿಯ ಕಿರಿಯರೆನ್ನದೆ ಎಲ್ಲರಿಗೂ ಗೌರವದಿಂದ ಕಾಣುತ್ತಿದ್ದರು. ಇವರ ಕಾಲದಲ್ಲಿ ಹೊಸ ಕೈಗಾರಿಕಾ ನೀತಿ ಹಾಗೂ ದೂರದೃಷ್ಟಿ ಹೊಂದಿರುವ ಯೋಜನೆಗಳನ್ನು ಜಾರಿಗೆ ತಂದಿದ್ದರು. ಅತ್ಯುತ್ತಮ ಸಂಸದೀಯಪಟು, ಶಿಸ್ತು ಮತ್ತು ಸಮಯಪಾಲನೆಗೆ ಹೆಸರುವಾಸಿಯಾಗಿದ್ದರು.

-ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರದ ಮಾಜಿ ಸಚಿವ ಎಸ್.ಎಂ. ಕೃಷ್ಣ ಅವರ ನಿಧನದಿಂದ ಮನಸ್ಸಿಗೆ ಅಪಾರ ನೋವುಂಟಾಗಿದೆ. ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ದುಃಖತಪ್ತ ಕುಟುಂಬಕ್ಕೆ ನನ್ನ ಸಂತಾಪಗಳು.

-ಮಧು ಬಂಗಾರಪ್ಪ, ಶಿಕ್ಷಣ ಸಚಿವ

ರಾಜ್ಯದ ಮಾಜಿ ಮುಖ್ಯಮಂತ್ರಿಗಳು, ನಮ್ಮ ದೇಶ ಕಂಡ ಧೀಮಂತ ನಾಯಕರು, ದೇಶದ ಮಾಜಿ ವಿದೇಶಾಂಗ ಸಚಿವರು, ದಕ್ಷ ಆಡಳಿತಗಾರ, ಚಿಂತಕ, ಅಭಿವೃದ್ಧಿಯ ಹರಿಕಾರರಾದ ಎಸ್.ಎಂ ಕೃಷ್ಣ ಅವರ ನಿಧನ ಅತೀವ ದುಃಖ ತಂದಿ ನಮ್ಮ ಮಂಡ್ಯದ ಅಪರೂಪದ ಮಾದರಿ ನಾಯಕರಾಗಿದ್ದ ಅವರು ಒಬ್ಬ ಅಪರೂಪದ ಸಜ್ಜನ ರಾಜಕಾರಣಿ, ವಾಗ್ಮಿ. ಬೆಂಗಳೂರಿನ ಅಭಿವೃದ್ಧಿ ಐ.ಟಿ,ಬಿ.ಟಿ ಉದ್ಯಮದ ಉನ್ನತಿ ಉದ್ಯೋಗಾವಕಾಶಗಳ ಸೃಷ್ಟಿಗೆ ಅವರ ದೂರದೃಷ್ಟಿ ಕೊಡುಗೆ ಚಿರಸ್ಮರಣೀಯ.

- ಚಲುವರಾಯ ಸ್ವಾಮಿ, ಕೃಷಿ ಸಚಿವ

ದಿ. ಎಸ್.ಎಂ ಕೃಷ್ಣ ಅವರು ಸಜ್ಜನ ರಾಜಕಾರಣಿಯಾಗಿದ್ದಾರೆ. ಮೇರು ವ್ಯಕ್ತಿತ್ವ ದಿಂದಲೇ ರಾಜಕಾರಣ ಮಾಡಿದರು. ಎಲ್ಲರನ್ನು ಪ್ರೀತಿಸುವ ಗುಣ ಅವರಲ್ಲಿತ್ತು. ಬೆಂಗಳೂರನ್ನು ಐಟಿಬಿಟಿ ನಗರವಾಗಿಸಿದ್ದ ಕೀರ್ತಿ ಅವರಿಗೆ ಸಲ್ಲುತ್ತದೆ. ಜತೆಗೆ, ಬಸವ ಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ಅನುಭವ ಮಂಟಪಕ್ಕೂ ಕೊಡುಗೆ ನೀಡಿದ್ದಾರೆ.

- ಈಶ್ವರ್ ಖಂಡ್ರೆ, ಅರಣ್ಯ ಸಚಿವ

ಮಾಜಿ ಮುಖ್ಯಮಂತ್ರಿ ಹಾಗೂ ಮುತ್ಸದ್ದಿ ರಾಜಕಾರಣಿ ಎಸ್.ಎಂ. ಕೃಷ್ಣ ಅವರ ನಾಯಕತ್ವ ಮತ್ತು ಸಾರ್ವಜನಿಕ ಸೇವೆಯ ಪರಂಪರೆ ನಮ್ಮ ರಾಜ್ಯ ಮತ್ತು ರಾಷ್ಟ್ರದ ಮೇಲೆ ಅಳಿಸಲಾಗದ ಛಾಪು ಮೂಡಿಸಿದೆ. ಅವರ ದೂರದೃಷ್ಟಿಯಿಂದಾಗಿ ಬೆಂಗಳೂರು ಜಾಗತಿಕ ನಗರವಾಗಿ ಬೆಳೆಯಲು ಸಹಕಾರಿಯಾಗಿದ್ದು ನಾವು ಅದರ ಲಾಭವನ್ನು ಪಡೆಯುತ್ತಿದ್ದೇವೆ. ಕೃಷ್ಣ ಅವರ ಆತ್ಮಕ್ಕೆ ಶಾಂತಿ ಸಿಗಲಿ ಅವರ ಕೊಡುಗೆಗಳು ಮುಂದಿನ ಪೀಳಿಗೆಗೆ ಸ್ಫೂರ್ತಿ ನೀಡಲಿ.

- ಪ್ರಿಯಾಂಕ್ ಖರ್ಗೆ, ಸಚಿವ

ಅಪರೂಪ

ರಾಜಕೀಯದಿಂದ ನಿವೃತ್ತಿ

2023ರ ವಿಧಾನಸಭಾ ಚುನಾವಣೆ ತಯಾರಿ ನಡೆಯುತ್ತಿದ್ದಾಗಲೇ ಎಸ್.ಎಂ. ಕೃಷ್ಣ ವಯಸ್ಸಿನ ಕಾರಣ ನೀಡಿ ರಾಜಕೀಯದಿಂದ ನಿವೃತ್ತಿ ಘೋಷಿಸಿದರು. ಆ ಸಂದರ್ಭದಲ್ಲಿ ಅವರು, ನನಗೀಗ 90 ವರ್ಷ. ಇದರ ಅರಿವಿದೆ. ಈಗ ನಾನು 50 ವರ್ಷದವ ನಂತೆ ಇರಲು ಸಾಧ್ಯವಿಲ್ಲ, ಹೀಗಾಗಿ ಸಾರ್ವಜನಿಕ ಜೀವನದಿಂದ ಹಿಂದೆ ಸರಿಯುತ್ತಿದ್ದೇನೆ ಎಂದು ಹೇಳಿದ್ದರು. ಆದರೆ 2017ರಲ್ಲಿ ಬಿಜೆಪಿ ಸೇರಿದ ಬಳಿಕ ಅವರು ಸಕ್ರಿಯ ರಾಜಕಾರಣದಿಂದ ಬಹುತೇಕ ದೂರವೇ ಉಳಿದಿದ್ದರು.

ಮಾಜಿ ಮುಖ್ಯಮಂತ್ರಿ ಹಾಗೂ ಮಾಜಿ ಕೇಂದ್ರ ಸಚಿವ ದಿ.ಎಸ್.ಎಂ.ಕೃಷ್ಣ ಅವರು ವಿಧಿವಶರಾಗಿರುವುದು ಅಪಾರ ನೋವು ತಂದಿದೆ. ಅವರ ಸಜ್ಜನ ವ್ಯಕ್ತಿತ್ವ, ದೂರದೃಷ್ಟಿ ಹಾಗೂ ಅಭಿವೃದ್ಧಿಪರ ಬದ್ಧತೆಯು ಅನುಕರಣೀಯವಾಗಿದೆ. ಅವರ ಆತ್ಮಕ್ಕೆ ಸದ್ಗತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

-ಡಾ.ಅಜಯ್ ಸಿಂಗ್, ಅಧ್ಯಕ್ಷ ಕೆಕೆಆರ್‌ಡಿಬಿ

ಮಾಜಿ ಮುಖ್ಯಮಂತ್ರಿ ಕೃಷ್ಣ ಅವರ ಅಗಲಿಕೆ ಅತ್ಯಂತ ದುಃಖ ತಂದಿದೆ. ಮುಖ್ಯಮಂತ್ರಿ ಯಾಗಿ ಜನ ಮಾನಸದಲ್ಲಿ ಉಳಿಯುವ ಕೆಲಸ ಮಾಡಿದ್ದಾರೆ. ಬೆಂಗಳೂರನ್ನು ಸಿಂಗಾಪೂರ ಮಾಡಬೇಕೆಂಬ ಕನಸನ್ನು ಕಂಡವರು. ಐಟಿಬಿಟಿ ಸಿಟಿಯನ್ನಾಗಿ ಮಾಡಿದರು. ಸಜ್ಜನ ರಾಜಕಾರಣಿಯಾಗಿದ್ದ, ಅವರು ಸೌಮ್ಯ ಸ್ವಭಾವ ಹೊಂದಿದರು. ಅವರ ಅಗಲಿಕೆಯಿಂದ ರಾಜ್ಯ ಬಡವಾಗಿದೆ.

- ರಾಜಕುಮಾರ ಪಟೇಲ್ ತೇಲ್ಲೂರ, ಮಾಜಿ ಶಾಸಕ

108 ದಿನದ ಅವಿರತ ಹೋರಾಟದ ಬಳಿಕ ಬಿಡುಗಡೆ

ಬಿಡುಗಡೆಯ ರೋಚಕ ಕ್ಷಣಗಳನ್ನು ಆತ್ಮಕಥನದಲ್ಲಿ ದಾಖಲಿಸಿದ್ದ ಕೃಷ್ಣ

ರಾಜ್ ಅಪಹರಣ ಬಹುದೊಡ್ಡ ಸವಾಲು

ಕರ್ನಾಟಕದ ಇತಿಹಾಸದಲ್ಲಿ ವರನಟ ಡಾ. ರಾಜಕುಮಾರ್ ಅಪಹರಣ ಬಹುದೊಡ್ಡ ವಿವಾದಿತ ಹಾಗೂ ಆಘಾತಕಾರಿ ವಿಷಯ. ಈ ಪ್ರಕರಣದಲ್ಲಿ ರಾಜಕುಮಾರ್ ಅವರನ್ನು ಕಾಡಿನಲ್ಲಿ 108 ದಿನಗಳ ಕಾಲ ಬಂಧಿಸಿದ್ದ ಕಾಡುಗಳ್ಳ ವೀರಪ್ಪನ್ ಕೈಯಿಂದ ಬಿಡಿಸಿಕೊಂಡು ಬರುವ ಹೊತ್ತಿಗೆ, ಕರ್ನಾಟಕ ಹಾಗೂ ತಮಿಳುನಾಡು ಸರಕಾರಗಳಿಗೆ ಸಾಕುಸಾಕೆನಿಸಿದ್ದು ಸುಳ್ಳಲ್ಲ.

ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿದ್ದು, ರಾಜ್ಯದ ರಸ್ತೆಗಳು ಅಕ್ಷರಶಃ ಬೆಂಕಿಯ ಬೇಗುದಿಯಲ್ಲಿ ಬೆಂದಿದ್ದವು. ರಾಜಕುಮಾರ್ ಅಭಿಮಾನಿಗಳು ಸರಕಾರದ ವಿರುದ್ಧ ತಿಂಗಳುಗಟ್ಟಲೇ ಬೀದಿಗಿಳಿದು ಹೋರಾಟ ನಡೆಸಿದ್ದರು. ಇಂತಹ ಸಂಕಷ್ಟ ಹಾಗೂ ಕ್ಲಿಷ್ಟ ಸನ್ನಿವೇಶವನ್ನು 'ಯಶಸ್ವಿ'ಯಾಗಿ ನಿಭಾಯಿಸಿದ್ದು ಅಂದಿನ ಮುಖ್ಯಮಂತ್ರಿ ಎಸ್.ಎಂ, ಕೃಷ್ಣ.

ಕೃಷ್ಣ ನೇತೃತ್ವದ ಸರಕಾರ ಅಧಿಕಾರ ಗದ್ದುಗೆ ಏರಿದ ವರ್ಷದಲ್ಲಿ ಬರಸಿಡಿಲಿನಂತೆ ರಾಜಕುಮಾರ್ ಅಪಹರಣ ಪ್ರಕರಣ ಬಡಿಯಿತು. ರಾಜಕುಮಾರ್ ಅವರನ್ನು ಸುರಕ್ಷಿತವಾಗಿ ಬಿಡಿಸಿಕೊಂಡು ಬರುವುದು ಸರಕಾರಕ್ಕೆ ಮೊದಲ ಹಾಗೂ ಕೊನೆಯ ಆಯ್ಕೆಯಾಗಿತ್ತು. ಆ ಹಂತದಲ್ಲಿ ಏನಾದರೂ ಸಣ್ಣ ಎಡವಟ್ಟಾಗಿದ್ದರೂ ಕೃಷ್ಣ ಅವರ ರಾಜಕೀಯ ಜೀವನ ಅಲ್ಲಿಗೆ 'ಅಂತ್ಯ'ವಾಗಿರುತ್ತಿತ್ತು. ಇಂತಹ ಸವಾಲಿನ ಸಮಯದಲ್ಲಿಯೂ ಯಾರನ್ನೂ ದೂಷಿಸದೇ, ಪ್ರತಿಹಂತದಲ್ಲಿಯೂ ತಾವೇ ಸಭೆ ನಡೆಸುತ್ತಾ, ರಾಜ್‌ಕುಮಾರ್ ಬಿಡುಗಡೆ 108 ದಿನಗಳ ಕಾಲ ಅವಿರತ ಹೋರಾಟ ನಡೆಸಿದ್ದರು. ವೀರಪ್ಪನ್ ಕೈಯಿಂದ ರಾಜಕುಮಾರ್‌ರನ್ನು ಬಿಡಿಸಿಕೊಂಡು ಬರುವ ಸವಾಲಿನ ಕೆಲಸವನ್ನು ನಿಭಾಯಿಸುವ ಮೂಲಕ, ರಾಜ್ಯದ ಜನರಷ್ಟೇ ಅಲ್ಲದೇ, ರಾಷ್ಟ್ರಮಟ್ಟದಲ್ಲಿಯೂ ಭೇಷ್ ಎನಿಸಿಕೊಂಡರು.



ಅಷ್ಟಕ್ಕೂ ಆಗಿದ್ದೇನು?

ಕಾಡುಗಳ್ಳ ವೀರಪ್ಪನ್, ಡಾ. ರಾಜಕುಮಾರ್ ಸೇರಿದಂತೆ ಮೂವರನ್ನು ಚಾಮರಾಜನಗರ ಜಿಲ್ಲೆಯ ಗಡಿಭಾಗದಲ್ಲಿರುವ ಗಾಜನೂರಿನ ಅವರ ತೋಟದ ಮನೆಯಿಂದ ಅಪಹರಿಸಿದ ಕರಾಳ ಘಟನೆ 2000 ಇಸವಿಯ ಜುಲೈ 30 ರಂದು ನಡೆದಿತ್ತು. ಆಗ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು ಎಸ್.ಎಂ.ಕೃಷ್ಣ. ಖ್ಯಾತರಾಗಿರುವವರನ್ನು ಅಪಹರಿಸಿದರೆ ಹಣ ಸಿಗುತ್ತದೆಂದು ತಿಳಿದ ವೀರಪ್ಪನ್, ವರನಟ ಡಾ.ರಾಜಕುಮಾರ್ ಅವರನ್ನು ಅಪಹರಿಸುವ ಸಂಚು ಮಾಡಿದ್ದ. ತನ್ನ ಮಾಹಿತಿದಾರರಿಂದ ರಾಜಕುಮಾರ್ ಅವರು ಗಾಜನೂರಿಗೆ ಬರುವ ವಿಷಯ ತಿಳಿದು 2000ರ ಜುಲೈ 30ರ ರಾತ್ರಿ ಗಾಜನೂರಿನ ತೋಟದ ಮನೆಯಿಂದ ರಾಜಕುಮಾರ್ ಅವರನ್ನು ಹಾಗೂ ಇನ್ನಿತರ ಮೂವರನ್ನು ಅಪಹರಿಸಿ ಕರೆದೊಯ್ದಿದ್ದ. ಅವರನ್ನು ಸತ್ಯಮಂಗಲ ಕಾಡಿನಲ್ಲಿ 108 ದಿನಗಳ ಕಾಲ ಒತ್ತೆಯಾಗಿರಿಸಿಕೊಂಡಿದ್ದ.

ವಿಷಯ ತಿಳಿಸದೆ ಇದ್ದಿದ್ದೇ ಅನಾಹುತಕ್ಕೆ ಕಾರಣ

ಕರ್ನಾಟಕ ಸರಕಾರದ ಗುಪ್ತಚರ ಇಲಾಖೆಗೆ ವೀರಪ್ಪನ್ ಕಡೆಯವರು ರಾಜಕುಮಾರ್ ಅವರನ್ನು ಅಪಹರಣ ಮಾಡಲು ಸಂಚು ಹೂಡಿದ್ದಾರೆ ಎನ್ನುವ ವರದಿಯನ್ನು ಮೊದಲೇ ನೀಡಿತ್ತು. ಆದ್ದರಿಂದ ರಾಜ್ಯ ಸರಕಾರ ರಾಜಕುಮಾರ್ ಅವರಿಗೆ ಗಾಜನೂರಿಗೆ ತೆರಳುವ ಮೊದಲು ತಿಳಿಸಬೇಕು ಎಂದು ಮನವಿ ಮಾಡಿತ್ತು. ಗಾಜನೂರಿನ ಭಾಗಕ್ಕೆ ತೆರಳೋದಾದರೆ ರಾಜ್ಯ ಸರಕಾರಕ್ಕೆ ಮೊದಲೇ ತಿಳಿಸಬೇಕು ಎಂದು ಹೇಳಿತ್ತು. ಇದಕ್ಕೆ ರಾಜಕುಮಾರ್ ಕೂಡ ಒಪ್ಪಿದ್ದರು. ಪ್ರತಿಬಾರಿಯೂ ಗಾಜನೂರಿಗೆ ತೆರಳುವಾಗ ರಾಜಕುಮಾರ್ ಅವರು ಸರಕಾರಕ್ಕೆ ತಿಳಿಸುತ್ತಿದ್ದರು. ಆಗ ರಾಜಕುಮಾರ್ ಅವರಿಗೆ ಸೂಕ್ತ ಪೊಲೀಸ್ ಭದ್ರತೆಯನ್ನು ಸರಕಾರ ಒದಗಿಸುತ್ತಿತ್ತು. ಆದರೆ, ಅಂದು ಮಾತ್ರ ಅವರು ರಾಜ್ಯ ಸರಕಾರಕ್ಕೆ ಯಾವುದೇ ಮಾಹಿತಿ ನೀಡಿರಲಿಲ್ಲ. ನೇರವಾಗಿ ಗಾಜನೂರಿಗೆ ತೆರಳಿದರು. ಈ ವೇಳೆ ವೀರಪ್ಪನ್ ಕಡೆಯವರು ಬಂದು ರಾಜಕುಮಾರ್‌ನ ಕರೆದುಕೊಂಡು ಹೋದರು. ಇದು ಸರಕಾರಕ್ಕೆ ಹಾಗೂ ಅಣ್ಣಾವ್ರ ಕುಟುಂಬಕ್ಕೆ ದೊಡ್ಡ ಆಘಾತ ನೀಡಿತ್ತು.

- **ರಾಜಕುಮಾರ್ ಅಪಹರಣದ ಇಡೀ ಪ್ರಕರಣವನ್ನು ಮುಖ್ಯಮಂತ್ರಿ ಕೃಷ್ಣ ಅವರೇ ನಿಭಾಯಿಸಿದ್ದರು.**
- **ಅಪಹರಣವಾದ ಮರುದಿನವೇ ತಮಿಳುನಾಡಿಗೆ ತೆರಳಿ, ಅಲ್ಲಿನ ಸಿಎಂ ಕುರುಣಾನಿಧಿ ಅವರೊಂದಿಗೆ ಚರ್ಚಿಸಿ ಸಹಾಯಕ್ಕೆ ಮನವಿ**
- **ಸಂಧಾನಕಾರನಾಗಿ ನಕ್ಕೀರನ್ ಗೋಪಾಲನ್ ನನ್ನು ನೇಮಿಸಿದ ಸರಕಾರ**
- **ವೀರಪ್ಪನ್ ಕಾರ್ಯಾಚರಣೆ ಸಮಯದಲ್ಲಿನ ಗೊಂದಲ, ಆತಂಕ, ವಿವಾದ, ಸವಾಲಿನ ಬಗ್ಗೆ ಸುವಿಸ್ತಾರವಾಗಿ ಆತ್ಮಕಥೆಯಲ್ಲಿ ಕರೆದುಕೊಂಡಿರುವ ಎಸ್‌ಎಂಕೆ**

ಅಪಹರಿಸಿದ್ದು ಹೇಗೆ?

ಖಾಕಿ ಹಾಗೂ ಹಸಿರುಬಣ್ಣದ ಬಟ್ಟೆ ತೊಟ್ಟಿದ್ದ ವೀರಪ್ಪನ್ ತಂಡದ ನಾಲ್ವರು ಫಾರ್ಮ್‌ಹೌಸ್‌ನ ಮುಂಬಾಗಿಲು ತಟ್ಟಿದ್ದರು. ಬಾಗಿಲು ಪೂರ್ತಿ ತೆರೆಯುವಷ್ಟರಲ್ಲಿಯೇ ಬಲವಂತವಾಗಿ ಅವರು ನೂಕಿಕೊಂಡು ಒಳಕ್ಕೆ ನುಗ್ಗಿದ್ದರು. ಎರಡು ನಿಮಿಷಗಳ ನಂತರ ವೀರಪ್ಪನ್ ಸಹ ಆ ಮನೆಯ ಒಳಗೆ ಪ್ರವೇಶಿದ್ದ. ಆತನನ್ನು ನೋಡಿದ ಕೂಡಲೇ ಮನೆಯೊಳಗಿದ್ದವರು ಗಾಬರಿಗೊಂಡಿದ್ದರು. ಆಗ ಕುಳಿತಿದ್ದ ರಾಜಕುಮಾರ್ ಅವರನ್ನು ವೀರಪ್ಪನ್ ಉದ್ದೇಶಿಸಿ, 'ಅಯ್ಯಾ, ಬನ್ನಿ ಹೋಗೋಣ' ಎಂದ. ರಾಜಕುಮಾರ್ ಮೇಲೆದ್ದ ಕೂಡಲೇ ತನ್ನ ಬಳಿಯಿದ್ದ ಒಂದು ಆಡಿಯೊ ಕ್ಯಾಸೆಟ್ಟನ್ನು ರಾಜ್ ಪತ್ನಿ ಪಾರ್ವತಮ್ಮ ಅವರಿಗೆ ಕೊಟ್ಟು, ಇದನ್ನು ಮುಖ್ಯಮಂತ್ರಿ ಎಸ್.ಎಂ. ಕೃಷ್ಣರ ಕೈಗೆ ಕೊಡಿ. ನನಗೇನು ಬೇಕೋ ಅದು ಅವರಿಗೆ ತಿಳಿಯುತ್ತದೆ. ನಾನು ಅಯ್ಯನವರಿಗೆ ಏನೂ ಹಾನಿ ಮಾಡುವುದಿಲ್ಲ ಚಿಂತಿಸಬೇಡಿ ಎಂದಿದ್ದ.



ಸ್ಮೃತಿವಾಹಿನಿಯಲ್ಲಿ ಅಪಹರಣದ ಬಗ್ಗೆ ಕೃಷ್ಣ ಹೇಳಿರುವುದೇನು?



ದಿನನಿತ್ಯದಂತೆ ವಿಧಾನಸೌಧದಿಂದ ಮನೆಗೆ ಬಂದೆ. ಸಂಜೆ 7.30, ಕಾಫಿ ಕುಡಿಯುತ್ತಿದ್ದೆ. ಪಾರ್ವತಮ್ಮ ರಾಜಕುಮಾರ್ ಮಾತನಾಡುತ್ತಾರೆ ಎನ್ನುತ್ತಾ ಆಪ್ತ ಕಾರ್ಯದರ್ಶಿ ಫೋನ್ ಕೊಟ್ಟ. ಆ ಕಡೆಯಿಂದ ಪಾರ್ವತಮ್ಮ ಅವರು 'ಅಣ್ಣಾ, ರಾಜಕುಮಾರ್ ಅವರನ್ನು ವೀರಪ್ಪನ್ ಅಪಹರಿಸಿದ' ಎಂದರು. ಗಾಬರಿಯಾಗಿ 'ಏನು ಹೇಳುತ್ತಿದ್ದೀರಮ್ಮಾ' ಅಂದೆ. ನನಗೆ ಒಮ್ಮೆಲೆ ಆಕಾಶ ಕಳಚಿ ಬಿದ್ದಂತಾಗಿ ಆತಂಕ ಶುರುವಾಯಿತು. ಪರಿಸ್ಥಿತಿ ಏನಾಗುತ್ತದೋ ಅಂತ ಮನಸ್ಸಿನಲ್ಲಿಯೇ ಲೆಕ್ಕ ಹಾಕಿದೆ. ನನ್ನ ಅಳಿಯ ಸಿದ್ದಾರ್ಥನನ್ನು ಕರೆಸಿದೆ. ಅವನ ಸೋದರ ಸಂಬಂಧಿ ಸೇನಾನಿ ಹಾಗೂ ಕೃಪಾಂಕರ ಅವರಿಬ್ಬರೂ ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಒಂದಷ್ಟು ಕಾಲ ವೀರಪ್ಪನ್ ಸೆರೆಯಲ್ಲಿದ್ದರು. ಇಬ್ಬರೂ ವನ್ಯಜೀವಿ ಛಾಯಾಗ್ರಾಹಕರು. ಅವರಿಗೆ ವೀರಪ್ಪನ್ ಜತೆ ಮಾತನಾಡುವಷ್ಟು ಸಂಪರ್ಕವಿರಬಹುದು ಎಂಬುದು ನನ್ನ ವಿಚಾರವಾಗಿತ್ತು. ಅಷ್ಟು ಹೊತ್ತಿಗೆ ಇಂಟೆಲಿಜೆನ್ಸ್‌ನ ಮುಖ್ಯಸ್ಥರು, ಡಿ.ಜಿ, ಗೃಹಸಚಿವರು ಹಾಗೂ ಗೃಹ ಕಾರ್ಯದರ್ಶಿ, ಮುಖ್ಯ ಕಾರ್ಯದರ್ಶಿ ಎಲ್ಲ ಬಂದರು. ಪಾರ್ವತಮ್ಮ ರಾಜಕುಮಾರ್ ಕೂಡ ಬಂದರು. ಆಗ ರಾತ್ರಿ 1 ಗಂಟೆಯಾಗಿತ್ತು.

ನಕ್ಕೀರನ್ ಸಂಪರ್ಕ

ತಮಿಳುನಾಡಿನ ಅಂದಿನ ಮುಖ್ಯಮಂತ್ರಿ ಕರುಣಾನಿಧಿಯವರಿಗೆ ಫೋನ್ ಮಾಡಿದೆ. ಅವರು 'ಏನು ಮಾಡುವುದು' ಅಂತ ಕೇಳಿದರು. ನೀವೇನಾದರೂ ಮಾಡಲೇಬೇಕು, ನಾಳೆ ಬರುತ್ತೇನೆ ಎಂದು ಹೇಳಿದೆ. ಮಾರನೇ ದಿನ ಚೆನ್ನೈಗೆ ಹೋಗಿ ಕರುಣಾನಿಧಿ ಅವರನ್ನು ಭೇಟಿ ಮಾಡಿದೆ. ಅವರು ಯೋಚನೆ ಮಾಡಿ, 'ಯಾರಾದರೂ ಒಬ್ಬರನ್ನು ವೀರಪ್ಪನ್‌ನ ಹತ್ತಿರ ಕಳುಹಿಸಬೇಕು' ಎಂದರು. ನಕ್ಕೀರನ್ ಗೋಪಾಲ್ ಅಂತ ಪತ್ರಕರ್ತರಿದ್ದಾರೆ. ಅವರು ಆಗಾಗ್ಗೆ ವೀರಪ್ಪನ್ ಭೇಟಿಮಾಡಿ ಅವನಿಗೆ ಸಂಬಂಧಪಟ್ಟಂತೆ ಸುದ್ದಿ ಕೂಡ ಪ್ರಕಟಿಸುತ್ತಾರೆ' ಎಂದರು. ಆಗ ನಕ್ಕೀರನ್‌ನನ್ನು ಕರೆಸಿದೆವು. ಪ್ರಾರಂಭದಲ್ಲಿ ಅವರು ಕಾಡಿಗೆ ಹೋಗಿ ವೀರಪ್ಪನ್ ಜತೆ ಸಂಧಾನ ಮಾಡುವುದಕ್ಕೆ ಉತ್ಸಾಹ ತೋರಿಸಲಿಲ್ಲ. ನಾನೇ ಅವರಿಗೆ ಪ್ರಾರ್ಥಿಸಿ, ಏನಾದರೂ ಮಾಡಿ ವೀರಪ್ಪನ್ ಸಂಪರ್ಕ ಮಾಡಪ್ಪ ಅಂತ ಕೇಳಿಕೊಂಡು ಸಂಜೆ ಬೆಂಗಳೂರಿಗೆ ಬಂದೆ.

ಏರ್‌ಪೋರ್ಟ್‌ನಿಂದ ಮನೆಗೆ ಬರಬೇಕಾದರೆ ಬೆಂಗಳೂರಿನಲ್ಲಿ ಆಗಲೇ ತೀವ್ರ ಪ್ರತಿಭಟನೆಗಳು ಶುರುವಾಗಿದ್ದವು. ಅದನ್ನು ನಿಯಂತ್ರಣಕ್ಕೆ ತರದಿದ್ದರೆ 1991ರಲ್ಲಿ ನಡೆದ ಕಾವೇರಿ ಜಲ ವಿವಾದ ಘಟನೆ ಮರುಕಳಿಸಬಹುದಿತ್ತು. ತಕ್ಷಣ ಡಿ.ಜಿ ಹಾಗೂ ಗೃಹ ಕಾರ್ಯದರ್ಶಿಗಳನ್ನು ಕರೆಸಿ, ಒಬ್ಬನೇ ಒಬ್ಬ ತಮಿಳಿಗನ ಪ್ರಾಣ ಅಥವಾ ಆಸ್ತಿಪಾಸ್ತಿ ನಷ್ಟ ಆಗಬಾರದು ಎಂದು ಕಠಿಣ ನಿರ್ದೇಶನ ನೀಡಿದೆ. ಕರುಣಾನಿಧಿಯವರ ಪ್ರಯತ್ನದಿಂದಾಗಿ ನಕ್ಕೀರನ್ ಕಾಡಿಗೆ ಹೋದರು. ವೀರಪ್ಪನ್ ಭೇಟಿ ಮಾಡಿ ರಾಜಕುಮಾರ್ ಆರೋಗ್ಯ ಚೆನ್ನಾಗಿರುವ ಬಗ್ಗೆ ಹಾಗೂ ವೀರಪ್ಪನ್ ನನಗೆ ಕಳುಹಿಸಿದ ಕ್ಯಾಸೆಟ್ ತಂದುಕೊಟ್ಟರು. ರಾಜಕುಮಾರ್ ಆರೋಗ್ಯವಾಗಿದ್ದು ಪ್ರಾರ್ಥನೆ ಮಾಡುತ್ತಿದ್ದರು, ಯೋಗ ಮಾಡುತ್ತಿದ್ದರು, ಹಾಡು ಹೇಳುತ್ತಿದ್ದರು. ವೀರಪ್ಪನ್ ನನಗೆ ಕಳುಹಿಸಿದ ಕ್ಯಾಸೆಟ್‌ನಲ್ಲಿ 50 ಕೋಟಿ ಹಣ ಸೇರಿದಂತೆ ಅನೇಕ ಬೇಡಿಕೆಗಳಿದ್ದವು. ತನ್ನ ಸಹಚರರು ಬೆಂಗಳೂರಿನ ಜೈಲಿನಲ್ಲಿದ್ದಾರೆ. ಅವರನ್ನು ಬಿಡಿ ಎಂಬ ಷರತ್ತು ಹಾಕಿದ್ದ. ಐದು ಸಾರಿ ಚೆನ್ನೈಗೆ ಹೋಗಿ ಕರುಣಾನಿಧಿಯನ್ನು ಭೇಟಿ ಮಾಡಿದೆ. ಅವರೂ ಒಂದು ಸಾರಿ ಬಂದರೆ ಒಳ್ಳೆಯದು ಅಂತ, ಅವರನ್ನೂ ಬೆಂಗಳೂರು ವಿಧಾನಸೌಧಕ್ಕೆ ಕರೆಸಿದೆ. ಅನಂತರ ಮತ್ತೆ ಗೋಪಾಲನ್‌ನನ್ನು ಕಾಡಿಗೆ ಕಳುಹಿಸಲಾಯಿತು. ಈ ಮಧ್ಯೆ ಒಂದು ದಿನ ಬೆಂಗಳೂರಿನಲ್ಲಿ ಟೆನ್ನಿಸ್ ಪಂದ್ಯ ನೋಡುತ್ತಿದ್ದೆ. ಆಗ ಒಂದು ಕರೆಬಂತು. ನೋಡಿದರೆ ವೀರಪ್ಪನ್ ಮಾತು. ಆಗ ನಾನು' ರಾಜಕುಮಾರ್‌ರನ್ನು ಬಿಟ್ಟುಬಿಡು' ಎಂದು ಕೇಳಿದೆ. ಅದಕ್ಕೆ ಸಾಧ್ಯವಿಲ್ಲ, ನನ್ನ ಷರತ್ತು ಪಾಲಿಸಿದರೆ ಮಾತ್ರ ಬಿಡುಗಡೆ ಮಾಡುತ್ತೇನೆ. ಇಲ್ಲದಿದ್ದರೆ ಕೊಂದುಹಾಕುತ್ತೇನೆ ಎಂದ. ಬಳಿಕ ಸಮಯ ಕೇಳಿದೆ.

ನೆಡುಮಾರನ್ ಸಂಧಾನ

ವೀರಪ್ಪನ್‌ಗೆ ನೆಡುಮಾರನ್ ಬಗ್ಗೆ ತುಂಬಾ ಗೌರವವಿದೆ ಎಂದು ಗೊತ್ತಾಯಿತು. ಅವರನ್ನು ಭೇಟಿಯಾಗಿ ಏನಾದರೂ ಸಹಾಯ ಮಾಡಿ ಎಂದು ಹೇಳಿದೆ. ಅದಕ್ಕೆ ಅವರು 'ಬಹಳ ಕಷ್ಟವಿದೆ. ಅವನು ಸುಲಭವಾಗಿ ಯಾವುದಕ್ಕೂ ಸಿಗುವವನಲ್ಲ. ಆದರೂ ಪ್ರಯತ್ನ ಮಾಡುತ್ತೇನೆ. ಲೆಟರ್ ಕಳುಹಿಸುತ್ತೇನೆ' ಅಂದರು. ಈ ಮಧ್ಯೆ ನಮ್ಮ ಪೊಲೀಸರು ನಾಗಪ್ಪ ಮಾರಡಗಿಯನ್ನು ಹಿಡಿದುಕೊಂಡು ಬಂದರು. ರಾಜಕುಮಾರ್ ಜತೆಗೆ ಕರೆದುಕೊಂಡು ಹೋಗಿದ್ದ ಇಬ್ಬರಲ್ಲಿ ಅವನೊಬ್ಬ, ಸಹಾಯಕ ನಿರ್ದೇಶಕ. ವೀರಪ್ಪನ್ ಜೊತೆಗೆ ಜಗಳ ಮಾಡಿ, ರಾತ್ರೋರಾತ್ರಿ ತಪ್ಪಿಸಿಕೊಂಡು ಓಡಿಬಂದಿದ್ದ. ಅವನು ಪ್ರತಿನಿತ್ಯ ವೀರಪ್ಪನ್ ತನ್ನ ತಾಣ ಬದಲಾಯಿಸುತ್ತಾನೆ. ಮಾಂಸಾಹಾರ ಬಿಟ್ಟು ಏನೂ ಊಟಕ್ಕೆ ದೊರೆಯುವುದಿಲ್ಲ. ವಯಸ್ಸಾದವರು ಅವನ ಜತೆಗಿರುವುದು ಕಷ್ಟ ಎಂದೆಲ್ಲ ಹೇಳಿದ. ಕರ್ನಾಟಕಕ್ಕೆ ಈ ಅಪಹರಣ ತುಂಬಾ ಪ್ರಮುಖವಾದ ವಿಚಾರ. ಹಾಗಾಗಿ ಸುದ್ದಿವಾಹಿನಿಗಳು, ಪ್ರತಿಪಕ್ಷವರು ಎಲ್ಲರನ್ನೂ ಹ್ಯಾಂಡಲ್ ಮಾಡಬೇಕಿತ್ತು. ಹೀಗಾಗಿ ಐದು ಸಾರಿ ಪ್ರತಿಪಕ್ಷದ ನಾಯಕರ ಸಭೆ ಕರೆದೆ. ಅವರ ಅಭಿಪ್ರಾಯ ಪಡೆದೇ ಮುನ್ನಡೆದೆ. ನನ್ನ ವ್ಯಕ್ತಿತ್ವದ ಭಾಗವಾಗಿರುವ ಸಂಯಮ, ಮೌನ, ತಾಳ್ಮೆ ಹಾಗೆಯೇ ನೋವನ್ನು ನುಂಗಿಕೊಳ್ಳುವುದು ಈ ಸಂದರ್ಭದಲ್ಲಿ ನನ್ನನ್ನು ಕಾಪಾಡಿದವು. ಎಂತಹುದೇ ಮಾತಿಗೂ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ.

ಸ್ಥಳೀಯರ ಮೇಲೆ ವೀರಪ್ಪನ್ ಪ್ರಭಾವ

ವೀರಪ್ಪನ್ ಸ್ಥಳೀಯ ಜನರಿಗೆ ಅಂದರೆ ಗೋಪಿನಾಥಂ ಮೊದಲಾದ ಸ್ಥಳಗಳ ಜನರಿಗೆ ಒಂದಿಷ್ಟು ಸಹಾಯ ಮಾಡಿ, ಅವರನ್ನು ಒಲಿಸಿಕೊಂಡಿದ್ದ. ಹೀಗಾಗಿ ಅವನನ್ನು ಹಿಡಿಯುವುದು ಕಷ್ಟವಿತ್ತು. ಕರ್ನಾಟಕದಲ್ಲಿ ಪೊಲೀಸರಿಂದ ತನಿಖೆ ವೇಗ ಹೆಚ್ಚಾದರೆ ತಮಿಳುನಾಡಿಗೆ ಹೋಗುತ್ತಿದ್ದ, ತಮಿಳುನಾಡಿನಲ್ಲಿ ತನಿಖೆ ವೇಗ ಹೆಚ್ಚಾದರೆ ಕರ್ನಾಟಕಕ್ಕೆ ಬರುತ್ತಿದ್ದ. ಈ ಸಂದರ್ಭದಲ್ಲಿ ಡಾ.ಶುಭಾ, ವೀರಪ್ಪನ್ ಸಂಪರ್ಕ ಸಾಧಿಸಿ ರಾಜಕುಮಾರ್ ಅವರನ್ನು ಬಿಡುಗಡೆಗೊಳಿಸಲು ಒಪ್ಪಿಸಿದ್ದರು. ಅವರು ವೈದ್ಯರಾಗಿ ಆತನಿಗೆ ಚಿಕಿತ್ಸೆ ಕೊಟ್ಟಿರಬಹುದು. ನಿರ್ದಿಷ್ಟ ಸ್ಥಳವೊಂದರಲ್ಲಿ ರಾಜಕುಮಾರ್ ಅವರನ್ನು ವೀರಪ್ಪನ್ ನಮಗೆ ಒಪ್ಪಿಸುವುದಾಗಿ ಕೊಳತ್ತೂರು ಮಣಿ ನನಗೆ ಸಂದೇಶ ಕಳುಹಿಸಿದರು. ನಾವು ಅಲ್ಲಿಗೆ ಹೆಲಿಕಾಪ್ಟರ್ ಕಳುಹಿಸಿದೆವು. ರಾಜಕುಮಾರ್ ಬಂದರು.

ರಾಜಕುಮಾರ್ ಅವರನ್ನು ಅಪಹರಣ ಮಾಡಿದ ನೂರಾ ಎಂಟು ದಿನಗಳ ಕಾಲ ನಾನು ಸರಿಯಾಗಿ ನಿದ್ದೆ ಮಾಡಿರಲಿಲ್ಲ. ರಾಜಕುಮಾರ್ ಅವರನ್ನು ವೀರಪ್ಪನ್ ಬಿಡುಗಡೆ ಮಾಡಿದಾಗ ದೊಡ್ಡ ನಿಟ್ಟುಸಿರು ಬಿಟ್ಟೆ.

-ಎಸ್. ಎಂ. ಕೃಷ್ಣ
(ಸ್ಮೃತಿ ವಾಹಿನಿ ಆತ್ಮಕಥನದ ಒಂದು ಭಾಗ)

ನಾಡಿನ, ರಾಷ್ಟ್ರದ ಸಾರ್ವಜನಿಕ ಆಡಳಿತ ಕ್ಷೇತ್ರದ ಅನನ್ಯ ಸಾಧಕರಾಗಿದ್ದ ಪದ್ಮ ವಿಭೂಷಣ ಎಸ್. ಎಂ.ಕೃಷ್ಣ ಅವರಿಗೆ ನುಡಿ ನಮನ

ನಾಡು ಕಂಡ ದಕ್ಷ ಮುಖ್ಯಮಂತ್ರಿ

ಸನ್ಮಾನ್ಯ ಶ್ರೀ ಎಸ್.ಎಂ.ಕೃಷ್ಣ ಅವರು ನಮ್ಮ ನಾಡು ಕಂಡ ಒಬ್ಬ ಅತ್ಯಂತ ಸುಸಂಸ್ಕೃತ ಹಾಗೂ ದಕ್ಷ ಮುಖ್ಯ ಮಂತ್ರಿಗಳಾಗಿದ್ದರು. ಅವರು ವಿಧಾನಸಭೆಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಒಂದು ಸಂಸ್ಕೃತಿಗೆ ಸಂಬಂಧಿಸಿದ ಸಮಾರಂಭದಲ್ಲಿ ನನ್ನ ಭಾಷಣ ಕೇಳಿ ಮರು ದಿವಸ ಅವರ ನಿವಾಸಕ್ಕೆ ಆಹ್ವಾನಿಸಿ ಗೌರವಿಸಿದ್ದರು. ಅನಂತರ ಅನೇಕ ಸಮಾರಂಭಗಳಲ್ಲಿ ಅವರೊಂದಿಗೆ ನಾನು ವೇದಿಕೆ ಹಂಚಿಕೊಂಡಿದ್ದೆ. ನಾನು ಕನ್ನಡ ಸಂಸ್ಕೃತಿ ಇಲಾಖೆಯಲ್ಲಿದ್ದಾಗ ಬಸವ ಜಯಂತಿಯನ್ನು ಸರಕಾರವೇ ಆಚರಿಸುವ ಆದೇಶ ಹೊರಡಿಸಲು ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಅವರನ್ನು ಒಪ್ಪಿಸಲು ಅಗತ್ಯವಾದ ಮಾಹಿತಿ ಒದಗಿಸಿದ್ದೆ. ನನ್ನ ಮಾತುಗಳನ್ನು ತುಂಬಾ ಸಹನೆಯಿಂದ ಕೇಳಿ ಈ ಬಗ್ಗೆ ಸಮ್ಮತಿ ನೀಡಿ ಆದೇಶ ಹೊರಡುವಂತೆ ಮಾಡಿದ ಸಹೃದಯಿ ಅವರು. ಕುವೆಂಪು ಅವರ ರಾಮಾಯಣ ದರ್ಶನ ಕೃತಿಯ ಹಿಂದಿ ಅವತರಣಿಕೆಯನ್ನು ಆಗಿನ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರು ದೆಹಲಿಯ ಅವರ ನಿವಾಸ ಪಂಚವಟಿಯಲ್ಲಿ ಬಿಡುಗಡೆ ಮಾಡಿದಾಗ ಶ್ರೀ ಕೃಷ್ಣಾ ಜಿ ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೇದಾರ್ ಅವರು ಇಲಾಖೆ ಕಾರ್ಯದರ್ಶಿ ಆಗಿದ್ದರು. ಅನಂತರ ದೆಹಲಿಯ ಪಾರ್ಲಿಮೆಂಟ್ ಆವರಣದಲ್ಲಿ ಬಸವೇಶ್ವರ ಅವರ ಪುತ್ಥಳಿ ಅನಾವರಣವನ್ನು ಅಂದಿನ ರಾಷ್ಟ್ರ ಪತಿ ಶ್ರೀ ಕಲಾಂ ಜಿ ಅವರು ನೆರವೇರಿಸಿದಾಗ ಶ್ರೀ ಕೃಷ್ಣ ಅವರು ಮುಖ್ಯಮಂತ್ರಿಗಳಾಗಿ ಪಾಲ್ಗೊಂಡಿದ್ದರು. ಅವರ ಆಹ್ವಾನದ ಮೇರೆಗೆ ಅಂದಿನ ಪ್ರಧಾನ ಮಂತ್ರಿ ವಾಜಪೇಯಿ, ಅದ್ವಾನಿ, ಸೋನಿಯಾ ಗಾಂಧಿ, ಮನ ಮೋಹನ್ ಸಿಂಗ್ ಆಗಮಿಸಿದ್ದರು. ಸಂಸ್ಕೃತಿ ಇಲಾಖೆಯಿಂದ ಏರ್ಪಡಿಸಿದ್ದ ಈ ಸಮಾರಂಭದಲ್ಲಿ ಬಸವಣ್ಣ ನವರ ಕುರಿತಾದ ಒಂದು ಚಿತ್ರ ಪ್ರದರ್ಶನ ವನ್ನು ನಾನು ಹೆಚ್ಚು ಆಸಕ್ತಿಯಿಂದ ಏರ್ಪಡಿಸಿದ್ದೆ. ಆಗ ಬಿಜಾಪುರ ಜಿಲ್ಲಾಧಿಕಾರಿ ಧನಂಜಯ ಅವರು ಬಸವಣ್ಣನವರ ಈ ಕುರಿತಾದ ಚಿತ್ರಗಳನ್ನು ನಮಗೆ ಒದಗಿಸಲು ಸಹಾಯ ಮಾಡಿದ್ದರು. ಆಗ ಪಾರ್ಲಿಮೆಂಟ್ ಅವರಣಕ್ಕೆ ಆ ಚಿತ್ರಗಳನ್ನು ಕೊಂಡೊಯ್ಯಲು ಹರ ಸಾಹಸ ಪಡಬೇಕಾಯಿತು. ಆ ಚಿತ್ರ ಪ್ರದರ್ಶನವನ್ನು ಅಂದಿನ ರಾಷ್ಟ್ರ ಪತಿಗಳು ಸೇರಿದಂತೆ ಎಲ್ಲಾ

ಹಿರಿಯ ಗಣ್ಯರು ವೀಕ್ಷಿಸಿದ ಸಂದರ್ಭದಲ್ಲಿ ಬಸವಣ್ಣ ನವರ ಒಂದೊಂದು ಚಿತ್ರದ ಬಗ್ಗೆಯೂ ನಾನು ನೀಡುತ್ತಿದ್ದ ವಿವರಣೆಯನ್ನು ಅಂದಿನ ರಾಷ್ಟ್ರ ಪತಿಗಳಾದ ಅಬ್ದುಲ್ ಕಲಾಂ ಜಿ ಸೇರಿದಂತೆ ಎಲ್ಲರೂ ಬಹಳ ಆಸಕ್ತಿಯಿಂದ ಆಲಿಸುತ್ತಿದ್ದರು. ನನ್ನ ವಿವರಣೆ ಬಗ್ಗೆ ಮಾನ್ಯ ಕೃಷ್ಣ ಅವರು ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ನಾನು ಅಧ್ಯಕ್ಷನಾಗಿರುವ ಬಸವ ವೇದಿಕೆ ಸಮಾರಂಭಕ್ಕೆ ಮೂರು ವರ್ಷ ಸತತವಾಗಿ ಮುಖ್ಯ ಮಂತ್ರಿಗಳಾಗಿ ಅವರು ಆಗಮಿಸಿ ಶ್ರೀ ಜವರೇಗೌಡ ಅವರಿಗೆ 2000 ನೇ ಸಾಲಿನ ಬಸವಶ್ರೀ ಪ್ರಶಸ್ತಿ, 2001ನೇ ಸಾಲಿನ ಬಸವಶ್ರೀ ಪ್ರಶಸ್ತಿಯನ್ನು ಡಾ. ಎಚ್. ನರಸಿಂಹಯ್ಯ ಅವರಿಗೆ 2002 ನೇ ಸಾಲಿನ ಬಸವಶ್ರೀ ಪ್ರಶಸ್ತಿಯನ್ನು ಭಾರತ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಗಳಾಗಿದ್ದ ಡಾ. ಶಿವರಾಜ ಪಾಟೀಲ್ ಅವರಿಗೆ ಅವರು ಪ್ರದಾನ ಮಾಡಿ ತುಂಬಾ ಮೌಲಿಕ ಮಾತುಗಳನ್ನು ಆಡಿದ್ದರು. ಅವರ ಭಾಷಣಗಳು ತುಂಬಾ ಪ್ರಭುದ್ಧವಾಗಿರುತ್ತಿತ್ತು. ತುಂಬಾ ಆಕರ್ಷಕ ವಾಗಿರುತ್ತಿತ್ತು.ಅವರು ಕನ್ನಡ ಸಾಹಿತ್ಯ ಸಂಸ್ಕೃತಿ ಸಂಗೀತ ನೃತ್ಯಗಳಲ್ಲಿ ಅಪಾರ ಆಸಕ್ತಿ ಹೊಂದಿದ್ದರು. ಅನೇಕ ಹಾಸ್ಯ ಮೇಳಗಳಲ್ಲಿ ತುಂಬಾ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಕೇಂದ್ರ ಸರಕಾರ ನೀಡುವ ಪ್ರತಿಷ್ಠಿತ ಪದ್ಮವಿಭೂಷಣ ಗೌರವಕ್ಕೆ ಪಾತ್ರರಾಗಿದ್ದ ಅವರು ಕರ್ನಾಟಕದ ಸಮಗ್ರ ಪ್ರಗತಿಗೆ ನೀಡಿದ ಕೊಡುಗೆ ಅಪಾರ. ವಿಶೇಷವಾಗಿ ಬೆಂಗಳೂರನ್ನು ಸಿಲಿಕಾನ್ ವ್ಯಾಲಿ ಆಫ್ ಇಂಡಿಯಾವ ನ್ನಾಗಿ ಮಾಡುವ ಮೂಲಕ ವಿಶ್ವದ ತಂತ್ರಜ್ಞಾನ ಭೂಪಟದಲ್ಲಿ ಕರ್ನಾಟಕಕ್ಕೆ ಒಂದು ವಿಶಿಷ್ಟ ಸ್ಥಾನವನ್ನು ದೊರಕಿಸಿಕೊಟ್ಟ ಧೀಮಂತ ವ್ಯಕ್ತಿಯಾಗಿದ್ದರು. ಡಾ. ರಾಜಕುಮಾರ್ ಅವರನ್ನು ವೀರಪ್ಪನ್ ಅಪಹರಣ ಮಾಡಿದ್ದ ಸಂದರ್ಭ, ಕಾವೇರಿ ಜಲ ವಿವಾದದ ಸಂದರ್ಭಗಳಲ್ಲಿ ಅವರು ತೋರಿದ ಆಡಳಿತ ಪ್ರೌಢಿಮೆ ಅಸದೃಶ್ಯವಾದದ್ದು. ಶ್ರೀಎಸ್.ಎಂ.ಕೃಷ್ಣ ಅವರು ಅಕ್ಷರ ದಾಸೋಹ ಎಂಬ ಶಾಲಾ ಮಕ್ಕಳಿಗೆ ಮಧ್ಯಾಹ್ನ ಊಟ ಕೊಡುವ ಒಂದು ಮಾನವೀಯ ಯೋಜನೆ ಅಲ್ಲದೆ ಸಹಕಾರಿ ಕ್ಷೇತ್ರದ ರೈತ ಸದಸ್ಯರಿಗೆ ವೈದ್ಯ ಕೀಯ ಸೌಲಭ್ಯ ಒದಗಿಸುವ ಯಶಸ್ವಿನಿ ಎಂಬ ಯೋಜನೆ ಇಂತಹ ಅನೇಕ ಯೋಜನೆಗಳ ಹರಿಕಾರರಾಗಿದ್ದರು. ನಾಡಿನ ಮುಖ್ಯಮಂತ್ರಿಗಳಾಗಿ, ರಾಜ್ಯಪಾಲರಾಗಿ, ಕೇಂದ್ರ ವಿದೇಶಾಂಗ ಮಂತ್ರಿಗಳಾಗಿ ಅವರು ಸಲ್ಲಿಸಿದ ಸೇವೆ ಅನನ್ಯ. ಅವರ ವೇಷ ಭೂಷಣ ದಲ್ಲಿ ವಿದೇಶದ ಛಾಯೆ ಇದ್ದಿದ್ದರು ಅವರ ಹೃದಯದಲ್ಲಿ ಭಾರತೀಯತೆ ಮತ್ತು ಕನ್ನಡ ಪ್ರೀತಿ ಸದಾ ಜಾಗೃತವಾಗಿರುತ್ತಿತ್ತು. ಕಳೆದ ಹಲವು ತಿಂಗಳುಗಳ ಹಿಂದೆ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ಅವರು ಮತ್ತು ಶ್ರೀ ವಾಜಪೇಯಿ ಅವರಿದ್ದ ಒಂದು ಅಪರೂಪದ ಚಿತ್ರವನ್ನು ಹಾಗೂ ನನ್ನ ವಚನ ಸಾಹಿತ್ಯಕ್ಕೆ ಸಂಬಂಧಿಸಿದ್ದ ಒಂದು ಕೃತಿಯನ್ನು ನೀಡಿದ್ದೆ. ಅದನ್ನು ಅತ್ಯಂತ ಪ್ರೀತಿಯಿಂದ ಸ್ವೀಕರಿಸಿ ಬಹಳ ಹೊತ್ತು ವಚನ ಸಾಹಿತ್ಯದ ಬಗ್ಗೆ ನನ್ನೊಂದಿಗೆ ಮಾತನಾಡಿದ್ದರು.

ಇಂತಹ ಒಬ್ಬ ರಾಷ್ಟ್ರ ಭಕ್ತ, ಕನ್ನಡ ಪ್ರೇಮಿ, ದಕ್ಷ ಆಡಳಿತಗಾರ, ಪ್ರಭುದ್ದ ಚಿಂತಕ, ಕನಸುಗಾರ, ಪದ್ಮ ವಿಭೂಷಣ ಶ್ರೀ ಎಸ್. ಎಂ.ಕೃಷ್ಣ ಅವರ ಅಗಲಿಕೆಯಿಂದ ನಮ್ಮ ನಾಡಿನ ಒಂದು ವರ್ಣರಂಜಿತ ರಾಜಕೀಯ ಅಧ್ಯಾಯ ಕೊನೆಗೊಂಡಂತಾಗಿದೆ.

ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ.

-ಡಾ.ಸಿ.ಸೋಮಶೇಖರ,
ಅಧ್ಯಕ್ಷರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಬೆಂಗಳೂರು

ಕಾಂಗ್ರೆಸ್ ಸೇರಲು ಆಹ್ವಾನ

ಸಿಎಂ ಸಿದ್ದರಾಮಯ್ಯನವರು ಜೆಡಿಎಸ್‌ನಿಂದ ದೂರವಾದ ನಂತರ ಕಾಂಗ್ರೆಸ್ ಸೇರುವಂತೆ ಬೆಂಬಲಿಗರ ಒತ್ತಾಯದ ಮೇರೆಗೆ ಮುಂಬೈಗೆ ತೆರಳಿ ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದ ಎಸ್.ಎಂ.ಕೃಷ್ಣ ಅವರನ್ನು ಭೇಟಿಯಾದಾಗ ಪಕ್ಷ ಸೇರುವಂತೆ ಪ್ರೋತ್ಸಾಹಿಸಿದರು. ಸ್ವತಃ ಸಿಎಂ ಈ ಪ್ರಸಂಗವನ್ನು ಮಂಗಳವಾರ ವಿಧಾನಸಭೆಯಲ್ಲಿ ನೆನಪಿಸಿಕೊಂಡು ಹಿರಿಯ ಮುತ್ಸದ್ದಿಗೆ ಗೌರವ ಸಮರ್ಪಿಸಿದರು.

2023

ಮಾರ್ಚ್‌ನಲ್ಲಿ ಸಾರ್ವಜನಿಕ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿದ ಮೈಸೂರು ವಿಶ್ವವಿದ್ಯಾಲಯ ಕೃಷ್ಣ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿ ಗೌರವಿಸಿತು.

ಕೃಷ್ಣ ನಮನ



ಮಂಡ್ಯ ಸಾಹಿತ್ಯ ಸಮ್ಮೇಳನಕ್ಕೆ ಶುಭ ಹಾರೈಸಿದ್ದ ಎಸ್‌ಎಂ ಕೃಷ್ಣ

ಕೃಷ್ಣ ಕೊನೇ ಸಂದೇಶ ವೈರಲ್

ಸರಳ, ಸಜ್ಜನಿಕೆಯಿಂದಲೇ ಜನಮನ ಗೆದ್ದ ನಾಯಕರಾಗಿದ್ದ ಎಸ್ ಎಂ ಕೃಷ್ಣ ತಮ್ಮ ಅನಾರೋಗ್ಯದ ನಡುವೆಯೂ ಮಂಡ್ಯದಲ್ಲಿ ಏರ್ಪಟ್ಟಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಶುಭ ಕೋರಿ ಬರೆದ ಪತ್ರ ಎಲ್ಲರ ಗಮನ ಸೆಳೆಯುತ್ತಿದೆ. ಪತ್ರದ ಪೂರ್ಣಪಾಠ ಇಲ್ಲಿದೆ.

ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನನ್ನ ಶುಭಾಶಯಗಳು, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಫಲವಾಗಿ ರೂಪುಗೊಂಡ ನಾಡಿನಲ್ಲಿ ಅತಿ ಹೆಚ್ಚು ಕನ್ನಡ ಮಾತನಾಡುವ ಭಾಷಿಕರು ಇರುವ ಜಿಲ್ಲೆ. ಇಂತಹ ಐತಿಹ್ಯವುಳ್ಳ ನಮ್ಮ ಮಂಡ್ಯ ಜಿಲ್ಲೆಯಲ್ಲಿ 3ನೇ ಬಾರಿಗೆ ಆಯೋಜನೆಗೊಂಡಿರುವ ಕನ್ನಡದ ಸಿರಿಹಬ್ಬವು ಯಶಸ್ವಿಯಾಗಿ ಜರುಗಲೆಂದು ಶುಭ ಹಾರೈಸುತ್ತೇನೆ.

ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ನಡದ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಲು ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರತಿಷ್ಠಾಪಿಸಿದರು. ಅಂದಿನಿಂದ ಕನ್ನಡದ ನುಡಿಹಬ್ಬ ಆಳುವ ಸರ್ಕಾರಗಳ ನೇತೃತ್ವದಲ್ಲಿ ವಿಜೃಂಭಣೆಯಿಂದ ಜರುಗುತ್ತಾ ಬಂದಿದೆ. ಕನ್ನಡ ಸಾರಸ್ವತಾ ಲೋಕದ ಹಲವು ಹಿರಿಯ ಸಾಹಿತಿಗಳು ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡದ ತೇರನ್ನು ಎಳೆಯುವುದರ ಜೊತೆಗೆ ಕನ್ನಡ ಭಾಷೆಯನ್ನು ಪ್ರಚುರ ಪಡಿಸುತ್ತ ಕನ್ನಡದ ಉಳಿವಿಗಾಗಿ ಹಲವು ಸಲಗೆ ಒತ್ತಾಸಿಗಳನ್ನು ಸರ್ಕಾರಗಳಿಗೆ ನೀಡುತ್ತಾ ಬಂದಿದ್ದಾರೆ.

ಸಾಹಿತ್ಯ ಸಮ್ಮೇಳನಗಳು ಕೇವಲ ಜನಜಾತ್ರೆಗಳಾಗದೆ ಕನ್ನಡದ ಅಸ್ಥಿತೆ ಅಸ್ಮಿತೆಯನ್ನು ಸಾರುವ ಹಬ್ಬವಾಗಿದ್ದು ಇದರಲ್ಲಿ ಕನ್ನಡದ ಹಲವು ವಿದ್ವಾಂಸರ ಲೇಖನಗಳು, ಪುಸ್ತಕಗಳು ಹಾಗೂ ಬರವಣಿಗೆಗಳು ಹೊರಬಂದು ಹಲವು ಓದುಗರಿಗೆ ಸವಿಯೂಟವನ್ನು ಊಣಬಡಿಸಿದೆ. ತಂತ್ರಜ್ಞಾನ ಬೆಳೆದಂತೆ ಕನ್ನಡದ ಆವಿಷ್ಕಾರಗಳು ಪರಿಷ್ಕೃತಗೊಂಡು ರಾಜ್ಯದ ಎಲ್ಲೆಯನ್ನು ಮೀರಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಬಳಕೆ ಎದ್ದು ಕಾಣುತ್ತಿದೆ.

2023ರ ಜನವರಿ 7 ರಂದು ರಾಜಕೀಯ ನಿವೃತ್ತಿ ಘೋಷಿಸಿದ್ದ ಕೃಷ್ಣ ಸಂಗೀತ ಹಾಗೂ ಇತರ ಹವ್ಯಾಸಗಳತ್ತ ಗಮನ ಹರಿಸಿದ್ದರು...

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಿಸುವಲ್ಲಿ ಹಲವು ಮಹನೀಯರು ಶ್ರಮಿಸಿದ್ದು ಅದರ ಫಲವಾಗಿ ಅಂದಿನ ಪ್ರಧಾನಮಂತ್ರಿಗಳಾಗಿದ್ದ ಮನಮೋಹನ್ ಸಿಂಗ್‌ರವರ ಅಧಿಕಾರಾವಧಿಯಲ್ಲಿ ಅದಕ್ಕೆ ಅಧಿಕೃತ ಮುದ್ರೆಯನ್ನು ಒತ್ತುವುದರ ಮೂಲಕ ಕನ್ನಡಕ್ಕೆ ಅಧಿಕೃತ ಶಾಸ್ತ್ರೀಯ ಸ್ಥಾನಮಾನ ಕಲ್ಪಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ.

ಮಂಡ್ಯ ಆತಿಥ್ಯಕ್ಕೆ ಹೆಸರಾದ ಜಿಲ್ಲೆ. ಕನ್ನಡ ಭಾಷೆಯನ್ನು ಗೌರವಿಸುವಲ್ಲಿ ಜಿಲ್ಲೆಯ ಜನ ಸಿದ್ಧಹಸ್ತರು. ಈ ಹಿಂದೆ ನಡೆದ ಸಾಹಿತ್ಯ ಸಮ್ಮೇಳನಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಕನ್ನಡದ ಹಬ್ಬವನ್ನು ತಮ್ಮ ಮನೆಯ ಹಬ್ಬವಾಗಿ ಆಚರಿಸಿದ ಕೀರ್ತಿ ಮಂಡ್ಯ ಜಿಲ್ಲೆಯ ಜನರಿಗೆ ಸಲ್ಲುತ್ತದೆ. ಈ ಹಿಂದಿನ ಎರಡು ಸಮ್ಮೇಳನಗಳಲ್ಲಿ ಭಾಗವಹಿಸಿದ್ದ ನಾನು ಸದರಿ ಸಮ್ಮೇಳನಗಳಲ್ಲಿ ಭಾಗವಹಿಸಿದ್ದ ಜನರ ಉತ್ಸುಕತೆ ಕಂಡು ಅತ್ಯಂತ ಮಳಕಿತನಾಗಿದ್ದೆ. ಬಾರಿಗೆ ಮಂಡ್ಯದಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಹಿರಿಯ ಸಾಹಿತಿಗಳಾಗಿದ್ದ ಶ್ರೀಮತಿ ಜಯದೇವಿ ತಾಯಿ ಲಿಗಾಡೆಯವರು ಪ್ರಥಮ ಮಹಿಳಾ ಸಮ್ಮೇಳನಾಧ್ಯಕ್ಷರಾಗಿದ್ದು ಅಂದಿನ ಸಮ್ಮೇಳನ ಐತಿಹಾಸಿಕ ದಾಖಲೆಯಾಗಿದೆ.

ಅದೇ ರೀತಿ 1994 ರಲ್ಲಿ ನಾನು ರಾಜ್ಯದ ಉಪ ಮುಖ್ಯಮಂತ್ರಿಯಾಗಿದ್ದಾಗ ಜಿ. ಮಾದೇಗೌಡರ ನೇತೃತ್ವದಲ್ಲಿ ನಡೆದ ಸಮ್ಮೇಳನ ಅವಿಸ್ಮರಣೀಯ. ಮಾದೇಗೌಡರು ಎಲ್ಲರನ್ನೂ ಒಗ್ಗೂಡಿಸಿ ಎಲ್ಲರ ಸಹಕಾರದಿಂದ ಸಮ್ಮೇಳನ ಆಯೋಜಿಸಿದ್ದು ನನ್ನ ಸ್ಮೃತಿಪಟಲದಲ್ಲಿದೆ. ಜಗದ್ಗುರು ಬಾಲಗಂಗಾಧರನಾಥ ಮಹಾಸ್ವಾಮಿಗಳ ಶ್ರೀರಕ್ಷೆಯಲ್ಲಿ ಅಂದು ನಡೆದ ಸಮ್ಮೇಳನದ ರೀತಿಯಲ್ಲೇ ಪ್ರಸ್ತುತ ಆಯೋಜನೆಗೊಂಡಿರುವ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಲಿ. 1994ರ ಸಾಹಿತ್ಯ ಸಮ್ಮೇಳನದ ಅವಧಿಯಲ್ಲಿ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದ ಹಿರಿಯ ಸಾಹಿತಿ ಗೊ. ರು. ಚನ್ನಬಸಪ್ಪನವರು ಪ್ರಸ್ತುತ ಸಮ್ಮೇಳನಾಧ್ಯಕ್ಷರಾಗಿ ನೇಮಕಗೊಂಡಿರುವುದು ಸಂತಸ ತಂದಿದ್ದು ಅವರಿಗೆ ನನ್ನ ಶುಭ ಹಾರೈಕೆ.

ಆ ಎರಡು ತಪ್ಪು ಮಾಡಬಾರದಿತ್ತು

ಕರ್ನಾಟಕದಲ್ಲಿ ಮುಖ್ಯಮಂತ್ರಿ ಸೇರಿದಂತೆ ವಿವಿಧ ಹುದ್ದೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಎಸ್‌ಎಂ ಕೃಷ್ಣ 50 ಕ್ಕೂ ಹೆಚ್ಚು ವರ್ಷಗಳ ಕಾಲ ವಿವಾದರಹಿತ ರಾಜಕಾರಣ ಮಾಡಿದವರು. ಸಿಎಂ ಆಗಿದ್ದಾಗ ಅಧಿಕಾರಾವಧಿಯಲ್ಲಿ ಐಟಿ ಕ್ಷೇತ್ರಕ್ಕೆ ನೀಡಿದ ಉತ್ತೇಜನವಾಗಿ ಬೆಂಗಳೂರನ್ನು ಜಾಗತಿಕ ಭೂಪಟದಲ್ಲಿ ಬೆಳಗಿಸಿದ್ದಕ್ಕಾಗಿ ಅವರು ಹೆಚ್ಚು ಪ್ರಸಿದ್ಧಿ ಪಡೆದರು. ಇದರ ಪರಿಣಾಮವಾಗಿ ಬೆಂಗಳೂರು ನಗರವು ಭಾರತದ ಸಿಲಿಕಾನ್ ವ್ಯಾಲಿ' ಆಗಿ ಬೆಳೆಯುತ್ತಿದೆ. ಜಾಗತಿಕ ಸಾಫ್ಟ್‌ವೇರ್ ನೆಲೆಯಾಗಿ ಪ್ರಸಿದ್ಧಿ ಪಡೆದಿದೆ. ಹತ್ತಾರು ವಿದೇಶಗಳು ಉದ್ಯಾನನಗರಿಯಲ್ಲಿ ತಮ್ಮ ಉದ್ಯಮಗಳನ್ನು ಆರಂಭಿಸುವ ಮೂಲಕ ಐಟಿ ನಗರಿಯಾಗಿ ಮಾಡುವಲ್ಲಿ ಎಸ್.ಎಂ.ಕೃಷ್ಣ ಅವರ ಕೊಡುಗೆ ಮಹತ್ವದ್ದು.

ಐಟಿ ಬೆಳವಣಿಗೆಗೆ ಅವರ ಬೆಂಬಲ ಮತ್ತು ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಮಾದರಿಯ ಪ್ರಾಮುಖ್ಯದ ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಲ್ಲಿ ರಾಜಧಾನಿಯನ್ನು ಸಿಂಗಾಪುರ ಮಾಡುವ ಕನಸನ್ನು ಅವರು ಹೊತ್ತಿದ್ದರು.

ಕೈಕೊಟ್ಟ ವಿಶ್ವಾಸ: ಬೆಂಗಳೂರು ಸೇರಿದಂತೆ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ ಕೃಷ್ಣ, 2004ರಲ್ಲಿ ಅವಧಿಗೆ ಮೊದಲೇ ರಾಜ್ಯದಲ್ಲಿ ಚುನಾವಣೆ ಘೋಷಿಸಿದರು. ತಾವು ಮಾಡಿದ ಉತ್ತಮ ಕಾರ್ಯಗಳಿಗೆ ಜನತೆ ಮತ್ತೊಮ್ಮೆ ಆಶೀರ್ವದಿಸುವ ವಿಶ್ವಾಸ ಅವರಿಗಿತ್ತು. ಅದೇ ಧೈರ್ಯದಲ್ಲಿ ಮೊದಲೇ ಚುನಾವಣೆ ಎದುರಿಸಲು ಮುಂದಾದರು. ಆದರೆ ಚುನಾವಣೆಯಲ್ಲಿ ಕಾಂಗ್ರೆಸ್ ಸೋತ ಕಾರಣ ಪೂರ್ಣ ಬಹುಮತದಿಂದ ಮತ್ತೆ ಅಧಿಕಾರಕ್ಕೆ ತರುವ ಅವರ ಪ್ರಯತ್ನ ಕೈಗೂಡಲಿಲ್ಲ. ತಮ್ಮ ಕ್ಷೇತ್ರ ಮದ್ದೂರು ಬದಲಾಗಿ ಕೃಷ್ಣ ಚಾಮರಾಜಪೇಟೆಯಿಂದ ಸ್ಪರ್ಧಿಸಿ ಗೆಲುವು ಸಾಧಿಸಿದರು. ಆದರೆ ಯಾವುದೇ ಪಕ್ಷಕ್ಕೆ ಬಹುಮತ ಬಾರದ ಕಾರಣ ಜೆಡಿಎಸ್ ಜತೆ ಕಾಂಗ್ರೆಸ್ ಸಮ್ಮಿಶ್ರ ಸರಕಾರ ರಚಿಸಿತು. ಧರ್ಮಸಿಂಗ್ ಮುಖ್ಯಮಂತ್ರಿ ಯಾದರು. ಈಗಿನ ಸಿಎಂ ಸಿದ್ದರಾಮಯ್ಯ ಆಗ ಜೆಡಿಎಸ್ ನಲ್ಲಿದ್ದು, ಡಿಸಿಎಂ ಸ್ಥಾನ ಪಡೆದಿದ್ದರು. ಇದಾದ ಕೆಲ ಸಮಯದಲ್ಲಿ ಎಸ್.ಎಂ. ಕೃಷ್ಣ ಶಾಸಕ ಸ್ಥಾನ ತೊರೆದು ಮಹಾರಾಷ್ಟ್ರ ರಾಜ್ಯಪಾಲರಾಗಿ ಕರ್ನಾಟಕವನ್ನು ತೊರೆದರು.

ರಾಜ್ಯ ಬಿಟ್ಟಿದ್ದೂ ತಪ್ಪು: ಎರಡನೆಯ ಪ್ರಮಾದವೆಂದರೆ, ಕಾಂಗ್ರೆಸ್ ತಮಗೆಗೆ ನೀಡಿದ ಮಹಾರಾಷ್ಟ್ರ ರಾಜ್ಯಪಾಲ ಹುದ್ದೆಯನ್ನು ಸ್ವೀಕರಿಸಿದ್ದು. ಅದರ ಬದಲಿಗೆವಿರೋಧ ಪಕ್ಷದ ನಾಯಕನಾಗಿ ತಾವು ಕರ್ನಾಟಕದಲ್ಲಿಯೇ ಮುಂದುವರಿಯಬೇಕಿತ್ತು. ಕೆಲ ಕಾಲ ರಾಜ್ಯ ರಾಜಕಾರಣದಲ್ಲಿ ಮುಂದುವರಿಯಬೇಕಿತ್ತು ಎಂದು ಕೃಷ್ಣ ತಿಳಿಸಿದ್ದರು.

ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದಾಗಲೆಲ್ಲಾ, ನಾನು ಸಿಎಂ ಆಗುತ್ತಿದ್ದೆ ಮತ್ತು ಜಾಗತಿಕ ಗುಣಮಟ್ಟವನ್ನು ಪೂರೈಸಲು ಬೆಂಗಳೂರಿನ ಮೂಲಸೌಕರ್ಯವನ್ನು ಸುಧಾರಿಸಲು ನನಗೆ ಅವಕಾಶವನ್ನು ನೀಡುತ್ತಿತ್ತು ಎಂದು ಕೃಷ್ಣ ಸ್ಮರಿಸಿಕೊಂಡಿದ್ದರು.

ಪ್ರಮಾದ: ಕೃಷ್ಣ ತಪ್ಪೊಪ್ಪಿಗೆ

ಇದೇ ವೇಳೆ ಇತ್ತೀಚೆಗೆ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಕೃಷ್ಣ, 2004ರಲ್ಲಿ ಅವಧಿಗೆ ಮೊದಲೇ ವಿಧಾನಸಭೆ ವಿಸರ್ಜಿಸಿದ ತಮ್ಮ ನಿರ್ಧಾರ ದೊಡ್ಡ ಪ್ರಮಾದವಾಗಿತ್ತು ಎಂಬುದನ್ನು ಒಪ್ಪಿಕೊಂಡಿದ್ದರು. ಐದು ವರ್ಷಗಳ ಅಧಿಕಾರಾವಧಿ ಪೂರ್ಣಗೊಳ್ಳುವ ಮೊದಲೇ ಚುನಾವಣೆಗೆ ಹೋಗಬಾರದಿತ್ತು ಎಂದು ಅವರು ತಮ್ಮ ಮನದಾಳದ ಮಾತುಗಳನ್ನು ಹೇಳಿದ್ದರು.

ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ಸಂದರ್ಭ...

ಕೃಷ್ಣರಿಗೆ ಕರ್ನಾಟಕ ರತ್ನ ನೀಡಿ

ದಿನೇಶ್ ಗೂಳಿಗೌಡ

ರಾಷ್ಟ್ರದ ಪ್ರಜಾಪ್ರಭುತ್ವದ ನಾಲ್ಕು ಸ್ತಂಬಗಳಾದ ವಿಧಾನಸಭೆ, ವಿಧಾನಪರಿಷತ್, ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರಾಗಿ ಕಳೆದ ಅರವತ್ತು ವರ್ಷಗಳ ಕಾಲ ನಾಡಿನ, ರಾಷ್ಟ್ರದ ಸೇವೆಗೈದ ಕೃಷ್ಣ ತಾವು ನಿರ್ವಹಿಸಿದ ಪ್ರತಿ ಹುದ್ದೆಯಲ್ಲೂ ಹೆಜ್ಜೆಗುರುತು ಮೂಡಿಸಿದವರು . ಅವರ ನಿಧನ ಎಲ್ಲರಿಗೂ ತೀವ್ರ ದುಃಖ ತಂದಿದೆ ಎಂದು ಶಾಸಕ ದಿನೇಶ್ ಗೂಳಿಗೌಡ ಸಂತಾಪ ವ್ಯಕ್ತಪಡಿಸಿದರು.

1999 ರಿಂದ 2004 ಕೃಷ್ಣ ಮುಖ್ಯಮಂತ್ರಿ ಯಾಗಿ ನಾಡಿಗೆ ಸಲ್ಲಿಸಿದ ಸೇವೆ ಅವಿಸ್ಮರಣೀಯ. ಅವರ ಕಾಲಘಟ್ಟದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು ಯೋಜನೆಗಳು ಇಂದಿಗೂ ಜಾರಿಯಲ್ಲಿದ್ದು ಅದು ಕೃಷ್ಣರವರ ದೂರದೃಷ್ಟಿಯ ಫಲವಾಗಿದೆ. ಸ್ತ್ರೀ ಶಕ್ತಿ, ಅಕ್ಷರ ದಾಸೋಹ, ರೈತರಿಗೆ ಪಹಣಿ ನೀಡುವ ಭೂಮಿ ಯೋಜನೆ, ಯಶಸ್ವಿನಿ ಯೋಜನೆ ಸಮಾಜದ ಸರ್ವ ಜನರನ್ನು ಸ್ಪರ್ಶಿಸಿ ಜನಮನ ಗೆದ್ದ ಯೋಜನೆಗಳಾಗಿದ್ದವು ಎಂದು ಹೇಳಿದರು. ಐಟಿ ಬಿಟಿ ಕ್ಷೇತ್ರಕ್ಕೆ ಅಗಾಧ ಬೆಂಬಲ ನೀಡಿ ಬೆಂಗಳೂರು ನಗರದ ಬೆಳವಣಿಗೆಗೆ ಹಾಕಿಕೊಟ್ಟ ಭದ್ರ ಬುನಾದಿಯಿಂದ ಜಾಗತಿಕ ಮಟ್ಟದಲ್ಲಿ ಬೆಂಗಳೂರು ಸಿಲಿಕ್ಯಾನಾ ವ್ಯಾಲಿ ಎಂದು ಹೆಸರು ಗಳಿಸಿ, ಲಕ್ಷಾಂತರ ಉದ್ಯೋಗ ಸೃಷ್ಟಿಸಿ ಹಲವು ಮೂಲಭೂತ ಸೌಕರ್ಯಗಳನ್ನು ನೀಡಿ ಕನ್ನಡ ನಾಡನ್ನು ವಿಶ್ವ ಭೂಪಟದಲಿ ಬೆಳಗಿಸಲು ಕೃಷ್ಣ ರವರ ಪಾತ್ರ ಅತ್ಯಂತ ಹಿರಿದಾದದ್ದು ಎಂದಿದ್ದಾರೆ. ಎಸ್. ಎಂ.ಕೃಷ್ಣ ಅವರು ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿದ್ದವರು. ತಾವು ಅಲಂಕರಿಸಿದ ಹುದ್ದೆಗಳಿಗೆ ಅವರು ನ್ಯಾಯ ಒದಗಿಸಿಕೊಟ್ಟ ಒಬ್ಬ ಶ್ರೇಷ್ಠ ರಾಜಕಾರಣಿ. ಅವರ ಸಾಧನೆಯನ್ನು ಪರಿಗಣಿಸಿ ಭಾರತ ಸರಕಾರವು ಈಚೆಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತ್ತು. ಈಗ ರಾಜ್ಯ ಸರಕಾರ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕು ಎಂಬುದು ನಮ್ಮೆಲ್ಲರ ಒತ್ತಾಸೆ. ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಕುಟುಂಬಕ್ಕೆ ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಸಂತಾಪ ಸೂಚಿಸಿದರು.

50ರ ದಶಕದಲ್ಲೇ ಶಾಸಕಾಂಗ ನ್ಯಾಯಾಂಗದ ಘರ್ಷಣೆ ಸ್ಮರಣೆ

ಕೆಂಗಲ್ ಜೈಲುವಾಸ ತಪ್ಪಿಸಿಕೊಂಡಿದ್ದು ಹೇಗೆ?

ಬೆಂಗಳೂರು: ಶಾಸಕಾಂಗ ಮತ್ತು ನ್ಯಾಯಾಂಗದ ನಡುವಣ ತಿಕ್ಕಾಟ ಹೊಸದೇನೂ ಅಲ್ಲ. ಎಸ್. ಎಂ. ಕೃಷ್ಣ ಅವರು ತಮ್ಮ ಆತ್ಮಚರಿತ್ರೆಯಲ್ಲಿ ಕೆಂಗಲ್ ಹನುಮಂತಯ್ಯ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಎದುರಿಸಿದ ಅಪರೂಪದ ಪ್ರಸಂಗವೊಂದನ್ನು ನೆನಪಿಸಿಕೊಂಡಿದ್ದು ಇಂದಿಗೂ ಪ್ರಸ್ತುತವಾಗಿ ಉಳಿದಿದೆ.

ಐವತ್ತರ ದಶಕದಲ್ಲಿ ಮೇದಪ್ಪ ಎಂಬವರು ಕರ್ನಾಟಕ ಉಚ್ಚನ್ಯಾಯಾಲಯದ ಮುಖ್ಯನ್ಯಾಯಮೂರ್ತಿಗಳಾಗಿದ್ದರು. ಹಠಮಾರಿಯಾಗಿದ್ದ ಅವರಿಗೆ ಮೊದಲಿನಿಂದಲೂ ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ ಬಗ್ಗೆ ಸದಭಿಪ್ರಾಯ ಇರಲಿಲ್ಲ. ಕೆಂಗಲ್ ಹನುಮಂತಯ್ಯನವರೂ ಹಠವಾದಿ. ಮುಖ್ಯ ನ್ಯಾಯಮೂರ್ತಿಗಳು ಅನೇಕ ವಿಚಾರದಲ್ಲಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದರು. ಸರಕಾರದ ಅನೇಕ ಆದೇಶಗಳಿಗೆ ತಡೆಯಾಜ್ಞೆ ಕೊಡುತ್ತಿದ್ದರು. ಅದಕ್ಕೆ ವಿರುದ್ಧವಾಗಿ ಮುಖ್ಯಮಂತ್ರಿಗಳು ಮುಖ್ಯ ನ್ಯಾಯಮೂರ್ತಿಗಳ ಸಲಹೆಗೆ ವಿರುದ್ಧವಾಗಿ ಮುನ್ಸಿಫ್ ಮ್ಯಾಜಿಸ್ಟ್ರೇಟರ್‌ಗಳನ್ನು ವರ್ಗ ಮಾಡುತ್ತಿದ್ದರು. ಯಾವು ದೋ ಒಂದು ಪ್ರಕರಣದಲ್ಲಿ ಮುಖ್ಯನ್ಯಾ ಯಮೂರ್ತಿ ಮೇದಪ್ಪ ಅವರು ಮುಖ್ಯಮಂತ್ರಿ ವಿರುದ್ಧ ನ್ಯಾಯಾಂಗ ನಿಂದನೆಯ ಕೇಸನ್ನು ದಾಖಲು ಮಾಡಿ ಆದೇಶ ನೀಡಿದರು.

ಕೆಂಗಲ್ ಹನುಮಂತಯ್ಯನವರು ತಮ್ಮ ಪರವಾಗಿ ವಾದ ಮಾಡಲು ಮದ್ರಾಸ್‌ನಲ್ಲಿ ಆ ಕಾಲದಲ್ಲಿ ಪ್ರಸಿದ್ಧರಾಗಿದ್ದ ಯತಿರಾಜು ಎಂಬ ವಕೀಲರನ್ನು ಆರಿಸಿಕೊಂಡರು. ನಾವೆಲ್ಲಾ ಆಸಕ್ತಿಯಿಂದ ಯತಿರಾಜು ರವರ ವಾದವನ್ನಾಲಿಸಲು ಕೋರ್ಟ್ ಹಾಲ್‌ಗೆ ಹೋಗುತ್ತಿದ್ದೆವು. ಯತಿರಾಜು ತುಂಬಾ ಚಾಣಾಕ್ಷ ವಕೀಲರು. ಮುಖ್ಯನ್ಯಾಯಮೂರ್ತಿಗಳು ಮುಖ್ಯಮಂತ್ರಿ ಹನುಮಂತಯ್ಯನವರ ಮೇಲಿದ್ದ ಕೋಪವನ್ನೆಲ್ಲಾ ಯತಿರಾಜು ಮೇಲೆ ತೀರಿಸಿಕೊಳ್ಳುತ್ತಿದ್ದರು. ಆದರೆ ಅದಕ್ಕೆ ಪ್ರತಿಯಾಗಿ ಯತಿರಾಜು ಸೌಮ್ಯವಾಗಿ, ''ಮೈ ಲಾರ್ಡ್' ನೀವು ದೇವರಂಥವರು. ನಿಮ್ಮ ಮೇಲೆ ನಾನು ಸವಾರಿ ಮಾಡಲು ಹೇಗೆ ಸಾಧ್ಯ ? ನಿಮ್ಮ ಆದೇಶವನ್ನು ನಾವು ಪಾಲಿಸಲಷ್ಟೇ ಸಾಧ್ಯ...'' ಎಂದು ಸೌಮ್ಯವಾಗಿ ಹೇಳುತ್ತಲೇ ಮುಖ್ಯನ್ಯಾಯಮೂರ್ತಿಗಳ ಕಾನೂನು ಜ್ಞಾನವನ್ನು ಬಯಲು ಮಾಡುತ್ತಿದ್ದರು. ವಿಚಾರಣೆ ಬಳಿಕ ಮುಖ್ಯನ್ಯಾಯಮೂರ್ತಿ ಮೇದಪ್ಪನವರು ಶುಕ್ರವಾರ ತಾವು ತೀರ್ಪು ಕೊಟ್ಟರೆ ಮುಖ್ಯಮಂತ್ರಿಗಳು ಸುಪ್ರೀಂ ಕೋರ್ಟಿಗೆ ಅಪೀಲ್ ಮಾಡಲು ಅವಕಾಶವಿಲ್ಲದೆ ಜೈಲಿಗೆ ಹೋಗಬಹುದು ಅಂತಹ ಪ್ಲಾನ್ ಮಾಡಿದರು. ಇದು ಕೆಂಗಲ್ ಹನುಮಂತಯ್ಯನವರಿಗೆ ಗೊತ್ತಾಯಿತು. ಆಗ ಹೈಕೋರ್ಟಿಗೆ ರಜೆ ಘೋಷಿಸುವ ಅಧಿಕಾರ ಆಗ ಸರಕಾರಕ್ಕಿತ್ತು. ಮುಖ್ಯನ್ಯಾಯಮೂರ್ತಿ ಮೇದಪ್ಪನವರು ತೀರ್ಪು ಕೊಡುವ ಶುಕ್ರವಾರದಂದು ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಹೈಕೋರ್ಟ್‌ಗೆ ರಜೆ ಘೋಷಣೆ ಮಾಡಿದರು. ಮುಖ್ಯನ್ಯಾಯಮೂರ್ತಿ ಮೇದಪ್ಪ ಶನಿವಾರ ನಿವೃತ್ತರಾದರು. ಆನಂತರ ಬಂದ ನ್ಯಾಯಮೂರ್ತಿಗಳು ಈ ಪ್ರಕರಣದ ಬಗ್ಗೆ ಆಸಕ್ತಿ ವಹಿಸದ ಕಾರಣ ಅದು ಸಹಜವಾಗಿ ಅಂತ್ಯ ಕಂಡಿತು. ವ್ಯಕ್ತಿಪ್ರತಿಷ್ಠೆ ಎಂಬುದು ಎಲ್ಲಾ ಕಾಲದಲ್ಲೂ ಇರುವಂತದ್ದೇ ಎನ್ನುವುದನ್ನು ಎಸ್.ಎಂ. ಕೃಷ್ಣ ಆತ್ಮಕಥನದಲ್ಲಿ ನೆನಪಿಸಿಕೊಂಡಿದ್ದಾರೆ.

ಕೃಷ್ಣ ಒಬ್ಬ ದಾರ್ಶನಿಕ ಮುಖ್ಯಮಂತ್ರಿ

ಎಸ್.ಎಂ ಕೃಷ್ಣ ಎಂದರೆ ಕರ್ನಾಟಕ ಕಂಡ ಒಬ್ಬ ದಾರ್ಶನಿಕ ಮುಖ್ಯಮಂತ್ರಿ ಎಂದೆನ್ನಬಹುದು. 1999 ರಿಂದ 2004 ರವರೆಗೆ ನಾಲ್ಕೂವರೆ ವರ್ಷಗಳ ಕಾಲ ಅವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿ ಸಲ್ಲಿಸಿದ ಸೇವೆ ನಾಡಿನ ಇತಿಹಾಸದಲ್ಲಿ ಬಹುಕಾಲ ಉಳಿಯುವಂತಹದ್ದು. ಇಂದು ಬೆಂಗಳೂರು ಹಾಗೂ ಕರ್ನಾಟಕ ವಿಶ್ವಾದ್ಯಂತ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರಗಳ ಕೇಂದ್ರವಾಗಿದೆ ಎಂದರೆ ಅದಕ್ಕೆ ಬಹಳಷ್ಟು ಕಾರಣರು ಎಸ್‌ಎಂ ಕೃಷ್ಣ.

ಈ ಐದು ವರ್ಷಗಳ ಕಾಲ ಅವರು ಐಟಿಬಿಟಿ ಕ್ಷೇತ್ರಕ್ಕೆ ಅನುಪಮವಾದ ಅನುಪಮವಾದ ಸೇವೆಯನ್ನು ಸಲ್ಲಿಸಿದ್ದು ಅಂದರೆ ಆ ಕ್ಷೇತ್ರದ ದಿಗ್ಗಜರನ್ನು ಅನುಭವಿಗಳನ್ನು ಜ್ಞಾನಿಗಳನ್ನು ಕರೆದು ಕಾಲಕಾಲಕ್ಕೆ ಅವರ ಸಲಹೆ -ಸೂಚನೆಗಳನ್ನು ಪಡೆಯುತ್ತಿದ್ದರು. ಇದಕ್ಕಾಗಿಯೇ ವಿಶೇಷವಾದ ಜ್ಞಾನದ ಕಾರ್ಯಪಡೆ ಹಾಗೂ ಕ್ರಿಯಾಶೀಲ ತಂಡಗಳನ್ನು ರಚಿಸಿದ್ದರು. ಇದರಲ್ಲಿ ವಿಷಯ ತಜ್ಞರು ಮತ್ತು ಜನಪ್ರತಿನಿಧಿಗಳಿಗೆ ಸಮಾನವಾದ ಅವಕಾಶಗಳನ್ನು ನೀಡಿ ಅಲ್ಲಿ ಬರುವ ಸಲಹೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನ ಗೊಳಿಸುತ್ತಿದ್ದರು. ಇದರಿಂದಾಗಿ ಬೆಂಗಳೂರಿನಲ್ಲಿ ಬಹು ರಾಷ್ಟ್ರೀಯ ಕಂಪನಿಗಳು ಹಾಗೂ ನಮ್ಮ ದೇಶಿಯ ಕಂಪನಿಗಳು ತಮ್ಮ ಉದ್ಯಮಕ್ಕಾಗಿ ನೆಲೆ ಕಂಡುಕೊಳ್ಳಲು ತೀವ್ರವಾಗಿ ಹಂಬಲಿಸುತ್ತಿದ್ದವು. ಇದರಿಂದಾಗಿ ಔದ್ಯಮಿಕ ಕ್ಷೇತ್ರದಲ್ಲಿ ಒಂದು ಹೊಸ ಬಗೆಯ ಆರೋಗ್ಯಕರವಾದ ಪೈಪೋಟಿಯೇ ನಡೆಯಿತು.

ಕಂಪನಿಗಳಿಗೆ ಬೇಕಾಗುವ ಮೂಲಭೂತ ಸೌಕರ್ಯಗಳು ಮಾನವ ಸಂಪನ್ಮೂಲಗಳು ದೊರೆಯುವಂತೆ ಮಾಡುತ್ತಿದ್ದ ಮುಖ್ಯಮಂತ್ರಿ ಕೃಷ್ಣ ತಮಗೆ ದೊರೆತ ಉನ್ನತ ಶಿಕ್ಷಣ ಹಾಗೂ ಅಪಾರವಾದ ಅನುಭವವನ್ನು ಉಪಯೋಗಿಸಿಕೊಳ್ಳುತ್ತಿದ್ದರು.

ಆಪ್ತಕಾರ್ಯದರ್ಶಿಯಾಗಿದ್ದೆ: ಕೃಷ್ಣ ಅವರು ಮುಖ್ಯಮಂತ್ರಿಯ ಆಗಿದ್ದ ಅವಧಿಯಲ್ಲಿ ನಾನು ಅಂದಿನ ಐಟಿ ಹಾಗೂ ಬಿಟಿ ಹಾಗೂ ಬಿಟಿ ಮಂತ್ರಿಗಳ ಆಪ್ತ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೊಂದು ಸುಕೃತ ಎಂದೇ ಭಾವಿಸುತ್ತೇನೆ. ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನದ ದಿಗ್ಗಜರೊಂದಿಗೆ ನೇರ ಸಂಪರ್ಕ ಬಂದದ್ದು ನನಗೆ ಒಂದು ವಿಶಿಷ್ಟ ಅನುಭವವನ್ನು ನೀಡಿತು. ಬೆಂಗಳೂರಿಗೆ ಬೇರೆ ಬೇರೆ ದೇಶಗಳ ಅಧ್ಯಕ್ಷರು , ಪ್ರಧಾನಮಂತ್ರಿಗಳು , ವಿಷಯ ತಜ್ಞರು ಮತ್ತು ಸರ್ಕಾರದ ಕಾರ್ಯದರ್ಶಿಗಳು ಭೇಟಿಕೊಡುವುದು , ಸಮಾಲೋಚನಾ ಸಭೆಗಳನ್ನು ನಡೆಸುವುದು ಅವರ ಕಂಪನಿಗಳನ್ನು ಬೆಂಗಳೂರಿನಲ್ಲಿ ಅವರ ಕಂಪನಿಗಳನ್ನು ವಿಸ್ತರಿಸಿ ಬೆಹೊಸ ಕಚೇರಿಗಳನ್ನು ತೆರೆಯುವ ಬಗ್ಗೆ ಒಂದು ರೀತಿಯ ಆರೋಗ್ಯಕರವಾದ ಪೈಪೋಟಿಯೇ ನಡೆಯುತ್ತಿತ್ತು. ಇದು ಕೇವಲ ಬಹು ರಾಷ್ಟ್ರೀಯ ಕಂಪನಿಗಳ ನಡುವೆ ಅಷ್ಟೇ ಅಲ್ಲದೆ ಭಾರತದ ಇತರ ರಾಜ್ಯಗಳವರು ಕರ್ನಾಟಕದೊಡನೆ ಸ್ಪರ್ಧಿಸಬೇಕೆಂದರೂ ಸಾಧ್ಯವಾಗುತ್ತಿರಲಿಲ್ಲ . ಕಾರಣ ಅವರು ಬೆಂಗಳೂರಲ್ಲಿ ಆಗುತ್ತಿರುವ ಕೆಲಸ ಕಾರ್ಯಗಳನ್ನು ಆಡಳಿತ ಪದ್ಧತಿಯನ್ನು ಅನುಸರಿಸಲು ಪ್ರಯತ್ನಿಸುತ್ತಿದ್ದರು. ಈ ಎಲ್ಲಾ ಕಾರ್ಯ ಚಟುವಟಿಕೆಗಳ ಹಿಂದೆ ಜೀವಶಕ್ತಿಯಾಗಿ ಎಸ್‌ಎಂ ಕೃಷ್ಣ ಇರುತ್ತಿದ್ದರು. ಅಷ್ಟೇ ಅಲ್ಲದೆ ಸರಕಾರದ ಹಂತದಲ್ಲಿ ನುರಿತ ಅಧಿಕಾರಿಗಳು ದಕ್ಷತೆ ,ಪ್ರಾಮಾಣಿಕತೆಯಿಂದ ಕೆಲಸ ಮಾಡುವಂತೆ ನೋಡಿಕೊಳ್ಳುತ್ತಿದ್ದರು. ಅರ್ಹತೆ -ಯೋಗ್ಯತೆ ಗಳಿಗೆ ಉತ್ತಮ ಅವಕಾಶ ಮಾಡಿಕೊಡುತ್ತಿದ್ದರು. ಪರಿಣಾಮವಾಗಿ ಆಡಳಿತದಲ್ಲಿ ಬಹಳಷ್ಟು ಮಟ್ಟಿಗೆ ಪಾರದರ್ಶಕತೆ ಬರುವಂತಾಯಿತು. ಒಟ್ಟಾರೆಯಾಗಿ ಬೆಂಗಳೂರು ಹಾಗೂ ಕರ್ನಾಟಕ ಕೃಷ್ಣ ಅವರನ್ನು ಸದಾ ನೆನಪಿಡುವಂತೆ ಅಭಿವೃದ್ಧಿ ಚಟುವಟಿಕೆಗಳು ನಡೆದವು. ಇಂದಿಗೂ ಕೂಡ ಅವರ ಆಡಳಿತದ ಛಾಪು ಹಾಗೂ ಅದರ ಪರಿಣಾಮವನ್ನು ಅವರು ನಿರ್ಮಿಸಿದ ವಿಕಾಸಸೌಧ ಹಾಗೂ ವಿಧಾನಸೌಧ ಇನ್ನಿತರ ಸರಕಾರಿ ಕಚೇರಿಗಳಲ್ಲಿ ನೋಡಬಹುದು.

ಕೃಷ್ಣ ಅವರ ಸಾವು ನಿಜ ಅರ್ಥದಲ್ಲಿ ಕರ್ನಾಟಕದ ಜನರಿಗೆ ಭಾರತ ದೇಶದ ಜನರಿಗೆ ಅಪಾರವಾದ ನಷ್ಟವೆಂದು ನಾನು ಶ್ರದ್ಧಾಂಜಲಿ ಪೂರ್ವಕವಾಗಿ ಈ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ.

-ನಾಡೋಜ ಡಾ. ಮನು ಬಳಿಗಾರ್
-ನಿಕಟಪೂರ್ವ ಅಧ್ಯಕ್ಷ , ಕನ್ನಡ ಸಾಹಿತ್ಯ ಪರಿಷತ್ತು

ಮೌಲ್ಯಾಧಾರಿತ ರಾಜಕಾರಣದ ಪ್ರತಿರೂಪದಂತಿದ್ದ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ 75ನೇ ವರ್ಷಾಚರಣೆ ಸಮಾರಂಭದಲ್ಲಿ ಮಾಜಿ ಪ್ರಧಾನಿ ಚಂದ್ರಶೇಖರ್ ಅವರೊಂದಿಗೆ ಪಾಲ್ಗೊಂಡಿದ್ದ ಎಸ್.ಎಂ. ಕೃಷ್ಣ..

ಗೌರವಾನ್ವಿತ ರಾಜಕಾರಣಿ

ಬೆಂಗಳೂರು : ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಕರ್ನಾಟಕ ಕಂಡ ಗೌರವಾನ್ವಿತ ರಾಜಕಾರಣಿ ಎಂಬುದರಲ್ಲಿ ಎರಡು ಮಾತಿಲ್ಲ. ಇದನ್ನು ಪಕ್ಷಾತೀತವಾಗಿ ಎಲ್ಲರೂ ಒಪ್ಪುತ್ತಾಎ. ಹೀಗಿದ್ದರೂ ವಿದೇಶದಲ್ಲಿ ಓದಿದ್ದು ಹಾಗೂ ಅವರ ಶಿಸ್ತಿನಿಂದಾಗಿ ಅವರೊಬ್ಬರು ಮುದ್ದು ಕೃಷ್ಣ. ರಾಜಕಾರಣದಲ್ಲಿ ಎಷ್ಟೇ ಎತ್ತರಕ್ಕೆ ಸಾಗಿದರೂ ಸಾಮಾನ್ಯ ವ್ಯಕ್ತಿಯಲ್ಲಿರುವ ಅಭಿರುಚಿಗಳನ್ನು ಅವರು ಮರೆತಿರಲಿಲ್ಲ. ಜನನಾಯಕನಾಗಿ ಎಸ್‌ಎಂಕೆ ಅವರದ್ದು ಧೀಮಂತ ನಡೆ. ಕನ್ನಡ, ಇಂಗ್ಲಿಷ್ ಸೇರಿದಂತೆ ಇತರೆ ಭಾಷೆಗಳ ಮೇಲೆ ಒಳ್ಳೆ ಹಿಡಿತವಿತ್ತು. ನಡೆ, ನುಡಿಗಳೆಲ್ಲದರಲ್ಲಿ ಅವರದ್ದು ಅನುಕರಣೀಯ ವ್ಯಕ್ತಿತ್ವ. ಹೆಚ್ಚು ಇಂಗ್ಲಿಷ್ ಪುಸ್ತಕಗಳನ್ನು ಓದುತ್ತಿದ್ದರು. ಅಲ್ಲದೆ ಉತ್ತಮ ಡ್ರೆಸ್ಸಿಂಗ್ ಸೆನ್ಸ್ ಇತ್ತು. ಸ್ಪುರದ್ರೂಪಿಯಾಗಿದ್ದ ಅವರು ಖಾದಿಯಾಗಲೀ, ಸೂಟ್ ಆಗಲೀ ಅಥವಾ ಪ್ಯಾಂಟು ಶರ್ಟ್ ಆಗಲಿ ತಮಗೆ ತುಂಬಾ ಒಪ್ಪುವ ಬಟ್ಟೆಗಳನ್ನೇ ಧರಿಸುತ್ತಿದ್ದರು. ಹೀಗಾಗಿ ಎಲ್ಲಿದ್ದರೂ ಎದ್ದು ಕಾಣುತ್ತಿದ್ದರು. ತಲೆಗೆ ವಿಗ್ ಸಹ ಅವರಿಗೆ ತುಂಬಾನೇ ಹೊಂದಿಕೊಂಡಿತ್ತು.

- ವೈ.ಕೆ. ಮುದ್ದುಕೃಷ್ಣ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾಜಿ ನಿರ್ದೇಶಕ

ಒಡನಾಡಿಗಳ ಕಂಬನಿ ಸೋಮನಹಳ್ಳಿಯಲ್ಲಿ ಶೋಕ

ಮಾಜಿ ಮುಖ್ಯಮಂತ್ರಿ, ಹಿರಿಯ ಮುತ್ಸದ್ದಿ ಎಸ್.ಎಂ. ಕೃಷ್ಣ ನಿಧನಕ್ಕೆ ಹುಟ್ಟೂರು ಸೋಮನಹಳ್ಳಿಯಲ್ಲಿ ಶೋಕದ ವಾತಾವರಣ ಉಂಟಾಗಿದೆ. ತಮ್ಮ ನೆಚ್ಚಿನ ನಾಯಕನ ಬಗ್ಗೆ ಊರಿನ ಹತ್ತು ಹಲವು ಒಡನಾಡಿಗಳು ಮತ್ತು ಸಂಬಂಧಿಗಳು ಕಂಬನಿ ಮಿಡಿದಿದ್ದಾರೆ. ರಾಜ್ಯ, ದೇಶದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರೂ, ಹುಟ್ಟೂರನ್ನು ಮರೆಯದ ಕೃಷ್ಣ ಸೋಮನಹಳ್ಳಿಯನ್ನು ಅಭಿವೃದ್ಧಿಯ ಗ್ರಾಮವಾಗಿ ರೂಪಿಸಿದ್ದರು. ಅಧಿಕಾರದ ಹಮ್ಮು-ಬಿಮ್ಮು ಇಲ್ಲದೆ ಮನೆಯ ಹಿರಿಯರಾಗಿ, ಊರಿನ ಮುಖಂಡರಾಗಿ, ಊರಿನವರ ಹಿತೈಷಿಯಾಗಿ ಕೃಷ್ಣ ತಮ್ಮೊಂದಿಗೆ ಆತ್ಮೀಯವಾಗಿ ನಡೆದುಕೊಳ್ಳುತ್ತಿದ್ದರು. ಗ್ರಾಮದ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುತ್ತಿದ್ದರೆಂದು ಅವರ ನಿಕಟವರ್ತಿಗಳು ಸ್ಮರಿಸಿಕೊಂಡಿದ್ದಾರೆ.

ಅಶ್ರುತರ್ಪಣ

ಮುತ್ಸದ್ದಿ, ಸರಳ ಸಜ್ಜನಿಕೆಯ ಎಸ್.ಎಂ.ಕೃಷ್ಣ ನಿಧನದ ಸುದ್ದಿ ಆಘಾತ ತಂದಿದೆ. ಅವರ ಶಿಸ್ತು, ದೂರದೃಷ್ಟಿ ನನಗೆ ಸ್ಫೂರ್ತಿ. ರಾಜ್ಯದ ಸಮಗ್ರ ಅಭಿವೃದ್ಧಿಗೆ ಕೈಗೊಂಡ ಕಾರ್ಯಕ್ರಮಗಳು ಹಲವಷ್ಟಿವೆ. ರಾಜಧಾನಿಗೆ ಸಿಲಿಕಾನ್ ಸಿಟಿ, ಐಟಿ ಸಿಟಿ ಎಂಬ ಹಿರಿಮೆ ಬರಲು ಅವರ ಕೊಡುಗೆ ಅಪಾರ.

– ಡಾ.ಎಂ.ಬಿ.ಪಾಟೀಲ, ಸಚಿವ

ಎಸ್.ಎಂ.ಕೃಷ್ಣ ನಿಧನರಾದ ಸುದ್ದಿ ತಿಳಿದು ವಿಷಾದವಾಯಿತು. ಮಹಾಮೇಧಾವಿಯಾಗಿದ್ದ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಅನೇಕ ಪ್ರಗತಿಪರ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದರು. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ.

– ಡಾ.ವೀರೇಂದ್ರ ಹೆಗ್ಗಡೆ, ಧರ್ಮಸ್ಥಳದ ಧರ್ಮಾಧಿಕಾರಿ

ಮುಖ್ಯಮಂತ್ರಿಯಾಗಿ, ವಿದೇಶಾಂಗ ಸಚಿವರಾಗಿ, ವರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದ ಎಸ್.ಎಂ ಕೃಷ್ಣ ನಿಧನದ ಸುದ್ದಿ ಕೇಳಿ ಅತೀವ ದುಃಖವಾಗಿದೆ. ರಾಜಕಾರಣದಲ್ಲಿ ಅತ್ಯಂತ ಶಾಂತ ಸ್ವಭಾವದ, ಸಜ್ಜನ, ಹಿರಿಯ ನಾಯಕರಾಗಿದ್ದ ಅವರು ನಮಗೆಲ್ಲರಿಗೂ ಆದರ್ಶಪ್ರಾಯರು.

– ಪ್ರಹ್ಲಾದ ಜೋಶಿ, ಕೇಂದ್ರ ಸಚಿವ

ಎಸ್.ಎಂ.ಕೃಷ್ಣ ಕರ್ನಾಟಕ ಕಂಡ ಮೇರು ವ್ಯಕ್ತಿತ್ವದ ರಾಜಕಾರಣಿ, ದೂರದೃಷ್ಟಿಯುಳ್ಳ ಮುತ್ಸದ್ದಿ ನಾಯಕನನ್ನು ಕಳೆದುಕೊಂಡಿರುವುದು ಅತೀವ ನೋವನ್ನುಂಟು ಮಾಡಿದೆ. ಐಟಿ-ಬಿಟಿ ಕ್ಷೇತ್ರದಲ್ಲಿ ಕರ್ನಾಟಕವನ್ನು, ಪ್ರಮುಖವಾಗಿ ಬೆಂಗಳೂರು ನಗರವನ್ನು ವಿಶ್ವಕ್ಕೆ ಪರಿಚಯಿಸಿದರು ಅವರು.

– ಬಾಬೂರಾವ್ ಚಿಂಚನಸೂರ್,
ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ

ರಾಜ್ಯದ ಮುಖ್ಯಮಂತ್ರಿಯಾಗಿ, ವಿದೇಶಾಂಗ ಸಚಿವರಾಗಿ, ಮಹಾರಾಷ್ಟ್ರದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದ ಎಸ್.ಎಂ ಕೃಷ್ಣ ನಿಧನದ ಸುದ್ದಿ ಕೇಳಿ ದುಃಖವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಕುಟುಂಬದ ಸದಸ್ಯರು ಮತ್ತು ಅಭಿಮಾನಿಗಳಿಗೆ ಈ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿ ನೀಡಲಿ.

–ಮಹೇಶ ಟೆಂಗಿನಕಾಯಿ, ಬಿಜೆಪಿ ಶಾಸಕ

ಹಿರಿಯ ರಾಜಕಾರಣಿ ಎಸ್.ಎಂ.ಕೃಷ್ಣ ನಿಧನದಿಂದ ಪರಿಶುಭ್ರತೆಯ ರಾಜಕಾರಣದ ಹಿರಿಯ ಕೊಂಡಿ ಕಳಚಿದಂತಾಗಿದೆ. ಅವರು ಮುಖ್ಯಮಂತ್ರಿಗಳಾಗಿದ್ದ ವೇಳೆ ಕಾವೇರಿ ಚಳವಳಿ, ಡಾ. ರಾಜ್ ಅಪಹರಣ, ಬರಗಾಲದಂತಹ ಹಲವು ಕಠಿಣ ಪರಿಸ್ಥಿತಿಗಳನ್ನು ಸಮಚಿತ್ತದಿಂದ ಎದುರಿಸಿದವರು.

– ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ,
ತರಳಬಾಳು ಜಗದ್ಗುರು

ಅಪರೂಪ

ಸಿಗರೇಟ್ ಸೇದಿ ಸಿಕ್ಕಿ ಬಿದ್ದಿದ್ದ ಕೃಷ್ಣ

ಎಸ್.ಎಂ ಕೃಷ್ಣ ಕಾಲೇಜು ಓದುತ್ತಿದ್ದಾಗ ಒಮ್ಮೆ ಸಿಗರೇಟ್ ಸೇದುತ್ತಿರುವಾಗ ತಂದೆಗೆ ಸಿಕ್ಕಿಬಿದ್ದಿದ್ದರು. ಮಹಾರಾಜ ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಕೃಷ್ಣ ಹಾಗೂ ಅವರ ಕೆಲವು ಗೆಳೆಯರು ಕೆಆರ್‌ಎಸ್ ಅಣೆಕಟ್ಟೆಗೆ ಹೋಗಿದ್ದರು. ಬಿಯರ್ ಸೇದುತ್ತ, ಸಿಗರೇಟ್ ಸೇದುತ್ತಿದ್ದರು. ಸಿಗರೇಟ್ ಮಾತ್ರ ಸೇದುತ್ತಿದ್ದರು. ಕೆಆರ್‌ಎಸ್ ಡ್ಯಾಮ್‌ನಲ್ಲಿ ಅವರ ಸೋದರಮಾವ ಸಿಬ್ಬಂದಿಯಾಗಿದ್ದರು. ಗೆಳೆಯರು ಪಾರ್ಟಿ ಮಾಡುತ್ತಿದ್ದಾಗಲೇ ಅಲ್ಲಿಗೆ ಮಾವನ ಜತೆ ತಂದೆ ಬಂದಿದ್ದರು. ಅವರು ಕೃಷ್ಣ ಕೈಯಲ್ಲಿದ್ದ ಸಿಗರೇಟನ್ನು ಗಮನಿಸದಿದ್ದರೂ, ಇದನ್ನು ಗಮನಿಸಿದ್ದ ಮಾವ ತಂದೆಗೆ ತಿಳಿಸಿದ್ದರು. ಆದರೆ ಈ ಪ್ರಸಂಗದ ಎಂದೂ ವಿಚಾರಿಸದ ಮಲ್ಲಯ್ಯ ಅವರು, ಪತ್ನಿ ಬಳಿ ಅವನು ಪದವಿ ಕಲಿಯುತ್ತಿರುವ ಹುಡುಗ, ಯಾವುದು ಸರಿ ಯಾವುದು ತಪ್ಪು ಎಂದು ತಿಳಿಯುವ ಪ್ರಬುದ್ಧತೆ ಬಂದಿರುತ್ತದೆ ಎಂದು ಹೇಳಿದ್ದರೆಂದು ಕೃಷ್ಣ ನೆನೆಪಿಸಿಕೊಂಡಿದ್ದರು.

ಕೆಂಪೇಗೌಡರು ಬೆಂಗಳೂರು ಕಟ್ಟಿದ್ದರು. ಎಸ್ ಎಂ ಕೃಷ್ಣ ಆಧುನಿಕ ಬೆಂಗಳೂರು ಕಟ್ಟಿದ್ದರು. ಕೆಂಪೇಗೌಡರ ಪ್ರತಿಮೆ ಅಂತಾರಾಷ್ಟ್ರೀಯ ನಿಲ್ದಾಣದ ಬಳಿ ನಿರ್ಮಾಣವಾಗಿದೆ. ಅದೇ ರೀತಿ ಎಸ್ ಎಂ ಕೃಷ್ಣ ಅವ ಪುತ್ಥಳಿಯನ್ನು ನಿರ್ಮಿಸಬೇಕು. ಆಗ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ.

– ಜನಾರ್ದನ ರೆಡ್ಡಿ, ಶಾಸಕ

ದೇಶದ ರಾಜಕಾರಣದ ಎಲ್ಲ ಹುದ್ದೆಗಳನ್ನು ನಿಭಾಯಿಸಿದ್ದ ಅಪರೂಪದ ರಾಜಕಾರಣಿ. ದೂರದೃಷ್ಟಿಯ ನಾಯಕರಾಗಿದ್ದ ಅವರು ರಾಜ್ಯದ ಐಟಿ ಕ್ಷೇತ್ರ ಉನ್ನತಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದ ವೇಳೆ ನನಗೆ ಆತ್ಮೀಯರಾಗಿದ್ದರು. ಹಲವಾರು ಬಾರಿ ರಾಜಕೀಯ, ವಿದೇಶಿ ವಿಚಾರಗಳ ಬಗ್ಗೆ ನನಗೆ ಮಾಹಿತಿ ನೀಡಿದ್ದರು. ನನಗೆ ಅವರ ಆಗಲಿಕ್ಕೆ ಯಿಂದ ನೋವಾಗಿದೆ.

– ಸಂತೋಷ್ ಲಾಡ್, ಸಚಿವ

11.12.2024 ಬುಧವಾರ

ವಿಶ್ವವಾಣಿ ಕೃಷ್ಣ ನಮನ

ಕ್ಯಾಮೆರಾ ಕಳೆದುಕೊಂಡಿದ್ದು

ಅಮೆರಿಕದ ಕಾಲೇಜಿನ ಮೊದಲ ದಿನ ಟ್ರೈನ್‌ನಲ್ಲಿ ಪ್ರಯಾಣಮಾಡುತ್ತಿದ್ದಾಗ, ಅವರ ಕ್ಯಾಮೆರಾ ಕಳೆದು ಹೋಗಿತ್ತು. ಅಲ್ಲಿನ ಸ್ಥಳೀಯ ಅಧಿಕಾರಿಗೆ ತಿಳಿಸಿದ, ಎಂಟು ದಿನಗಳ ನಂತರ ಅವರ ಪ್ರೊಫೆಸರ್ ಬಂದು ಕ್ಯಾಮೆರಾ ಪತ್ತೆಹತ್ತಿದ ಬಗ್ಗೆ ತಿಳಿಸಿ, ಆಮೇಲೆ ಕೊಟ್ಟಿದ್ದರು.

ನೂರು ಎತ್ತಿನಗಾಡಿ ರ‍್ಯಾಲಿ

ಅಮೆರಿಕದಿಂದ ಮದ್ದೂರಿಗೆ ಬಂದಾಗ ಅವರನ್ನು ಭೇಟಿ ಮಾಡಲು ಹಲವಾರು ಜನ ಬಂದು ನಿಂತಿದ್ದರು. ಮದ್ದೂರಿಂದ ಸೋಮನಹಳ್ಳಿಯ ನಾಲ್ಕುಮೈಲಿಯ ವರೆಗೆ ಭರ್ಜರಿ ಮೆರವಣಿಗೆ ಮಾಡಿದರು. ಜನರು ಕುಣಿಯುತ್ತಾ, ಉತ್ಸಾಹದಿಂದ ಸಂಭ್ರಮಿಸಿದ್ದರು.

ಕನ್ನಡ ಭಾಷಣಕ್ಕೆ ಶಿಳ್ಳೆ

ಸೊಲ್ಲಾಪುರದಲ್ಲಿ ಇಂಗ್ಲಿಷ್‌ನಲ್ಲಿ ಭಾಷಣವನ್ನು ಆರಂಭಿಸಿದ ಕೃಷ್ಣರವರಿಗೆ ಕನ್ನಡದಲ್ಲಿ ಭಾಷಣ ಮಾಡಿ ಎಂದು ಜನ ಕೂಗಿದರು. ಆಗ ಕನ್ನಡದಲ್ಲಿ ಲೀಲಾಜಾಲವಾಗಿ ಮಾತನಾಡಿದರು. ಆಗ ಅಲ್ಲಿನ ಜನರೆಲ್ಲ ಶಿಳ್ಳೆ, ಚಪ್ಪಾಳೆಗಳನ್ನು ಹೊಡೆದು ಸಂಭ್ರಮಿಸಿದ್ದರು.

vishwavani.news

ಅಶ್ರುತರ್ಪಣ

ಕರ್ನಾಟಕದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ಎಸ್.ಎಂ.ಕೃಷ್ಣ ಅವರು ರಾಜ್ಯವನ್ನು ಗಮನಾರ್ಹ ಪ್ರಗತಿಯತ್ತ ಮುನ್ನಡೆಸಿದ್ದರು. ವಿದೇಶಾಂಗ ವ್ಯವಹಾರಗಳ ಸಚಿವರಾಗಿಯೂ ದೇಶದ ರಾಜನೀತಿಯನ್ನು ಬಲಪಡಿಸಿದ್ದರು. ಅಗಲಿದ ಗಣ್ಯರಿಗೆ ನನ್ನ ಅಶ್ರುತರ್ಪಣ.

–ಎಂ.ಕೆ.ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ

ಮಾಜಿ ಮುಖ್ಯಮಂತ್ರಿ ಎಸ್.ಎಂ ಕೃಷ್ಣ ಅವರು ತಮ್ಮ ರಾಜಕೀಯ ಜೀವನದಲ್ಲಿ ಶಾಸಕ, ವಿಧಾನ ಪರಿಷತ್ ಸದಸ್ಯ, ಲೋಕಸಭಾ ಸದಸ್ಯ, ರಾಜ್ಯಸಭಾ ಸದಸ್ಯ, ಸಚಿವ, ಮುಖ್ಯಮಂತ್ರಿ, ಕೇಂದ್ರ ಸಚಿವ, ರಾಜ್ಯಪಾಲ ಹುದ್ದೆ ಅಲಂಕರಿಸಿದ್ದಾರೆ. ಅವರಿಗೆ ಪ್ರಧಾನಿಯಾಗಬೇಕೆಂಬ ಆಸೆ ಇತ್ತು. ದುರ್ದೈವ ಆಗಲಿಲ್ಲ. ಅವರು ರಾಜಕೀಯ ಜೀವನ ನಮಗೆ ಮಾದರಿಯಾಗಬೇಕು.

– ಸಿ.ಬಿ ಸುರೇಶ ಬಾಬು, ಶಾಸಕ



ಮಾಜಿ ಸಿಎಂ ಎಸ್.ಎಂ ಕೃಷ್ಣ ಅವರು ಹಿರಿಯರು ಹಾಗೂ ಕಿರಿಯರನ್ನು ಸಮನಾಗಿ ಕಾಣುತ್ತಿದ್ದರು. ಸದನದ ಎಲ್ಲ ಶಾಸಕರಿಗೆ ಶಿಕ್ಷಕರಂತೆ ಇದ್ದರು. ಅನೇಕ ಯುವ ರಾಜಕಾರಣಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ನನ್ನೊಂದಿಗೆ ಬಹಳಷ್ಟು ಆಪ್ತರಾಗಿದ್ದರು. ಅವರೊಟ್ಟಿಗಿನ ಒಡನಾಟ ಮರೆಯಲು ಸಾಧ್ಯವಿಲ್ಲ.

– ಸಿ.ಎಸ್ ನಾಡಗೌಡ, ಶಾಸಕ

ಎಸ್.ಎಂ.ಕೃಷ್ಣ ಅವರು ನನ್ನ ರಾಜಕೀಯ ಜೀವನದ ಮಾರ್ಗದರ್ಶಕರು. ನಮ್ಮ ರಾಜ್ಯ ಕಂಡ ಅತ್ಯಂತ ಶ್ರೇಷ್ಠ ಹಾಗೂ ಧೀಮಂತ ರಾಜಕಾರಣಿ, ಅಂಬರೀಶ್‌ರನ್ನು ಮರಳಿ ರಾಜಕೀಯಕ್ಕೆ ಕರೆತಂದಿದ್ದು ಅವರೇ, ನಾನು ರಾಜಕೀಯ ಜೀವನ ಆರಂಭಿಸುವ ಮೊದಲು ಅವರ ಆಶೀರ್ವಾದ ಪಡೆದಿದ್ದೆ.

– ಸುಮಲತಾ ಅಂಬರೀಶ್

ಸೌಮ್ಯ ಸ್ವಭಾವದ ಕೃಷ್ಣ ಸದಾ ಅಜರಾಮರ. ಡಾ. ರಾಜ್ ಕುಮಾರ್‌ರನ್ನು ವೀರಪ್ಪನ್ ಅಪಹರಿಸಿದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಶೋಕದಲ್ಲಿತ್ತು. ಆ ಸಂದರ್ಭದಲ್ಲಿ ಎಸ್.ಎಂ ಕೃಷ್ಣ ಅವರು ತೆಗೆದುಕೊಂಡ ನಿರ್ಧಾರಗಳನ್ನು ಮರೆಯಲು ಸಾಧ್ಯವಿಲ್ಲ

–ಚಿನ್ನೇಗೌಡ, ನಿರ್ಮಾಪಕ

ರಾಜ್ಯದ ಮುಖ್ಯಮಂತ್ರಿಯಾಗಿ, ವಿದೇಶ ಸಚಿವಾಲಯದ ಮಂತ್ರಿಯಾಗಿ ಇನ್ನೂ ಹಲವು ಹುದ್ದೆಗಳನ್ನು ಅಲಂಕರಿಸಿ, ರಾಜ್ಯದ ರಾಜಕಾರಣದಲ್ಲಿ ಮಿಂಚಿದ ಪ್ರತಿಭೆ ಎಸ್.ಎಂ.ಕೃಷ್ಣ. ಬೆಂಗಳೂರನ್ನು ಐಟಿ-ಬಿಟಿ ಹಬ್ ಮಾಡುವಲ್ಲಿನ ಅವರ ದೂರದೃಷ್ಟಿ, ಅಭಿವೃದ್ಧಿ ಮನೋಭಾವ ಅನುಕರಣೀಯ. ಅವರು ಯುವಕರಿಗೆ ಸದಾ ಸ್ಫೂರ್ತಿ.

–ಧ್ರುವ ಜತ್ತಿ, ಕಾಂಗ್ರೆಸ್ ವಕ್ತಾರ

ಅಪರೂಪ

ಮಹಾರಾಜ ಕಾಲೇಜಿನಿಂದ ಕಾರಿನಲ್ಲಿ ಓಡಾಡುತ್ತಿದ್ದ ಕುವೆಂಪು ಅವರಿಗೆ ಒಂದು ದಿನ ದನಕರುಗಳು ಮೇದು ಕುಕ್ಕರಳ್ಳಿ ಕೆರೆಯಲ್ಲಿ ನೀರು ಕುಡಿದು ಮನೆಗೆ ಹೋಗುವ ಸಮಯದಲ್ಲಿ ರೋಡಿನಲ್ಲಿ ಹಿಂಡುಹಿಂಡಾಗಿ ಸಾಗುತ್ತಿದ್ದವು. ಕುವೆಂಪು ಎಷ್ಟು ಹಾರ್ನ್ ಮಾಡಿದರೂ ಅವು ಜಾಗ ಬಿಡಲಿಲ್ಲ. ಆಗ ಎಮ್ಮೆ ದನಗಳನ್ನು ಓಡಿಸಿ ಕುವೆಂಪುರವರಿಗೆ ದಾರಿ ಮಾಡಿಕೊಟ್ಟದ್ದನ್ನು ಎಸ್.ಎಂ.ಕೃಷ್ಣ ಆಗಾಗ ನೆನಪಿಸಿಕೊಳ್ಳುತ್ತಿದ್ದರು.

ಭಾರತ ಖ್ಯಾತ ರಾಜಕಾರಣಿ, ಮಾಜಿ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಅವರ ಅಗಲಿಕೆ ಅತೀವ ದುಃಖ ತಂದಿದೆ. ಭಾರತ ಹಾಗೂ ರಷ್ಯಾ ನಡುವಣ ಸ್ನೇಹವನ್ನು ಗಟ್ಟಿಗೊಳಿಸುವುದರಲ್ಲಿ ಅವರ ಪಾತ್ರ ಅಪಾರ, ಅದು ಸದಾ ನೆನಪಿನಲ್ಲಿರುತ್ತದೆ.

–ಡೆನಿಸ್ ಅಲಿಪೊವ್, ರಷ್ಯಾ ರಾಯಭಾರಿ



ಮಹಾರಾಷ್ಟ್ರದ ಮಾಜಿ ರಾಜ್ಯಪಾಲ, ಎಸ್.ಎಂ.ಕೃಷ್ಣ ಅವರು ಕರ್ನಾಟಕ ಮತ್ತು ದೇಶದ ರಾಜಕಾರಣ ವಲಯದಲ್ಲಿ ಅಪ್ರತಿಮ ಖ್ಯಾತಿಯನ್ನು ಗಳಿಸಿದ್ದರು. ಕಾನೂನು ಪ್ರಾಧ್ಯಾಪಕರಾಗಿ ತಮ್ಮ ವೃತ್ತಿ ಜೀವನ ಶುರುಮಾಡಿದ ಕೃಷ್ಣ ಅವರು ಹಲವಾರು ಹುದ್ದೆಗಳನ್ನು ಕಟ್ಟುನಿಟ್ಟಾಗಿ ನಿರ್ವಹಿಸಿದ್ದರು. ಸಾಹಿತ್ಯ, ಸಂಗೀತ, ಟೆನ್ನಿಸ್‌ನಲ್ಲಿ ಅಭಿರುಚಿ ಹೊಂದಿದ್ದರು. ಅವರ ಅಭಿಮಾನಿ ಮತ್ತು ಕುಟುಂಬಕ್ಕೆ ನನ್ನ ಸಂತಾಪಗಳು.

–ಸಿ.ಪಿ. ರಾಜಕೃಷ್ಣನ್, ಮಹಾರಾಷ್ಟ್ರ ರಾಜ್ಯಪಾಲ

ರಾಮಕೃಷ್ಣ ಆಶ್ರಮ ಜೀವನ ಪಾಠ ಕಲಿಸಿತು ಎಂದಿದ್ದ ಕೃಷ್ಣ | 3 ರಿಂದ ಪಿಯುವರೆಗೆ ಆಶ್ರಮದಲ್ಲಿದ್ದುಕೊಂಡು ಓದು

ಎಸ್ಸೆಸ್ಸೆಲ್ಸಿ ಫೇಲ್ ಆದರೂ ಫುಲ್‌ಬ್ರೈಟ್ ಸ್ಕಾಲರ್!

ಭಾರತದಲ್ಲಿ ವಿದೇಶ ಪ್ರವಾಸ ಮಾಡುವುದೇ ದೊಡ್ಡ ವಿಚಾರ ಎಂದುಕೊಂಡಂತಹ ಕಾಲದಲ್ಲಿ ಎಸ್.ಎಂ.ಕೃಷ್ಣರವರು ಫುಲ್‌ಬ್ರೈಟ್ ಸ್ಕಾಲರ್‌ಶಿಪ್ ಪಡೆದು, ಡಲ್ಲಾಸ್‌ನ ಸದರ್ನ್ ಮೆಥಾಡಿಸ್ಟ್ ಯುನಿವರ್ಸಿಟಿಯಲ್ಲಿ ಎಲ್‌ಎಲ್‌ಎಂ ಓದಿದ್ದರು. ಆದರೆ, ಇಲ್ಲಿ ಅಚ್ಚರಿ ಪಡುವಂತಹ ವಿಚಾರವೆಂದರೆ, ಅವರು ಎಸ್‌ಎಸ್‌ಎಲ್‌ಸಿಯಲ್ಲಿ ಒಮ್ಮೆ ಫೇಲ್ ಆಗಿ, ಆಮೇಲೆ ತಮ್ಮ ವಿದ್ಯಾರ್ಥಿ ಜೀವನದಲ್ಲಿ ಓದಿನತ್ತ ಆಕರ್ಷಣೆ ಬೆಳೆಸಿಕೊಂಡರು. ರಾಮಕೃಷ್ಣ ಆಶ್ರಮದಲ್ಲಿ ಅವರು ಕಳೆದ ದಿನಗಳ ಬಗ್ಗೆ ಅವರೇ ಹೇಳಿದ ಮಾತುಗಳಿವು.

'ಮಾಧ್ಯಮಿಕ ಶಾಲೆಯಲ್ಲಿರಬೇಕಾದರೆ ನಮ್ಮ ತಂದೆಯವರು ಮೈಸೂರಿನ 'ರಾಮಕೃಷ್ಣ ಸ್ಟೂಡೆಂಟ್ಸ್ ಹೋಂ'ಗೆ ಕರೆದುಕೊಂಡು ಹೋಗಿ ಸೇರಿಸಿದರು. ಆ ಕಾಲದಲ್ಲಿ ನಾವು ಇಪ್ಪತ್ನಾಲ್ಕು ಜನ ವಿದ್ಯಾರ್ಥಿಗಳು. ನಮ್ಮ ತಂದೆಯವರಿಗೆ, ರಾಮಕೃಷ್ಣ ಆಶ್ರಮದಲ್ಲಿ ನಿಮ್ಮ ಹುಡುಗನಿಗೆ ಶಿಕ್ಷಣದ ಜೊತೆ ವ್ಯಕ್ತಿತ್ವ ರೂಪಿಸಿಕೊಳ್ಳುವಂತಹ ಪರಿಸರ ಸಿಗುತ್ತದೆಂದು ಯಾರೋ ಹೇಳಿರಬೇಕು. ಆಶ್ರಮದಲ್ಲಿ ಯಾವಾಗಲೂ ಶಿಸ್ತಿಗೆ ಆದ್ಯತೆ ಅಲ್ಲವೇ! ಆರನೇ ತರಗತಿಯಿಂದ ನಾನು ಅಲ್ಲಿಗೆ ಹೋಗಿದ್ದಿರಬಹುದು. ಆಗ ನನ್ನ ವಯಸ್ಸು ಹನ್ನೆರಡು ವರ್ಷ. ಪದವಿಪೂರ್ವ ಶಿಕ್ಷಣ ಮುಗಿಯುವತನಕ ಅಲ್ಲೇ ಇದ್ದೆ. ಒಂದುಸಾರಿ ಎಸ್ ಎಸ್‌ಎಲ್‌ಸಿಯಲ್ಲಿ ಫೇಲ್ ಆಗಿದ್ದೆ. ಆಟದ ಕಡೆಗೆ ಹೆಚ್ಚು

ಆಸಕ್ತಿ. ಆಗಿನ್ನೂ ಓದಿಗೆ ಗಮನಕೊಟ್ಟಿರಲಿಲ್ಲ. ಆಮೇಲೆ ತಾನಾಗಿಯೇ ಅದು ಸರಿಹೋಯಿತು.

ಶ್ರೀರಾಮಕೃಷ್ಣಾಶ್ರಮ ಎಂತಹ ಅದ್ಭುತ ಪ್ರಭಾವವನ್ನು ನನ್ನ ಮೇಲೆ ಬೀರಿದೆಯೆಂದರೆ ಅದನ್ನು ಹೇಳಲಿಕ್ಕಾಗುವುದಿಲ್ಲ. ಆಶ್ರಮದಲ್ಲಿನ ಮೊದಲ ದಿನದ ಅನುಭವ ನೆನಸಿಕೊಂಡರೆ ಇಂದಿಗೂ ಒಂದು ತರಹ ಖುಷಿಯಾಗುತ್ತದೆ. ನಮ್ಮ ತಂದೆ ನನ್ನನ್ನು ಶಾಲೆಗೆ ಸೇರಿಸಿ ಇನ್ನು ನಿನ್ನನ್ನು ಇಲ್ಲಿ ನೋಡಿಕೊಳ್ಳುತ್ತಾರೆ ಅಂತಹ ಹೇಳಿಹೋದರು. ನಾನೆಂದೂ ಮನೆಬಿಟ್ಟು ದೂರಹೋದವನಲ್ಲ. ಆಶ್ರಮದ ನಿಯಮಗಳೂ ಬಹು ಕಠಿಣ. ಶ್ರೀರಾಮಕೃಷ್ಣಾಶ್ರಮದ ಮುಖ್ಯಸ್ಥರು ವೇದಾನಂದಜಿ ಸ್ವಾಮೀಜಿ, ಬಂಗಾಳದವರು. ಇಂಗ್ಲಿಷ್, ಹಿಂದಿ, ಬಂಗಾಳಿ ಭಾಷೆಗಳಲ್ಲಿ ಪರಿಣಿತರು. ಕನ್ನಡದ ಬಗ್ಗೆ ಕೇಳುವಂತೆಯೇ ಇಲ್ಲ. ಪ್ರತಿದಿನ ದಿನಾ ಬೆಳಗ್ಗೆ ಐದು ಗಂಟೆಗೆ ಏಳಬೇಕು. ಚಳಿ ಮಳೆಗಾಳಿ ಏನೇ ಇರಲಿ ತಣ್ಣೀರು ಸ್ನಾನ. ನಲವತ್ತೈದು ನಿಮಿಷ ಗೀತಪಠಣ, ನಲವತ್ತೈದು ನಿಮಿಷ ಯೋಗಾಭ್ಯಾಸ, ಅನಂತರ ಕೈತೋಟದ ಕೆಲಸ, ಶಾಲೆಯಿಂದ ಬಂದ ನಂತರ ಉಪಾಹಾರ, ಪುನಃ ಸಾಯಂಕಾಲ ಕೈತೋಟದಲ್ಲಿ ಸ್ವಲ್ಪ ಹೊತ್ತು ಕೆಲಸ, ಕಡ್ಡಾಯವಾಗಿ ಬ್ಯಾಡ್ಮಿಂಟನ್ ಆಟವಾಡಬೇಕು, ರಾತ್ರಿ ಅಧ್ಯಯನ, ಮಹಾಪುರುಷರ ರೋಮಾಂಚನಕಾರಿ ಕಥೆ ಕೇಳುತ್ತಾ ಹಾಸಿಗೆಗೆ ಹೋಗಬೇಕು.

ವೇದಾನಂದ ಸ್ವಾಮೀಜಿಯವರು ನನಗೆ ಚರ್ಚಾಕೂಟಗಳಲ್ಲಿ ಭಾಗವಹಿಸಲು ಪ್ರೇರಣೆ ಕೊಟ್ಟರು. ಮಾಧ್ಯಮಿಕ ಶಿಕ್ಷಣದಿಂದ ಪ್ರಾರಂಭವಾದ ಚರ್ಚಾಕೂಟದ ನನ್ನ ಅಭಿಯಾನ ಕಾನೂನು ವ್ಯಾಸಂಗ ಮುಗಿಯುವತನಕ ನಿರಂತರವಾಗಿ ನಡದೇ ಇತ್ತು. ನಾನು ಚರ್ಚಾಕೂಟದಲ್ಲಿ ಭಾಗವಹಿಸಿದರೆ, ಒಂದಲ್ಲ ಒಂದು ಬಹುಮಾನ ಗ್ಯಾರಂಟಿ ಬರುತ್ತಿತ್ತು.'

ಯೋಗಾಸನ, ಭಗವದ್ಗೀತೆಯಲ್ಲೂ ಪರಿಣಿತಿ

'ಆಗ ಯೋಗಾಸನದಲ್ಲಿರುವ ಕಠಿಣ ಆಸನಗಳನ್ನು ಸುಲಭವಾಗಿ ಮಾಡುತ್ತಿದ್ದೆ. ಗಂಡಭೇರುಂಡ, ಪಿಂಚಮಯೂರ, ವಸಿಷ್ಠ, ಹಲಾಸನ, ಸರ್ವಾಂಗ ಹಾಗೂ ಶೀರ್ಷಾಸನ ಗಳನ್ನು ಲೀಲಾಜಾಲವಾಗಿ ಮಾಡುತ್ತಿದ್ದೆ. ಯೋಗಾಸನದಲ್ಲಿ ಬಹುಮಾನ ಕೂಡ ಬಂದಿತ್ತು. ಭಗವದ್‌ಗೀತೆಯ ಹದಿನೆಂಟು ಅಧ್ಯಾಯಗಳನ್ನು ಬಾಯಲ್ಲಿ ಹೇಳುವಷ್ಟು ಪ್ರಾವೀಣ್ಯತೆ ಬಂದಿತ್ತು. ಶ್ರೀರಾಮಕೃಷ್ಣಾಶ್ರಮದ ಕಟ್ಟುಪಾಡುಗಳು ಈಗ ಕಷ್ಟವೆನಿಸಬಹುದು. ಆದರೆ ವಿದ್ಯಾರ್ಥಿ ಜೀವನದಲ್ಲಿ ಅವೆಲ್ಲ ಕಷ್ಟವೆನಿಸುವುದಿಲ್ಲ. ಬಹುಬೇಗ ಅದಕ್ಕೆ ಒಗ್ಗಿಕೊಂಡುಬಿಟ್ಟೆ. ರಾಮಕೃಷ್ಣಾಶ್ರಮದಲ್ಲಿ ಶ್ರೀರಾಮಕೃಷ್ಣ ಪರಮಹಂಸರು, ಶ್ರೀಸ್ವಾಮಿ ವಿವೇಕಾನಂದರು, ಶ್ರೀಶಾರದಾದೇವಿಯವರ ಬಗ್ಗೆ ಪ್ರತಿವಾರ ಒಂದಲ್ಲ ಒಂದು ಉಪನ್ಯಾಸವಿರುತ್ತಿತ್ತು.



ಸೋಮನಾಥನಂದ ಸ್ವಾಮೀಜಿಯವರು ಉಪನಿಷತ್ತು ಕುರಿತಂತೆ ವಿಶೇಷವಾಗಿ ಉಪನ್ಯಾಸ ವನ್ನು ಕೊಡುತ್ತಿದ್ದರು. ಬಟ್ಟೆ ತೊಡುವುದರಿಂದ ಹಿಡಿದು ಪರೀಕ್ಷೆಯಲ್ಲಿ ಉತ್ತರಿಸುವತನಕ ಒಂದು ರೀತಿಯ ಶಿಸ್ತನ್ನು ಕಲಿಸಿದ ಸ್ಥಳ ಮೈಸೂರು ರಾಮಕೃಷ್ಣಾಶ್ರಮ.'

ಪರಿಣತ ತಬಲಾಪಟು..

ರಾಜಕೀಯ, ಓದು, ಬ್ಯಾಡ್ಮಿಂಟನ್ ಆಡುವುದಷ್ಟೇ ಅಲ್ಲದೇ ಎಸ್.ಎಂ.ಕೃಷ್ಣ ಅವರು ತಬಲಾವನ್ನೂ ಕಲಿತು, ಶಾಸ್ತ್ರೀಯ ಸಂಗೀತದ ಬಗ್ಗೆ ಆಸಕ್ತಿಯನ್ನು ಹೊಂದಿದ್ದರು ಅದರ ಬಗ್ಗೆ ಅವರ ಮಾತುಗಳಲ್ಲೇ ಮೆಲುಕುಹಾಕುವುದಾದರೆ.

'ನಾನು ರಾಮಕೃಷ್ಣಾಶ್ರಮದಲ್ಲಿದ್ದಾಗ ಕಲಿತ ಮತ್ತೊಂದು ಅಭ್ಯಾಸ ತಬಲಾ. ಇದಕ್ಕೆ ಪ್ರೇರಣೆ, ಗುರುವೆಂದರೆ ನನ್ನ ಸಹಪಾಠಿ ತುಳಸೀದಾಸಪ್ಪ. ಇದಕ್ಕೂ ಸ್ವಾಮಿ ವೇದಾನಂದಜಿಯವರೇ ಪ್ರೇರಕರು. ಆಶ್ರಮ ಸಂಗೀತದ ಬಗ್ಗೆ ನಿಜವಾದ ಆಸಕ್ತಿ ಅಲ್ಲೇ ಮೂಡಿತ್ತು. ರಾಮಕೃಷ್ಣ ಆಶ್ರಮದಲ್ಲಿ ಪ್ರಾರ್ಥನೆಯ ಸಂದರ್ಭದಲ್ಲಿ ನಾನೇ ತಬಲಾ ಬಾರಿಸುತ್ತಿದ್ದೆ. ಕರ್ನಾಟಕ ಸಂಗೀತದಲ್ಲಿದ್ದ ಆಸಕ್ತಿ ಮುಂದೆ ಹಿಂದೂಸ್ಥಾನಿ ಸಂಗೀತದೆಡೆ ವಾಲಿತು.

ಸಂಗೀತದ ಆಸಕ್ತಿ ನನ್ನನ್ನು ಅನೇಕಸಾರಿ ಮದ್ರಾಸ್, ಪುಣೆ, ಭೂಪಾಲ, ಜೈಪುರಕ್ಕೆ ಕರೆದುಕೊಂಡು ಹೋಗಿದೆ. ಮದ್ರಾಸ್‌ನ ಮ್ಯೂಸಿಕ್ ಅಕಾಡೆಮಿ ಏರ್ಪಡಿಸಿರುವ ಎಲ್ಲ ಸಂಗೀತ ಸಮ್ಮೇಳನಕ್ಕೂ ಹೆಚ್ಚುಕಡಿಮೆ ಹೋಗಿದ್ದೇನೆ. ಎಂ.ಎಸ್. ಸುಬ್ಬಲಕ್ಷ್ಮಿ, ಭೀಮಸೇನ ಜೋಷಿ, ಎಂ.ಎಲ್. ವಸಂತಕುಮಾರಿ, ಗಂಗೂಬಾಯಿ ಹಾನಗಲ್, ಮಲ್ಲಿಕಾರ್ಜುನ ಮನ್ಸೂರ, ಟಿ. ಚೌಡಯ್ಯ, ಡಿ.ಕೆ. ಪಟ್ಟಾಮ್ಮಾಳ್, ರಾಜಯ್ಯಂಗಾರ್, ಲಾಲ್ಗುಡಿ ಜಯರಾಮನ್, ಎಂ. ಬಾಲಮುರಳಿಕೃಷ್ಣ, ಬಡೇ ಸಾಹೇಬ್ ಅಲಿಖಾನ್ ಮೊದಲಾದವರ ಸಂಗೀತವನ್ನು ಕೇಳಲು ಅಲ್ಲಿಗೆ ಹೋಗಿತ್ತಿದ್ದೆ' ಎಂದು ಸಂಗೀತದ ಬಗ್ಗೆ ತಮ್ಮಲ್ಲಿರುವ ಆಸಕ್ತಿಯನ್ನು ಹೇಳಿಕೊಂಡಿದ್ದರು.

ಠಾಕು ಠೀಕು ವಸ್ತ್ರ; ಕೆಂಗಲ್ ಸ್ಫೂರ್ತಿ

ರಾಜಕೀಯದಲ್ಲಿ ವರ್ಣರಂಜಿತವಾಗಿ ಬದುಕಿದ ಎಸ್.ಎಂ. ಕೃಷ್ಣ ಅವರು, ಸದಾ ಶಿಸ್ತು ಹಾಗೂ ತಮ್ಮ ಬಟ್ಟೆ, ಚಾಳೀಸು, ವಯಸ್ಸಾದ ಮೇಲೆ ತಾವು ಹಿಡಿದುಕೊಳ್ಳುತ್ತಿದ್ದ ಕೋಲಿನಿಂದಲೂ ಬಾಹ್ಯ ಸೌಂದರ್ಯದಿಂದ ಗುರುತಿಸಿಕೊಳ್ಳುತ್ತಿದ್ದರು. ಅವರ ಈ ಶಿಸ್ತುಬದ್ಧ ವಸ್ತ್ರ ವಿನ್ಯಾಸಕ್ಕೆ ಕೆಂಗಲ್ ಹನುಮಂತಯ್ಯನವರೇ ಸ್ಫೂರ್ತಿ ಎಂದೂ ತಿಳಿಯಬಹುದು. ಅದರ ಬಗ್ಗೆ ಅವರು ಹೀಗೆ ಹೇಳುತ್ತಾರೆ...

'ಕೆಂಗಲ್ ಹನುಮಂತಯ್ಯನವರಿಗೆ ತುಂಬಾ ವಸ್ತ್ರವಿನ್ಯಾಸದ ಬಗ್ಗೆ ಪ್ರೀತಿಯಿತ್ತು. ನಮ್ಮ ದೊಡ್ಡ ಭಾವ ಮೊದಲ ಅಕ್ಕನ ಗಂಡ ಅವರ ಸಹಪಾಠಿಗಳಾಗಿದ್ದರು. ಕೆಲವೊಂದು ಸಾರಿ ನಮ್ಮ ತಂದೆ ನಡೆಸುತ್ತಿದ್ದಂತಹ ಸೋಮನಹಳ್ಳಿ ಹಾಸ್ಟೆಲ್‌ಗೂ ಬಂದಿದ್ದರು. ಒಂದುಸಾರಿ ಅವರು ಮುಖ್ಯಮಂತ್ರಿ ಆಗಿದ್ದಾಗ ಅವರನ್ನು ನೋಡಲಿಕ್ಕೆ ಕುಮಾರಕೃಪಾಕ್ಕೆ ಹೋದೆವು. ಯಾವುದೋ ಸಮಾರಂಭಕ್ಕೆ ಹೋಗಲು ಶುಭ್ರವಾದ ಸಿಲ್ಕ್ ಸೂಟು ಹಾಕಿಕೊಂಡು, ಪೇಟಾ ಕಟ್ಟಿಕೊಂಡು ಹನುಮಂತಯ್ಯನವರು ಸಿದ್ಧರಾಗಿ ಮಹಡಿಯಿಂದ ಕೆಳಗೆ ಬಂದರು. ನಮ್ಮ ಸೋದರ ಮಾವ

ನೀರು ತೊಟಕುತ್ತಿದ್ದ ಹಾರವನ್ನು ಹಿಡಿದುಕೊಂಡು ಹನುಮಂತಯ್ಯನವರು 'ಕೆಂಪಣ್ಣ ಗೌಡರೇ, ಕೆಂಪಣ್ಣ ಗೌಡರೇ' ಅಂಥ ಹೇಳುತ್ತಾ ಇದ್ದರೂ ಕೇಳಿಸಿಕೊಳ್ಳದೆ ಅವರಿಗೆ ಹಾರ ಹಾಕಿಯೇ ಬಿಟ್ಟರು. ಅವರು ಸೂಟು ಎಲ್ಲ ಕಲೆಯಾಗಿ ಹೋಯಿತು. ತಕ್ಷಣ ಮೇಲೆ ಹೋಗಿ ಸೂಟು ಬದಲಾಯಿಸಿಕೊಂಡು ಸಮಾರಂಭಕ್ಕೆ ಹೋದರು. ಅವರ ಡ್ರೆಸ್ Sense ನನಗೆ ಯಾವಾಗಲೂ ಮೆಚ್ಚುಗೆಯಾಗಿತ್ತು' ಎಂದು ಹೇಳಿಕೊಂಡಿದ್ದರು.

ಬಾಪು ಕಂಡಿದ್ದು...

ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಬೆಳೆಯುತ್ತ, ಆಶ್ರಮದ ವತಿಯಿಂದಲೇ ದೇಶದ ಹಲವಾರು ಪ್ರದೇಶಗಳಿಗೆ ಎಸ್.ಎಂ.ಕೃಷ್ಣ ಅವರು ಕೆಲವು ಸ್ನೇಹಿತರ ಜತೆಗೆ ಭಾರತದಾದ್ಯಂತ ಪ್ರವಾಸಕ್ಕೆ ಹೋಗಿದ್ದರು. ಹಾಗೇ ದೆಹಲಿಗೂ ಹೋಗಿದ್ದ ಇವರು, ವೇದಾನಂದ ಸ್ವಾಮೀಜಿಯವರು ಜತೆಗೆ ಭಂಗಿ ಕಾಲೋನಿಯಲ್ಲಿ ಉಳಿದುಕೊಂಡಿದ್ದ ಮಹಾತ್ಮ ಗಾಂಧೀ ಅವರ ಅವರ ಪ್ರಾರ್ಥನಾಸಭೆಗೆ ಹೋಗಿದ್ದರು. ಗಾಂಧಿಜಿ ಹಿಂದಿಯಲ್ಲಿ ಮಾತನಾಡಿದ್ದರಿಂದ ಅವರಿಗೆ ಭಾಷಣ ಅಷ್ಟೊಂದು ತಿಳಿಯದಿದ್ದರೂ, ಗಾಂಧಿಜೀ ಉಪಸ್ಥಿತಿಯಿಂದ ಸೃಷ್ಟಿಯಾಗಿದ್ದ ಅಲೌಕಿಕ ವಾತಾವರಣದಿಂದ ಮಂತ್ರಮುಗ್ಧರಾಗಿದ್ದರು.

ಆ ಘಟನೆಯನ್ನು ಮೆಲುಕು ಹಾಕಿ ಗಾಂಧೀಜಿಯವರ ಬಗ್ಗೆ ಕೃಷ್ಣ ಅವರು 'ಗಾಂಧೀಜಿಯವರು ತುಂಬಾ ಆರ್ದ್ರತೆ ಹಾಗೂ ಪ್ರೀತಿಯಿಂದ ಆ ಭಂಗಿ ಕಾಲೋನಿಯಲ್ಲಿ ಮಾತನಾಡಿದ್ದರು. ಅಸ್ಪೃಶ್ಯತೆ ಹಾಗೂ ಹರಿಜನೋದ್ಧಾರ ಅವರ ಭಾಷಣದ ಕೇಂದ್ರಬಿಂದು. ಗಾಂಧೀಜಿಯವರು ಭಾವುಕತೆಯಿಂದ ಮಾತನಾಡಿ ಜನರನ್ನು ಸೆಳೆಯುವಂತಹ ವಾಗ್ಮಿಯಾಗಿರಲ್ಲ. ಆದರೆ ಮನಸ್ಸನ್ನು ಮುಟ್ಟುವ ಭಾವಪುರುಷರು. ಅವರ ಬದುಕೇ ಕೋಟ್ಯಾಂತರ ದಲಿತರಿಗೆ ಸಾಂತ್ವನ ನೀಡುವ ಆದರ್ಶವಾಗಿತ್ತು' ಎಂದು ಹೇಳಿಕೊಂಡಿದ್ದರು.

ಮೊದಲ ಕೇಸ್‌ನಲ್ಲೇ ಸೋತಿದ್ದ ವಕೀಲ ಕೃಷ್ಣ

ಎಸ್.ಡಿ. ಗಣೇಶ್ ರಾವ್ ಅವರ ಆಫೀಸಿನಲ್ಲಿ ಜೂನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾಗ ಎಸ್.ಎಂ.ಕೃಷ್ಣ ಅವರಿಗೆ ತಮ್ಮ ಮೊದಲ ಕೇಸ್ ಬಂದಾಗ ಅದರಲ್ಲಿ ಸೋತಿದ್ದರು. ಅದರ ಬಗ್ಗೆ ಅವರು ಹೇಳಿದ್ದು ಹೀಗೆ.

'ಚನ್ನಪಟ್ಟಣ ತಾಲ್ಲೂಕು ಚಕ್ಕೆರೆ ಹತ್ತಿರದ ಒಬ್ಬ ಆಸಾಮಿ. ಮುನ್ಸಿಫ್ ಕೋರ್ಟಿನಲ್ಲಿ ಅಲೆಯುತ್ತಿದ್ದ ನನ್ನನ್ನು ಆತ ನೋಡಿರಬೇಕು. ನಾನು ಆಗತಾನೆ ಲಾಯರ್‌ಗಿರಿ ಮಾಡುವ ಯುವಕ. ಹಾಗೂ-ಹೀಗೂ ಮಾತನಾಡುತ್ತಾ ಆತ ''ಓಹ್, ನಿಮ್ಮ ಸೋಮನಹಳ್ಳಿ ನನಗೆ ಗೊತ್ತು, ನಿಮ್ಮ ಮನೆಗೆ ಬಂದಿದ್ದೆ, ನಿಮ್ಮ ತಂದೆಯವರನ್ನು ನೋಡಿದ್ದೆ. ಅಂತ ಹೇಳಿ ಆಗಾಗ್ಗೆ ಸೋಮನಹಳ್ಳಿಗೆ ಬರಲು ಶುರು ಮಾಡಿದ. ಒಂದು ದಿವಸ ಅಪ್ಪಾ ನನ್ನದು ಒಂದು ಕೇಸ್ ಐತೆ. ನೋಡು, ನನಗೆ ಹತ್ತು ಎಕರೆ ಜಮೀನು ಇತ್ತು, ಅದರಲ್ಲಿ ಎರಡು ಎಕರೆ ಜಮೀನನ್ನು ಸರಕಾರದವರು ಭೂಸ್ವಾಧೀನ ಮಾಡಿಕೊಂಡು ಬಿಟ್ಟಿದ್ದಾರೆ. ಈಗ ನೀವೇನಾದರೂ ಮಾಡಿ ಅದನ್ನು ರದ್ದುಮಾಡಿಸಿ ಕೊಡಬೇಕಲ್ಲ. ಕಂದಾಯ ಸಚಿವರ ಹತ್ತಿರ ಮಾಡಿದ ಅಪೀಲ್ ವಜಾ ಆಗಿದೆ. ಇನ್ನು ಮುಖ್ಯಮಂತ್ರಿ ಹತ್ತಿರಾನೇ ಪುನರ್ ಪರಿಶೀಲನಾ ಅರ್ಜಿ ಹಾಕಬೇಕಾಗು ಇದೆ'' ಎಂದ. ಆಗ ರೆವಿನ್ಯೂ ಆ್ಯಕ್ಟ್‌ನಲ್ಲಿ ಮುಖ್ಯಮಂತ್ರಿ ಹತ್ತಿರ ರಿವಿಜನ್ ಅಪೀಲ್ ಮಾಡಿಕೊಳ್ಳಲು ಅವಕಾಶವಿತ್ತು. ಸರಿ ನಾನು ಒಂದು ಅಪ್ಲಿಕೇಶನ್ ಫಾರಂ ಹಾಕಿದ್ದೆ.

ಹಿಯರಿಂಗ್‌ಗೆ ಕರೆದರು. ಕಕ್ಷಿದಾರರ ಜೊತೆಗೆ ಹೋದೆ. ಅಠಾರ ಕಚೇರಿ ಕೆಂಪು ಬಿಲ್ಡಿಂಗ್‌ನಲ್ಲಿತ್ತು. ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ನನ್ನ ಪರಿಚಯವಿದ್ದರೂ ಸಲಿಗೆ ತೋರಿಸಲಿಲ್ಲ. ನೇರವಾಗಿ ನಿಮ್ಮ ಕೇಸ್ ಏನು ಎಂದು ಕೇಳಿದರು. ಆಮೇಲೆ ಬೆಂಚ್ ಕ್ಲರ್ಕ್‌ನನ್ನು ನೋಡಿ ಇವರ ವಕಾಲತ್ತು ಕೊಡು ಅಂದರು.

ನಾನು ವಕಾಲತ್ ಅರ್ಜಿಯನ್ನು ಫಿಲ್ ಅಪ್ ಮಾಡಿದ್ದರಲ್ಲಿ ಇದ್ದ ಸಣ್ಣಪುಟ್ಟ ದೋಷಗಳನ್ನು ಕರೆಕ್ಷನ್ ಮಾಡಿ ಸರಿ ಮಾಡಿಸಿದರು. ''ನೋಡಿ ಇದು ಅಪೀಲ್ ಆಗಿರುವುದರಿಂದ ಲೋಕಲ್ ಸರ್ವೀಸ್ (ಸ್ಥಳೀಯ ಸಂಸ್ಥೆಗಳ) ಮಂತ್ರಿಗಳು ಇರಬೇಕು, ಇನ್ನೊಂದು ದಿವಸ ಈ ಕೇಸ್ ತೆಗೆದುಕೊಳ್ಳುತ್ತೇನೆ'' ಎಂದರು. ಅದಾದ ಇಪ್ಪತ್ತು ದಿನಕ್ಕೆ ಮತ್ತೆ ಬುಲಾವ್ ಬಂತು. ಸ್ಥಳೀಯ ಸಂಸ್ಥೆಗಳ ಖಾತೆಯ ಸಚಿವರಾದ ಚೆನ್ನಯ್ಯ ಮತ್ತು ಮುಖ್ಯಮಂತ್ರಿ ಕುಳಿತಿದ್ದರು. ನಾನು ಯಾವ ಕಾರಣಕ್ಕಾಗಿ ಇವರ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಬೇಕೆಂದು ನನ್ನ ವಾದ ಮಂಡಿಸಿದೆ. ಎಲ್ಲವನ್ನು ಸರಿಯಾಗಿ ಕೇಳಿಸಿಕೊಂಡರು. ಮಧ್ಯೆ ಒಂದೆರಡು ಪ್ರಶ್ನೆಗಳನ್ನು ಕೇಳಿದರು. ಅದಕ್ಕೂ ಉತ್ತರ ಕೊಟ್ಟೆ ''ಸರಿ ಆರ್ಡರ್ ಮಾಡುತ್ತೇನೆ ನೀವು ಹೊರಡಿ'' ಅಂದರು. ಎರಡು ಮೂರು ದಿನ ಆದಮೇಲೆ ಆರ್ಡರ್ ಬಂತು. ನಮ್ಮ ಅಪೀಲ್ ವಜಾ ಆಗಿತ್ತು. ''ಪ್ರಥಮ ಚುಂಬನಂ ದಂತ ಭಗ್ನಂ'' ಎಂಬಂತಾಯಿತು ನನ್ನ ಸ್ಥಿತಿ' ಎಂದು ಮೊದಲ ಕೇಸ್‌ನಲ್ಲಿ ಸೋತ ವಿಷಯವನ್ನು ಹೀಗೇ ಹೇಳಿಕೊಳ್ಳುತ್ತಿದ್ದರು.

ಕೆನಡಿ ಪರ ಪ್ರಚಾರ ಮಾಡಿದ ಹೆಮ್ಮೆ

ಅಮೆರಿಕದಲ್ಲಿ ವ್ಯಾಸಾಂಗ ಮಾಡುತ್ತಿದ್ದ ದಿನಗಳಲ್ಲಿ ನಡೆದ ಅಧ್ಯಕ್ಷರ ಚುನಾವಣೆಗೆ ಕೃಷ್ಣ ಅವರು ಡೆಮಾಕ್ರೆಟಿಕ್ ಪಕ್ಷದ ಅಭ್ಯರ್ಥಿಯಾಗಿದ್ದ ಜಾನ್ ಎಫ್. ಕೆನಡಿ ಅವರ ಪರವಾಗಿ ಚುನಾವಣೆಯಲ್ಲಿ ಕೆಲಸ ಮಾಡಿದ್ದರು, ಅದಾದ ನಂತರ ಕೆನಡಿಯವರೇ ಕೃಷ್ಣ ಅವರಿಗೆ ಧನ್ಯವಾದಗಳನ್ನು ತಿಳಿಸಿದ್ದರು. ಆ ದಿನಗಳ ಬಗ್ಗೆ ಕೃಷ್ಣ ಅವರ ಮಾತಲ್ಲೇ ಹೇಳಬೇಕೆಂದರೆ,

'1960ರ ಸೆಪ್ಟೆಂಬರ್‌ನಲ್ಲಿ ಅಮೆರಿಕ ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಯಿತು. ಅದರಲ್ಲಿ ಜಾನ್ ಎಫ್. ಕೆನಡಿಯವರು ಅಧ್ಯಕ್ಷರ ಸ್ಥಾನಕ್ಕೆ ಸ್ಪರ್ಧಿಸಿದ್ದರು. ಆಗ ನಾನೇ ಸ್ವತಃ ಜಾನ್ ಎಫ್. ಕೆನಡಿಯವರಿಗೆ ಪತ್ರ ಬರೆದು ಅವರ ಚುನಾವಣಾ ಪ್ರಚಾರವನ್ನು ಭಾರತೀಯರು ವಾಸಮಾಡುವ ಸ್ಥಳದಲ್ಲಿ ಕೈಗೊಳ್ಳಲು ನಿರ್ಧಾರ ಮಾಡಿದ್ದೇನೆಂದು ಹೇಳಿದೆ. ಅದಾದ ಮೇಲೆ ಒಂದು ಸೆನೆಟ್ ಹಾಲ್‌ನಲ್ಲಿ ಜಾನ್ ಎಫ್. ಕೆನಡಿಯವರ ಭಾಷಣವಿತ್ತು. ರೈಲು ಹಿಡ್ಕೊಂಡು ಅಲ್ಲಿಗೆ ಹೋದೆ. ಅವರನ್ನು ಅತಿ ಹತ್ತಿರದಲ್ಲಿ ನೋಡಲು ಅವಕಾಶ ದೊರೆಯಿತು. ಆದರೆ ಹಸ್ತಲಾಘವ ಮಾಡಲು ಸಾಧ್ಯವಾಗಲಿಲ್ಲ. ನಿಕ್ಸನ್ ಅವರು ಅನಂತರ ಭಾಷಣ ನಡೆಯುತ್ತಿದ್ದ ಆಚೆ ಜನರಿಗೆ ಹಸ್ತಲಾಘವ ಮಾಡುತ್ತಿದ್ದರು. ಅವರು ನನ್ನ ಹತ್ತಿರ ಬಂದು You are from ಅಂದರು, ನಾನು ಬೆಂಗಳೂರು ಅಂದೆ. ಓಹೋ Bangalore Beautiful City ಅಂದರು. ಎರಡು ವರ್ಷದ ಹಿಂದೆ ನಿಕ್ಸನ್ ಅವರು ಬೆಂಗಳೂರಿಗೆ ಬಂದಿದ್ದರು. ಆಗ ಏರ್ಪೋರ್ಟ್‌ನಿಂದ ಅವರು ರಾಜಭವನಕ್ಕೆ ಬರಬೇಕಾದರೆ ಎಂ.ಜಿ.ರೋಡ್‌ನಲ್ಲಿ ಅಸಾಧಾರಣವಾದ ಜನಸಂದಣಿ. ಆಗತಾನೇ ಫುಟ್ಬಾಲ್ ಮ್ಯಾಚ್ ಮುಗಿದು ಜನ ಕ್ರೀಡಾಂಗಣದಿಂದ ಹೊರಗೆ ಬಂದಿದ್ದರು, ಅವರುಗಳನ್ನು ಎಲ್ಲೂ ಹೋಗದ ಹಾಗೆ ಪೊಲೀಸ್‌ನವರು ಅಡ್ಡಗಟ್ಟಿದ್ದರು. ನಿಕ್ಸನ್ ಇವರೆಲ್ಲ ನನ್ನನ್ನು ಸ್ವಾಗತಿಸಲು ಬಂದಂತಹ ಜನವೆಂದು ಭಾವಿಸಿದ್ದರು. ನಿಕ್ಸನ್‌ರಿಗೆ ಆ ಜನ ನೋಡಿ ಖುಷಿಯೋ ಖುಷಿ. ಅಂದು ನನ್ನನ್ನು ನೋಡಿದ ಮೇಲೆ ಆ ದೃಶ್ಯ ಅವರ ನೆನಪಿಗೆ ಬಂದಿರಬಹುದು.

ಜಾನ್ ಎಫ್. ಕೆನಡಿಯವರು ತಮ್ಮ ಚುನಾವಣೆಯಲ್ಲಿ ನಾನು ದುಡಿದ ಕಾರಣಕ್ಕಾಗಿ ನನಗೊಂದು 'ಥ್ಯಾಂಕ್ ಯೂ' ಪತ್ರ ಬರೆದಿದ್ದರು.' ಎಂದು ಹೇಳಿಕೊಂಡಿದ್ದರು.



United States Senate
WASHINGTON, D.C.

January 19, 1961

Dear Mr. Krishna:

I hope that these few lines will convey my warm appreciation for your efforts during the campaign.

I am most grateful for the splendid enthusiasm of my associates. I am only sorry I have not been able to personally thank you for the excellent work which you performed in behalf of the Democratic ticket.

Without your unrelenting efforts and loyalty victory would not have been possible last November 8th.

With all good wishes, I am

Sincerely,

John F. Kennedy

ಎಸ್‌ಎಂಕೆ ಮಹಾರಾಷ್ಟ್ರ ರಾಜ್ಯಪಾಲರಾದ ಅವಧಿ

ರಾಜಭವನದಲ್ಲಿ 4 ವರ್ಷ ಬಂದಿ!

2004ನೇ ವರ್ಷದಿಂದ ಮುಂದೆ 2008ರ ವರೆಗೂ ಐದು ವರ್ಷದ ವರೆಗೂ ಎಸ್‌ಎಂ.ಕೃಷ್ಣರವರು ಕರ್ನಾಟಕ ರಾಜ್ಯ ರಾಜಕಾರಣದ ಸಕ್ರಿಯ ಬದುಕಿನಿಂದ ದೂರವಾದ ಅವಧಿ. ಅದರ ಹಿನ್ನೆಲೆಯನ್ನು ನೋಡುವುದಾದರೆ 2004ರಲ್ಲಿ ನಡೆದ ರಾಜ್ಯದ ವಿಧಾನಸಭಾ ಚುನಾವಣೆಯಲ್ಲಿ ಏಕೈಕ ದೊಡ್ಡ ಪಕ್ಷವಾಗಿ 79 ಸ್ಥಾನಗಳೊಂದಿಗೆ ಬಿಜೆಪಿ ಹೊರಹೊಮ್ಮಿತು. ಆದರೆ ಅದಕ್ಕೆ ಬಹುಮತವಿಲ್ಲದ ಕಾರಣ ಸರಕಾರ ರಚಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಆಗ 58 ಸ್ಥಾನಗಳನ್ನು ಪಡೆದ ಜೆಡಿಎಸ್‌ನೊಂದಿಗೆ ಸಮ್ಮಿಶ್ರ ಸರಕಾರ ನಡೆಸಲು 65 ಸ್ಥಾನಗಳನ್ನು ಪಡೆದ ಕಾಂಗ್ರೆಸ್ ಪಕ್ಷವು ಮುಂದಾಯಿತು. ಆಗ ಎರಡೂ ಪಕ್ಷಗಳಿಗೂ ಸರ್ವಸಮ್ಮತ ಮುಖ್ಯಮಂತ್ರಿಯಾಗಿ ಎಸ್‌ಎಂ ಕೃಷ್ಣ ಬದಲು ಧರಂಸಿಂಗ್ ಆಯ್ಕೆಯಾದರು. ಹಾಗಾಗಿ ಕೃಷ್ಣ ರಾಜ್ಯದಿಂದ ದೂರ ಇರಬೇಕಾಯಿತು.

ಆಗ ಕಾಂಗ್ರೆಸ್ ಹೈಕಮಾಂಡ್ ಎಸ್.ಎಂ.ಕೃಷ್ಣರಿಗೆ ಅವರಿಗೆ ನೀಡಿದ್ದು ಮಹಾರಾಷ್ಟ ರಾಜ್ಯಪಾಲರ ಹುದ್ದೆ. 2004ರಿಂದ 2008 ಜುಲೈ ವರೆಗೆ, ಅಂದರೆ ಸರಿಸುಮಾರು ಎರಡು ವರ್ಷಗಳ ಅವಧಿ. ಮಹಾರಾಷ್ಟ್ರದ ಹತ್ತೊಂಭತ್ತನೇ ರಾಜಪಾಲರಾಗಿದ್ದರು ಎಂಬ ಹೆಗ್ಗಳಿಕೆ ಅವರದ್ದಾಗಿದೆ.

ಮಹಾರಾಷ್ಟ್ರದಲ್ಲಿ ಸುಶೀಲ್ ಕುಮಾರ್ ಶಿಂಧೆ ಹಾಗೂ ಆ ಬಳಿಕ ವಿಲಾಸ್ ರಾವ್ ದೇಶ್‌ಮುಖ್ ಮುಖ್ಯಮಂತ್ರಿಗಳಾಗಿದ್ದ ವೇಳೆಯೂ ಕೃಷ್ಣ ಅಲ್ಲಿ ರಾಜ್ಯಪಾಲರಾಗಿದ್ದವರು. ಮಹಾರಾಷ್ಟ್ರದಲ್ಲಿ ಡ್ಯಾನ್ಸ್ ಬಾರ್‌ಗಳನ್ನು ನಿಷೇಧಿಸುವ ರಾಜ್ಯ ಸರಕಾರದ ಮಸೂದೆಯನ್ನು ರಾಜ್ಯಪಾಲರಾಗಿದ್ದ ಕೃಷ್ಣ ಒಮ್ಮೆ ತಡೆದರು, ಆದರೆ ಆ ಬಳಿಕ ಅದಕ್ಕೆ ಅಂಗೀಕಾರ ನೀಡಿದರು. ಹಾಗೆಯೇ ಎಸ್‌ಎಂಕೆಯವರು ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದ ವೇಳೆ ಕೆಲವೊಂದು ಸವಾಲಿನ ವಿಚಾರಗಳನ್ನು ಎದುರಿಸಿದ್ದಾರೆ.

ಲಿಬಿಯಾ ಕ್ರಾಂತಿಯಲ್ಲಿ ಭಾರತೀಯರ ರಕ್ಷಣೆ | 80ಕ್ಕೂ ಹೆಚ್ಚಿನ ದೇಶಗಳಿಗೆ ಭೇಟಿ

ವಿದೇಶಾಂಗ ಸಚಿವರಾಗಿಯೂ ಸೈ ಎನಿಸಿದವರು

ಲಿಬಿಯಾ ಕ್ರಾಂತಿ ವೇಳೆ 18,000 ಭಾರತೀಯರನ್ನು ರಕ್ಷಿಸಿದ್ದೇ ರೋಚಕ ಎಸ್‌ಎಂ.ಕೃಷ್ಣ ಅವರ ಸೇವೆ ರಾಜ್ಯಕ್ಕೆ ಮಾತ್ರವಲ್ಲ, ದೇಶಕ್ಕೂ ಅಪಾರ. 72ನೇ ವಿದೇಶಾಂಗ ಸಚಿವರಾಗಿ ಎಸ್.ಎಂ. ಕೃಷ್ಣ ಬಹು ದೊಡ್ಡ ಕೊಡುಗೆಗಳನ್ನು ಕೊಟ್ಟು ಹೋಗಿದ್ದಾರೆ.

2009ರಿಂದ 2012ರವರೆಗೆ ಮನಮೋಹನ ಸಿಂಗ್ ಸರಕಾರದಲ್ಲಿ ಎಸ್.ಎಂ ಕೃಷ್ಣ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಅಧಿಕಾರದ ಅವಧಿಯಲ್ಲಿ ಸುಮಾರು 80ಕ್ಕೂ ಹೆಚ್ಚು ದೇಶಗಳಿಗೆ ಭೇಟಿ ನೀಡಿ, ಭಾರತದ ಜೊತೆಗಿನ ಸಂಬಂಧವನ್ನು ಮತ್ತಷ್ಟು ಸ್ನೇಹಮಯಿಯಾಗಿ ಕೊಂಡೊಯ್ಯಲು ಪ್ರಯತ್ನಿಸಿದ್ದರು. ದ್ವಿಪಕ್ಷೀಯ ಸಂಬಂಧ ಸೇರಿದಂತೆ ಜಾಗತಿಕ ವಿಷಯವಾಗಿ ಹಲವು ರಾಷ್ಟ್ರಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದರು.

ಚೀನಾ, ಬ್ರಿಟನ್, ರಷ್ಯಾ, ದಕ್ಷಿಣ ಆಫ್ರಿಕಾ, ಇಂಗ್ಲೆಂಡ್ ಸೇರಿದಂತೆ ಹಲವು ಪ್ರಮುಖ ದೇಶಗಳ ಜತೆ ಉತ್ತಮ ಸಂಪರ್ಕ ಇಟ್ಟುಕೊಂಡ ಹೆಗ್ಗಳಿಕೆ ಅವರದ್ದಾಗಿದೆ. ಇದೆಲ್ಲದರ ಹೊರತಾಗಿ ಅಮೆರಿಕದ ಆಗಿನ ವಿದೇಶಾಂಗ ಸಚಿವೆ ಹಿಲರಿ ಕ್ಲಿಂಟನ್ ಜತೆ ಭಾರತದ ರಾಜತಾಂತ್ರಿಕ ಬಾಂಧವ್ಯವನ್ನು ಉತ್ತಮವಾಗಿಟ್ಟುಕೊಂಡಿದ್ದರು. ಹಾಗಾಗಿಯೇ ಕೃಷ್ಣ ವಿದೇಶಾಂಗ ಸಚಿವರಾಗಿದ್ದ ಕಾಲದಲ್ಲಿ ಅಮೆರಿಕ ಮತ್ತು ಭಾರತದ ಸಂಬಂಧ ನಿಕಟವಾಯಿತು.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ಬೇಕು ಎಂದು ಸಮರ್ಥವಾಗಿ ಪ್ರತಿಪಾದಿಸಿದವರಲ್ಲಿ ಎಸ್.ಎಂ.ಕೃಷ್ಣ ಪ್ರಮುಖರು. ಭಾರತ ಸಮರ್ಥವಾದ ದೇಶ,

ನಮಗೆ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ಬೇಕು, ಅದಕ್ಕೆ ಬೇಕಾದ ಅರ್ಹತೆ ನಮಗಿದೆ ಎಂದು ಅವರು ವಿಶ್ವಸಂಸ್ಥೆಯ ಸಭೆಗಳಲ್ಲಿ ಪ್ರತಿಪಾದಿಸಿದ್ದರು. ಪಾಕಿಸ್ತಾನ, ಚೀನಾ ಜತೆಗಿನ ಬಾಂಧವ್ಯ ವೃದ್ಧಿಗಾಗಿ ಎಸ್‌ಎಂಕೆ ಸಾಕಷ್ಟು ಪ್ರಯತ್ನಪಟ್ಟಿದ್ದರು ಎಂಬುದು ಅವರ ಕರ್ತವ್ಯನಿಷ್ಠೆಗೆ ಹಿಡಿದ ಕೈಗನ್ನಡಿ.

ಲಿಬಿಯಾ ಕ್ರಾಂತಿ: ಚತುರತೆ ಮೆರೆದ ಮೇಧಾವಿ

ಕೃಷ್ಣ ವಿದೇಶಾಂಗ ಮಂತ್ರಿ ಆಗಿದ್ದಾಗಲೇ ಅಂದರೆ 2011ರಲ್ಲಿ ಲಿಬಿಯಾ ಕ್ರಾಂತಿ ಉಂಟಾಗಿತ್ತು. ಅಲ್ಲಿನ ಮಾನವ ಹಕ್ಕುಗಳ ವಕೀಲ ಫೆಥಿ ಟಾರ್ಬೆಲ್ ಬಂಧನದಿಂದ ಕೋಪಗೊಂಡ ಪ್ರತಿಭಟನಾಕಾರರು ಅಲ್ಲಿನ ಸರಕಾರದ ವಿರುದ್ಧ ರ‍್ಯಾಲಿಗಳನ್ನು ನಡೆಸಿದರು. ಖಡಾಫಿ ಅಧಿಕಾರದಿಂದ ಕೆಳಗಿಳಿಯಬೇಕು ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು. ಆ ಮೂಲಕ ಅಲ್ಲಿ ದಂಗೆ ಏರ್ಪಟ್ಟಿತು. ತಿಂಗಳಾನುಗಟ್ಟಲೆ ಅಲ್ಲಿ ಆ ಸಂದರ್ಭದಲ್ಲಿ ಸುಮಾರು 18 ಸಾವಿರ ಭಾರತೀಯರು ಅಲ್ಲಿ ಅಪಾಯಕ್ಕೆ ಸಿಲುಕಿದ್ದರು. ಆಗ ಅಲ್ಲಿನ ವಿದೇಶಾಂಗ ಇಲಾಖೆಯ ಜೊತೆ ಎಸ್‌ಎಂಕೆ ಬಹಳಷ್ಟು ಸುತ್ತಿನ ಮಾತುಕತೆ ನಡೆಸಿ ಅವರೆಲ್ಲರ ಪ್ರಾಣ ಉಳಿಸಬೇಕೆಂದು ಪಣ ತೊಟ್ಟರು. ಕೊನೆಗೂ ಛಲ ಬಿಡದ ತ್ರಿವಿಕ್ರಮನಂತೆ ಅವರೆಲ್ಲರನ್ನೂ ಸುರಕ್ಷಿತವಾಗಿ ಭಾರತಕ್ಕೆ ಕರೆತರುವಲ್ಲಿ ಕೃಷ್ಣರವರು ವಹಿಸಿರುವ ಪ್ರಮುಖ ಪಾತ್ರ ಎಂದೆಂದಿಗೂ ಸ್ಮರಣಾರ್ಹ.

ಪಾಸ್‌ಪೋರ್ಟ್ ಸೇವಾ ಕೇಂದ್ರಗಳ ಹರಿಕಾರ

ಕೃಷ್ಣ ಕೇಂದ್ರದಲ್ಲಿ ಸಚಿವರಾಗುವವರೆಗೂ ನಮ್ಮ ದೇಶದ ನಾಗರಿಕರು ಪಾಸ್‌ಪೋರ್ಟ್ ಪಡೆದುಕೊಳ್ಳುವ ಪ್ರಕ್ರಿಯೆ ಸುಲಭ ಇರಲಿಲ್ಲ. ಅದನ್ನು ಸರಳೀಕರಿಸಿದ ಕೀರ್ತಿ ಎಸ್.ಎಂ.ಕೆ.ಗೆ ಸಲ್ಲುತ್ತದೆ. ಪಾಸ್ ಪೋರ್ಟ್ ನೀತಿಯಲ್ಲಿ ಅಮೂಲಾಗ್ರಹ ಬದಲಾವಣೆ ತಂದು, ಅದನ್ನು ಆಧುನೀಕರಣಗೊಳಿಸಿದರು, ವಿಶೇಷ ಅಂದರೆ ದೇಶದ ವಿವಿಧ ಕಡೆ ಸುಮಾರು 77 ಪಾಸ್‌ಪೋರ್ಟ್ ಸೇವಾಕೇಂದ್ರಗಳನ್ನು ತೆರೆಯುವಂತೆ ಮಾಡುವ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ. ಪಾಸ್‌ಪೋರ್ಟ್ ನೀಡಿಕೆಯಲ್ಲಿ ವಿಳಂಬವಾಗದಂತೆ ಪರಿಹಾರ ಕಂಡುಕೊಳ್ಳಲು ಇ-ಗವರ್ನೆನ್ಸ್ ಕಾರ್ಯಕ್ರಮವನ್ನೂ ಜಾರಿಗೆ ತಂದರು, ಇದು ಕೋಟ್ಯಂತರ ಭಾರತೀಯರಿಗೆ ತುಂಬಾನೇ ಅನುಕೂಲ ಆಗಿದೆ.

ವಿಶ್ವವಾಣಿ

ಸಂಪಾದಕೀಯ

ಸಭ್ಯ ರಾಜಕಾರಣಿಯ ನಿರ್ಗಮನ

ಕರ್ನಾಟಕದ ರಾಜಕಾರಣದಲ್ಲಿ 'ಕೃಷ್ಣಪರ್ವ' ಮುಗಿದಿದೆ. ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ 'ಕೃಷ್ಣಗಾರುಡಿ' ಮೆರೆದಿದ್ದ ಸಂಭಾವಿತ ರಾಜಕಾರಣಿ ಎಸ್.ಎಂ.ಕೃಷ್ಣ ಅವರು ಕಾಲನ ಕರೆಗೆ ಓಗೊಟ್ಟು ತಮ್ಮ ಅಪಾರ ಅಭಿಮಾನಿಗಳನ್ನು ಅಗಲಿ ಕಾಣದ ಊರಿಗೆ ತೆರಳಿದ್ದಾರೆ. ''ರಾಜಕಾರಣ ಮತ್ತು ಸಂಭಾವಿತ ನಡೆ ಜತೆಜತೆಯಾಗಿ ಸಾಗಲಾರವು; ವಿದ್ಯೆ-ವಿನಯವಂತಿಕೆ-ಸಂಸ್ಕಾರ-ಶಿಸ್ತು-ಅಚ್ಚುಕಟ್ಟುತನ-ಸಂವಹನಾ ಕಲೆ ಇವೆಲ್ಲವನ್ನೂ ರಾಜಕಾರಣಿಗಳಲ್ಲಿ ಕಾಣುವುದು ದುಸ್ತರ'' ಎಂಬ ಗ್ರಹಿಕೆಯನ್ನು ಅಕ್ಷರಶಃ ಸುಳ್ಳು ಮಾಡಿದವರು ಕೃಷ್ಣ. ಕಾರಣ ಈ ಎಲ್ಲ ಗುಣ-ವೈಶಿಷ್ಟ್ಯಗಳ ಆಗರವೇ ಆಗಿದ್ದ ಅಪರೂಪದ ಮುತ್ಸದ್ದಿ ಅವರು. ದಿನದ 24 ಗಂಟೆಯೂ ರಾಜಕಾರಣವನ್ನೇ ಹಾಸಿ ಹೊದ್ದುಕೊಳ್ಳುವ, ರಾಜಕೀಯದ ಕಾರ್ಯತಂತ್ರಗಳ ನೆಪದಲ್ಲಿ ಬೆನ್ನಿಗಿರಿಯುವುದನ್ನೇ ಚಾಳಿಯಾಗಿಸಿಕೊಂಡಿರುವವರ ಮಧ್ಯೆ ಕೃಷ್ಣ ಅವರು ಇಷ್ಟವಾಗುವುದು, ಪ್ರತ್ಯೇಕವಾಗಿ ನಿಲ್ಲುವುದು ಈ ಕಾರಣಗಳಿಗೇ. ಕಲೆ, ಕ್ರೀಡೆ, ಸಾಹಿತ್ಯ, ಸಂಗೀತ ಹೀಗೆ ವಿವಿಧ ಕ್ಷೇತ್ರಗಳಲ್ಲೂ ಅವರಿಗೆ ಅಭಿರುಚಿಯಿತ್ತು. ಆ ನೆಲೆಯಲ್ಲಿ ಹೇಳುವುದಾದರೆ, ಕೃಷ್ಣರ ಕಣ್ಮರೆಯು ರಾಜಕಾರಣ ಕ್ಷೇತ್ರಕ್ಕೆ ಮಾತ್ರವಲ್ಲದೆ ಅವರು ಸಂಬಂಧವಿಟ್ಟುಕೊಂಡಿದ್ದ ಇಂಥ ಹಲವು ಕ್ಷೇತ್ರಗಳಿಗೂ ಆದ ನಷ್ಟವೇ. ದೂರದರ್ಶಿತ್ವ ಮತ್ತು ಪರಾನುಭೂತಿ ಶಕ್ತಿಗಳು ರಾಜಕಾರಣಿಗಳಲ್ಲಿ ಇರಲೇಬೇಕಾದ ಎರಡು ವೈಶಿಷ್ಟ್ಯಗಳು. ಇವೆರಡೂ ಕೃಷ್ಣರಲ್ಲಿ ಕೆನೆಗಟ್ಟಿದ್ದರಿಂದಲೇ ಮಹಿಳಾ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಬನೆಯ ಉದ್ದೇಶವಿದ್ದ 'ಸ್ತ್ರೀಶಕ್ತಿ ಸ್ವ-ಸಹಾಯ' ಸಂಘಗಳಿಗೆ ರಾಜ್ಯದಲ್ಲಿ ಅವರು ಚಾಲನೆ ನೀಡಲು, ಆರ್ಥಿಕ-ಅಸಹಾಯಕರಿಗೆ ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆ ನೀಡುವ 'ಯಶಸ್ವಿನಿ' ಯೋಜನೆಯನ್ನು ಶುರುಮಾಡಲು, ಫ್ಲೈ ಓವರ್ ಕಾಮಗಾರಿ ಮತ್ತು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಂಥ ಉಪಕ್ರಮ ಗಳಿಗೆ ಚಾಲನೆ ನೀಡಲು ಸಾಧ್ಯವಾಯಿತು. ಐಟಿ-ಬಿಟಿ ವಲಯದಲ್ಲಿ ಕರ್ನಾಟಕವು ಹೆಗ್ಗುರುತು ಮೂಡಿಸುವಂತಾಗಿದ್ದಕ್ಕೂ ಕೃಷ್ಣರಿಗೆ ಇದ್ದ ದೂರದೃಷ್ಟಿಯೇ ಕಾರಣ. ಕೃಷ್ಣರ ಇಂಥ ಕಾರ್ಯಕ್ಷಮತೆ, ವಿಷಯಜ್ಞಾನ, ದೂರದರ್ಶಿತ್ವ, ಸಂಭಾವಿತ ನಡೆ, ಸಂಸ್ಕಾರ, ಅಚ್ಚುಕಟ್ಟುತನದಲ್ಲಿ ಲವಲೇಶ ವನ್ನಾದರೂ ಇಂದಿನ ಕೆಲ ರಾಜಕಾರಣಿಗಳು ರೂಢಿಸಿಕೊಂಡರೆ, ಪ್ರಾಯಶಃ ಅದು ಅವರಿಗೇ ಕೊಟ್ಟುಕೊಳ್ಳಬಹುದಾದ ಉತ್ತಮ ಕೊಡುಗೆಯಾದೀತು. ಆಗ ಜನರಿಗೆ 'ಸುಶಾಸನ' ದೊರಕುವುದು ದುಸ್ತರವೇನೂ ಆಗದು.

ಸೊಂಪಾದಕೀಯ

ನಕಲಿ ಸಿಮ್ ಕೊಟ್ರೆ ಸಿನ್

ಮೊಬೈಲ್ ಫೋನ್ ಇಂಟರ್ನೆಟ್ ಬಂದಮೇಲೆ ಫೇಕ್ ಐಡೆಂಟಿಟಿ ಅನ್ನೋದು ಕಾಮನ್ ಆಗಿಬಿಟ್ಟಿದೆ. ಯಾರದ್ದೋ ಹೆಸರಿನಲ್ಲಿ ನಕಲಿ ಗುರುತಿನ ಚೀಟಿ ತೋರಿಸಿ ಸಿಮ್ ತೆಗೆದುಕೊಳ್ಳೋದು, ಆನ್‌ಲೈನ್‌ನಲ್ಲಿ ಫೇಸ್‌ಬುಕ್‌ನಂಥ ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಐಡೆಂಟಿಟಿ ಬಳಸಿ, 'ಖುಲ್ ಜಾ ಸಿಮ್ ಸಿಮ್' ಅಂತ ನಕಲಿ ಖಾತೆ ಓಪನ್ ಮಾಡೋದು ಇದೆಲ್ಲಾ ಮಾಮೂಲಿ ಆಗಿದೆ. ಎಷ್ಟರ ಮಟ್ಟಿಗೆ ಅಂದ್ರೆ, ರಾಜಕೀಯ ಪಕ್ಷಗಳವರು ತಮ್ಮ ಪಕ್ಷದ ಬೆಂಬಲಿಗರಿಗೆ ತಾವೇ ಹೇಳಿ ಇಂಥ ನಕಲಿ ಖಾತೆ ಮಾಡಿಸಿ ಸಾಮಾಜಿಕ ಜಾಲತಾಣಗಳಲ್ಲಿ ಕ್ಯಾತೆ ತೆಗೆಯಲೆಂದೇ ಕೆಲವರನ್ನು ಇಟ್ಟುಕೊಂಡಿರುತ್ತಾರೆ. ಅಲ್ಲದೆ ಇಂಥ ಅಕೌಂಟ್‌ಗಳಿಂದ ತಮ್ಮ ಪರ ಪೋಸ್ಟ್ ಮತ್ತು ಕಾಮೆಂಟ್ ಹಾಕಿಸಿಕೊಳ್ಳುತ್ತಾರೆ. ಇದು ಎಲ್ಲರಿಗೂ ಗೊತ್ತಿದ್ದರೂ ಯಾರು ಕೂಡ ಇದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಹಾಗಾಗಿಯೇ ಸಾಮಾಜಿಕ ಜಾಲತಾಣಗಳಲ್ಲಿ ಇದು ಫೇಕ್ ಅಕೌಂಟ್ ಅಂತಾನೇ ಹೆಸರಿಟ್ಟುಕೊಂಡು ಅಕೌಂಟ್ ಓಪನ್ ಮಾಡುವಷ್ಟರ ಮಟ್ಟಿಗೆ ಫೇಕುಗಳು ಭಂಡಗೆಟ್ಟಿದ್ದಾರೆ. ಇನ್ನು ಮೊಬೈಲ್‌ಗಳಲ್ಲೂ ಟ್ರೂ ಕಾಲರ್‌ನಂಥ ಆಪ್‌ಗಳು ಇದ್ದರೂ ಯಾರದ್ದೋ ಹೆಸರಿನಲ್ಲಿ ಸಿಮ್ ತೆಗೆದುಕೊಂಡು ಅದನ್ನು ಆನ್‌ಲೈನ್ ಹಣಕಾಸಿನ ವಂಚನೆ, ವೈಯಕ್ತಿಕ ಸಂಬಂಧಗಳಲ್ಲಿನ ಮೋಸಗಳಿಗೆ ಬಳಕೆ ಮಾಡುವವರ ಸಂಖ್ಯೆ ಕಡಿಮೆ ಏನಿಲ್ಲ. ಆದರೆ ಈಗ ಸರಕಾರ ಇದಕ್ಕೆ ಕಡಿವಾಣ ಹಾಕುವ ಪ್ರಯತ್ನ ಮಾಡುತ್ತಿದೆ. ಹೌದು, ಇನ್ನು ಮುಂದೆ ನಕಲಿ ಖಾತೆ ತೆಗೆದಿದ್ದು ಮತ್ತು ನಕಲಿ ವಿಳಾಸ ಕೊಟ್ಟು ಸಿಮ್ ತೆಗೆದುಕೊಂಡು ಬಳಸಿದ್ದು ಗಮನಕ್ಕೆ ಬಂದರೆ ಕೇವಲ ದಂಡ ಅಷ್ಟೇ ಅಲ್ಲ, ಒಂದು ವರ್ಷ ಜೈಲುವಾಸದ ಶಿಕ್ಷೆ ಆಗಲಿದೆಯಂತೆ. ಒಂದು ವರ್ಷ ಜೈಲಿಗೆ ಹೋಗಲು ಇಷ್ಟ ಇಲ್ಲ ಅಂದ್ರೆ, ಇಂಥ ನಕಲಿ ಖಾತೆ ಮಾಡುವವರು ಹುಷಾರಾಗಿ ಇರೋದು ಒಳ್ಳೆಯದು. ಆದರೆ ಏನ್ ಮಾಡೋದು ನಮ್ಮ ದೇಶದಲ್ಲಿ ನಕಲಿಗಳ ಹಾವಳಿ ಜಾಸ್ತಿ. ಇಂಥ ಅಪರಾಧಗಳನ್ನು ಯಾರಾದರೂ ಬಡವರ ಮಕ್ಕಳು ಮಾಡಿದರೆ ಅವರು ಜೈಲಿನಲ್ಲಿ ಕೊಳೆಯೋದು ಗ್ಯಾರಂಟಿ.

ಸಂಪಾದಕರ ಸದ್ಯಶೋಧನೆ

ಏಕನಾಥ-ಲೋಕನಾಥ-ಜಗನ್ನಾಥ

ಬಿಜೆಪಿಯ ಹಿರಿಯ ನಾಯಕ ಜಗನ್ನಾಥ ರಾವ್ ಜೋಶಿ ಒಮ್ಮೆ ರೋಮ್‌ಗೆ ಹೋಗಿದ್ದರು. ಅಲ್ಲಿನ ಸಂಪಾದಕರೊಬ್ಬರು ಜೋಶಿಯವರನ್ನು ಭೇಟಿ ಮಾಡಿ, ಸಂದರ್ಶನ ಮಾಡಲು ಮುಂದಾದರು. ಜೋಶಿಯವರು ಜನಸಂಘದ ಪ್ರತಿನಿಧಿ ಎಂಬುದು ಸಂಪಾದಕರ ಆಸಕ್ತಿಗೆ ಕಾರಣವಾಗಿತ್ತು. ಆರಂಭದಲ್ಲೇ ಆ ಸಂಪಾದಕರು, "You belong to Hindu militant organisation?' ಎಂದು ಕೇಳಿದರು. ಆಗ ಜೋಶಿಯವರು, 'I wish, I belong to such an organisation' ಎಂದು ಉತ್ತರಿಸಿದರು. ಅಷ್ಟಕ್ಕೇ ಸುಮ್ಮನಾಗದ ಜೋಶಿಯವರು, 'ನಿಮಗೆ ನಾನು ಪ್ರತಿನಿಧಿಸುವ ಆರೆಸ್ಸೆಸ್ ಉಗ್ರಗಾಮಿ ಸಂಘಟನೆ ಎಂದು ಅನಿಸುವುದಾ?' ಎಂದು ಕೇಳಿದರು. ಅದಕ್ಕೆ ಸಂಪಾದಕ ಮಹಾಶಯ ನಿರುತ್ತರರಾದರು. 'ಆರೆಸ್ಸೆಸ್ ಅಂದ್ರೆ, ಹಿಂದೂ ಉಗ್ರಗಾಮಿ ಸಂಘಟನೆ ಎಂದು ಹೇಳುವುದನ್ನು ಕೇಳಿದ್ದೇನೆ' ಎಂದು ಹೇಳಿ ಸಂಪಾದಕರು ಜಾರಿಕೊಂಡರು. ಈ ಪ್ರಸಂಗವನ್ನು ಜೋಶಿಯವರು ಹಲವು ಭಾಷಣಗಳಲ್ಲಿ ಪ್ರಸ್ತಾಪಿಸಿದ್ದುಂಟು. ಅದಕ್ಕೆ ಪ್ರತಿಯಾಗಿ ಜೋಶಿಯವರು, 'ನಾವು ನಮ್ಮ ವಿಚಾರವನ್ನು ಮಂಡಿಸಲು ವಿಫಲರಾಗಿದ್ದೇವೆ. ನಾವು ಉಗ್ರಗಾಮಿ (Militant)ಗಳಾಗಬೇಕಿತ್ತು. ಆದರೆ ನಪುಂಸಕರಾಗಿದ್ದೇವೆ. ಆದರೆ ನಮ್ಮನ್ನು ಬೇರೆಯವರು ಉಗ್ರಗಾಮಿಗಳು ಎಂದು ಭಾವಿಸಿದ್ದಾರೆ. ಅವರು ಯೋಚಿಸುವುದಕ್ಕೂ, ನಾವು ಇರುವುದಕ್ಕೂ ಬಹಳ ವ್ಯತ್ಯಾಸವಿದೆ. ಅವರು ಯೋಚಿಸುವಂತೆ ನಾವು ಇರಬೇಕಾಗಿದೆ' ಎಂದು ಹೇಳಿ ಒಂದು ಕಥೆಯನ್ನು ಹೇಳುತ್ತಿದ್ದರು. ಒಮ್ಮೆ ಏಕನಾಥರ ಶಾಂತಿಯನ್ನು ಭಂಗಗೊಳಿಸಿಯೇ ತೀರುತ್ತೇನೆ ಎಂದು ಒಬ್ಬ ಅವಿವೇಕಿ ಪಣತೊಟ್ಟ. ಏಕನಾಥರು ನದಿಯಲ್ಲಿ ಸ್ನಾನ ಮಾಡಿ ಹೊರಬರುವಾಗ ಅವರಿಗೆ ಉಗಿದ. ತಾನು ಅಶುದ್ಧನಾದೆ ಎಂದು ಏಕನಾಥರು ನದಿಗೆ ಹೋಗಿ ಸ್ನಾನ ಮಾಡಿ ಬಂದರು. ಅವರು ತುಸು ದೂರ ಬಂದಿರಬಹುದು, ಆತ ಮತ್ತೊಮ್ಮೆ ಅವರ ಮೇಲೆ ಎಂಜಲು ಉಗಿದ. ಏಕನಾಥರು ಪುನಃ ನದಿಗೆ ಸ್ನಾನ ಮಾಡಲು ಹೋದರು. ಸ್ನಾನ ಮಾಡಿ ಬರುತ್ತಿರುವಂತೆ ಆ ಅವಿವೇಕಿ ಮತ್ತೊಮ್ಮೆ ಎಂಜಲು ಸಿಂಪಡಿಸಿದ. ಏಕನಾಥರು ಮತ್ತೊಮ್ಮೆ ನದಿಗೆ ಹೋದರು. ಇದು ಆ ದಿನ ಸಾಯಂಕಾಲದವರೆಗೆ ನಡೆಯಿತು. ಏಕನಾಥರು ಒಂದು ಸಲವೂ ಬೇಸರಿಸಿಕೊಳ್ಳಲಿಲ್ಲ. ಕೊನೆಗೆ ಉಗುಳುವವನೇ ಸೋತುಹೋದ. ಏಕನಾಥರ ಸನಿಹ ಬಂದು, 'ಸ್ವಾಮಿ ಮಹಾರಾಜ್, ನಾನು ಸೋತು ಸುಣ್ಣವಾಗಿ ಹೋದೆ. ನನ್ನ ತಪ್ಪನ್ನು ಮನ್ನಿಸಿ'ಎಂದು ಬೇಡಿಕೊಂಡ. 'ನಿನ್ನನ್ನು ನಾನ್ಯಾಕೆ ಕ್ಷಮಿಸಲಿ? ನೀನು ನನಗೆ ಉಪಕಾರ ಮಾಡಿದ್ದೀಯ. ನಿನ್ನಿಂದಾಗಿ ನನಗೆ ಇಂದು ನೂರೆಂಟು ಸಲ ಗಂಗಾಸ್ನಾನ ಮಾಡುವ ಅವಕಾಶ ಲಭಿಸಿ ಪುಣ್ಯ ಸಿಕ್ಕಿತು. ನಿನಗೆ ನಾನು ಉಪಕೃತನಾಗಿರಬೇಕು' ಎಂದು ಹೇಳಿದರು. ಈ ಪ್ರಸಂಗವನ್ನು ಹೇಳಿದ ಬಳಿಕ ಜೋಶಿಯವರು ಸಭಿಕರನ್ನು ಉದ್ದೇಶಿಸಿ ಹೇಳುತ್ತಿದ್ದರು- 'ನಮ್ಮಲ್ಲಿ ಅನೇಕರು ಏಕನಾಥರಾಗಿದ್ದೇವೆ. ನಮ್ಮನ್ನು ನೂರಾರು ಸಲ ಅವಮಾನಿಸಿದರೂ, ಮೈಕೊಡವಿಕೊಂಡು ಸುಮ್ಮನಾಗುತ್ತೇವೆ. ಅದೇ ನಮ್ಮ ಭಾಗ್ಯ ಎಂದು ಭಾವಿಸುತ್ತೇವೆ. ಏಕನಾಥರು ಸಂತರು, ಬಿಡಿ. ಅವರು ಜಗಳ ಕಾಯುವವರಲ್ಲ. ಆದರೆ ಒಬ್ಬ ಏಕನಾಥರ ಸುತ್ತ ಸಾವಿರಾರು ಲೋಕನಾಥ (ಜನ)ರಿದ್ದರಲ್ಲ, ಅವರೇನು ಮಾಡುತ್ತಿದ್ದರು? ಅವರಿಗೆ ಆ ದುಷ್ಟನ ಕೃತ್ಯ ನೋಡಿ ಏನೂ ಅನಿಸಲೇ ಇಲ್ಲವಾ? ಆ ಸಾವಿರಾರು ಲೋಕನಾಥರು ಈ ದೃಶ್ಯವನ್ನು ಬೆಳಗಿನಿಂದ ಸಾಯಂಕಾಲದ ತನಕ ನೋಡುತ್ತಲೇ ಕಳೆದರಲ್ಲ, ಇದಕ್ಕೆ ಏನು ಹೇಳೋಣ? ಏಕನಾಥ ಏಳುತ್ತಾನೆ, ಮುಳುಗುತ್ತಾನೆ. ಆದರೆ ಲೋಕನಾಥರಿಗೆ ಏನಾಗಿದೆ? ಒಬ್ಬ ಏಕನಾಥ ಶಾಂತಿಯಿಂದಿರಲಿ. ಆದರೆ ನನಗೆ ಲೋಕನಾಥರ ಶಾಂತಿ ಅರ್ಥವಾಗುವುದಿಲ್ಲ. ಒಬ್ಬ ದುಷ್ಟ, ಸಂತನನ್ನು ಅವಮಾನಿಸುತ್ತಾನೆ. ಆದರೆ ಅದನ್ನು ಇಡೀ ಸಮಾಜ ಮೂಕಪ್ರೇಕ್ಷಕನಂತೆ, ಸುಮ್ಮನೆ ನೋಡುತ್ತದೆ. ಇದು ಶಾಂತಿ ಅಲ್ಲ, ನಪುಂಸಕತ್ವ. ಏಕನಾಥರ ಬಗ್ಗೆ ಲೋಕನಾಥರು ಸುಮ್ಮನಿರಬಹುದು, ಆದರೆ ನಾನು ಜಗನ್ನಾಥ ಸುಮ್ಮನಿರುವುದಿಲ್ಲ'.

ರಾಸಾಯನಿಕಗಳ ಇತ್ಯಾತ್ಮಕ-ನೇತ್ಯಾತ್ಮಕ ಜಗತ್ತು

ನಮ್ಮ ದೇಹವು 60 ನಮೂನೆಯ ರಾಸಾಯನಿಕ ಧಾತುಗಳಿಂದ ರಚನೆಯಾಗಿದೆ. ನಮ್ಮ ದೇಹ ಹಾಗೂ ಮನಸ್ಸಿನಲ್ಲಿ ನಡೆಯುವ ಪ್ರತಿಯೊಂದು ಕಾರ್ಯವೂ ರಾಸಾಯನಿಕ ಲೀಲೆ. ನಾವು ತಿನ್ನುವ ಆಹಾರವು ಸಂಕೀರ್ಣ ರಾಸಾಯನಿಕ ಪದಾರ್ಥಗಳ ಸಮುಚ್ಚಯ. ನಮ್ಮ ಜೀರ್ಣಾಂಗಗಳು ಈ ಪದಾರ್ಥಗಳನ್ನು ಸರಳಗೊಳಿಸುತ್ತವೆ. ಆ ಸರಳ ಪದಾರ್ಥಗಳು 'ಸುಟ್ಟು' ಅಗತ್ಯ ಶಕ್ತಿಯನ್ನು ಉತ್ಪಾದಿಸುತ್ತವೆ. ಆ ಜೈವಿಕ ಶಕ್ತಿಯೇ ನಮ್ಮ ದೇಹ-ಮನಸ್ಸುಗಳ ಕಾರ್ಯಗಳಿಗೆ ನೆರವಾಗುತ್ತದೆ.

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
vveditoped@gmail.com

ಮರ್ಲಿನ್ ಮನ್ರೋ 50-60ರ ದಶಕದ ಹಾಲಿವುಡ್ ಇಂಗ್ಲಿಷ್ ಚಿತ್ರಗಳಲ್ಲಿ ನಟಿಸುತ್ತಿದ್ದ ಮಹಾನ್ ಸುಂದರಿ. ಈಕೆಯ ಮೂಲ ಹೆಸರು ನಾರ್ಮಾ ಜೀನ್ ಮಾರ್ಟೆನ್ಸನ್. ಜನನ 1926ರ ಜೂನ್ 1ರಂದು. ಈಕೆ ನಟಿ, ರೂಪದರ್ಶಿ ಹಾಗೂ ಗಾಯಕಿಯಾಗಿದ್ದಳು. 50ರ ದಶಕದಲ್ಲಿ ಹಾಲಿವುಡ್ಡಿಗೆ ಹೆಜ್ಜೆಯಿಟ್ಟ ಮನ್ರೋ 'ಸೆಕ್ಸ್ ಬಾಂಬ್' ಎಂದು ಹೆಸರಾಗಿ ಪಡ್ಡೆ ಹುಡುಗರ ನಿದ್ದೆಗೆಡಿಸಿದಳು. 'ಜಂಟ್ಲ್‌ಮೆನ್ ಪ್ರಿಫರ್ ಬ್ಲಾಂಡ್ಸ್', 'ಸೆವೆನ್ ಇಯರ್ ಇಚ್' ಮತ್ತು 'ಸಮ್ ಲೈಕ್ ಇಟ್ ಹಾಟ್' ಚಿತ್ರಗಳು ಈಕೆಯನ್ನು ಖ್ಯಾತಿಯ ಉತ್ತುಂಗಕ್ಕೇರಿಸಿದವು. ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್ ಎಫ್.ಕೆನಡಿ ಹಾಗೂ ಆತನ ಸೋದರ ರಾಬರ್ಟ್ ಎಫ್.ಕೆನಡಿ ಈಕೆಯ ಪ್ರೇಮಪಾಶದಲ್ಲಿ ಸಿಲುಕಿದ್ದರು. ಹಣ, ಹೆಸರು, ಪ್ರಚಾರಗಳು ಬೇಡವೆಂದರೂ ತನ್ನ ಬೆನ್ನುಹತ್ತಿ ಬರುತ್ತಿದ್ದ ಹಿನ್ನೆಲೆಯಲ್ಲಿ, ಈಕೆ ಮಾನಸಿಕ ರೋಗಗಳಿಗೆ ತುತ್ತಾದಳು. ಮನೋವೈದ್ಯ ಡಾ.ರಾಲ್ಫ್ ಗ್ರೀನ್ಸನ್ ಈಕೆಗೆ 'ಖಿನ್ನತೆಯಿದೆ' ಎಂದು ರೋಗನಿದಾನವನ್ನು ಮಾಡಿ ಚಿಕಿತ್ಸೆ ನೀಡಲಾರಂಭಿಸಿದ. ಆಗಸ್ಟ್ 4, 1962. ಸ್ಥಳ ಕ್ಯಾಲಿಫೋರ್ನಿಯಾದ ಲಾಸ್ ಏಂಜಲೀಸ್ ನಗರದಲ್ಲಿದ್ದ ಆಕೆಯ ಮನೆ. 'ಯೂನಿಸ್ ಮುರ್ರೆ' ಎಂಬ ಮನೆಗೆಲಸದವಳು ಮನ್ರೋ ಸತ್ತಿರುವುದನ್ನು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದಳು. ವೈದ್ಯರು ಪೋಸ್ಟ್ ಮಾರ್ಟೆಮ್ ನಡೆಸಿ ಆಕೆ 'ಕ್ಲೋರಾಲ್ ಹೈಡ್ರೇಟ್' ಮತ್ತು 'ಪೆಂಟೋಬಾರ್ಬಿಟಾಲ್' ಎಂಬ ಔಷಧಗಳ ಅತ್ಯಧಿಕ ಸೇವನೆಯಿಂದ ಸತ್ತಿದ್ದಾಳೆ ಎಂದು ಘೋಷಿಸಿದರು. ಮನ್ರೋ ಯಾಕೆ, ಹೇಗೆ, ಯಾರಿಂದ ಸತ್ತಳು ಎಂಬುದು ಹಾಲಿವುಡ್‌ನಲ್ಲಿ ಇಂದಿಗೂ ಅತ್ಯಂತ ಚರ್ಚೆಗೆ ಒಳಗಾಗಿರುವ ವಿಚಾರವಾಗಿದೆ.

ನಮ್ಮ ದೇಹವು 60 ನಮೂನೆಯ ರಾಸಾಯನಿಕ ಧಾತುಗಳಿಂದ ರಚನೆಯಾಗಿದೆ. ನಮ್ಮ ದೇಹ ಹಾಗೂ ಮನಸ್ಸಿನಲ್ಲಿ ನಡೆಯುವ ಪ್ರತಿಯೊಂದು ಕಾರ್ಯವೂ ರಾಸಾಯನಿಕ ಲೀಲೆ. ನಾವು ತಿನ್ನುವ ಆಹಾರವು ಸಂಕೀರ್ಣ ರಾಸಾಯನಿಕ ಪದಾರ್ಥಗಳ ಸಮುಚ್ಚಯ. ನಮ್ಮ ಜೀರ್ಣಾಂಗಗಳು ಈ ಪದಾರ್ಥಗಳನ್ನು ಸರಳಗೊಳಿಸುತ್ತವೆ. ಆ ಸರಳ ಪದಾರ್ಥಗಳು 'ಸುಟ್ಟು' ಅಗತ್ಯ ಶಕ್ತಿಯನ್ನು ಉತ್ಪಾದಿಸುತ್ತವೆ. ಆ ಜೈವಿಕ ಶಕ್ತಿಯೇ ನಮ್ಮ ದೇಹ-ಮನಸ್ಸುಗಳ ಕಾರ್ಯಗಳಿಗೆ ನೆರವಾಗುತ್ತದೆ. ಒಂದು ಹುಚ್ಚುನಾಯಿ ಅಟ್ಟಿಸಿಕೊಂಡು ಬಂದರೆ ನಮ್ಮನ್ನು ಓಡುವಂತೆ ಮಾಡುವುದು 'ಅಡ್ರಿನಲಿನ್' ಎಂಬ ರಾಸಾಯನಿಕ. ನಾಯಿಯಿಂದ ತಪ್ಪಿಸಿಕೊಂಡ ಮೇಲೆ ನಮ್ಮ ದೇಹ-ಮನಸ್ಸುಗಳಿಗೆ ವಿಶ್ರಾಂತಿ ನೀಡುವುದು 'ನಾರ್-ಅಡ್ರಿನಲಿನ್' ಎಂಬ ಮತ್ತೊಂದು ರಾಸಾಯನಿಕ. ಹೊರಜಗತ್ತಿನ ಪ್ರಚೋದನೆಗಳೇ ನಮ್ಮನ್ನು ಕೆರಳಿಸಬೇಕು ಎಂದೇನಿಲ್ಲ. ನಮ್ಮ ಮನಸ್ಸೂ ಅಜ್ಞಾತ ಭಯಗಳಿಂದ ಭ್ರಮಿತವಾದಾಗ ಇಂಥ ರಾಸಾಯನಿಕಗಳನ್ನು ಪ್ರಚೋದಿಸಿ ನಮ್ಮನ್ನು ಭಯ, ಆತಂಕ, ಖಿನ್ನತೆಯಲ್ಲಿ ದೂಡುತ್ತದೆ. ಹೀಗೆ ಹಲವು ರಾಸಾಯನಿಕ ಕ್ರಿಯೆಗಳಿಂದ ಅಸ್ತವ್ಯಸ್ತವಾದ ನಮ್ಮ ದೇಹ-ಮನಸ್ಸುಗಳನ್ನು ನಿಯಂತ್ರಿಸಲು ಮತ್ತೆ ಹಲವು ರಾಸಾಯನಿಕಗಳ ಮೊರೆಹೋಗಬೇಕಾಗುತ್ತದೆ. ವಜ್ರವನ್ನು ಕತ್ತರಿಸಲು ವಜ್ರವೇ ಬೇಕು. ಹಾಗಾಗಿ ರಾಸಾಯನಿಕಗಳಿಂದ ಆತಂಕಕ್ಕೆ ಒಳಗಾಗಿ, ಭೀತಿಯಿಂದ ಬಳಲುತ್ತಾ, 'ನನ್ನ ಬದುಕು ಏಕೆ ಹೀಗಾಯಿತು?' ಎಂದು ಖಿನ್ನತೆಯಿಂದ ನರಳುತ್ತಾ, 'ನಾನು ಯಾಕೆ ಸಾಯಬಾರದು?' ಎಂದು ಯೋಚಿಸುತ್ತಾ ಸಾವಿಗೆ ಪ್ರಚೋದಿಸುವುದೂ ಈ ರಾಸಾಯನಿಕಗಳೇ!

ನಮ್ಮನ್ನು ನಾನಾ ಮಾನಸಿಕ ಹಾಗೂ ಮನೋದೈಹಿಕ ಕಾಯಿಲೆಗಳಿಗೆ ದೂಡುವ ಈ ಅಪಾಯಕಾರಿ ರಾಸಾಯನಿಕಗಳನ್ನು ಹದ್ದುಬಸ್ತಿನಲ್ಲಿಡಲು 'ಶಾಮಕಗಳು' (ಸೆಡೆಟೀವ್ಸ್) ಹಾಗೂ 'ನಿದ್ರಾಜನಕಗಳು' (ಹಿಪ್ನಾಟಿಕ್ಸ್) ಎಂಬ 2 ವರ್ಗದ ಔಷಧಗಳನ್ನು ವಿಜ್ಞಾನಿಗಳು ಪತ್ತೆಹಚ್ಚಿರುವರು. ಹೆಸರೇ ಸೂಚಿಸುವಂತೆ ಶಾಮಕಗಳು, ಅಜ್ಞಾತ ಭಯದಿಂದ ಆತಂಕಕ್ಕೆ ಒಳಗಾಗಿರುವ ನಮ್ಮ ಮನಸ್ಸನ್ನು ಶಾಂತಗೊಳಿಸುತ್ತವೆ. ಕೆಲವು ಸಂದರ್ಭಗಳಲ್ಲಿ, ಆತಂಕಿತ ವ್ಯಕ್ತಿಯು ಸ್ವಲ್ಪ ಹೊತ್ತು ಸ್ವಸ್ಥವಾಗಿ ನಿದ್ರಿಸಲೆಂದು ನಿದ್ರಾಪ್ರಚೋದಕಗಳನ್ನು ನೀಡುವುದುಂಟು. ಕೆಲವು ಔಷಧಗಳು ಶಾಮಕ ಹಾಗೂ ನಿದ್ರಾಜನಕ ಗುಣಗಳನ್ನು ಒಳಗೊಂಡಿರುತ್ತವೆ. ಹಾಗಾಗಿ ವೈದ್ಯರು ರೋಗಿಯ ಸಮಗ್ರ ರೋಗ ಚರಿತ್ರೆಯನ್ನು ತಿಳಿದು, ಅವರಿಗೆ ಸೂಕ್ತವಾಗುವ ಔಷಧವನ್ನು, ಸೂಕ್ತ ಪ್ರಮಾಣದಲ್ಲಿ, ನಿಗದಿತ ಅವಧಿಯವರೆಗೆ ಮಾತ್ರ ನೀಡುವರು. ನಂತರ ನಿಲ್ಲಿಸುವರು. ಔಷಧಗಳ ಜತೆಯಲ್ಲಿ ಅವರಿಗೆ ಅಗತ್ಯವಾದ ಆಪ್ತಸಲಹೆ, ಜೀವನಶೈಲಿಯ ಬದಲಾವಣೆಗಳನ್ನು ಸೂಚಿಸಿ ಅವರ ಮನಸ್ಸಿನ ಹಾಗೂ ಮನೋದೈಹಿಕ ಸಮಸ್ಯೆಗಳನ್ನು ನಿವಾರಿಸುವರು.

ಅನಾದಿ ಕಾಲದಿಂದಲೂ ಮದ್ಯಸಾರ, ಗಾಂಜಾ ಮತ್ತು ಅಫೀಮನ್ನು ಶಾಮಕ ಹಾಗೂ ನಿದ್ರಾಜನಕ ಔಷಧಗಳಾಗಿ ಬಳಸುತ್ತಿದ್ದರು. 1832ರಲ್ಲಿ ಕ್ಲೋರಾಲ್ (ಟ್ರೈಕ್ಲೋರೊಅಸಿಟಾಲ್ಡಿಹೈಡ್) ಎಂಬ ರಾಸಾಯನಿಕವನ್ನು ಜರ್ಮನಿಯ ಜಸ್ಟಸ್ ವಾನ್ ಲೀಬಿಗ್ ಸಿದ್ಧಪಡಿಸಿದ. ಇದಕ್ಕೆ ಸಂಬಂಧಿಸಿ 1832ರಿಂದ 1860ರವರೆಗೆ ವಿವಿಧ ಪ್ರಯೋಗಗಳು ನಡೆದವು. ಕ್ಲೋರಾಲನ್ನು ನೀರಿನಲ್ಲಿ ಕರಗಿಸಿದರೆ 'ಕ್ಲೋರಾಲ್ ಹೈಡ್ರೇಟ್' ಎಂಬ ದ್ರಾವಣ ದೊರೆಯುತ್ತದೆ ಎಂಬುದು ಗೊತ್ತಾಯಿತು. 1869ರಲ್ಲಿ, ಜರ್ಮನಿಯ ಮಥಿಯಾಸ್ ಯೂಜೀನ್ ಆಸ್ಕರ್ ಲೈಬ್ರೀಚ್ ಎಂಬ ಔಷಧ ವಿಜ್ಞಾನಿ ಮೊದಲ ಬಾರಿಗೆ ಈ ಕ್ಲೋರಾಲ್ ಹೈಡ್ರೇಟನ್ನು ಸೇವಿಸಿದಾಗ, ಅದು ದೇಹದಲ್ಲಿ 'ಟ್ರೈಕ್ಲೋರೋಇಥನಾಲ್' ಎಂಬ ರಾಸಾಯನಿಕವನ್ನು ಯಕೃತ್ತಿನಲ್ಲಿ ಉತ್ಪಾದಿಸಿ, ಆತಂಕವನ್ನು ಶಮನಗೊಳಿಸಿ, ನಿದ್ರೆಯನ್ನು ತರುತ್ತದೆ ಎಂಬುದನ್ನು ಗಮನಿಸಿದ. ಹಾಗಾಗಿ ಮೊಟ್ಟ ಮೊದಲ ಬಾರಿಗೆ ಮಾನವ ನಿರ್ಮಿತ ಶಾಮಕ ಹಾಗೂ ನಿದ್ರಾಜನಕ ಔಷಧವೊಂದು ವೈದ್ಯರಿಗೆ ಲಭಿಸಿತು. ಈ ಔಷಧವು ಅಲ್ಪಕಾಲದಲ್ಲೇ ಜನಪ್ರಿಯವಾಯಿತು. ವೈದ್ಯರು ಕ್ಲೋರಾಲ್ ಹೈಡ್ರೇಟನ್ನು ಆತಂಕಲಯಕಾರಕವಾಗಿ ಬಳಸಲಾರಂಭಿಸಿದರು. ಇದು ನಿದ್ರಾಹೀನತೆಯ ಪ್ರಕರಣಗಳಲ್ಲಿ, ಆತಂಕವನ್ನು ಶಮನಗೊಳಿಸಿ, ಉತ್ತಮ ನಿದ್ರೆಯನ್ನು ತರಲಾರಂಭಿಸಿತು. ಹಾಗೆಯೇ ಪ್ರಧಾನ ಶಸ್ತ್ರಚಿಕಿತ್ಸೆಗೆ ಒಳಗಾಗುವ ಮೊದಲು 'ಅರಿವಳಿಕೆ-ಪೂರ್ವ' ಔಷಧವಾಗಿ ಬಳಸಲಾರಂಭಿಸಿದರು. ಶಸ್ತ್ರಚಿಕಿತ್ಸೆ ಯಶಸ್ವಿಯಾಗುವುದೋ ಇಲ್ಲವೋ ಎಂದು ರೋಗಿ ಆತಂಕಕ್ಕೆ ಒಳಗಾಗಿರುತ್ತಾನೆ. ಅಂಥ ರೋಗಿಯನ್ನು ಶಾಂತಗೊಳಿಸಲು ಕ್ಲೋರಾಲ್ ಹೈಡ್ರೇಟನ್ನು ಪರಿಣಾಮಕಾರಿಯಾಗಿ ಉಪಯೋಗಿಸಲಾರಂಭಿಸಿದರು.

ಆತಂಕವನ್ನು ಅಲ್ಪಾವಧಿವರೆಗೆ ನಿಗ್ರಹಿಸಲು ಕ್ಲೋರಾಲ್ ಹೈಡ್ರೇಟ್ ಅತ್ಯುತ್ತಮ ಔಷಧ ಎಂದು ಪ್ರಸಿದ್ಧವಾಯಿತು. ಇದನ್ನು ದೀರ್ಘಾವಧಿವರೆಗೆ ಬಳಸಿದರೆ, ಇದು 'ತಾಳಿಕೆ' ಅಥವಾ 'ಟಾಲರನ್ಸ್' ಬೆಳೆಸಿಕೊಳ್ಳುವುದರ ಜತೆಯಲ್ಲಿ 'ಅವಲಂಬನೆ' ಅಥವಾ 'ಡಿಪೆಂಡೆನ್ಸ್'ಗಳನ್ನು ಬೆಳೆಸಿಕೊಳ್ಳುತ್ತದೆ ಎನ್ನುವ ಅಪಾಯಕಾರಿ ಹಾಗೂ ಬೇಸರದ ವಿಚಾರವು ಹೊರಬಂದಿತು. ತಾಳಿಕೆ ಎನ್ನುವುದಕ್ಕೆ ಉದಾಹರಣೆ- ದಿನಕ್ಕೆ ಒಂದು ಮಾತ್ರೆ ನಿದ್ರೆಯನ್ನು ತಂದರೆ, ಒಂದು ವಾರದ ನಂತರ ಒಂದು ಮಾತ್ರೆ ಸಾಕಾಗಲ್ಲ 2 ಬೇಕು; 4 ವಾರಗಳಾದ ಮೇಲೆ 3 ಮಾತ್ರೆ ಬೇಕು ಎನ್ನುವ ಸ್ಥಿತಿ. ಒಂದು ಘಟ್ಟದಲ್ಲಿ ಮಾತ್ರೆಯಿಲ್ಲದೇ ನಿದ್ರೆಯೇ ಬರುವುದಿಲ್ಲ ಎನ್ನುವಂತಾಗಬಹುದು. ಆಗ ಆತ ನಿದ್ರೆ ಮಾಡಲು ಮಾತ್ರೆಯನ್ನು ಅವಲಂಬಿಸಲೇಬೇಕಾದ ಅಸಹಾಯಕತೆಯುಂಟಾಗುತ್ತದೆ.

20ನೇ ಶತಮಾನದ ಆರಂಭದಲ್ಲಿ 'ಬಾರ್ಬಿಚುರೇಟ್' ಮತ್ತು 'ಬೆಂಜ಼ೋಡಯಾಜ಼ಿಪೈನ್ಸ್' ಎಂಬ ಹೊಸ ವರ್ಗದ ಔಷಧಗಳ ಸಂಶೋಧನೆಯಾದವು. ಇವು ಕ್ಲೋರಾಲ್ ಹೈಡ್ರೇಟಿಗಿಂತ ಉತ್ತಮ ಹಾಗೂ ಸುರಕ್ಷಿತ ಔಷಧಗಳಾಗಿದ್ದ ಕಾರಣ ಹೆಚ್ಚು ಬಳಕೆಗೆ ಬಂದವು. ಹಾಗಾಗಿ ವೈದ್ಯರು ಕ್ಲೋರಾಲ್ ಹೈಡ್ರೇಟಿನ ಉಪಯೋಗವನ್ನು ಕ್ರಮೇಣ ಕಡಿಮೆ ಮಾಡಿದರು. ಇಂದು ಕ್ಲೋರಾಲ್ ಹೈಡ್ರೇಟನ್ನು ಸಾಮಾನ್ಯವಾಗಿ ಯಾರೂ ಬಳಸುವುದಿಲ್ಲ.

ಅಮೆರಿಕದ 'ಫುಡ್ ಆ್ಯಂಡ್ ಡ್ರಗ್ ಅಡ್ಮಿನಿಸ್ಟ್ರೇಶನ್' ಮತ್ತು 'ಯುರೋಪಿಯನ್ ಮೆಡಿಸಿನ್ಸ್ ಏಜೆನ್ಸಿ' ಕ್ಲೋರಾಲ್ ಹೈಡ್ರೇಟ್ ಮಾರಾಟಕ್ಕೆ ಅನುಮತಿಸಿಲ್ಲ. ಅನುಮತಿಗಾಗಿ ಕಾಯುತ್ತಿರುವ ಔಷಧಗಳ ಪಟ್ಟಿಯಲ್ಲಿ ಕ್ಲೋರಾಲ್ ಹೈಡ್ರೇಟ್ ಸೇರಿದೆ. ಬ್ರಿಟನ್‌ನಲ್ಲಿ ತೀವ್ರ ಸ್ವರೂಪದ ನಿದ್ರಾಹೀನತೆಯ ಅಲ್ಪಾವಧಿ ಚಿಕಿತ್ಸೆಗೆ ಕ್ಲೋರಾಲ್ ಹೈಡ್ರೇಟನ್ನು ಬಳಸಬಹುದಾಗಿದೆ. ಭಾರತದಲ್ಲಿ ಕ್ಲೋರಾಲ್ ಹೈಡ್ರೇಟನ್ನು ಒಂದು ಔಷಧವಾಗಿ ಜೂನ್ 7, 1991 ಗೆಜೆಟ್ ಸೂಚನೆ ಜಿ.ಎಸ್.ಆರ್.ನಂ 304 (ಇ) ಅನ್ವಯ ಸಂಪೂರ್ಣ ನಿಷೇಧಿಸಲಾಗಿದೆ. ಆದರೆ ಕ್ಲೋರಾಲ್ ಹೈಡ್ರೇಟನ್ನು ಕಾರ್ಖಾನೆಗಳಲ್ಲಿ ನಾನಾ ಕಾರ್ಯಗಳಿಗೆ ಬಳಸುವ ಕಾರಣ, ಅದರ ಉತ್ಪಾದನೆಯನ್ನು ಪೂರ್ಣ ನಿಲ್ಲಿಸಿಲ್ಲ. ಬಹುಶಃ ನಿಲ್ಲಿಸಲು ಸಾಧ್ಯವೂ ಇಲ್ಲ. ಆದರೆ ಔಷಧವಾಗಿ ಮಾರುವುದನ್ನು ನಿಷೇಧಿಸಿದೆ.

ಅಮೆರಿಕದಲ್ಲಿ ಕ್ಲೋರಾಲ್ ಹೈಡ್ರೇಟನ್ನು 'ತಲೆತಲಾಂತರದ ಔಷಧ' (ಲೆಗಸಿ ಡ್ರಗ್) ಎಂಬ ಹಿನ್ನೆಲೆಯಲ್ಲಿ ಮಾರುತ್ತಿದ್ದರು. ಅಲ್ಲಿ 1938ರಲ್ಲಿ 'ಫೆಡರಲ್ ಫುಡ್, ಡ್ರಗ್ ಆ್ಯಂಡ್ ಕಾಸ್ಮೆಟಿಕ್ ಆಕ್ಟ್' ಬಂದ ಕಾರಣ, ಇದಕ್ಕೂ ಮೊದಲು ಬಳಕೆಯಲ್ಲಿದ್ದ ಔಷಧಗಳಿಗೆ ಈ ಕಾಯ್ದೆ ಅನ್ವಯವಾಗುವುದಿಲ್ಲ ಎಂದು ಗುಲ್ಲೆದ್ದಿತು. ಆದರೆ 2012ರ ವೇಳೆಗೆ ಅಮೆರಿಕದಲ್ಲಿದ್ದ ಎಲ್ಲ ಔಷಧ ಉತ್ಪಾದಕರು ಕ್ಲೋರಾಲ್ ಹೈಡ್ರೇಟ್ ಉತ್ಪಾದನೆಯನ್ನು ಸಂಪೂರ್ಣವಾಗಿ ನಿಲ್ಲಿಸಿದರು.

ಜಗತ್ತಿನ ಕಳ್ಳ ಮಾರುಕಟ್ಟೆಯಲ್ಲಿ ನಾನಾ ವಸ್ತುಗಳು ಮುಕ್ತವಾಗಿ ದೊರೆಯುವಂತೆ, ಕ್ಲೋರಾಲ್ ಹೈಡ್ರೇಟ್ ಸಹ ದೊರೆಯುತ್ತದೆ. ಇದು ತನ್ನ 'ಮಿಕಿ ಫಿನ್' ಪರಿಣಾಮಕ್ಕಾಗಿ ಕುಖ್ಯಾತವಾಗಿದೆ. ಅಮೆರಿಕದ ಚಿಕಾಗೊ ನಗರದ ಲೋನ್ ಸ್ಟಾರ್ ಸಲೂನ್ ಮತ್ತು ಪಾಮ್ ಗಾರ್ಡನ್ ರೆಸ್ಟೋರೆಂಟಿನಲ್ಲಿ, ಮೈಕೇಲ್ ಮಿಕಿ ಫಿನ್ ಎಂಬಾತ ಮಾದಕ ಪಾನೀಯಗಳನ್ನು ಸರಬರಾಜು ಮಾಡುವ ಮಾಣಿಯಾಗಿ ಕೆಲಸ ಮಾಡುತ್ತಿದ್ದ. ಇವನು ಸೂಕ್ತ ಗಿರಾಕಿಗಳನ್ನು ಆರಿಸಿಕೊಂಡು ಅವರ ಪಾನೀಯದಲ್ಲಿ ಕ್ಲೋರಾಲ್ ಹೈಡ್ರೇಟನ್ನು ಬೆರೆಸಿ ನೀಡುತ್ತಿದ್ದ. ಕ್ಲೋರಾಲ್ ಹೈಡ್ರೇಟಿನ ಪರಿಣಾಮವಾಗಿ ಅವರು ಆಳನಿದ್ರೆಗೆ ಜಾರುತ್ತಿದ್ದರು. ಆಗ ಅವರ ಬಳಿಯಿದ್ದ ಬೆಲೆಬಾಳುವ ವಸ್ತುಗಳನ್ನು ಕದಿಯುತ್ತಿದ್ದ. ಈ ಕೆಲಸವನ್ನು ಫಿನ್ ಮತ್ತು ಅವನ ಸಂಗಡಿಗರು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದರು. ಕೊನೆಗೆ ಈ ಗುಟ್ಟು ರಟ್ಟಾಯಿತು. 1903-05ರ ನಡುವೆ ನಡೆದ ಇವರ ಎಲ್ಲ ಚಟುವಟಿಕೆಗಳು ಬಹಿರಂಗವಾದವು. ಆಗ ಶಿಕಾಗೋ ದಿನಪತ್ರಿಕೆಗಳು, ಒಬ್ಬ ವ್ಯಕ್ತಿಯನ್ನು ಮತ್ತಿಗೀಡು ಮಾಡಿ ಅವನನ್ನು ದೋಚುವ ತಂತ್ರವನ್ನು ಸೂಚಿಸಲು 'ಮಿಕಿ ಫಿನ್' ಎಂಬ ಹೊಸ ನುಡಿಗಟ್ಟನ್ನು ಜಾರಿಗೆ ತಂದವು.

ಇಂದು 'ಮಿಕಿ ಫಿನ್' ನುಡಿಗಟ್ಟು ತನ್ನ ಮೂಲಕ್ಕಿಂತ ಹೆಚ್ಚಿನ ಅರ್ಥವನ್ನು ಒಳಗೊಂಡಿದೆ. ಒಬ್ಬ ವ್ಯಕ್ತಿಯನ್ನು ಚೆನ್ನಾಗಿ ಹೊಡೆಯಲು ಅಥವಾ ಅಪಹರಿಸಿ, ದೊಡ್ಡ ಮೊತ್ತದ ಹಣ ಕೇಳಲು ಮಿಕಿ ಫಿನ್ ತಂತ್ರಗಳನ್ನು ಬಳಸುವ ಪದ್ಧತಿಯಿದೆ. ಎಲ್ಲಕ್ಕಿಂತಲೂ ಅಪಾಯಕಾರಿ ಹಾಗೂ ಖಂಡನೀಯವಾದದ್ದು 'ಡೇಟ್ ರೇಪಿಂಗ್' ಎಂಬ ಕುಪ್ರಸಿದ್ಧ ವರ್ತನೆ. ಈಗಿನ ಕೆಲ ಹೆಣ್ಣು ಮಕ್ಕಳು ಗಂಡಸರಿಗಿಂತ ತಾವೇನೂ ಕಮ್ಮಿಯಿಲ್ಲವೆಂದು ತೋರಿಸಲು ತಡರಾತ್ರಿಯ ಪಾರ್ಟಿಗಳಿಗೆ ಹೋಗುವುದುಂಟು. ಅಲ್ಲಿ ಅವರ ಸಹೋದ್ಯೋಗಿಗಳೇ ಕ್ಲೋರಾಲ್ ಹೈಡ್ರೇಟಿನಂಥ ಮತ್ತು ಬರಿಸುವ ಔಷಧಗಳನ್ನು ಆ ಹೆಣ್ಣು ಮಕ್ಕಳ ಪಾನೀಯದಲ್ಲಿ ಬೆರೆಸುವರು. ಅದನ್ನು ಸೇವಿಸಿದ ಅವರು ಮತ್ತಿಗೀಡಾಗಿ ಪ್ರಜ್ಞೆ ಕಳೆದುಕೊಳ್ಳುವುದುಂಟು. ಆಗ ಅವರ ಮೇಲೆ ಹಠಸಂಭೋಗ ಮಾಡಿ, ಅದನ್ನು ಚಿತ್ರೀಕರಿಸಿ, ಜೀವನಪರ್ಯಂತ ಬ್ಲಾಕ್ ಮೇಲ್ ಮಾಡುವುದುಂಟು. ಹೀಗೆ ಮೋಸಕ್ಕೊಳಗಾದ ಬಹಳಷ್ಟು ಹೆಣ್ಣು ಮಕ್ಕಳು 'ಮಾನಕ್ಕಂಜಿ' ಸುಮ್ಮನಿರಬೇಕಾಗುತ್ತದೆ. ಇಂಥ ಪ್ರಕರಣಗಳು ಹೊರಬರುವುದು ಬಹಳ ಕಡಿಮೆ. ಪೊಲೀಸಿಗೆ ದೂರಿತ್ತರೂ ಪ್ರಯೋಜನವಾಗದು. ಏಕೆಂದರೆ ಇಂಥ ಔಷಧಗಳು ಅಲ್ಪಾವಧಿಯಲ್ಲಿ ದೇಹದಿಂದ ವಿಸರ್ಜನೆಗೊಳ್ಳುತ್ತವೆ. ರಕ್ತ ಇಲ್ಲವೇ ಮೂತ್ರ ಪರೀಕ್ಷೆಗಳ ಮೂಲಕ ಪತ್ತೆ ಹಚ್ಚುವ ಸಾಧ್ಯತೆ ಕ್ಷೀಣವಾಗುತ್ತದೆ. ಹಾಗಾಗಿ 'ಪ್ರಿವೆನ್ಷನ್ ಈಸ್ ಬೆಟರ್ ದ್ಯಾನ್ ಕ್ಯೂರ್' ಎಂಬಂತೆ, ನಮ್ಮ ಹೆಣ್ಣು ಮಕ್ಕಳು ತಂತಮ್ಮ ಎಚ್ಚರಿಕೆಯಲ್ಲಿ ತಾವಿರುವುದು ಉತ್ತಮ.

ಜೀವನ ಮಾರ್ಗದರ್ಶಿ ಭಗವದ್ಗೀತಾ

ಗೀತೆಯ ಎಲ್ಲ ಭಾಗವೂ ನಮಗೆ ಒಂದೇ ಸಮನಾಗಿ ಅರ್ಥವಾಗುವುದಿಲ್ಲ. ನಮ್ಮ ನಮ್ಮ ಶ್ರದ್ಧೆ, ನೈತಿಕತೆ, ಬುದ್ಧಿಶಕ್ತಿ ಯಾವ ಯಾವ ಮಟ್ಟದ್ದೋ ಹಾಗೇ ಗೀತೆ ಅರ್ಥವಾಗುತ್ತಾ ಹೋಗುತ್ತದೆ. ಅಂದರೆ ನಮ್ಮ ಬೆಳವಣಿಗೆಗೆ ತಕ್ಕಂತೆ ಗೀತೆ ಅರ್ಥವಾಗುತ್ತಾ ಹೋಗುತ್ತದೆ. ನಾವು ಪರಿಪಕ್ವಗೊಂಡಂತೆಲ್ಲಾ ಭಗವಂತನ ಮಾತುಗಳು ನಮಗೆ ಅರ್ಥವಾಗುತ್ತದೆ.

ಗೀತಮಾಧುರ್ಯ
ಕೆ.ಲೀಲಾವತಿ
vveditoped@gmail.com

ಪ್ರತಿಯೊಬ್ಬ ಮನುಷ್ಯನಿಗೂ ತಾನು ಚೆನ್ನಾಗಿ ಬದುಕಬೇಕು, ತಾನು ಸಂತೋಷವಾಗಿರಬೇಕು ಅಂತಿರುತ್ತದೆ. ಯಾರನ್ನು ನೋಡಿದರೂ ಸುಖದ ಹುಡುಕಾಟದಲ್ಲಿದ್ದಂತೆ ಕಾಣುತ್ತದೆ. ಹಾಗಾದರೆ ನಮ್ಮ ಬದುಕನ್ನು ಸುಖವಾಗಿ ಚಂದವಾಗಿ ಮಾಡುವುದು ಹೇಗೆ? ನಮಗೆ ಯಾವುದು ಸುಖ ಎಂದು ಹೇಳುವುದು ನಮಗೇ ಸುಲಭವಲ್ಲ. ಇಂದು ನಮಗೆ ಸುಖವೆನಿಸಿದ್ದು ನಾಳೆ ಬೇಸರ ತರಿಸಬಹುದು. ನಮ್ಮಲ್ಲಿಯೇ ನಮಗೆ ಸ್ಪಷ್ಟವಾಗಿರದ ಸುಖದ ಕಲ್ಪನೆಯನ್ನು ಇಲ್ಲವಾಗಿಸಿ 'ಇದು ಸುಖ' ಎಂದು ಸ್ಪಷ್ಟವಾಗಿಸುವ ಗ್ರಂಥವೇ ಭಗವದ್ಗೀತೆ. ನಮ್ಮ ನಿಜ ಸುಖ ಏನೆಂದು ತಿಳಿದುಕೊಳ್ಳಬೇಕಾದರೆ ಭಗವದ್ಗೀತೆಯನ್ನು ತಿಳಿಯಬೇಕು. ನಮ್ಮ ಸುಖದ ನೆಲೆಯನ್ನು ತಿಳಿಸುವುದೇ ಭಗವದ್ಗೀತೆಯ ಉದ್ದೇಶ. ಇಲ್ಲಿನ ತತ್ವಗಳನ್ನು ಚಿಂತನ ಮಾಡಿ, ಮನನ ಮಾಡಿದಷ್ಟೂ ಅದರ ಆಳ-ಅಗಲ ಅರಿವಾಗುತ್ತಾ ಹೋಗುತ್ತದೆ. ಆದ್ದರಿಂಲೇ ಭಗವದ್ಗೀತೆ ಬಗ್ಗೆ ಅಷ್ಟೊಂದು ವಿವರಣೆಗಳು, ವ್ಯಾಖ್ಯಾನಗಳು ಬಂದಿರುವುದು. ನಾವು ಯಾವುದೋ, ಯಾರದ್ದೋ ವ್ಯಾಖ್ಯಾನ ಓದಿ ಅದರಂತೆ ಅಥವಾ ಅದಷ್ಟೇ ಭಗವದ್ಗೀತೆ ಎಂದು ತಿಳಿಯುವ ಅಗತ್ಯವಿಲ್ಲ. ಒಂದು ಮಟ್ಟಿಗೆ ಭಗವದ್ಗೀತೆಯನ್ನು ತಿಳಿಯಲು ಅವು ಸಹಾಯ ಮಾಡಬಹುದು. ಇದರಲ್ಲಿರುವ ಬರೀ ಏಳುನೂರು ಶ್ಲೋಕಗಳನ್ನಷ್ಟೇ ಓದಿ ಮತ್ತೆ ಮತ್ತೆ ಮನನ ಮಾಡಬೇಕು. ಇದೊಂದು ಧ್ಯಾನಯೋಗ್ಯ ಗ್ರಂಥ. ಧೇನಿಸಿದಷ್ಟೂ ಮತ್ತೆ ಮತ್ತೆ ಆನಂದವನ್ನೀಯುವ ಗ್ರಂಥ ಭಗವದ್ಗೀತೆ.

ಹಾಗೆಂದು ಭಗವದ್ಗೀತೆ ಓದಿಬಿಟ್ಟರೆ ನಮ್ಮೆಲ್ಲಾ ಕಷ್ಟಗಳು ಇಲ್ಲವಾಗುತ್ತದೆ, ನಮಗೆ ಹಸಿವೇ ಆಗುವುದಿಲ್ಲ, ನೀರಡಿಕೆಯೇ ಆಗುವುದಿಲ್ಲ ಅಂತಲ್ಲ. ಇರೋ ದುಃಖ ಇರೋದೇ. ಕಷ್ಟ ಇರೋದೇ. ಆದರೆ ಆ ಎಲ್ಲಾ ಕಷ್ಟಗಳ ನಡುವೆಯೂ ನಮ್ಮ ಮನಸ್ಸನ್ನು ಸಮಸ್ಥಿತಿಯಲ್ಲಿ ಇಟ್ಟುಕೊಳ್ಳುವುದನ್ನು ತಿಳಿಯಬೇಕಾದರೆ ಭಗವದ್ಗೀತೆಯನ್ನು ಓದಬೇಕು. ಅದು ಮೋಕ್ಷಶಾಸ್ತ್ರವಷ್ಟೇ ಅಲ್ಲ, ಜೀವನಶಾಸ್ತ್ರವೂ ಹೌದು. ಇದೊಂದು ಅನುಸಂಧಾನ ಗ್ರಂಥ. ನಮ್ಮ ವ್ಯಕ್ತಿತ್ವವನ್ನು ಗಟ್ಟಿಗೊಳಿಸುವ ಗ್ರಂಥ.

ಇಲ್ಲಿ ಕುರುಕ್ಷೇತ್ರ ಸಾಂಕೇತಿಕ. ಕೃಷ್ಣನ ಮಾತುಗಳು ನಮಗೂ ಅನ್ವಯವಾಗುತ್ತವೆ. ಕೃಷ್ಣ ನಮ್ಮ ಆತ್ಮವಿಶ್ವಾಸದ ಸಂಕೇತ. ಭಗವದ್ಗೀತೆಯು ಒಂದು ಸಂವಾದ ಗ್ರಂಥ. ನಮ್ಮೆಲ್ಲರ ಪ್ರತಿರೂಪನಂತಿರುವ ನರಮಾನವನಾದ ಅರ್ಜುನ ಮತ್ತು ಕೃಷ್ಣ ಭಗವಂತನೊಡನೆ ನಡೆಸಿದ ಸಂವಾದ. ಅದೂ ಋಷ್ಯಾಶ್ರಮದಲ್ಲಿ ಅಲ್ಲ, ಕುರುಕ್ಷೇತ್ರದಲ್ಲಿ! ಅದರಲ್ಲೂ ಎರಡೂ ಕಡೆಯ ಸೈನ್ಯ ಯುದ್ಧ ಸನ್ನದ್ಧವಾಗಿರುವಾಗ! ಇದಕ್ಕಿಂತ ಕಷ್ಟದ ಸನ್ನಿವೇಶ ಮತ್ತಾವುದಿದ್ದೀತು?

ಅರ್ಜುನನ ರಥ ನಡೆಸಿದವನು ಶ್ರೀಕೃಷ್ಣ. ಹಾಗೆಯೇ ನಮ್ಮ ಜೀವನ ರಥವನ್ನು ನಡೆಸುವವನೂ ಅವನೇ. ಅವನ ನಿರಂತರ ಸ್ಮರಣೆಯಿಂದ ನಮಗೆ ಜಯ ದೊರಕುವುದು.

ಭಗವದ್ಗೀತೆ ಮಹಾಭಾರತದ ಒಂದು ಭಾಗ, ಆದರೂ ಅದೊಂದು ಸ್ವತಂತ್ರ ಕೃತಿಯೆಂದೇ ಹೇಳಬಹುದು. ಇಡೀ ಮಹಾಭಾರತದಲ್ಲಿ ಶ್ರೀಕೃಷ್ಣ ಬರುವ ಸನ್ನಿವೇಶಗಳನ್ನು ಹೇಳುವಾಗ 'ಶ್ರೀ ಕೃಷ್ಣ ಉವಾಚ' ಎಂದೇ ಹೇಳಲಾಗಿದೆ. ಆದರೆ ಭಗವದ್ಗೀತೆಯಲ್ಲಿ ಮಾತ್ರ 'ಶ್ರೀ ಭಗವಾನುವಾಚ' ಎಂದು ಹೇಳಲಾಗಿದೆ. ಇಲ್ಲಿ ಭಗವಂತನು ತನ್ನ ಮೂಲನೆಲೆಯಲ್ಲಿ ನಿಂತು ಹೇಳಿದ್ದಾನೆ. ಸಾಕ್ಷಾತ್ ಭಗವಂತನೇ ಹೇಳಿದ್ದರಿಂದ ಇದು ಭಗವದ್ಗೀತೆ. ಇದು ಈ ನೆಲದ ತತ್ವಗಳನ್ನು, ದಾರ್ಶನಿಕತೆಯನ್ನು ಹೇಳುವ ಪ್ರಮಾಣ ಗ್ರಂಥವಾಗಿದೆ. ಇಲ್ಲಿ ಹೇಳುವ ಯಜ್ಞವ್ಯವಸ್ಥೆಯು ವೇದ ಗಳಲ್ಲಿ ಕಂಡುಬರುವ ಕರ್ಮಕಾಂಡದ ನೆಲೆಯದಲ್ಲ. ಇಲ್ಲಿಯ ಪ್ರಕಾರ ಜೀವನವೇ ಒಂದು ಯಜ್ಞ. ಇಲ್ಲಿ ಯಾವ ಪಂಥದ ಪಂಗಡದ ಧೋರಣೆಗಳಿಲ್ಲ. ಇಲ್ಲಿ ವೈದಿಕ ಸಂಪ್ರದಾಯವನ್ನು ಸಮರ್ಥಿಸುವು ದಾಗಲೀ, ಅವೈದಿಕ ಸಂಪ್ರದಾಯವನ್ನು ನಿಂದಿಸುವುದಾಗಲೀ ಇಲ್ಲ. ಇಲ್ಲಿ ಯಾವುದೇ ದೇವತಾ ಪೂಜೆ, ದೇವಸ್ಥಾನಗಳು, ತೀರ್ಥ ಯಾತ್ರೆಗಳು, ವ್ರತಗಳ ಬಗ್ಗೆಯಾಗಲೀ ಬರುವುದಿಲ್ಲ. ಇಲ್ಲಿ ಬರುವುದು ಕೇವಲ ಆತ್ಮಚಿಂತನೆ ಮಾತ್ರ.

ಇಲ್ಲಿ ಹೇಳಿದ್ದು ಶ್ರೀಕೃಷ್ಣನೇ ಆದರೂ ತಾನು ಹೇಳಿದ್ದೇ ಸರಿ, ಹೀಗೇ ನಡೆದುಕೊಳ್ಳಬೇಕೆಂದು ಬಲವಂತ ಮಾಡುವುದಿಲ್ಲ. ಭಗವದ್ಗೀತೆ ಮುಗಿಯುವುದು ಈ ಶ್ಲೋಕದಿಂದ- ''ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ, ವಿಮೃಶ್ಯೈತದಶೇಷೇಣ, ಯಥೇಚ್ಛಸಿ ತಥಾ ಕುರು'' (18.63)- ''ಹೀಗೆ ರಹಸ್ಯಕ್ಕಿಂತಲೂ ರಹಸ್ಯವಾದ ಜ್ಞಾನವನ್ನು ಹೇಳಿದ್ದೇನೆ. ನಾನು ಹೇಳಿದ್ದನ್ನೆಲ್ಲ ಚೆನ್ನಾಗಿ ವಿಚಾರ ಮಾಡಿ, ನಿನಗೆ ಯಾವುದು ಸರಿಯೋ ಹಾಗೆ ನಡೆದುಕೋ'' ಎನ್ನುತ್ತಾನೆ. ಇದಕ್ಕಿಂತ ಸ್ವಾತಂತ್ರ್ಯ ಮತ್ತೆಲ್ಲಿ ಸಿಕ್ಕೀತು?

ಕೊನೆಗೆ ಭಗವಂತನ ಉಪದೇಶವನ್ನು ಕೇಳಿದ ನಂತರ ಅರ್ಜುನ ಹೇಳಿದ್ದು- ''ನಷ್ಟೋ ಮೋಹಃ ಸ್ಮೃತಿರ್ಲಬ್ಧಾ, ತ್ವತ್ಪ್ರಸಾದಾನ್ಮಯಾಚ್ಯುತ, ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂತವ'' (18.73)- ''ಎಲೈ ಅಚ್ಯುತನೇ, ನಿನ್ನ ಕೃಪೆಯಿಂದ ನನ್ನ ಮೋಹ ನಾಶವಾಯಿತು, ನನಗೆ ಜ್ಞಾನೋದಯವಾಗಿದೆ, ಯಾವುದೇ ಸಂದೇಹವಿಲ್ಲದವನಾಗಿದ್ದೇನೆ. ನಿನ್ನ ಆಜ್ಞೆಯನ್ನು ಪರಿಪಾಲಿಸುತ್ತೇನೆ''.

ಭಯದಿಂದ, ಮೋಹದಿಂದ ಗಾಂಡೀವವನ್ನು ಬೀಳಿಸಿಕೊಂಡಿದ್ದ ಅರ್ಜುನ ಅದನ್ನು ಎತ್ತಿ ಹಿಡಿದ. ಇದನ್ನು ನೋಡಿದ ಮೇಲೆ ನಮಗೆ ಗೊತ್ತಾಗುತ್ತದೆ, ಭಗವದ್ಗೀತೆ ಮುಪ್ಪಡರಿದ ಮೇಲೆ ಅಲ್ಲ, ಈಗಲೇ ಈ ಕ್ಷಣಕ್ಕೇ ಚಂದದ ಬದುಕು ಬೇಕು ಅನ್ನುವವರಿ ಗಿರೋದು ಅಂತ. ಬದುಕಿನ ಕಷ್ಟ ಕಾರ್ಪಣ್ಯಗಳ ನಡುವೆಯೂ ಸಮಾಧಾನ ಪಡೆಯಲು ಗೀತೆ ಸಹಕಾರಿ. ಯಾವುದೇ ಕರ್ತವ್ಯವಾದರೂ ಸರಿ ಓಡಿಹೋಗಬಾರದು. ಲೋಕಸಂಗ್ರಹಕ್ಕಾಗಿ ಮತ್ತು ನಮ್ಮದೇ ಏಳಿಗಾಗಿ ನಮ್ಮ ಪಾಲಿನ ಕೆಲಸವನ್ನು ನಾವು ಮಾಡಲೇಬೇಕು. ಇಲ್ಲಿ ಅರ್ಜುನನ್ನು ನಿಮಿತ್ತವಾಗಿರಿಸಿ ಸಮಸ್ತ ಮನುಕುಲಕ್ಕೇ ಹೇಳಿದ ಉಪದೇಶವಿದು. ಇದನ್ನು ಹತ್ತಾರು ಬಾರಿ ಓದಿದರೂ, ವಿಮರ್ಶೆ ಮಾಡಿದರೂ ಮತ್ತೆ ಮತ್ತೆ ಹೊಸತನ್ನು ಕೊಡುತ್ತಿರುತ್ತದೆ. ಆದ್ದರಿಂದಲೇ ಭಗವದ್ಗೀತೆಯ ಬಗ್ಗೆ ಅಷ್ಟೊಂದು ವ್ಯಾಖ್ಯಾನಗಳು, ವಿಮರ್ಶೆಗಳು.

ಗೀತೆಯ ಎಲ್ಲ ಭಾಗವೂ ನಮಗೆ ಒಂದೇ ಸಮನಾಗಿ ಅರ್ಥವಾಗುವುದಿಲ್ಲ. ನಮ್ಮ ನಮ್ಮ ಶ್ರದ್ಧೆ, ನೈತಿಕತೆ, ಬುದ್ಧಿಶಕ್ತಿ ಯಾವ ಯಾವ ಮಟ್ಟದ್ದೋ ಹಾಗೇ ಗೀತೆ ಅರ್ಥವಾಗುತ್ತಾ ಹೋಗುತ್ತದೆ. ಅಂದರೆ ನಮ್ಮ ಬೆಳವಣಿಗೆಗೆ ತಕ್ಕಂತೆ ಗೀತೆ ಅರ್ಥವಾಗುತ್ತಾ ಹೋಗುತ್ತದೆ. ನಾವು ಪರಿಪಕ್ವಗೊಂಡಂತೆಲ್ಲಾ ಭಗವಂತನ ಮಾತುಗಳು ನಮಗೆ ಅರ್ಥವಾಗುತ್ತದೆ. ಅರ್ಥವಾಗಲಿಲ್ಲವೆಂದು ಬದಿಗಿರಿಸಿದರೆ ಅದು ನಮಗೆ ನಾವೇ ಮಾಡಿಕೊಳ್ಳುವ ನಷ್ಟ. ಸದ್ಯಕ್ಕೆ ಅರ್ಥವಾದಷ್ಟು ಗ್ರಹಿಸಿ ಮನನ ಮಾಡುತ್ತಿದ್ದರೆ ಕ್ರಮೇಣ ಅದರ ಆಳ ಹಾಗೂ ಹರಹು ಅರಿವಾಗುತ್ತಾ ಹೋಗುತ್ತದೆ. ಬದುಕು ಸುಂದರವಾಗುತ್ತಾ ಹೋಗುತ್ತದೆ. ಆದ್ದರಿಂದ ಗೀತೆ ನಮ್ಮ ನಿತ್ಯಪಠಣ ಗ್ರಂಥವಾಗಲಿ.

(ಲೇಖಕಿ ಹವ್ಯಾಸಿ ಬರಹಗಾರ್ತಿ)

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಆದೇಶಕ್ಕೆ ಕಿಮ್ಮತ್ತಿಲ್ಲವೇ?

ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಅಧಿಕಾರಿ ಹುದ್ದೆಗೆ ನೇರವಾಗಿ ಆಯ್ಕೆಗೊಂಡವರನ್ನು, ಹುದ್ದೆ ಖಾಲಿಯಿದ್ದರೂ 'ಸ್ಥಳ ನಿರೀಕ್ಷಣೆಯಲ್ಲಿ' ಇಟ್ಟು, ಆ ಆಡಳಿತಾತ್ಮಕ ಹುದ್ದೆಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರನ್ನು ನಿಯೋಜಿಸಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಕೆಲ ಜಿಲ್ಲೆಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಳಪೆ ಫಲಿತಾಂಶ ಬಂದಿತ್ತು. ಇದಕ್ಕೆ ಪ್ರಾಂಶುಪಾಲರನ್ನೇ ಹೊಣೆಮಾಡಿ ನಿರ್ದೇಶನಾಲಯವೇ ಇತ್ತೀಚೆಗೆ ನೋಟಿಸ್ ನೀಡಿದ್ದರೂ, ನಿಯೋಜನೆ ನ್ಯಾಯಾಲಯದ ತೀರ್ಪಿನ ಸ್ಪಷ್ಟ ಉಲ್ಲಂಘನೆಯಾಗಿದ್ದರೂ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರು ತಮಗೇನೂ ತಿಳಿಯದ ವರಂತೆ, ಪಕ್ಕಾ ರಾಜಕಾರ ಣಿಯಂತೆ ವರ್ತಿಸುತ್ತಾರೆ; ಆ ಬಗ್ಗೆ ನಿರ್ದೇಶಕರನ್ನು ಕೇಳುವಂತೆ, ತಮ್ಮಲ್ಲಿ ಮಾಹಿತಿ ಇಲ್ಲದಿರುವುದರಿಂದ ಮಾಹಿತಿ ಪಡೆದುಕೊಂಡು ಮಾತನಾಡುವುದಾಗಿ ನಯವಾಗಿ ಜಾರಿಕೊಳ್ಳುತ್ತಾರೆ. ಮತ್ತೊಂದೆಡೆ ಅಲ್ಪಸಂಖ್ಯಾತರ ಇಲಾಖೆಯ ನಿರ್ದೇಶಕರು, 'ವರ್ಗಾವಣೆ ಮತ್ತು ನಿಯೋಜನೆಯು ಸರಕಾರದ ಹಂತದಲ್ಲಿ ನಡೆ ಯುತ್ತದೆ' ಎಂದು ಹೇಳುವ ಮೂಲಕ ಜವಾಬ್ದಾರಿಯನ್ನು ಸರಕಾರದ ಹಂತದವರ ಹೆಗಲಿಗೇರಿಸುತ್ತಾರೆ! ಬೋಧಕರನ್ನು ಬೋಧಕೇತರ ಹುದ್ದೆಗಳಿಗೆ ನಿಯೋಜಿಸಬಾರದೆಂಬ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ಸ್ಪಷ್ಟ ತೀರ್ಪುಗಳಿಗೆ ಹಾಗೂ ಅವುಗಳ ಅನ್ವಯ ಅಲ್ಪಸಂಖ್ಯಾತರ ನಿರ್ದೇಶನಾಲಯವೇ ಹೊರಡಿಸಿರುವ ಸುತ್ತೋಲೆಗೆ ವ್ಯತಿರಿಕ್ತವಾಗಿ ಇಂಥ ನಿಯೋಜನೆ ನಡೆದಿರುವುದು ಸಖೇದಾಶ್ಚರ್ಯವನ್ನು ಉಂಟುಮಾಡುತ್ತದೆ. ಇದಕ್ಕೆ ಕಾರಣರಾದವರನ್ನು ಹುಡುಕುವುದು ಕಷ್ಟದ ಕೆಲಸವೇನಲ್ಲ, 'ಮೇಲಿನವರ' ಮೌಖಿಕ ಅಥವಾ ಲಿಖಿತ ಆದೇಶ ಅಥವಾ ಒತ್ತಡವಿಲ್ಲದೆ ನಿಯೋಜನೆಯ ಆದೇಶ ಹೊರಟಿರಲಾರದು. ಒಂದು ವೇಳೆ ಹಾಗೇನಾದರೂ ಆಗಿದ್ದರೆ, ಅಂಥ ಆದೇಶವನ್ನು ಹೊರಡಿಸಿರುವವರನ್ನೂ ಅಥವಾ ಹಾಗಿಲ್ಲದಿದ್ದರೆ ಅದಕ್ಕೆ ಕಾರಣರಾದ ಇತರರನ್ನೂ ಶಿಕ್ಷೆಗೆ ಗುರಿಪಡಿಸಲೇಬೇಕಾದ ಅವಶ್ಯಕತೆಯಿದೆ. ಇಲ್ಲವಾದರೆ ನ್ಯಾಯಾಲಯದ ಆದೇಶಗಳಿಗೆ ಕಿಮ್ಮತ್ತೇ ಇಲ್ಲದಂತಾಗುತ್ತದೆ.

- ಪುಟ್ಟೇಗೌಡ, ಬೆಂಗಳೂರು

ಮರೆಯಲಾಗದ ಮುತ್ಸದ್ದಿ

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ರಾಜಕಾರಣದಲ್ಲೇ ಆಗಲಿ, ಅದನ್ನು ಹೊರತುಪಡಿಸಿದ ವೈಯಕ್ತಿಕ ನೆಲೆಗಟ್ಟಿನಲ್ಲೇ ಆಗಲಿ ಅಜಾತ ಶತ್ರುವಾಗಿದ್ದರು ಎಂಬುದು ನಿರ್ವಿವಾದದ ಸಂಗತಿ. ರಾಜಕಾರಣದಲ್ಲಿ ಖಚಿತ ನಡೆ-ನುಡಿಗಳನ್ನು ಹೊಮ್ಮಿಸುತ್ತಿದ್ದ ಅವರು ಸರಳತೆ ಮತ್ತು ಸಜ್ಜನಿಕೆಯ ಮೂರ್ತಿಯಾಗಿದ್ದರೂ. ಮಾತಿನಲ್ಲಾಗಲೀ ವರ್ತನೆಯಲ್ಲಾಗಲೀ ಯಾರೊಂದಿಗೂ ವಿರೋಧ ಕಟ್ಟಿಕೊಳ್ಳದ ಈ ಸಜ್ಜನ ರಾಜಕಾರಣಿ, ರಾಜಕಾರಣಕ್ಕೆ ಹೊಸ ಭಾಷ್ಯವನ್ನು ಬರೆದರು ಎಂದರೆ ಅತಿಶಯೋಕ್ತಿ ಆಗಲಾರದು. ತಮ್ಮ ಈ ಸ್ವಭಾವದಿಂದಾಗಿ ವಿರೋಧಿಗಳನ್ನೂ ಸ್ನೇಹಿತರನ್ನಾಗಿಸಿಕೊಳ್ಳುತ್ತಿದ್ದ ಅಪರೂಪದ ಹಾಗೂ ಮಾದರಿ ರಾಜಕಾರಣಿಯಾಗಿದ್ದರು ಕೃಷ್ಣ. ಆ ನೆಲೆಯಲ್ಲಿ ಹೇಳುವುದಾದರೆ, ಅವರು ರಾಜಕಾರಣದ 'ಧ್ರುವನಕ್ಷತ್ರ'ವೇ ಸರಿ. ತಾವು ಹಾಕಿಕೊಟ್ಟ ಈ ಮೇಲ್ಪಂಕ್ತಿಯನ್ನು ಅನುಸರಿಸಿದರೆ, ದ್ವೇಷವಿಲ್ಲದೆ ಮತ್ತು ಸಂಘರ್ಷವಿಲ್ಲದೆ ರಾಜಕಾರಣ ಮಾಡಬಹುದು; ಜನರಿಗೆ ಒಳ್ಳೆಯ ಆಡಳಿತ ತಲುಪುವಂತಾಗಲು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಕೈಜೋಡಿಸಬಹುದು ಎಂಬುದನ್ನು ತೋರಿಸಿಕೊಟ್ಟ ಮುತ್ಸದ್ದಿ ಎಸ್.ಎಂ.ಕೃಷ್ಣ. ಅವರು ಈಗ ನಮ್ಮನ್ನು ಅಗಲಿರುವುದು ರಾಜಕೀಯ ಕ್ಷೇತ್ರಕ್ಕೆ ಆದ ನಷ್ಟವೇ ಸರಿ.

- ಎಂ ಪರಮೇಶ್ವರ, ಮದ್ದಿಹಳ್ಳಿ

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 352

ಕೃಷ್ಣ ನಮನ

1948
ಮಹಾಜನ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪೂರೈಸಿದ ಕೃಷ್ಣ ಅವರು ಬಳಿಕ ಯುವರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಓದಿದರು. ಬಳಿಕ ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರ, ಇತಿಹಾಸ ಹಾಗೂ ರಾಜ್ಯಶಾಸ್ತ್ರ ವಿಷಯದಲ್ಲಿ ಬಿಎ ಪದವಿ ಮುಗಿಸಿದ್ದರು.

1999
1999ರಲ್ಲಿ ನಾಗಮಂಗಲ್ರದಿಂದ ಶಾಸಕರಾಗಿ ಆಯ್ಕೆಯಾದ ತಾವು ಜಿಲ್ಲೆಯ ಏಕೈಕ ಜನತಾ ಪರಿವಾರ ದ ಶಾಸಕನಾಗಿದ್ದೆ. ಅಂದು ಮುಖ್ಯಮಂತ್ರಿ ಯಾಗಿದ್ದ ಮದ್ದೂರು ಕ್ಷೇತ್ರದ ಶಾಸಕ ಎಸ್.ಎಂ.ಕೃಷ್ಣ ನನ್ನನ್ನು ಕಾಂಗ್ರೆಸ್‌ಗೆ ಕರೆದಿದ್ದರು. ನಾನು ಹೋಗಲಿಲ್ಲ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ನೆನೆಪಿಸಿಕೊಂಡರು.

2023
ಎಸ್.ಎಂ.ಕೃಷ್ಣ ಅವರ ನಿವಾಸಕ್ಕೆ ಮದ್ದೂರು ಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ಬಳಿಕ ಭೇಟಿ ನೀಡಿದೆ. ಆಗ ತುಂಬು ಹೃದಯದಿಂದ ಆಶೀರ್ವದಿಸಿ ಕ್ಷೇತ್ರದ ಅಭಿವೃದ್ಧಿಗೆ ಕಾಳಜಿ ವಹಿಸುವಂತೆ ಹೇಳಿದ ಕಿವಿಮಾತು ಇಂದಿಗೂ ನೆನಪಿರುವುದಾಗಿ ಶಾಸಕ ಕೆ.ಎಂ.ಉದಯ ಭಾವುಕರಾದರು.

ಅಶ್ರುತರ್ಪಣ

ಮೈಸೂರು ಮಾಜಿ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರ ನಿಧನಕ್ಕೆ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ತೀವ್ರ ಸಂತಾಪ ವ್ಯಕ್ತಪಡಿಸಿ, ಅವರ ಆತ್ಮಕ್ಕೆ ಮುಕ್ತಿಗಾಗಿ ಪ್ರಾರ್ಥಿಸಿದ್ದಾರೆ. ಕೃಷ್ಣ ನಲವತ್ತು ವರ್ಷಗಳಿಂದ ಮೈಸೂರಿನ ಅವಧೂತ ದತ್ತ ಪೀಠಕ್ಕೆ ಬರುತ್ತಿದ್ದರು. ಆಧ್ಯಾತ್ಮಿಕ ಹಾಗೂ ಧಾರ್ಮಿಕ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದರು. ಕೃಷ್ಣ ಈ ನಾಡು ಕಂಡ ಅಪ್ರತಿಮ ನಾಯಕ.

–ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ, ಮೈಸೂರು

ಎಸ್.ಎಂ.ಕೃಷ್ಣ ಅವರ ನಿಧನದಿಂದ ಮನಸ್ಸಿಗೆ ಅಪಾರ ನೋವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಅವರ ಕುಟುಂಬಕ್ಕೆ ಹಾಗೂ ಅವರ ಅಪಾರ ಅಭಿಮಾನಿ ಬಳಗಕ್ಕೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ.

–ಡಾ.ಎಂ.ಸಿ.ಸುಧಾಕರ್, ಸಚಿವರು

ಎಸ್.ಎಂ.ಕೃಷ್ಣ ಅವರು ಅಪರೂಪದ ರಾಜಕಾರಣಿ, ರಾಜಕೀಯದಲ್ಲಿ ಹಲವು ಹುದ್ದೆಗಳನ್ನು ಅಲಂಕರಿಸಿ ಸಮ ರ್ಥವಾಗಿ ನಿಭಾಯಿಸಿ ಮೆಚ್ಚುಗೆ ಪಾತ್ರ ವಾಗಿದ್ದಾರೆ. ಸಿದ್ದಗಂಗಾ ಮಠದ ಪ್ರೇರಣೆಯಿಂದ ರಾಜ್ಯದಲ್ಲಿ ಶಾಲಾ ಮಕ್ಕಳಿಗೆ ಬಿಸಿ ಊಟ ಯೋಜನೆ ಜಾರಿಗೊಳಿಸಿದರು. ಕೆಂಪೇಗೌಡ ವಿಮಾನ ನಿಲ್ದಾಣ, ಐಟಿ,ಬಿಟಿ ತಂತ್ರಜ್ಞಾನ ತಂದು ಬೆಂಗಳೂರನ್ನು ಅಭಿವೃದ್ಧಿಪಡಿಸಿದ ಹೆಮ್ಮೆ ಅವರಿಗೆ ಸಲ್ಲಬೇಕು.

–ವಿ.ಸೋಮಣ್ಣ, ಕೇಂದ್ರ ಸಚಿವ.

ಎಸ್.ಎಂ.ಕೃಷ್ಣ ವಿದೇಶಾಂಗ ಸಚಿವರಾಗಿ ಹಾಗೂ ಮಹಾರಾಷ್ಟ್ರದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿರುವುದು ಅತ್ಯಂತ ಸ್ಮರಣೀಯ. ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದರು. ಬಿಸಿಯೂಟ ಜಾರಿಗೊಳಿಸಿದರು. ಇವರ ನಿಧನದಿಂದ ರಾಜ್ಯಕ್ಕೆ ಅಪಾರ ನಷ್ಟವುಂಟಾಗಿದೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡುವಂತೆ ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ.

–ಶ್ರೀಸಿದ್ದಲಿಂಗಸ್ವಾಮೀಜಿ, ಸಿದ್ಧಗಂಗಾ ಮಠ

ಜೆಡಿಎಸ್‌ನಲ್ಲಿದ್ದ ನನ್ನನ್ನು ಕಾಂಗ್ರೆಸ್‌ಗೆ ಕರೆದುಕೊಂಡು ಹೋಗಿ ವಿಧಾನಸಭೆಗೆ ಟಿಕೇಟ್ ಕೊಟ್ಟು ಮಂತ್ರಿ ಮಾಡಿದ ಎಸ್.ಎಂ.ಕೃಷ್ಣ ಒಂದು ರೀತಿಯಲ್ಲಿ ನನ್ನ ರಾಜಕೀಯ ಗುರು. ಕೃಷ್ಣ ಅವರು ವಿದೇಶದಲ್ಲಿ ಓದಿ ಭಾರತಕ್ಕೆ ಬಂದು ರಾಜಕೀಯ ಆರಂಭಿಸಿದ್ದರಿಂದಾಗಿ ಅವರ ನಿರ್ಧಾರಗಳು ಎಂದಿಗೂ ಒಂದು ಜಿಲ್ಲೆಗೆ ಸೀಮಿತ ಇರಲಿಲ್ಲ. ಇಡೀ ರಾಜ್ಯಕ್ಕೆ ಸೇರತ್ತಿದ್ದವು.

– ಕೆ.ಶ್ರೀನಿವಾಸಗೌಡ, ಮಾಜಿ ಸಚಿವ

ಕರ್ನಾಟಕ ರಾಜ್ಯ ಕಂಡ ಧೀಮಂತ ರಾಜಕಾರಣಿ ಎಸ್.ಎಂ.ಕೃಷ್ಣ. ಸ್ತ್ರೀ ಶಕ್ತಿ ಮೂಲಕ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಶಕ್ತಿ ತುಂಬಿದ ಮಹಾತ್ಮ. ಯಶಸ್ವಿನಿ ವಿಮಾ ಯೋಜನೆ ಮೂಲಕ ಹಳ್ಳಿ ಡೇರಿ ಹಾಲು ಉತ್ಪಾದಕರಿಗೂ ಉಚಿತ ಶಸ್ತ್ರಚಿಕಿತ್ಸೆ ದೊರಕುವಂತೆ ಮಾಡಿದ ಮಾಂತ್ರಿಕ. ಐಟಿ-ಬಿಟಿ ಕ್ಷೇತ್ರದ ಬೆಳವಣಿಗೆಯ ಗಾರುಡಿಗ.

– ಎಂ.ಮಲ್ಲೇಶ್ ಬಾಬು, ಸಂಸದ

ಅಪರೂಪ

ರಾಜ್ಯದ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಅನೇಕ ಏಳು ಬೀಳುಗಳನ್ನು,ಸವಾಲುಗಳನ್ನು ಎದುರಿಸಿದ್ದಾರೆ. ಕಂಡಿದ್ದಾರೆ.ಕಾಡುಗಳ್ಳ ವೀರಪ್ಪನ್‌ನಿಂದ ವರನಟ ಡಾ.ರಾಜಕುಮಾರ್ ಅಪಹರಣ, ಹೇಳತೀರದ ಭೀಕರ ಬರಗಾಲ, ಕಾವೇರಿ ಸಮಸ್ಯೆ, ನಾಗಪ್ಪ ಹತ್ಯೆ ಹೀಗೆ ಅನೇಕ ಸವಾಲುಗಳನ್ನು ಎದುರಿಸಿ ಮೆಟ್ಟಿನಿಂತು ಸೈ ಎನಿಸಿಕೊಂಡ ಚತುರ ರಾಜಕಾರಣಿ ಹಾಗೂ ಸೌಮ್ಯ ಸ್ವಭಾವದ ಅಪರೂಪದ ವರ್ಣರಂಜಿತ ರಾಜಕಾರಣಿ ಆಗಿದ್ದರು.

ಮುತ್ಸದ್ದಿ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಅಗಲಿಕೆಯು ವೈಯಕ್ತಿಕವಾಗಿ ನನಗೆ ನೋವನ್ನುಂಟು ಮಾಡಿದೆ.ನಮ್ಮೆಲ್ಲರಿಗೂ ಆದರ್ಶವಾಗಿದ್ದರು.ಸಚಿವ ಸಂಪುಟದಲ್ಲಿ ಎಲ್ಲರ ಅಭಿಪ್ರಾಯ ಪಡೆದು ತೀರ್ಮಾನ ಮಾಡುತ್ತಿದ್ದರು. ನಾನು ಅವರ ಜೊತೆಯಲ್ಲಿ ಕೆಪಿಸಿಸಿ ಉಪಾಧ್ಯಕ್ಷನಾಗಿ, ಸಂಪುಟದಲ್ಲಿ ಉನ್ನತ ಶಿಕ್ಷಣ ಸಚಿವನಾಗಿ ಕೆಲಸ ಮಾಡಿದ್ದೇನೆ.

–ಡಾ.ಜಿ.ಪರಮೇಶ್ವರ್, ಗೃಹ ಸಚಿವ


ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಆಧುನಿಕ ಬೆಂಗಳೂರಿನ ನಿರ್ಮಾತೃ ಆಗಿದ್ದಾರೆ.ಅವರ ವ್ಯಕ್ತಿತ್ವ ಅನುಕರಣೀಯ. ಎಸ್. ಎಂ.ಕೃಷ್ಣ ಅವರು ಮಾತನಾಡುವಾಗ ಕೆಟ್ಟಭಾಷೆಯ ಪದಪ್ರಯೋಗ ಮಾಡಿದ್ದನ್ನು ಎಲ್ಲಿಯೂ ನೋಡಲೇ ಇಲ್ಲ. ಹಿರಿಯ ಮುತ್ಸದ್ದಿ ನಾಯಕನನ್ನು ಕಳೆದುಕೊಂಡಿದೆ. ವೈಯಕ್ತಿಕವಾಗಿ ನನಗೆ ನೋವಾಗಿದೆ.

–ಕೆ.ಎನ್.ರಾಜಣ್ಣ ಸಹಕಾರ ಸಚಿವ

ಪಾಂಚಜನ್ಯ ಮೊಳಗಿಸಿದ ಕೃಷ್ಣ

ಮೈಸೂರಿನ ಸಮಗ್ರ ಅಭಿವೃದ್ಧಿಗೆ ಎಂಎಟಿಎಫ್ ರಚನೆ। ವಾಲಿಬಾಲ್, ಟೆನ್ನಿಸ್ ನೆಚ್ಚಿನ ಆಟ

ಮೈಸೂರು: ಅದು 1999ರ ವಿಧಾನಸಭಾ ಚುನಾವಣೆ. ಎಲ್ಲಾ ಪಕ್ಷಗಳಲ್ಲಿ ಭರದ ತಯಾರಿ ನಡೆದಿತ್ತು. ಚುನಾವಣೆಗೆ ಕೆಲವೇ ತಿಂಗಳು ಉಳಿದಿದ್ದವು.

ಆ ಕಾಲಘಟ್ಟದಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿಯ ಹೊಣೆ ಹೊತ್ತಿದ್ದವರು ಎಸ್.ಎಂ. ಕೃಷ್ಣ. ತನ್ನ ಅಧ್ಯಕ್ಷಾವಧಿಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕೆಂಬ ಸಂಕಲ್ಪ ಹೊತ್ತು ರಾಜ್ಯವಿಡೀ ಪ್ರವಾಸ ಕಾರ್ಯಕ್ರಮ ರೂಪಿಸಿದರು. ಅದಕ್ಕೆ ಇಟ್ಟ ಹೆಸರು ಪಾಂಚಜನ್ಯ ಯಾತ್ರೆ.

ಮೈಸೂರಿನ ವಸ್ತು ಪ್ರದರ್ಶನ ಮೈದಾನದಿಂದಲೇ ಪಾಂಚಜನ್ಯ ಯಾತ್ರೆಗೆ ಚಾಲನೆ ನೀಡಿದ್ದರು. ಬಳಿಕ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಜಯಸಾಧಿಸಿ ಎಸ್.ಎಂ.ಕೃಷ್ಣ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಅಲ್ಲದೆ, ಮೈಸೂರು ಭಾಗದ ಎಚ್. ವಿಶ್ವನಾಥ್, ಕೋಟೆ ಶಿವಣ್ಣ, ಎಂ. ಮಹದೇವು ಕೃಷ್ಣ ಅವರ ಸಂಪುಟದಲ್ಲಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.

ಮಲ್ಲಿಗೆ ನಗರಿ ನಂಟು: ದೇಶದಲ್ಲೇ ವರ್ಣರಂಜಿತ, ಮಿತಭಾಷಿ ರಾಜಕಾರಣಿ ಎಂದೇ ಕರೆಯಿಸಿಕೊಂಡಿದ್ದ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಹುಟ್ಟಿದ್ದು ಸಕ್ಕರೆ ನಾಡಿನ ಮಂಡ್ಯ ಜಿಲ್ಲೆಯಾದರೂ ಸ್ಫೂರ್ತಿಯ ತವರಾಗಿ ಬದುಕು ರೂಪಿಸಿದ್ದು ಮಾತ್ರ ಮಲ್ಲಿಗೆಯ ನಗರಿ ಮೈಸೂರು.

ಎಸ್.ಎಂ.ಕೃಷ್ಣ ಅವರ ಬದುಕಿನ ಬಂಡಿಯನ್ನು ಬದಲಿಸುವ ಮತ್ತು ರಾಜಕೀಯದಲ್ಲಿ ತಮ್ಮದೇ ಆದ ಛಾಪನ್ನು ಸಮರ್ಥವಾಗಿ ಮೂಡಿಸುವ ಹಿಂದೆ ಶ್ರೀರಾಮಕೃಷ್ಣ ಆಶ್ರಮವೂ ಒಂದಾಗಿತ್ತು. ಏನೇ ಮಾಡಿದರೂ ನಿಸ್ವಾರ್ಥದಿಂದ ಸೇವೆ ಮಾಡು ಎನ್ನುವ ರಾಮಕೃಷ್ಣ ಪರಮಹಂಸರ ಮಾತಿನಂತೆ ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲೇ ಏನೇ ಸಾಧನೆ ಮಾಡಿದರೂ ನಾನು ಮಾಡಿದ್ದೆಂದು ಹೇಳಿಕೊಂಡ ವ್ಯಕ್ತಿಯಲ್ಲ. ಅವರು ಮಾಡಿದ ಕೆಲಸಗಳು ಇಂದು ಮಾತನಾಡುತ್ತಿವೆ ಎಂದರೆ ಅವರ ಆದರ್ಶ ನಡೆಗೆ ಮೈಸೂರು ಪ್ರೇರಣೆಯಾಗಿತ್ತು ಎಂಬುದು ವಿಶೇಷವಾಗಿದೆ.

ಎಸ್.ಎಂ.ಕೃಷ್ಣ ಓದಿದ ಮೈಸೂರಿನ ಮಹಾರಾಜ ಕಾಲೇಜು .

ಗೌರವ ಡಾಕ್ಟರೇಟ್: ಯಾದವಗಿರಿಯ ರಾಮಕೃಷ್ಣ ಆಶ್ರಮದ ವಿದ್ಯಾರ್ಥಿನಿಲಯದಲ್ಲಿ ಬಾಲ್ಯ ಕಳೆದಿದ್ದ ಎಸ್. ಎಂ.ಕೃಷ್ಣ ಅವರಿಗೆ ಇದೇ ವರ್ಷ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತ್ತು ಎಂಬುದು ಅವರ ಬದುಕಿನ ದಿನಗಳಲ್ಲಿ ದೊಡ್ಡ ಖುಷಿಯನ್ನು ತಂದುಕೊಟ್ಟಿತ್ತು.

ಆಶ್ರಮ ವಾಸಿ : ಎಸ್.ಎಂ.ಕೃಷ್ಣ ದೇಶ ಕಂಡ ಅಪರೂಪದ ರಾಜಕೀಯ ಮುತ್ಸದ್ದಿ. ಅವರು ತಮ್ಮ ಬಾಲ್ಯದ ಬಹುಪಾಲು ಸಮಯವನ್ನು ಮೈಸೂರಿನಲ್ಲಿ ಕಳೆದಿದ್ದರು. ಮೊದಲಿಗೆ ನಗರದ ಒಂಟಿಕೊಪ್ಪಲಿನಲ್ಲಿರುವ ಮಹಾಜನ ಶಾಲೆಗೆ ಮೂರನೇ ತರಗತಿಗೆ ಸೇರ್ಪಡೆಗೊಂಡರು. ಬಳಿಕ ಯಾದವಗಿರಿ ಬಳಿ ಇರುವ ರಾಮಕೃಷ್ಣ ಆಶ್ರಮದ ಸಖ್ಯ ಬೆಳೆಸಿಕೊಂಡರು. ಇಲ್ಲಿ ಇವರ ಬದುಕು ಹಾಗೂ ವ್ಯಕ್ತಿತ್ವ ಮತ್ತೊಂದು ಹೊಸ ಬಗೆಯಲ್ಲಿ ರೂಪುಗೊಂಡಿತು.

ಭಗವದ್ಗೀತೆ ಕಂಠಪಾಠ: ಆಶ್ರಮದ ವೇದಾನಂದ–ಶಾಂಭವಾನಂದ ಮಹಾರಾಜರ ಮಾರ್ಗದರ್ಶನದಲ್ಲಿ ಸಂಸ್ಕಾರದ ಜೊತೆಗೆ ಯೋಗಾಭ್ಯಾಸ, ಸಂಗೀತದ ಆಸಕ್ತಿ ಬೆಳೆಸಿಕೊಂಡರು. ಉತ್ತಮ ವಾಗ್ಮಿ ಆಗಿದ್ದ ಕೃಷ್ಣ ಅವರು ಭಗವದ್ಗೀತೆಯ 18 ಅಧ್ಯಾಯಗಳನ್ನು ಕಂಠಪಾಠ ಮಾಡಿಸಿದ್ದರು. ಆಶ್ರಮದ ಭಜನಾ ತಂಡದೊಂದಿಗೆ ತಬಲಾ ನುಡಿಸುತ್ತ ಆಕಾಶವಾಣಿಯಲ್ಲಿ ಕಾರ್ಯಕ್ರಮ ಸಹ ಕೊಟ್ಟಿದ್ದರು. ಒಮ್ಮೆ ರಾಮಕೃಷ್ಣ ಆಶ್ರಮಕ್ಕೆ ಎಸ್. ಎಂ.ಕೃಷ್ಣ ಭೇಟಿ ನೀಡಿದ್ದಾಗ ತಮ್ಮ ಹಳೆ ದಿನಗಳನ್ನು ಮೆಲುಕು ಹಾಕಿದ್ದರು. ಅಲ್ಲದೆ, ಕೆಂಪೇಗೌಡ ಪ್ರಶಸ್ತಿ ಜೊತೆ ಬಂದ ನಗದು 5 ಲಕ್ಷ ರೂ. ಹಣವನ್ನು ಆಶ್ರಮಕ್ಕೆ ದೇಣಿಗೆ ನೀಡಿದ್ದರು.

ಕುವೆಂಪು ಶಿಷ್ಯ: 1948ರಲ್ಲಿ ಮಹಾಜನ ಶಾಲೆಯಲ್ಲಿ ಎಸ್ ಎಸ್‌ಎಲ್‌ಸಿ ಪೂರೈಸಿದ ಕೃಷ್ಣ ಅವರು ಬಳಿಕ ಯುವರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಓದಿದರು. ಬಳಿಕ ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರ, ಇತಿಹಾಸ ಹಾಗೂ ರಾಜ್ಯಶಾಸ್ತ್ರ ವಿಷಯದಲ್ಲಿ ಬಿಎ ಪದವಿ ಮುಗಿಸಿದ್ದರು. ಹೀಗಾಗಿ ರಾಷ್ಟ್ರಕವಿ ಕುವೆಂಪು, ಎಂ.ಎ. ಗೋಪಾಲಸ್ವಾಮಿ, ಟಿ.ಎ. ಪುರುಷೋತ್ತಮ್ ಗುರುಗಳಾಗಿ ಇವರಿಗೆ ಮಾರ್ಗದರ್ಶನ ನೀಡಿದ್ದರು. ಕಾಲೇಜಿನಲ್ಲಿದ್ದಾಗ ಟೆನಿಸ್ ಜೊತೆಗೆ ವಾಲಿಬಾಲ್ ಅವರ ನೆಚ್ಚಿನ ಕ್ರೀಡೆಯಾಗಿತ್ತು. ಟೆನಿಸ್ ಅವರ ಇಷ್ಟದ ಆಟ ಆಗಿತ್ತು.

ಶ್ರೀ ರಾಮಕೃಷ್ಣ ಆಶ್ರಮದ ಸಂಸ್ಥೆಗಳೊಂದಿಗೆ ಒಡನಾಟ

ತುಮಕೂರು: ರಾಮಕೃಷ್ಣ ವಿವೇಕಾನಂದ ಪರಂಪರೆಯ ಸಂಸ್ಥೆಗಳಿಗೂ ಎಸ್.ಎಂ. ಕೃಷ್ಣರವರಿಗೂ ಒಂದು ಅಪೂರ್ವವಾದ ಸಂಬಂಧವಿದೆ.

ರಾಮಕೃಷ್ಣ ಆಶ್ರಮದ ಸಂ ಪರ್ಕಕ್ಕೆ 1960ರ ದಶಕದಲ್ಲಿ ಬಂದಾಗಿ ನಿಂದ ಲೂ ಅಪಾರವಾದ ಸಂಬಂಧವಿತ್ತು ಎಂದು ಪಾವಗಡದ ರಾಮಕೃಷ್ಣ ವಿವೇಕಾ ನಂದ ಆಶ್ರಮದ ಸ್ವಾಮಿ ಜಪಾನಂದಾಜೀ ಎಸ್‌ಎಂಕೆ ಅವರ ಒಡನಾಟವನ್ನು ಸ್ಮರಿಸಿದರು.

ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಶಾಂಭವಾನಂದಜೀ ಮಹಾರಾಜ್ ಹಾಗೂ ಸ್ವಾಮಿ ವೇದಾನಂದಜೀ ಮಹಾರಾಜ್ ರವರ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಪಡೆದ ಎಸ್‌ಎಂಕೆ ಅವಕಾಶ ದೊರೆತಾಗಲೆಲ್ಲಾ ಅದನ್ನು ಸ್ಮರಿಸಿ ತಮ್ಮ ಗೌರವ ಸಮರ್ಪಿಸುತ್ತಿದ್ದರು.

2002ರಲ್ಲಿ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಗಳಾಗಿದ್ದಾಗ ರಾಜ್ಯ ಆರೋಗ್ಯ ಕಾರ್ಯಪಡೆಯನ್ನು ರಚಿಸಿದಾಗ ನನ್ನನ್ನು ಆ ಕಾರ್ಯಪಡೆಗೆ ಸದಸ್ಯನಾಗಿ ಆಯ್ಕೆ ಮಾಡಿ ರಾಜ್ಯದ ಆರೋಗ್ಯ ಯೋಜನೆಗಳ ಬಗ್ಗೆ ಕೂಲಂಕುಶವಾಗಿ ಹಾಗೂ ಸಕ್ರಿಯವಾಗಿ ಭಾಗವಹಿಸುವಂತೆ ಅವಕಾಶ ಕಲ್ಪಿಸಿಕೊಟ್ಟಿದ್ದನ್ನು ಇಂದಿಗೂ ನೆನಪಿಸಿಕೊಳ್ಳಬಹುದಾಗಿದೆ ಎಂದು ನೆನಪಿಸಿಕೊಂಡರು.

ಶ್ರೀ ಶಾರದಾ ಮಠ, ದಕ್ಷಿಣೇಶ್ವರ, ಕಲ್ಕತ್ತಾ ಕೇಂದ್ರ ಸ್ಥಾನದಿಂದ ಚಿಕ್ಕಮಗಳೂರಿನಲ್ಲಿ ಒಂದು ಶಾಖೆ ತೆರೆಯಬೇಕೆಂಬ ವಿಚಾರ ಬಂದಾಗ ಆ ಸಂದರ್ಭದಲ್ಲಿ ಮಲೆನಾಡಿನ ಮಡಿಲಲ್ಲಿ ಸ್ತ್ರೀಯರಿಗಾಗಿ ಒಂದು ಮಠ ತೆರೆಯಲು ಸಂಪೂರ್ಣವಾಗಿ ಸಹಕಾರ ನೀಡಿದವರು ಎಸ್.ಎಂ.ಕೃಷ್ಣ. ಅಲ್ಲಿಯ ಭೂಮಿಗೆ ಎಲ್ಲ ರೀತಿಯ ಸಹಕಾರ ನೀಡಿ ಶಾರದಾ ಮಠ, ಚಿಕ್ಕಮಗಳೂರು ಶಾಖೆ ಉದ್ಘಾಟಿಸಿದ ಕೀರ್ತಿಯೂ ಎಸ್.ಎಂ.ಕೃಷ್ಣಗೆ ಸಲ್ಲುತ್ತದೆ.

ವಿವೇಕಾನಂದ ಪುತ್ಥಳಿ: 2009ರಲ್ಲಿ ಸ್ವಾಮಿ ವಿವೇಕಾನಂದ ಪುತ್ಥಳಿ ನಿರ್ಮಾಣ ಯೋಜನೆಯ ಮುಖ್ಯಸ್ಥನಾಗಿ ಬೆಂಗಳೂರು ರಾಮಕೃಷ್ಣ ಮಠದ ಮುಂದೆ ಅದ್ಭುತವಾದ ಸ್ವಾಮಿ ವಿವೇಕಾನಂದರ ಪುತ್ಥಳಿ ನಿರ್ಮಿಸುವಲ್ಲಿ ಅನೇಕಾನೇಕ ಎಡರು ತೊಡರು ಎದುರಿಸಬೇಕಾದಾಗ ನೀಡಿದ ಸಹಾಯ ಹಸ್ತ ಇಂದಿಗೂ ಸ್ಮರಿಸಬೇಕಾಗುತ್ತದೆ.

ಉದ್ಘಾಟನಾ ಸಮಾರಂಭಕ್ಕೆ ಕೃಷ್ಣ, ಲಾಲಕೃಷ್ಣ ಅದ್ವಾನಿ, ಅಂದಿನ ರಾಜ್ಯಪಾಲರಾಗಿದ್ದ ರಾಮೇಶ್ವರ್ ಠಾಕೂರ್, ಅನಂತಕುಮಾರ್, ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಜತೆಗೂಡಿ ಬಂದಿದ್ದರು ಎಂದು ಸ್ವಾಮಿ ಜಪಾನಂದಜೀ ಸ್ಮರಿಸಿಕೊಂಡಿದ್ದಾರೆ.

ಸ್ವಾಮಿ ವಿವೇಕಾನಂದರ ಪುತ್ಥಳಿ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ್ದ ಕೃಷ್ಣ .

ಮೈಸೂರಿನ ಶ್ರೀ ಸಚ್ಚಿದಾನಂದ ಗಣಪತಿ ಸ್ವಾಮೀಜಿಯವರ ಆಶ್ರಮಕ್ಕೆ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಭೇಟಿ ನೀಡಿ ಸ್ವಾಮಿಗಳ ಆಶೀರ್ವಾದ ಪಡೆದ ಎಸ್.ಎಂ.ಕೃಷ್ಣ.

ರೈತ ಸಂಘಟನೆ ಬೆಳಗಾವಿ ಚಲೋ

ಮೈಸೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಡಿ.16ರಂದು ರೈತ ಸಂಘಟನೆಗಳಿಂದ 'ಬೆಳಗಾವಿ ಚಲೋ' ಹಮ್ಮಿಕೊಳ್ಳಲಾಗಿದೆ ಎಂದು ರೈತ ನಾಯಕಿ ಪಚ್ಚೆನಂಜುಂಡಸ್ವಾಮಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.16ರಂದು ರಾಜ್ಯದ ಸುಮಾರು 21 ರೈತ ಸಂಘಟನೆಗಳಿಂದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಬೆಳಗಾವಿಯ ರೈತ ಸರ್ಕಲ್ ನಿಂದ ಸುವರ್ಣ ಸೌಧದವರೆಗೆ ಬೃಹತ್ ಪಾದಯಾತ್ರೆ ನಡೆಸಲಾಗುತ್ತದೆ. ಪ್ರತಿಭಟನಾ ಮೆರವಣಿಗೆಯಲ್ಲಿ ಸುಮಾರು ಒಂದು ಲಕ್ಷ ರೈತರು ಭಾಗವಹಿಸಲಿದ್ದಾರೆ. ರಾಜ್ಯದ ರೈತರ ಸಂಪೂರ್ಣ ಸಾಲಮನ್ನಾಕ್ಕಾಗಿ ಒತ್ತಾಯ ಮತ್ತು ಪ್ರತಿ ಟನ್ ಕಬ್ಬಿಗೆ 5500 ರೂ. ನಿಗದಿ ಸೇರಿದಂತೆ ಹಲವು ಹಕ್ಕೊತ್ತಾಯಗಳಿಗೆ ಆಗ್ರಹಿಸಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಡಿ.15ರಂದು ಬೆಳಗಾವಿಗೆ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಭಾಗದಿಂದ ಸಾವಿರಾರು ಸಂಖ್ಯೆಯ ರೈತರು ಬರಲಿದ್ದಾರೆ. ಒಡೆದಿರುವ ರೈತ ಸಂಘಟನೆಗಳ ಏಕೀಕರಣದ ಮೂಲಕ ಬೃಹತ್ ಚಳವಳಿ ಹಮ್ಮಿಕೊಳ್ಳಲಾಗಿದೆ. ರಾಜ್ಯದ ಮೂಲೆ ಮೂಲೆಗಳಿಂದ ರೈತಾಪಿ ವರ್ಗ ಈ ಚಳವಳಿಯಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡ ವಿದ್ಯಾಸಾಗರ್ ರಾಮೇಗೌಡ ಇದ್ದರು.

ಎರಡು ಅಪರೂಪದ ಪ್ರಸಂಗ ನೆನೆದ ಜಿಟಿಡಿ

ಮೈಸೂರು: ಎಸ್.ಎಂ.ಕೃಷ್ಣ ಅವರನ್ನು ವಿರೋಧಿಗಳೂ ಕೂಡ ಅವರನ್ನು ಬಹಳ ಇಷ್ಟಪಡುತ್ತಿದ್ದರು. 1999ರ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ 27ಜಿಲ್ಲೆಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮೈಸೂರು ಜಿಲ್ಲೆಯಲ್ಲಿ ಮಾತ್ರ ಹಿನ್ನಡೆಯಾಯಿತು. ನಾವು ದಲಿತ ಸಮುದಾಯದ ನಾಗರಾಜು ಅವರನ್ನು ಸೇರಿಸ್ಕೊಂಡು ಅಧ್ಯಕ್ಷರನ್ನಾಗಿ ಮಾಡಲು ಹೊರಟಾಗ ಕಾಂಗ್ರೆಸ್‌ನವರು ಚುನಾವಣೆ ಮುಂದೂಡುವಂತೆ ಪಟ್ಟು ಹಿಡಿದರು. ಆಗ ಅಂದಿನ ವಿಧಾನ ಪರಿಷತ್ ವಿಪಕ್ಷ ನಾಯಕ ಕೆ.ಎಚ್.ಶ್ರೀನಿವಾಸ್ ಗೆ ಈ ಬಗ್ಗೆ ಹೇಳಲು ದೂರವಾಣಿ ಕರೆ ಮಾಡಿದೆ. ಅವರು ತಕ್ಷಣವೇ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಇಲ್ಲೇ ಇದ್ದಾರೆಂದು ಫೋನ್ ಕೊಟ್ಟರು. ಆಗ, 'ಸೋಲು-ಗೆಲುವು ಸಹಜ. ಯಾವುದೇ ಕಾರಣಕ್ಕೂ ಚುನಾವಣೆ ಮುಂದೂಡಬಾರದು, ನಡೆಸಬೇಕು ಅಂತ ಕೃಷ್ಣ ಸೂಚನೆ ಕೊಟ್ಟಿದ್ದರು.



ಅಧ್ಯಕ್ಷ ಆಯ್ಕೆ : ಮತ್ತೊಂದು ಪ್ರಸಂಗ ಹೀಗಿದೆ. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಬೇರೆಯವರನ್ನು ಮಾಡಬೇಕೆಂದು ಹೊರಟಿದ್ದರು. ಆಗ, ಜಿ. ಟಿ. ದೇವೇಗೌಡರು ಸಹ ಕಾರ ಕ್ಷೇತ್ರದಲ್ಲಿ ಕೆಲಸ ಮಾಡಿ ಒಳ್ಳೆಯ ಅನುಭವ ವಿದೆ. ಅವರೇ ಮುಂದುವರಿಯಲಿ ಬಿಡಿ ಎನ್ನುವ ಮಾತನ್ನಾಡಿದ್ದರಿಂದ ಮತ್ತೆ ಅವಕಾಶ ದೊರೆಯಿತು.

ನಿವೇಶನ ಕೊಟ್ಟರು: ಮತ್ತೊಂದು ಪ್ರಸಂಗ ಅಂದರೆ ಹುಣಸೂರು ಕ್ಷೇತ್ರದ ಚುನಾವಣೆಯಲ್ಲಿ ನಾನು ಸೋತಾಗ ಅವರೇ ಕರೆ ಮಾಡಿದ್ದರು. ಕಡಿಮೆ ಮತಗಳ ಅಂತರದಲ್ಲಿ ಸೋಲು ಕಾಣಬಾರದಾಗಿತ್ತು. ನೀವು ಗೆಲ್ಲಬೇಕಿತ್ತು ಎಂದು ಹೇಳಿದ ಮಾತು ಅವರ ಸ್ನೇಹಪರತೆ ಗೊತ್ತಾಗುತ್ತದೆ. ಎಂಎಲ್ ಎ ಆಗಿ ಬೆಂಗಳೂರಿನಲ್ಲಿ ಒಂದು ನಿವೇಶನ ಹೊಂದಿಲ್ಲವೇ ಅಂತೇಳಿ ನನಗೊಂದು ನಿವೇಶನ ಮಂಜೂರು ಮಾಡಿಸಿಕೊಟ್ಟರು. ಅವರ ಮಾತು, ವಿನಯತೆ ನನಗೆ ಸ್ಫೂರ್ತಿ ದೊರೆತಿತ್ತು ಎಂದು ಶಾಸಕ ಜಿ.ಟಿ.ದೇವೇಗೌಡ ನೆನಪಿಸಿಕೊಂಡಿದ್ದಾರೆ.

ಚನ್ನಪಟ್ಟಣ ಕಾಡಂಚಿನಲ್ಲಿ ಕಾಡಾನೆಗಳ ಹಾವಳಿ

ಆನೆಗಳನ್ನು ಕಾಡಿಗೆ ಅಟ್ಟುತ್ತಿರುವುದು

ರಾಮನಗರ: ಚನ್ನಪಟ್ಟಣ ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ವಿಪರೀತವಾಗಿದ್ದು, ನಾಡಿಗೆ ಬಂದ ಆನೆಗಳನ್ನು ಪ್ರತಿವರ್ಷ ನೂರಾರು ಬಾರಿ ಕಾವೇರಿ ವನ್ಯಜೀವಿಧಾಮಕ್ಕೆ ಅಟ್ಟಿದರೂ ಮತ್ತೆ ಹಿಂದಿರುಗಿ ಬಂದು ಬೆಳೆಗಳನ್ನು ನಾಶ ಮಾಡಿ ಹೋಗುತ್ತಿವೆ.

ರಾಮನಗರ ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಮಕೃಷ್ಣಪ್ಪ, ಎಸಿಎಫ್ ಪುಟ್ಟಮ್ಮ ನೇತೃತ್ವದಲ್ಲಿ ಕಾಡಾನೆಗಳನ್ನು ಕಾವೇರಿ ವನ್ಯಜೀವಿಧಾಮ ಹಾಗೂ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಹಿಮ್ಮೆಟ್ಟಿಸಲು ಕಾರ್ಯಾಚರಣೆಯ ತಂಡ ರಚನೆ ಮಾಡಿದ್ದಾರೆ. ಈ ತಂಡ ಕಳೆದ ಎರಡು ದಿನಗಳಿಂದ ಹಗಲು- ರಾತ್ರಿ ಕಾರ್ಯಾಚರಣೆ ನಡೆಸಿ ಐದು ಆನೆಗಳನ್ನು ಕಬ್ಬಾಳು ಅರಣ್ಯದಿಂದ ಕಾವೇರಿ ವನ್ಯಜೀವಿಧಾಮಕ್ಕೆ ಸೇರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕನಕಪುರ ವಲಯ ಅರಣ್ಯಾಧಿಕಾರಿ ರವಿ ಸಿ, ರಾಮನಗರ ಪ್ರಾದೇಶಿಕ ವಲಯದ ವಲಯ ಅರಣ್ಯ ಅಧಿಕಾರಿ ಮಹಮದ್ ಮನ್ಸೂರ್ ಹಾಗೂ ಚನ್ನಪಟ್ಟಣ ಪ್ರದೇಶ ವಲಯ ಅರಣ್ಯಾಧಿಕಾರಿ ಮಲ್ಲೇಶ್, ವಲಯಾರಣ್ಯಾಧಿಕಾರಿ ಮುತ್ತು ನಾಯಕ್, ಸಿಬ್ಬಂದಿ ತಂಡದಲ್ಲಿದ್ದಾರೆ.

ತುಮಕೂರು ಜಿಲ್ಲೆಗೆ 43 ಬಾರಿ ಆಗಮಿಸಿದ್ದ ಕೃಷ್ಣ

ತುಮಕೂರು: ಯಾರ ಬಗ್ಗೆಯೂ ಅಸೂಯೆ ಹೊಂದದ ಯಾರನ್ನೂ ದ್ವೇಷಿಸದ, ಯಾರೊಬ್ಬರನ್ನೂ ಟೀಕೆ ಮಾಡದ ಅಜಾತಶತ್ರು ಆಗಿದ್ದರು ಎಸ್.ಎಂ.ಕೃಷ್ಣ ಎಂದು ಮಾಜಿ ಸಂಸದ ಜಿ.ಎಸ್.ಬಸವರಾಜು ಬಣ್ಣಿಸಿದರು.

ಬಿಜೆಪಿ ಹಾಗೂ ಜೆಡಿಎಸ್ ಮಿತ್ರಪಕ್ಷಗಳು ಮಂಗಳವಾರ ನಗರದಲ್ಲಿ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯಲ್ಲಿ, ಅಗಲಿದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ಅವರ ಆಪ್ತರ ಬಳಗದಲ್ಲಿ ನಾನೂ ಒಬ್ಬನಾಗಿದ್ದೆ. ಬೆಂಗಳೂರು ನಗರ ಹೆಸರಾಗಲು ಎಸ್.ಎಂ.ಕೃಷ್ಣ ರ ಚಿಂತನೆಯೇ ಕಾರಣ, ಅವರು ಮುಖ್ಯಮಂತ್ರಿಯಾಗಿದ್ದಾಗ ತುಮಕೂರು ಜಿಲ್ಲೆಗೆ 43 ಬಾರಿ ಆಗಮಿಸಿದ್ದರು. ಜಿಲ್ಲೆಯ ಅನೇಕ ಅಭಿವೃದ್ಧಿ ಕರ‍್ಯಕ್ರಮಗಳಿಗೆ ಕಾರಣರಾಗಿದ್ದರು ಎಂದು ಸ್ಮರಿಸಿಕೊಂಡರು. ಜಿಲ್ಲಾ ಬಿಜೆಪಿ ಅಧ್ಯಕ್ಷ ಹೆಬ್ಬಾಕ ರವಿಶಂಕರ್ ಮಾತನಾಡಿ, ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ವಿಕಾಸ ಸೌಧ, ಐಟಿಬಿಟಿ ಕಂಪನಿಗಳ ಸ್ಥಾಪನೆ, ಬೆಂಗಳೂರಿನ ಮೆಟ್ರೋ ಯೋಜನೆಗೆ ನಾಂದಿ ಹಾಡಿದ ನಾಯಕರಾಗಿದ್ದರು ಎಂದರು.

ಬಿಜೆಪಿ ಹಾಗೂ ಜೆಡಿಎಸ್ ಮಿತ್ರಪಕ್ಷಗಳಿಂದ ನಗರದಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು.

ಜಿಲ್ಲಾ ಜೆಡಿಎಸ್ ಅಧ್ಯಕ್ಷ ಆರ್.ಸಿ.ಆಂಜನಪ್ಪ, ಜಿಲ್ಲಾ ಕರ‍್ಯಾಧ್ಯಕ್ಷ ಟಿ.ಆರ್.ನಾಗರಾಜು, ಮಾಜಿ ಶಾಸಕ ಕೆ.ಎಂ.ತಿಮ್ಮರಾಯಪ್ಪ, ಬಿಜೆಪಿ ಮುಖಂಡರಾದ ಎಸ್. ಶಿವಪ್ರಸಾದ್, ದಿಲೀಪ್‌ಕುಮಾರ್, ಬ್ಯಾಟರಂಗೇಗೌಡ, ಸಿದ್ದರಾಮಯ್ಯ, ಗುಬ್ಬಿ ನಂಜೇಗೌಡ, ಸಾಗರನಹಳ್ಳಿ ವಿಜಯಕುಮಾರ್, ಚಂದ್ರಶೇಖರ ಬಾಬು, ಟಿ.ಹೆಚ್. ಹನುಮಂತರಾಜು, ಬಾವಿಕಟ್ಟೆ ನಾಗಣ್ಣ, ಹೆಚ್. ಎಂ.ರವೀಶಯ್ಯ, ಬೆಳ್ಳಿ ಲೋಕೇಶ್ ಇದ್ದರು.

ಮಾಜಿ ಶಾಸಕ ಜಯಣ್ಣ ಇನ್ನಿಲ್ಲ

ಚಾಮರಾಜನಗರ: ಕೊಳ್ಳೇಗಾಲದ ಮಾಜಿ ಶಾಸಕ, ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್ ಜಯಣ್ಣ ಹೃದಯಾಘಾತದಿಂದ ಮಂಗಳವಾರ ನಿಧನರಾಗಿದ್ದಾರೆ.

ಸಿಎಂ ಸಿದ್ದರಾಮಯ್ಯ ಆಪ್ತರಲ್ಲಿ ಗುರುತಿಸಿ ಕೊಂಡಿದ್ದ ಮಾಜಿ ಶಾಸಕ ಜಯಣ್ಣ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರಾಗಿದ್ದರು. ಕಳೆದ ಡಿ.7 ರಂದು ಸಿದ್ದರಾಮಯ್ಯ ಜಿಲ್ಲಾ ಪ್ರವಾಸ ಕೈಗೊಂಡಿದ್ದ ವೇಳೆ ಜಯಣ್ಣ ಅವರ ಮನೆಯಲ್ಲಿ ಊಟ ಮಾಡಿ ತೆರಳಿದ್ದರು ಮತ್ತು ನೂತನ ಮನೆಯ ನಾಮಫಲಕ ಅನಾವರಣ ಮಾಡಿದ್ದರು. ಇದೇ 12 ರಂದು ಕೊಳ್ಳೇಗಾಲದಲ್ಲಿ ನೂತನವಾಗಿ ನಿರ್ಮಿಸಿದ್ದ ಮನೆಯ ಗೃಹ ಪ್ರವೇಶವಿತ್ತು. ಗೃಹ ಪ್ರವೇಶಕ್ಕೂ ಮುನ್ನವೇ ಮನೆಯಲ್ಲಿ ಗಾಢ ಮೌನ ಆವರಿಸಿದೆ. ಸ್ವಗ್ರಾಮವಾದ ಮಾಂಬಳ್ಳಿಯಲ್ಲಿ ಬುಧವಾರದಂದು ಜಯಣ್ಣ ಅವರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಆಪ್ತ ಮೂಲಗಳು ತಿಳಿಸಿವೆ.

ಅವಿವಾಹಿತರಾಗಿದ್ದ ಎಸ್.ಜಯಣ್ಣ ಅವರಿಗೆ 72 ವರ್ಷ ವಯಸ್ಸಾಗಿತ್ತು. 1994 ರಲ್ಲಿ ಜೆಡಿಎಸ್ ನಿಂದ ಮತ್ತು 2013 ರಲ್ಲಿ ಕೊಳ್ಳೇಗಾಲದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಹಾಲಿ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರಾಗಿದ್ದರು. ಇನ್ನು ಇವರ ಅಂತಿಮ ದರ್ಶನಕ್ಕೆ ನಾಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಆಗಮಿಸಲಿದ್ದು, ಜಿಲ್ಲಾಡಳಿತ ಸಕಲ ಸಿದ್ದತೆ ನಡೆಸಿದೆ.

ಅಂತಿಮ ದರ್ಶನಕ್ಕೆ ವ್ಯವಸ್ಥೆ

ಅಂತಿಮ ದರ್ಶನಕ್ಕೆ ಜಿಲ್ಲಾಡಳಿತ ವ್ಯವಸ್ಥೆ

ರಾಮನಗರ: ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವರಾಗಿದ್ದ ಎಸ್. ಎಂ. ಕೃಷ್ಣ ಅವರ ಪಾರ್ಥಿವ ಶರೀರ ಬೆಂಗಳೂರಿನಿಂದ ಮದ್ದೂರಿಗೆ ತೆರಳುವ ಮಾರ್ಗಮಧ್ಯೆ, ರಾಮನಗರ ಜಿಲ್ಲೆಯ ಬಿಡದಿ, ರಾಮನಗರ ಪಟ್ಟಣ, ಚನ್ನಪಟ್ಟಣದಲ್ಲಿ ಜಿಲ್ಲೆಯ ನಾಗರೀಕರು ಮೃತರ ಅಂತಿಮ ದರ್ಶನ ಪಡೆಯಲು ಜಿಲ್ಲಾಡಳಿತದಿಂದ ಅಗತ್ಯ ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಯಶವಂತ್ ವಿ. ಗುರುಕರ್ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ದಿವಂಗತ ಎಸ್. ಎಂ. ಕೃಷ್ಣ ಅವರ ಪಾರ್ಥಿವ ಶರೀರ ಡಿ.11ರ ಬುಧವಾರ ಬೆಂಗಳೂರಿನ ಸದಾಶಿವ ನಗರದಿಂದ ಮಂಡ್ಯದ ಸೋಮನಹಳ್ಳಿಗೆ ಹಳೇ ಮೈಸೂರು ರಸ್ತೆಯಲ್ಲಿ ಹಾದುಹೋಗುತ್ತದೆ.

ರಾಮನಗರ ಜಿಲ್ಲೆಯ ಬಿಡದಿಯ ಬಿ.ಜಿ.ಎಸ್ ಸರ್ಕಲ್‌ನಲ್ಲಿ ಅಂದು ಬೆಳಿಗ್ಗೆ 8.45 ರಿಂದ 9 ಗಂಟೆಗೆ, ರಾಮನಗರದ ಐಜೂರು ಸರ್ಕಲ್‌ನಲ್ಲಿ ಬೆಳಿಗ್ಗೆ 9.30ಕ್ಕೆ ಆಗಮಿಸುತ್ತದೆ. ನಂತರ ಚನ್ನಪಟ್ಟಣದ ಗಾಂಧಿ ಭವನ ಸರ್ಕಲ್‌ನಲ್ಲಿ ಬೆಳಿಗ್ಗೆ 10 ಗಂಟೆಯಿಂದ 10.15ಕ್ಕೆ ಆಗಮಿಸುತ್ತದೆ. ಈ ಸಂದರ್ಭದಲ್ಲಿ 15 ರಿಂದ 20 ನಿಮಿಷಗಳವರೆಗೆ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇರಿಸಲಾಗುವುದು, ಇದಕ್ಕೆ ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಯಶವಂತ್ ಮಾತನಾಡಿದರು. ಎಸ್ಪಿ ಕಾರ್ತಿಕ್ ರೆಡ್ಡಿ ಉಪಸ್ಥಿತರಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಮಾತನಾಡಿ, ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಎಸ್.ಎಂ. ಕೃಷ್ಣ ಅವರ ಪಾರ್ಥಿವ ಶರೀರ ಅಂತಿಮ ದರ್ಶನದ ವೇಳೆ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ ಎಂದರು.

ಏರು ಪ್ರಶ್ನೆಗೆ ಮೆದು ಉತ್ತರ

ಕೋಲಾರ: ಎಸ್ಸೆಂ ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗ ಕೋಲಾರದ ಮೆಡಿಕಲ್ ಕಾಲೇಜು ಸಮಾರಂಭಕ್ಕೆ ಅಂದಿನ ಸಂಸದರಾಗಿದ್ದ ಜಾಲಪ್ಪ ಅವರ ಜತೆಗೆ ಹೆಲಿಕಾಪ್ಟರ್‌ನಲ್ಲಿ ಆಗಮಿಸಿದ್ದರು. ವೀರಪ್ಪನ್ ಅಪಹರಣವಾಗಿದ್ದರಿಂ ದಾಗಿ ಪತ್ರಿಕಾಗೋಷ್ಠಿಗೆ ದೇಶ- ವಿದೇಶಿ ಪತ್ರಕರ್ತರಿಂದ ಕಿಕ್ಕಿರಿದಿತ್ತು. ಸ್ಥಳೀಯ ಪತ್ರಿಕೆ ಸಂಪಾದಕ ರೊಬ್ಬರು ಏರುಧ್ವನಿಯಲ್ಲಿ ಸರ್ಕಾರದ ಭ್ರಷ್ಟಾಚಾರ, ವೈಫಲ್ಯ, ಬರ, ಕುಡಿಯುವ ನೀರಿನ ಸಮಸ್ಯೆ ಕುರಿತು ಪ್ರಶ್ನೆಯನ್ನು ಕೇಳಿದರು. ನಸುನಗುತ್ತಾ ತಾಳ್ಮೆಯಿಂದ ಸರಣಿ ಪ್ರಶ್ನೆಗಳನ್ನು ಆಲಿಸಿದ ಕೃಷ್ಣ, ಮೆದು ಧ್ವನಿಯಲ್ಲಿ ಶಾಂತಚಿತ್ತರಾಗಿ ತಾಲೂಕು- ಜಿಲ್ಲಾ ಪಂಚಾಯತಿ ಚುನಾವಣಾ ಫಲಿತಾಂಶದ ಮೂಲಕ ಜನತೆ ನಿಮ್ಮೆಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ ಎಂದು ತಮ್ಮ ತಲೆಗೂದಲಿನಲ್ಲಿ ಕೈ ಆಡಿಸುತ್ತಾ ನಸುನಕ್ಕರು. ಇದು ಎಸ್ಸೆಂ ಕೃಷ್ಣ ಅವರ ಮಾತಿನ ವರಸೆ ಆಗಿತ್ತು.

ಉಪವಿಭಾಗ ಜಿಲ್ಲೆಯಾಗಲು ಮನವಿ

ಚಿಕ್ಕಬಳ್ಳಾಪುರ: ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಯಾಗಿ ದ್ದಾಗ ಹಲವಾರು ಬಾರಿ ಚಿಕ್ಕಬಳ್ಳಾಪುರ ಉಪವಿಭಾಗಕ್ಕೆ ಬಂದು ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗಿಯಾಗಿರುವ ಬಗ್ಗೆ ದಾಖಲೆಯಿದೆ.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಯಲುವಹಳ್ಳಿ ರಮೇಶ್ ಮಾಜಿ ಮುಖ್ಯಮಂತ್ರಿಗಳ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿ ಕಂಬನಿ ಮಿಡಿದಿದ್ದಾರೆ.

ದೇಶಕಂಡ ಅತ್ಯುತ್ತಮ ಮುಖ್ಯಮಂತ್ರಿ ಎಂಬ ಮನ್ನಣೆಗೆ ಪಾತ್ರವಾಗಿದ್ದ ಎಸ್. ಎಂ.ಕೃಷ್ಣ ಅವರು ಅಭಿವೃದ್ಧಿಯ ಹರಿಕಾರರಾಗಿ,ಅಜಾತಶತ್ರುವಾಗಿ ಜನಮನ್ನಣೆ ಗಳಿಸಿದ್ದರು. ಬೆಂಗಳೂರಿಗೆ ವಿಶ್ವದ ಭೂಪಟದಲ್ಲಿ ಅಚ್ಚಳಿಯದ ಸ್ಥಾನ ಕಲ್ಪಿಸಲು ಶ್ರಮಿಸಿದ ಮುತ್ಸದ್ಧಿ ರಾಜಕಾರಣಿಯಾಗಿದ್ದರು ಎಂದು ಹೇಳಿ, 2 ಬಾರಿ ಅವರನ್ನು ಭೇಟಿ ಮಾಡಿದ್ದ ಬಗ್ಗೆ ಸ್ಮರಿಸಿಕೊಂಡಿದ್ದಾರೆ. 2000ನೇ ಇಸವಿಯಲ್ಲಿ ತಾಲೂಕಿನ ಮಂಚನಬಲೆಯಲ್ಲಿ ರಾಜ್ಯಕ್ಕೆ ಮಾದರಿಯಾದ ಸುವರ್ಣ ಗ್ರಾಮ ಯೋಜನೆ ಉದ್ಘಾಟಿಸಲು ಬಂದಿದ್ದಾಗ, ಚಿಕ್ಕಬಳ್ಳಾಪುರ ಉಪವಿಭಾಗವನ್ನು ನೂತನ ಜಿಲ್ಲೆಯಾಗಿ ಮಾಡಬೇಕು ಎಂಬ ಬಗ್ಗೆ ಅವರಿಗೆ ಮನವಿ ಪತ್ರ ನೀಡಿದ್ದೆವು.

ಡ್ಯಾಂ ಶಂಕುಸ್ಥಾಪನೆಗೆ ಕೃಷ್ಣ ಅವರು ಬಾಗೇಪಲ್ಲಿಗೆ ಬಂದಿದ್ದರು.

ವಿದೇಶಾಂಗ ಸಚಿವರಾಗಿದ್ದಾಗ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡರ ಹೆಸರು ಇಡಬೇಕೆಂದು ರಾಜ್ಯ ಒಕ್ಕಲಿಗರ ಸಂಘದ ನಿಯೋಗದಲ್ಲಿ ನಾನೂ ತೆರಳಿ ಅವರಿಗೆ ಮನವಿ ಮಾಡಿದ್ದೆವು. ಪರಿಣಾಮವಾಗಿ ಕೆಂಪೇಗೌಡರ ಹೆಸರನ್ನು ವಿಮಾನ ನಿಲ್ದಾಣಕ್ಕೆ ನಾಮಕರಣ ಮಾಡಲಾಗಿದೆ ಎಂದು ರಮೇಶ್ ಹೇಳಿದ್ದಾರೆ. ಬಾಗೇಪಲ್ಲಿ ಪಟ್ಟಣಕ್ಕೆ 2008ರಲ್ಲಿ ಸಂಪಂಗಿಪರ ಚುನಾವಣಾ ಪ್ರಚಾರಕ್ಕೆ ಬಂದಿದ್ದರು. ನಂತರ ಅವರು ಶಾಸಕರಾಗಿ ಆಯ್ಕೆಯಾಗಿದ್ದಾಗ ಚಿತ್ರಾವತಿ ಡ್ಯಾಂ ಶಂಕುಸ್ಥಾಪನೆಗೆ ಕೂಡ ಆಗಮಿಸಿದ್ದರು.

ಪಂಚಮಸಾಲಿ ಹೋರಾಟ: ಲಾಠಿ ಚಾರ್ಜ್

ಪೊಲೀಸರ ಮೇಲೆ ಕಲ್ಲು ತೂರಾಟ | 20 ಕ್ಕೂ ಅಧಿಕ ಹೋರಾಟಗಾರರಿಗೆ ಗಂಭೀರ ಗಾಯ

ಬೆಳಗಾವಿ: ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ನೀಡುವಂತೆ ಆಗ್ರಹಿಸಿ ನಡೆಸಿದ ಪ್ರತಿಭಟನೆ ವಿಕೋಪಕ್ಕೆ ತಿರುಗಿ ಹೋರಾಟಗಾರು ಸುವರ್ಣಸೌಧ ಮುತ್ತಿಗೆ ಹಾಕಲು ಯತ್ನಿಸಿದ ಸಂದರ್ಭದಲ್ಲಿ ಪೊಲೀಸರು ಲಾಠಿಚಾರ್ಜ್ ನಡೆಸಿ ಉದ್ರಿಕ್ತರನ್ನು ಚದುರಿಸಿದ ಘಟನೆ ಮಂಗಳವಾರ ಕೊಂಡಸಕೊಪ್ಪದ ರಾಷ್ಟ್ರೀಯ ಹೆದ್ದಾರಿ ಬಳಿ ನಡೆಯಿತು.

ಕೂಡಲಸಂಗಮ ಜಯಮೃತ್ಯುಂಜಯ ಶ್ರೀಗಳ ನೇತೃತ್ವದಲ್ಲಿ ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವಂತೆ ಆಗ್ರಹಿಸಿ ಸರಕಾರದ ವಿರುದ್ಧ ನಡೆದ ಬೃಹತ್ ಪ್ರತಿಭಟನೆ ನಡೆಸಲಾಯಿತು. 10 ಸಾವಿರಕ್ಕೂ ಅಧಿಕ ಹೋರಾಟಗಾರರು ಸರಕಾರದ ವಿರುದ್ಧ ಆಕ್ರೋಶ ಹೊರಹಾಕಿ ಸುವರ್ಣಸೌಧ ಮುತ್ತಿಗೆ ಹಾಕಲು ಯತ್ನಿಸಿದರು. ರಾಷ್ಟ್ರೀಯ ಹೆದ್ದಾರಿ ಮೇಲೆ ಏಕಾಏಕಿ ಹೋರಾಟಗಾರರು ಸೇರಿದ್ದ ಸಂದರ್ಭದಲ್ಲಿ ಪರಿಸ್ಥಿತಿ ಹತೋಟಿಗೆ ತರಲು ಪೊಲೀಸರು ಲಾಠಿಚಾರ್ಜ್ ನಡೆಸಿದರು.

ಪೊಲೀಸರು ನಡೆಸಿದ ಲಾಠಿ ಚಾರ್ಜ್ ನಿಂದ 20 ಕ್ಕೂ ಅಧಿಕ ಹೋರಾಟಗಾರರು ಗಂಭೀರವಾಗಿ ಗಾಯಗೊಂಡಿದ್ದು ಅವರನ್ನು ಆಸ್ಪತ್ರೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಇನ್ನೂ ಸುವರ್ಣಸೌಧ ಮುತ್ತಿಗೆಗೆ ಯತ್ನಿಸಿದ ಕಾರಣಕ್ಕೆ ಕೂಡಲಸಂಗಮ ಶ್ರೀ, ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ಅರವಿಂದ ಬೆಲ್ಲದ ಸೇರಿದಂತೆ ಅನೇಕ ಹೋರಾಟಗಾರನ್ನು ಪೊಲೀಸರು ವಶಕ್ಕೆ ಪಡೆದರು.

ಪೊಲೀಸರ ಮೇಲೆ ಕಲ್ಲು ತೂರಾಟ

ಪಂಚಮಸಾಲಿ ಹೋರಾಟದ ಸಂದರ್ಭದಲ್ಲಿ ಹತ್ತು ಜನ ಮುಖಂಡರನ್ನು ಭೇಟಿಯಾಗಿ ಸಿಎಂ ಮಾತುಕತೆ ಭರವಸೆ ನೀಡಿದ್ದರು ಮುಖಂಡರು ಸಿಎಂ ಭೇಟಿಗೆ ಒಪ್ಪಿಗೆ ಸೂಚಿಸಲಿಲ್ಲ. ನಂತರ ಕೂಡಲಸಂಗಮ ಶ್ರೀಗಳ ನೇತೃತ್ವದಲ್ಲಿ ಹೋರಾಟಗಾರರು ಸುವರ್ಣಸೌಧ ಮುತ್ತಿಗೆ ಹಾಕಲು ಯತ್ನಿಸಿದರು. ಏಕಾಏಕಿ ರಾಷ್ಟ್ರೀಯ ಹೆದ್ದಾರಿ ಮೇಲೆ ಪ್ರತಿಭಟನಾಕಾರರು ಜಮಾವನೆ ಆಗುತ್ತಿದ್ದಂತೆ ಪೊಲೀಸರು ಮುನ್ನೆಚ್ಚರಿಕೆಯಾಗಿ ಬ್ಯಾರಿಕೇಡ್ ನಿಂದ ಹೋರಾಟಗಾರರನ್ನು ತಡೆಯಲು ಹರಸಾಹಸ ಪಟ್ಟರು. ಇದೇ ಸಂದರ್ಭದಲ್ಲಿ ಕಿಡಿಗೇಡಿಗಳು ಪೊಲೀಸರ ಮೇಲೆ ಕಲ್ಲು ಹಾಗೂ ಚಪ್ಪಲಿ ತೂರಾಟ ನಡೆಸಿದ ಹಿನ್ನಲೆಯಲ್ಲಿ ಪರಿಸ್ಥಿತಿ ಹತೋಟಿಗೆ ತರಲು ಪೊಲೀಸರು ಲಾಠಿ ಚಾರ್ಜ್ ನಡೆಸಿದರು. ಈ ಸಂದರ್ಭದಲ್ಲಿ ಹಲವರಿಗೆ ಗಂಭೀರ ಗಾಯಗಳಾಗಿವೆ. ಸರಕಾರದ ಪರವಾಗಿ ಸಚಿವರಾದ ಎಚ್.ಸಿ.ಮಹದೇವಪ್ಪ, ಕೆ. ವೆಂಕಟೇಶ ಹಾಗೂ ಡಾ. ಎಂ. ಸಿ ಸುಧಾಕರ್ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದರು.

ಸಂಘರ್ಷ ಯಾತ್ರೆ ಘೋಷಿಸಿದ ಜಯ ಮೃತ್ಯುಂಜಯ ಸ್ವಾಮೀಜಿ

ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಅಡಚಣೆ

ಮೊದಲಿಗೆ 5 ಸಾವಿರಕ್ಕೂ ಅಧಿಕ ಟ್ರ್ಯಾಕ್ಟರ್ ಮೂಲಕ ಪ್ರತಿಭಟನೆ ನಡೆಸಲು ಕೂಡಲಸಂಗಮ ಶ್ರೀ ಕರೆ ನೀಡಿದ್ದರು. ಆದರೆ ಟ್ರ್ಯಾಕ್ಟರ್ ಹಾಗೂ ಕ್ರೂಸರ್ ವಾಹನ ಬೆಳಗಾವಿ ಪ್ರವೇಶ ಮಾಡದಂತೆ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದರು. ನಂತರ ಶ್ರೀಗಳ ಜೊತೆ ಚರ್ಚೆ ನಡೆಸಿ ಶಾಂತಿಯುತ ಹೋರಾಟಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಸುವರ್ಣಸೌಧದಿಂದ ಕೂದಲೆಳೆ ಅಂತರದಲ್ಲಿರುವ ಕೊಂಡಸಕೊಪ್ಪದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಪಂಚಮಸಾಲಿ ಮೀಸಲಾತಿ ಹೋರಾಟಗಾರರು ಆಗಮಿಸಿದ್ದರು. ಸುವರ್ಣಸೌಧ ಮುತ್ತಿಗೆ ಹಾಕಲು ರಾಷ್ಟ್ರೀಯ ಹೆದ್ದಾರಿಗೆ ಹೋರಾಟಗಾರು ಬಂದ ಹಿನ್ನೆಲೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ವಾಹನ ಸವಾರರು ಪರದಾಟ ನಡೆಸಿದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಸರಕಾರದ ವಿರುದ್ಧ ಗುಡುಗಿದ ಯತ್ನಾಳ್

ಸಿಎಂ ಸಿದ್ದರಾಮಯ್ಯ ಪಂಚಮಸಾಲಿ ಹೋರಾಟ ಹತ್ತಿಕ್ಕಲು ಪೊಲೀಸರ ಮೂಲಕ ಲಾಠಿ ಚಾರ್ಜ್ ನಡೆಸಿದ್ದಾರೆ. ನಮ್ಮ ಹೋರಾಟದ ಕುರಿತು ಸಾಕಷ್ಟು ಅಪಪ್ರಚಾರ ಮಾಡಲಾಗಿದೆ. ಸದನದಲ್ಲಿ ಹೋರಾಟ ಮಾಡಿದ ಕಾರಣಕ್ಕೆ ಜಿಲ್ಲಾಧಿಕಾರಿ ನಿರ್ಬಂಧ ವಾಪಸ್ ಪಡೆದರು. ನಮ್ಮ ಮುಂದಿನ ಹೋರಾಟದ ಕುರಿತು ಸ್ವಾಮೀಜಿ ನಿರ್ಧಾರ ಕೈಗೊಳ್ಳುತ್ತಾರೆ. ಬೆಳಗಾವಿ ಸುವರ್ಣಸೌಧದಲ್ಲಿ ನಾವು ಮೀಸಲಾತಿ ಪಡೆಯುತ್ತೇವೆ ಎಂದರು

ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವ ವಿಚಾರವಾಗಿ ಸಿಎಂ ಗಮನಕ್ಕೆ ತಂದಿರುವೆ. ಸರಕಾರ ಯಾವುದೇ ಇರಲಿ ಆದರೆ ಪಂಚಮಸಾಲಿ ಮೀಸಲಾತಿ ವಿಚಾರವಾಗಿ ಸಮಾಜ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾನು ಬದ್ಧವಾಗಿರುತ್ತೇನೆ.

– ಲಕ್ಷ್ಮೀ ಹೆಬ್ಬಾಳ್ಕರ್
ಸಚಿವೆ

ನಾಳೆ ರಾಜ್ಯಾದ್ಯಂತ ಪ್ರತಿಭಟನೆ

ಲಾಠಿಚಾರ್ಜ್ ಮಾಡಿದ ಸರಕಾರದ ಕ್ರಮ ಖಂಡಿಸಿ ಡಿ.12ರಂದು ರಾಜ್ಯಾದ್ಯಂತ ಹೋರಾಟ ಮಾಡಲು ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಕರೆ ನೀಡಿದರು. ಮಂಗಳವಾರ ರಾತ್ರಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಹೋರಾಟ ಹತ್ತಿಕ್ಕಲು ಸಾಧ್ಯವಿಲ್ಲ. ನೀವು ಮಾಡಿದ ದಬ್ಬಾಳಿಕೆಯಿಂದ ಈ ಹೋರಾಟ ರಾಜ್ಯಾದ್ಯಂತ ತೀವ್ರ ಸ್ವರೂಪ ಪಡೆಯಲಿದೆ. ತಡೆದು ತೋರಿಸಿ ಎಂದೂ ಸವಾಲು ಹಾಕಿದರು.2

ಬಾಯಲ್ಲಿ ಬಸವಣ್ಣನ ವಚನ, ಕೈಯಲ್ಲಿ ಲಾಠಿ

ಬೆಳಗಾವಿ: ಪಂಚಮಸಾಲಿ ಹೋರಾಟಗಾರರ ಮೇಲೆ ಪೊಲೀಸರು ಅಮಾನುಷವಾಗಿ ಲಾಠಿ ಚಾರ್ಜ್ ಮಾಡಿರುವುದು ಖಂಡನೀಯ. ಸರಕಾರ ತನ್ನ ಹಿಟ್ಲರ್ ಧೋರಣೆ ಮೂಲಕ ಹೋರಾಟ ಹತ್ತಿಕ್ಕಲು ಪ್ರಯತ್ನಿಸುತ್ತಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಪ್ರತಿಕ್ರಿಯಿಸಿದ್ದಾರೆ.

ತಮ್ಮ ಎಕ್ಸ್‌ನಲ್ಲಿ ಖಂಡಿಸಿದ ಅವರು, ಸಿಎಂ ಅವರೇ, ತಮ್ಮ ಹಿಟ್ಲರ್ ಆಡಳಿತದಲ್ಲಿ ರಾಜ್ಯದ ಜನತೆ ತಮ್ಮ ಹಕ್ಕುಗಳಿಗಾಗಿ ಶಾಂತಿಯುತ ಪ್ರತಿಭಟನೆ ಮಾಡಲೂ ಅವಕಾಶವಿಲ್ಲವೇ? ಬಾಯಲ್ಲಿ ಬಸವಣ್ಣನ ವಚನ ಹೇಳಿ, ಕೈಯಲ್ಲಿ ಲಾಠಿ ಪ್ರಹಾರ ಮಾಡುವ ತಮ್ಮದು ಯಾವ ಸೀಮೆ ಸಿದ್ಧಾಂತ ಸ್ವಾಮಿ? ಪ್ರತಿಭಟನಾಕಾರರಿಗೆ ರಕ್ತ ಬರುವಂತೆ ಪೊಲೀಸರು ಲಾಠಿಯಿಂದ ಹೊಡೆದಿದ್ದಾರಲ್ಲ, ಪೊಲೀಸರು ಯಾರ ಅಣತಿಯಂತೆ ಈ ದುಸ್ಸಾಹಸ ಮಾಡಿದ್ದಾರೆ? ಎಂದು ಪ್ರಶ್ನಿಸಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ಮಾಡುವುದು ಜನರ ಹಕ್ಕು. ಜನರ ಸಮಸ್ಯೆ ಆಲಿಸಿ ಅವರಿಗೆ ಸಮಾಧಾನ ಹೇಳಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾಗಿರುವುದು ಸರಕಾರದ ಕರ್ತವ್ಯ. ಈ ರೀತಿ ಮುತ್ಸದ್ದಿತನ ತೋರುವುದು ಬಿಟ್ಟು, ಏಕಾಏಕಿ ಲಾಠಿ ಚಾರ್ಜ್ ಮಾಡುವ ಮೂಲಕ ಒಂದು ಸಮುದಾಯವನ್ನು ಪ್ರಚೋದನೆ ಮಾಡಿ

ರೊಚ್ಚಿಗೇಳಿಸುವುದು ಯಾವ ಸೀಮೆ ಆಡಳಿತ? ಯಾವ ಸೀಮೆ ನಾಯಕತ್ವ? ಎಂದೂ ಕೇಳಿದ್ದಾರೆ.

ಪ್ರತಿಭಟನಾಕಾರರನ್ನು ಕರೆಯಿಸಿ ಮಾತನಾಡಿ. ಅವರ ಮೀಸಲಾತಿ ಬೇಡಿಕೆ ಬಗ್ಗೆ ತಮ್ಮ ನೀಲುವೇನು ಎನ್ನುವುದನ್ನು ಸ್ಪಷ್ಟಪಡಿಸಿ. ಪರಿಸ್ಥಿತಿ ಕೈಮೀರಿಹೋಗುವ ಮುನ್ನ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ ಎಂದು ಆಗ್ರಹಿಸಿದ್ದಾರೆ.

ನಾಲ್ವರು ಸಮುದ್ರ ಪಾಲು

ಭಟ್ಕಳ: ಶಾಲಾ ಪ್ರವಾಸಕ್ಕೆ ಬಂದಿದ್ದ ವಿದ್ಯಾರ್ಥಿಗಳು ಮಂಗಳವಾರ ಸಂಜೆ ಮುರುಡೇಶ್ವರದ ಕಡಲ ತೀರದಲ್ಲಿ ಆಟವಾಡುತ್ತಿದ್ದರು. ಈ ವೇಳೆ ರಭಸವಾಗಿ ಅಬ್ಬರಿಸಿದ ಅಲೆಗಳ ಹೊಡೆತಕ್ಕೆ ಸಿಲುಕಿದ ನಾಲ್ವರು ವಿದ್ಯಾರ್ಥಿನಿಯರು ಸಮುದ್ರದಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಸದ್ಯದ ಮಾಹಿತಿ ಪ್ರಕಾರ ಓರ್ವ ವಿದ್ಯಾರ್ಥಿನಿಯ ಶವ ಪತ್ತೆಯಾಗಿದೆ. ಶ್ರಾವಂತಿ (15) ಶವ ಪತ್ತೆಯಾಗಿದ್ದು, ಯಶೋಧಾ ಹಾಗೂ ವೀಕ್ಷಣಾ ಸೇರಿ ಮೂವರು ವಿದ್ಯಾರ್ಥಿನಿಯರನ್ನು ರಕ್ಷಿಸಲಾಗಿದೆ. ದೀಕ್ಷಾ ಲಾವಣ್ಯ ಹಾಗೂ ಲಿಪಿಕಾ ಎಂಬ ಮೂವರು ವಿದ್ಯಾರ್ಥಿನಿಯರು ನಾಪತ್ತೆಯಾಗಿದ್ದಾರೆ. ಮೂವರು ವಿದ್ಯಾರ್ಥಿನಿಯರ ಪತ್ತೆಗಾಗಿ ಸಮುದ್ರದಲ್ಲಿ ಶೋಧಕಾರ್ಯ ಮುಂದುವರೆದಿದೆ. ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಕೊತ್ತೂರು ಶಾಲೆಯ 46 ವಿದ್ಯಾರ್ಥಿಗಳು ಹಾಗೂ 6 ಶಿಕ್ಷಕರು ಶೈಕ್ಷಣಿಕ ಪ್ರವಾಸಕ್ಕೆಂದು ಮುರುಡೇಶ್ವರಕ್ಕೆ ಬಂದಿದ್ದರು. ಈ ವೇಳೆ ಕಡಲ ನೀರಲ್ಲಿ ಆಡುವ ವೇಳೆ ಈ ದುರಂತ ಸಂಭವಿಸಿದೆ. ಶೈಕ್ಷಣಿಕ ಪ್ರವಾಸಕ್ಕೆಂದು ಬಂದಿದ್ದ ವಿದ್ಯಾರ್ಥಿಗಳಲ್ಲಿ ನಾಲ್ವರು ವಿದ್ಯಾರ್ಥಿನಿಯರು ಸಮುದ್ರ ಪಾಲಾಗಿರುವ ಘಟನೆ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಮುರುಡೇಶ್ವರದಲ್ಲಿ ನಡೆದಿದೆ.

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್ ಅಂಬೇಡ್ಕರ್ ಭವನ, ಹಾಸನ
ದೂರವಾಣಿ:08172–268960,
email:dswohassan@gmail.com
ಸಂ/ಉನಿಸಕಇಹಾ/ಡಿ3/ಸಿಬ್ಬಂದಿ/ಸಿಆರ್15/2024–25
ದಿನಾಂಕ:9–12–2024.

ಇ–ಟೆಂಡರ್ ಪ್ರಕಟಣೆ

2024–25 ರಿಂದ ಎರಡು ವರ್ಷಗಳ ಅವಧಿಗೆ ಹಾಸನ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿದ್ಯಾರ್ಥಿ ನಿಲಯ/ವಸತಿ ಶಾಲೆಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಲು ಇ–ಟೆಂಡರ್ ಕರೆಯಲಾಗಿದ್ದು, ವಿವರ ಕೆಳಕಂಡಂತಿರುತ್ತದೆ. 1.ಟೆಂಡರ್ ಮೊತ್ತ ರೂ.38,78,50,000/– 2.ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ: 11–12–2024 3.ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:11–1–2025 ಸಂಜೆ 4.00 ಗಂಟೆ 4.ಟೆಂಡರ್ ಫಾರಂಡೌನ್‌ಲೋಡ್ ಮಾಡುವ ಇ–ಪ್ರೊಕ್ಯೂರ್‌ಮೆಂಟ್ ವಿಳಾಸ: https://eproc. karnataka.gov.in 5.ಸಂಪರ್ಕ ವಿಳಾಸ: ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್.ಅಂಬೇಡ್ಕರ್ ಭವನ, ಎಸ್.ಬಿ.ಜಿ. ಥಿಯೇಟರ್ ಎದುರು, ಹಾಸನ. ದೂರವಾಣಿ: 08172–268960

ಸಹಿ/–ಉಪ ನಿರ್ದೇಶಕರು, ಸವಾಜ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ
ವಾಸಾಸಂಇ/ಹಿಸನಿ/ಹಾಸನ/737/ಕೆಎಸ್ಎಂಸಿಎ/2024–25

ಕರ್ನಾಟಕ ಸರ್ಕಾರ,
ಕಾರ್ಯಪಾಲಕ ಅಭಿಯಂತರರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ:ಮಟೆಂಪ್ರ:ನರೇಗಾ:ಸಾಮಾಗ್ರಿ:2024–25 ದಿ:06.12.2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:36/2024–25

ಕರ್ನಾಟಕ ಸರ್ಕಾರದ ರಾಜ್ಯಪಾಲರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯರವರಿಂದ ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ:29/2024–25 ದಿನಾಂಕ:19.11.2024ರಂದು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಅಧಿಕೃತ ಮಾರಾಟಗಾರರು/ಸರಬರಾಜುದಾರರಿಂದ "ದ್ವಿಲಕೋಟೆ ಪದ್ಧತಿ" ಅನುಸಾರ ಐಟಂವಾರು ಮರು ಟೆಂಡರ್‌ಗಳನ್ನು ಅಹ್ವಾನಿಸಲಾಗಿತ್ತು. ಸದರಿ ಪ್ರಕಟಣೆಯಂತೆ ಕ್ರಮ ಸಂಖ್ಯೆ (1), (4), (6) & (7)ರ ಕಾಮಗಾರಿಗಳಿಗೆ ಟೆಂಡರ್‌ನಲ್ಲಿ ಯಾವುದೇ ಸರಬರಾಜುದಾರರು ಭಾಗವಹಿಸದ ಕಾರಣ ಮರು ಟೆಂಡರ್ (4ನೇ ಕರೆ) ಪ್ರಕಟಣೆ ಪ್ರಕಟಿಸಲಾಗಿದೆ. ಟೆಂಡರ್ ದಾಖಲಾತಿಗಳನ್ನು https://kppp.karnataka.gov.in, KPP Portal ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:16.12.2024ರ ಸಂಜೆ 4.00ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ.ವಿಭಾಗ, ಮಂಡ್ಯ.
ವಾಸಾಸಂಇ/ಸನಿ–ಮಂ/ಕೆಎಸ್ಎಂಸಿ&ಎ/493/2024–25

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ,
ಕೋಲಾರ–563101. e-mail: eepwdkolar07@gmail.com, website: www.kpwd.gov.in, KPP-portal : http://kppp.karnataka.gov.in
ದೂರವಾಣಿ ಸಂಖ್ಯೆ: 08152-222022, ಫ್ಯಾಕ್ಸ್ ಸಂಖ್ಯೆ: 08152-227443

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು –4
ಟೆಂಡರ್ ಪ್ರಕಟಣೆ ಸಂಖ್ಯೆ–34/2024–25 ದಿನಾಂಕ: 09.12.2024

ಕೋಲಾರ ಜಿಲ್ಲೆ ಕೆ.ಜಿ.ಎಫ್ ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 5054– ರಾಜ್ಯ ಹೆದ್ದಾರಿ ರಸ್ತೆ ಸುಧಾರಣೆ ಅಡಿಯಲ್ಲಿ 1 ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, **ಕಾಮಗಾರಿಗೆ ಟೆಂಡರ್‌ಗಿಟ್ಟ ಮೊತ್ತ: ರೂ. 162.57 ಲಕ್ಷಗಳು ಇ.ಎಂ.ಡಿ ಮೊತ್ತ ರೂ.2.44 ಲಕ್ಷಗಳು ಕಾಲಾವಧಿ : 6 ತಿಂಗಳು ನಿರ್ವಹಿಸಲು ಲೋ.ಇ. 2ನೇ ದರ್ಜೆ ಮತ್ತು ಮೇಲ್ಪಟ್ಟ ನೊಂದಾಯಿತ ಗುತ್ತಿಗೆದಾರರಿಂದ ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ.** ಗುತ್ತಿಗೆದಾರರು ಕೆಡಬ್ಲ್ಯು– 4 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆ.ಪಿ.ಪಿ ಪೋರ್ಟಲ್ **(Viz.,http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆ.ಪಿ.ಪಿ ಪೋರ್ಟಲ್‌ನಲ್ಲಿ **ದಿನಾಂಕ: 30.12.2024 ರಂದು ಸಂಜೆ 16.00 ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: 31.12.2024 ರಂದು ಸಂಜೆ 16.30 ಗಂಟೆಯ ನಂತರ ಕೆ.ಪಿ.ಪಿ.ಪೋರ್ಟಲ್‌ನಲ್ಲಿ ತೆರೆಯಲಾಗುವುದು.** ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆ.ಪಿ.ಪಿ ಪೋರ್ಟಲ್ **(Viz.,http://kppp.karnataka.gov.in)**ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಗಳಾದಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು/ ಸೂಚಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಕೋಲಾರ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:363/ಕೆಎಸ್ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆರೋಗ್ಯ ಅಧಿಕಾರಿಯವರ ಕಚೇರಿ (ಸಾರ್ವಜನಿಕ ಆರೋಗ್ಯ), ಬಿಬಿಎಂಪಿ ಪ್ರಧಾನ ಕಛೇರಿ, ನೆಲಮಹಡಿ, ಅನೆಕ್ಸ್–2 ಕಟ್ಟಡ, ಎನ್ ಆರ್ ಚೌಕ, ಬೆಂಗಳೂರು–560002
ಸಂಖ್ಯೆ: ಬಿಬಿಎಂಪಿ/2024-25/ಎಸ್‌ಇ 1071
ದಿನಾಂಕ: 10-12-2024

ಟೆಂಡರ್ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಈ ಕೆಳಗಿನವುಗಳಿಗೆ ಅರ್ಹ ಬಿಡ್ಡರ್‌ಗಳಿಂದ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ:

1.	ಆರ್‌ಎಫ್‌ಪಿ ಉಲ್ಲೇಖ ಸಂಖ್ಯೆ: 1) Request for Proposal for provision of Yoga services. 2) Request for Proposal for provision of Specialist services	ಟೆಂಡರ್ ಉಲ್ಲೇಖ ಸಂಖ್ಯೆ: 1) BBMP/2024-25/SE1071/ CALL-2 2) BBMP/2024-25/SE1069 CALL-2
2.	ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://kppp. karnataka.gov.in** ನಿಂದ **RFP** ದಾಖಲೆಗಳನ್ನು ಡೌನ್‌ಲೋಡ್ ಮಾಡುವ ಆರಂಭದ **ದಿನಾಂಕ:**	**10–12–2024ರ ನಂತರ**
3.	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ವಿಚಾರಣೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ **ದಿನಾಂಕ ಮತ್ತು ಸಮಯ:**	**12–12–2024ರ ಸಂಜೆ 5.00 ಗಂಟೆಯವರೆಗೆ**
4.	ಪೂರ್ವ ಬಿಡ್ ಸಭೆಯ **ದಿನಾಂಕ ಮತ್ತು ಸ್ಥಳ :**	**12–12–2024ರ ಬೆಳಗ್ಗೆ 11.00 ಗಂಟೆಗೆ** ಈ ಕೆಳಗಿನ ಸ್ಥಳದಲ್ಲಿ: **ಮುಖ್ಯ ಆರೋಗ್ಯ ಅಧಿಕಾರಿಯವರ ಕಚೇರಿ (ಸಾರ್ವಜನಿಕ ಆರೋಗ್ಯ)**, ನೆಲಮಹಡಿ, ಅನೆಕ್ಸ್-3 ಕಟ್ಟಡ, ಎನ್ ಆರ್ ಚೌಕ, ಬೆಂಗಳೂರು-560002.
5.	**RFP** ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಪ್ಲಾಟ್‌ಫಾರ್ಮ್‌ನಲ್ಲಿ ಟೆಂಡರ್ ಅನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ ಮತ್ತು ಸಮಯ:**	**18–12–2024 ಸಂಜೆ 5.00 ಗಂಟೆಯವರೆಗೆ**
6.	**RFP** ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ಅರ್ಜಿಗಳನ್ನು ತೆರೆಯುವ **ದಿನಾಂಕ & ಸಮಯ:**	**19–12–2024 ಸಂಜೆ 5.10 ಗಂಟೆಗೆ**
7.	ಆರ್‌ಎಫ್‌ಪಿ ಅರ್ಜಿಗಳನ್ನು ತೆರೆಯುವ ಸ್ಥಳ:	**Online at Karnataka Public Procurement portal**
8.	ಸಂವಹನಕ್ಕಾಗಿ ವಿಳಾಸ:	**ಮುಖ್ಯ ಆರೋಗ್ಯ ಅಧಿಕಾರಿಯವರ ಕಚೇರಿ (ಸಾರ್ವಜನಿಕ ಆರೋಗ್ಯ)**, ನೆಲಮಹಡಿ, ಅನೆಕ್ಸ್-3 ಕಟ್ಟಡ, ಎನ್ ಆರ್ ಚೌಕ, ಬೆಂಗಳೂರು-560002. **ದೂರವಾಣಿ: 080–2297 5516.** ಇಮೇಲ್: **choph515@gmail.com**

(1) ಟೆಂಡರ್ ದಾಖಲೆಗಳನ್ನು **https://kppp.karnataka.gov.in** ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು: (2) ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.
ಸಹಿ/– ಮುಖ್ಯ ಆರೋಗ್ಯ ಅಧಿಕಾರಿಯವರು (ಸಾರ್ವಜನಿಕ ಆರೋಗ್ಯ), ಬಿಬಿಎಂಪಿ.

ಕೃಷಿ ವಿಶ್ವವಿದ್ಯಾಲಯ ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ–5
E mail: estateofficer@rediffmail.com Epabx:+91-836-2214332/216,444
No.: EO/DB/TN/e-Proc.T-120/2024-25
Date: 10.12.2024

ಇ–ಪ್ರೊಕ್ಯೂರಮೆಂಟ ಟೆಂಡರ ಪ್ರಕಟಣೆ (ದ್ವಿತೀಯ / ತೃತೀಯ ಕರೆ)

ಕೃಷಿ ವಿಶ್ವವಿದ್ಯಾಲಯ ಧಾರವಾಡದ ವಿವಿಧ ಆವರಣಗಳಲ್ಲಿ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರುಗಳಿಂದ ಟೆಂಡರುಗಳನ್ನು ಮರು ಅಹ್ವಾನಿಸಲಾಗಿದೆ. ಸದರಿ ಟೆಂಡರಗಳನ್ನು e-procurement portal ಪದ್ಧತಿಯಂತೆ **http://kppp.karnataka.gov.in** online ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ 0836–2214332 ಸಂಪರ್ಕಿಸಬಹುದು. e-procurement ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 080–46010000.

ಟೆಂಡರ್ ವೇಳಾಪಟ್ಟಿ

1	ವಿಚಾರಣೆಗಳಿಗಾಗಿ ಕೊನೆಯ ದಿನಾಂಕ	16.12.2024, 16.00 ಗಂಟೆಯವರೆಗೆ
2	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	18.12.2024, 16.00 ಗಂಟೆಯವರೆಗೆ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ	19.12.2024, 16.15 ಗಂಟೆಗೆ
4	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ	20.12.2024, 16.00 ಗಂಟೆಗೆ

ಸೂಚನೆ: ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ–ಪ್ರೊಕ್ಯೂರಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.
ವಾಸಾಸಂಇ/ಧಾರವಾಡ/724/ಅಡ್ವಟೋರ್/2024–25
ಸಹಿ/– ಆಸ್ತಿ ಅಧಿಕಾರಿಗಳು

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436
ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/2024–25/46372–76
ದಿನಾಂಕ:10.12.2024

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ) ::

ಪಿಸಿ–1390 (ಕರೆ–2): ಗು.ವಿ.ಸ.ಕಂ.ನಿ. ದ ವಿವರಣೆಯಂತೆ ಎಲ್.ಟಿ ಪಾಲಿಯೋಲಿಫಿನ್ ಹೀಟ್ ಶ್ರಿಂಕೇಬಲ್ ಟ್ಯೂಬ್ ಇನ್ಸುಲೇಷನ್ ಕವರ್ಡ ಎ.ಸಿ.ಎಸ್.ಆರ್. ರ್‍ಯಾಬಿಟ್ ಕಂಡಕ್ಟರ್ ತಯಾರಿಕೆ ಮತ್ತು ಪೂರೈಕೆ ಮಾಡುವುದು.
ದಿನಾಂಕ: ಕೆಪಿಪಿಪಿ ಪೋರ್ಟಲ್ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **11.12.2024** ರಂದು ಅಥವಾ ನಂತರ, ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **23.12.2024 @ 17:30 ಗಂಟೆಗೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **26.12.2024 @ 11:00 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ ದಿನಾಂಕ: **30.12.2024 @ 11:00 ಗಂಟೆಗೆ. ಟೆಂಡರ್ ಮೊತ್ತ:** ರೂ. **1399.33** ಲಕ್ಷ.
ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: https://kppp.karnataka.gov.in.

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/711/ಕೆ.ಎಸ್.ಎಂ.ಸಿ.&ಎ/2024–25

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕಾಮಗಾರಿ ಇಲಾಖೆ, ಕೇಂದ್ರ ಕಚೇರಿ, ಶಾಂತಿನಗರ, ಬೆಂಗಳೂರು – 560 027.
ಸಂಖ್ಯೆ. ಬೆಮಸಾ/ಕೇಕ/ಕಾಇ/ಕಾನಿಅ/1431–33/2024–25
ದಿನಾಂಕ: 09.12.2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 27–29/2024–25

ಅರ್ಹ ಗುತ್ತಿಗೆದಾರರಿಂದ 1) "ಬೆಂಗಳೂರು ಕೆಂಗೇರಿ ಟಿ.ಟಿ.ಎಂ.ಸಿ. ಯಲ್ಲಿನ ಅಗ್ನಿಶಾಮಕ ವ್ಯವಸ್ಥೆಯನ್ನು ಉನ್ನತೀಕರಿಸುವುದು. (ಪ.ಪಂ.ಕ್ಕೆ ಮೀಸಲು) (2ನೇ ಕರೆ)". ಟೆಂಡರ್‌ಗಿಟ್ಟ ಮೊತ್ತ ರೂ. 57.63 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 57,630/–, 2) "ಬೆಂಗಳೂರು ಯಶವಂತಪುರ ಟಿ.ಟಿ.ಎಂ.ಸಿ. ಯಲ್ಲಿನ ಅಗ್ನಿಶಾಮಕ ವ್ಯವಸ್ಥೆಯನ್ನು ಉನ್ನತೀಕರಿಸುವುದು. (ಪ.ಪಂ.ಕ್ಕೆ ಮೀಸಲು) (2ನೇ ಕರೆ)". ಟೆಂಡರ್‌ಗಿಟ್ಟ ಮೊತ್ತ ರೂ. 73.73 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 73,730/–, 3) "ಬೆಂಗಳೂರು ಬನಶಂಕರಿ ಟಿ.ಟಿ.ಎಂ.ಸಿ. ಯಲ್ಲಿನ ಅಗ್ನಿಶಾಮಕ ವ್ಯವಸ್ಥೆಯನ್ನು ಉನ್ನತೀಕರಿಸುವುದು. (2ನೇ ಕರೆ)" ಟೆಂಡರ್‌ಗಿಟ್ಟ ಮೊತ್ತ ರೂ. 36.44 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 72,900/–. 4) "ಬೆಂಗಳೂರು ಕೆ.ಜಿ.ಬಿ.ಎಸ್. ನಲ್ಲಿನ ವಿದ್ಯುತ್ತೀಕರಣದ ಅಭಿವೃದ್ಧಿ ಕೆಲಸ (2ನೇ ಕರೆ)". ಟೆಂಡರ್‌ಗಿಟ್ಟ ಮೊತ್ತ ರೂ. 25.43 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 51,000/–, 5) "ಬೆಂಗಳೂರು ಕೇಂದ್ರೀಯ ಕಾರ್ಯಾಗಾರ–2, ಕೆ.ಆರ್.ಪುರಂ ಮತ್ತು ದೊಮ್ಮಲೂರು ಟಿ.ಟಿ.ಎಂ.ಸಿ. ಯಲ್ಲಿನ ವಿದ್ಯುತ್ತೀಕರಣದ ಅಭಿವೃದ್ಧಿ ಕೆಲಸ (2ನೇ ಕರೆ)" ಟೆಂಡರ್‌ಗಿಟ್ಟ ಮೊತ್ತ ರೂ. 27.11 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 54,220/– , 6) "ಬೆಂಗಳೂರು ಶಾಂತಿನಗರ ಟಿ.ಟಿ.ಎಂ.ಸಿ., ಸಿ.ಡಬ್ಲ್ಯೂ.ಎಸ್–1 ಮತ್ತು ಘಟಕ–2 ರಲ್ಲಿನ ವಿದ್ಯುತ್ತೀಕರಣದ ಅಭಿವೃದ್ಧಿ ಕೆಲಸ (2ನೇ ಕರೆ)". ಟೆಂಡರ್‌ಗಿಟ್ಟ ಮೊತ್ತ ರೂ. 127.15 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 2,00,000/– ಮತ್ತು 7) "ಬೆಂಗಳೂರು ಯಶವಂತಪುರದಲ್ಲಿ ವಿಶ್ರಾಂತಿ ಗೃಹದ ಹಿಂಭಾಗದಲ್ಲಿನ ಹಾನಿಗೊಳಗಾದ ಸುತ್ತುಗೋಡೆಯನ್ನು ನಿರ್ಮಿಸುವುದು". ಟೆಂಡರ್‌ಗಿಟ್ಟ ಮೊತ್ತ ರೂ. 4.67 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 11,675/– ಕೆಲಸಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಭಾಗವಹಿಸುವ ಗುತ್ತಿಗೆದಾರರು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

(1) ಟೆಂಡರ್ ಸಲ್ಲಿಸಲು ಕಡೆ ದಿನಾಂಕ: 16.12.2024. (2) ಟೆಂಡರ್ ತೆರೆಯುವ ದಿನಾಂಕ: 18.12.2024.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಬೆ.ಮ.ಸಾ.ಸಂಸ್ಥೆ

ಜಿಲ್ಲಾ ಪಂಚಾಯತ–ಉತ್ತರ ಕನ್ನಡ
ಉಪನಿರ್ದೇಶಕರು(ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಶೈಕ್ಷಣಿಕ ಜಿಲ್ಲೆ ಶಿರಸಿ (ಉ.ಕ)
ಸಂಖ್ಯೆ : ಸ.ಶಿ.ಕ./ಕೆ.ಪಿ.ಎಸ್/ಸೃಷ್ಟಿ ಟಿಂಕರಿಂಗ್ ಲ್ಯಾಬ್/ಇ–ಟೆಂಡರ್/20/2024–25 ದಿನಾಂಕ: 09–12–2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2023–24ನೇ ಸಾಲಿನ ಪಿಎಬಿ ಅನುಮೋದಿತ ಸೃಷ್ಟಿ ಟಿಂಕರಿಂಗ್ ಲ್ಯಾಬ್ ಚಟುವಟಿಕೆಯಡಿ 3 ಕೆಪಿಎಸ್ ಶಾಲೆಗಳಿಗೆ ಪ್ರಯೋಗಾಲಯ ಸ್ಥಾಪನೆಗೆ ಸಾಧನ ಸಲಕರಣೆಗಳನ್ನು ಖರೀದಿಸಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಟೆಂಡರ್‌ದಾರರು ಇ–ಟೆಂಡರ್‌ನ್ನು ಅಂತರ್ಜಾಲದ ವೆಬ್‌ಸೈಟ್ https://kppp.karnataka.gov.in/ ರಲ್ಲಿ ಸಲ್ಲಿಸಬೇಕು. ಇ–ಟೆಂಡರ್ ನ್ನು ದಿನಾಂಕ: 27–12–2024 ರ ಸಂಜೆ 5.30 ಗಂಟೆ ಒಳಗೆ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ: ವಿವರ (1) ಟೆಂಡರ್ ಬಿಡ್‌ಗಳನ್ನು ಸಲ್ಲಿಸಲು ದಿನಾಂಕ: 13–12–2024 ರಿಂದ 27–12–2024 5.30 PM (2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 30–12–2024, (11.30 AM) (3) ಆರ್ಥಿಕ ಬಿಡ್‌ಗಳನ್ನು ತೆರೆಯುಬಹುದಾದ ಸಂಭಾವ್ಯ ದಿನಾಂಕ: 02–01–2025 11.30 AM (4) ಟೆಂಡರ್ ಮೊಬಲಗು: ರೂ.23.55 ಲಕ್ಷ (5) ಇ.ಎಂ.ಡಿ. ಮೊತ್ತ: ರೂ. 70650/–. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ವೇಳೆಯಲ್ಲಿ ಮೊಬೈಲ್ ಸಂಖ್ಯೆ: 9480886953 ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಉಪನಿರ್ದೇಶಕರು (ಆಡಳಿತ) ಹಾಗೂ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸಮಗ್ರ ಶಿಕ್ಷಣ ಕರ್ನಾಟಕ, ಶೈಕ್ಷಣಿಕ ಜಿಲ್ಲೆ ಶಿರಸಿ (ಉ.ಕ)
DIPR/KWR/KSMCA/608/24-25 dt. 10.12.24

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು
ಐ.ಡಿ.ಎಸ್.ಎಮ್.ಟಿ. ಲೇಔಟ್, ಮಂತ್ರಾಲಯರಸ್ತೆ, ರಾಯಚೂರು Email: rudaraichur@gmail.com
ಸಂಖ್ಯೆ: ನಪ್ರಾರಾ/ಆಡಳಿತ/ಮು.ಠೆ/2024–25/
ದಿನಾಂಕ:09–12–2024

ಇ–ಟೆಂಡರ್ ಪ್ರಕಟಣೆ

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ವಿವಿಧ ಖಾತೆಗಳಲ್ಲಿರುವ ಮೊತ್ತವನ್ನು ಮುದ್ದತ್ತಿನ ಠೇವಣಿ ರೂಪದಲ್ಲಿ ಹೂಡಲು ಅಲ್ಪಾವಧಿಯ ಬ್ಯಾಂಕ್ ಸ್ಥಿರಾ ಠೇವಣಿಗಳಲ್ಲಿ ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿ ರಾಷ್ಟ್ರೀಕೃತ ಬ್ಯಾಂಕಗಳಿಂದ ಬಡ್ಡಿದರ ಪಡೆಯಲು ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕುರಿತು.

ಟೆಂಡರ್‌ನ ವಿವರ: ವಿವಿಧ ಖಾತೆಗಳಲ್ಲಿರುವ ಹೆಚ್ಚುವರಿ ಮೊತ್ತವನ್ನು ಮುದ್ದತ್ತಿನ ಠೇವಣೆ ರೂಪದಲ್ಲಿ ಹೂಡುವ ಕುರಿತು **ಟೆಂಡರ್‌ನ ಸಂಖ್ಯೆ:** Number:RCRUDA/2024-25/AUCTION4. **ಅಂದಾಜು ವೆಚ್ಚ (ಕೋಟಿಗಳಲ್ಲಿ):** 3.70

1) ಟೆಂಡರಗಳನ್ನು ದಿನಾಂಕ: 10–12–2024 ರಿಂದ ಸರ್ಕಾರದ KPPP ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು. 2) ಪ್ರಶ್ನೆಗಳಿಗೆ ಕೊನೆಯ ದಿನಾಂಕ: 13-12-2024 @ 05.00PM 3) **ಹರಾಜುನಲ್ಲಿ ಭಾಗವಹಿಸುವಿಕೆಯನ್ನು ಖಚಿತಪಡಿಸಲು ದಿನಾಂಕ ಮತ್ತು ಸಮಯ:**23–12–2024 ರಂದು ಸಂಜೆ 05.00 ಗಂಟೆಯವರೆಗೆ 4) **ಪ್ರಾರಂಭ ದಿನಾಂಕ ಮತ್ತು ಮೌಲ್ಯಮಾಪನದ ಸಮಯ:** ದಿನಾಂಕ: 26-12-2024 11.00AM. 5) **ನೇರ ಹರಾಜಿನ ದಿನಾಂಕ ಮತ್ತು ಸಮಯ:** 31-12-2024: 10.00 AM ರಿಂದ 04.00 PM

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೆ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಸದರಿ ಟೆಂಡರ್‌ಗಳ ಯಾವುದೆ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸುಲಾಗುವುದಿಲ್ಲ, ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತುಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾಕೋಶದ ವೆಬ್‌ಸೈಟ್ http://kppp.karnataka.gov.in ನಲ್ಲಿಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ ರಾಯಚೂರು
DIP/RCR/587/KSMCA/588/2024-25

ಸಮಾಚಾರ ಸಣ್ಣದಲ್ಲ

ಸೌರಬ್ ತಿವಾರಿ ಕ್ರಿಕೆಟ್ ಲೀಗ್ ನಾಯಕ

ಕೊಲಂಬೊ: ಚೊಚ್ಚಲ ಆವೃತ್ತಿಯ ಲಂಕಾ ಟಿ10 ಸೂಪರ್ ಲೀಗ್ ಡಿಸೆಂಬರ್ 11ರಿಂದ ಶ್ರೀಲಂಕಾದಲ್ಲಿ ಆರಂಭವಾಗಲಿದೆ. ಈ ಲೀಗ್‌ನಲ್ಲಿ ತಲಾ 10 ಓವರ್ ಗಳ ಪಂದ್ಯಗಳು ನಡೆಯಲಿದ್ದು, ಇದರಲ್ಲಿ ಒಟ್ಟು 6 ತಂಡಗಳು ಭಾಗವಹಿಸಲಿವೆ. ಈ ಲೀಗ್?ನ ಎಲ್ಲಾ ಪಂದ್ಯಗಳು ಕ್ಯಾಂಡಿಯ ಪಲ್ಲೆಕೆಲೆ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯಲಿವೆ.

ಅಚ್ಚರಿಯ ವಿಷಯವೆಂದರೆ ಈ ಆರು ಫ್ರಾಂಚೈಸಿಗಳ ಪೈಕಿ ಒಬ್ಬ ಭಾರತೀಯ ಆಟಗಾರನಿಗೂ ತಂಡದ ನಾಯಕತ್ವ ಸಿಕ್ಕಿದೆ. ಆ ಆಟಗಾರ ಬೇರ್ಯಾರು ಅಲ್ಲ, ಟೀಂ ಇಂಡಿಯಾ ಪರ ಮೂರು ಪಂದ್ಯಗಳನ್ನಾಡಿದ್ದ ಸೌರಭ್ ತಿವಾರಿ. ಈ ವರ್ಷದ ಆರಂಭದಲ್ಲಿ ಎಲ್ಲಾ ಮಾದರಿಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದ ಸೌರಭ್ ತಿವಾರಿ ಐಪಿಎಲ್‌ನಲ್ಲಿ ಆರ್‌ಸಿಬಿ ಪರವೂ ಆಡಿದ್ದರು. ಇದೀಗ ಅವರಿಗೆ ಲಂಕಾ ಟಿ10 ಸೂಪರ್ ಲೀಗ್‌ನಲ್ಲಿ ತಂಡದ ನಾಯಕತ್ವ ಸಿಕ್ಕಿದೆ.

ಅಯ್ಯರ್‌ಗೆ ಸದ್ಯದಲ್ಲೇ ಡಾಕ್ಟರೇಟ್

ದೆಹಲಿ: ಕಳೆದ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಕೋಲ್ಕತಾ ನೈಟ್ ರೈಡರ್ಸ್ ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿತ್ತು.

ಕೆಕೆಆರ್ ತಂಡವು ಚಾಂಪಿಯನ್ ಆಗುವಲ್ಲಿ ಎಡಗೈ ಸ್ಫೋಟಕ ಬ್ಯಾಟರ್ ವೆಂಕಟೇಶ್ ಅಯ್ಯರ್ ಮಹತ್ವದ ಪಾತ್ರ ವಹಿಸಿದ್ದರು. ಇದೀಗ ವೆಂಕಟೇಶ್ ಅಯ್ಯರ್ ಇನ್ನು ಕೆಲವೇ ವರ್ಷಗಳಲ್ಲಿ ಡಾಕ್ಟರ್ ವೆಂಕಟೇಶ್ ಅಯ್ಯರ್ ಎಂದು ಕರೆಸಿಕೊಳ್ಳಲಿದ್ದಾರೆ. 'ಫೈನಾನ್ಸ್ ವಿಭಾಗದಲ್ಲಿ ನಾನು ಪಿಎಚ್‌ಡಿ ಮಾಡುತ್ತಿದ್ದೇನೆ, ಶಿಕ್ಷಣ ಎನ್ನುವುದು ಯಾವಾಗಲೂ ನಮ್ಮ ಜತೆಯೇ ಇರುತ್ತದೆ. ಕ್ರಿಕೆಟರ್ ಆದವರು 60 ವರ್ಷಗಳ ವರೆಗೆ ಆಟವಾಡಲು ಸಾಧ್ಯವಿಲ್ಲ. ಹಾಗಾಗಿ ಹೆಚ್ಚಿನ ಶಿಕ್ಷಣ ಪಡೆದುಕೊಳ್ಳುವುದರಿಂದಾಗಿ ನನಗೆ ಮೈದಾನದಲ್ಲಿಯೂ ಉತ್ತಮ ತೀರ್ಮಾನ ತೆಗೆದುಕೊಳ್ಳಲು ಸಹಾಯ ಮಾಡುತ್ತದೆ ಎಂದರು.

ನ್ಯಾಯಮೂರ್ತಿಯಿಂದ ವಿವಾದಿತ ಹೇಳಿಕೆ

ಪ್ರಯಾಗ್‌ರಾಜ್: ಇದು ಹಿಂದೂಸ್ತಾನ. ಈ ದೇಶವು ಬಹುಸಂಖ್ಯಾತರ ಇಚ್ಛೆಯಂತೆ ಕಾರ್ಯನಿರ್ವಹಿಸುತ್ತದೆ ಎಂದು ಹೇಳಲು ನನಗೆ ಯಾವುದೇ ಹಿಂಜರಿ

ಕೆಯಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಶೇಖರ್ ಕುಮಾರ್ ಯಾದವ್ ನೀಡಿರುವ ಹೇಳಿಕೆ ಭಾರಿ ವಿವಾದಕ್ಕೆ ಗುರಿಯಾಗಿದೆ. ನ್ಯಾಯಮೂರ್ತಿಗಳ ಈ ಹೇಳಿಕೆಗೆ ಸಾಮಾಜಿಕ ಜಾಲತಾಣದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಆಯೋಜಿಸಿದ್ದ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಕುರಿತ ಕಾರ್ಯಕ್ರಮದಲ್ಲಿ ಭಾಗವಹಿ ಸಿದ ನ್ಯಾ. ಶೇಖರ್ ಕುಮಾರ್ ಯಾದವ್ ಅವರು, ಇದು ಹಿಂದೂಸ್ತಾನ ಎಂದು ಹೇಳಲು ನನಗೆ ಯಾವು ದೇ ಹಿಂಜರಿಕೆಯಿಲ್ಲ. ಇಲ್ಲಿ ವಾಸಿಸುವ ಬಹುಸಂ ಖ್ಯಾತರ ಇಚ್ಛೆಗೆ ಅನುಗುಣವಾಗಿ ದೇಶವು ಕಾರ್ಯ ನಿರ್ವಹಿಸುತ್ತದೆ. ಇದು ಕಾನೂನು. ಇದನ್ನು ಕುಟುಂಬ ಅಥವಾ ಸಮಾಜದ ಹಿನ್ನೆಲೆಯಲ್ಲಿ ನೋಡಿ. ಬಹುಸಂ ಖ್ಯಾತರ ಯೋಗಕ್ಷೇಮ ಮತ್ತು ಸಂತೋಷಕ್ಕೆ ಏನು ಪ್ರಯೋಜನವಾಗುತ್ತದೆಯೋ ಅದನ್ನೇ ಸ್ವೀಕರಿಸಲಾಗು ತ್ತದೆ ಎಂದೂ ಹೇಳಿದರು.ಮುಸ್ಲಿಂ ಸಮುದಾಯವನ್ನು ನೇರವಾಗಿ ಉಲ್ಲೇಖಿಸದೇ, ತಮ್ಮ ಭಾಷಣದಲ್ಲಿ ನ್ಯಾ. ಯಾದವ್ ಅವರು, ತ್ರಿವಳಿ ತಲಾಕ್, ಬಹುಪತ್ನಿತ್ವ, ಹಲಾಲ್‌ನಂಥ ಆಚರಣೆಗಳು ಸ್ವೀಕಾರಾರ್ಹವಲ್ಲ ಎಂದರು.

ಭಾರತ-ಬಾಂಗ್ಲಾ ದ್ವಿಪಕ್ಷೀಯ ಮಾತುಕತೆ

ಡಾಕಾ: ಬಾಂಗ್ಲಾದೇಶದಲ್ಲಿ ಹಿಂದೂಗಳ ಪರಿಸ್ಥಿತಿಯ ಬಗ್ಗೆ ಭಾರತ ಸರಕಾರವು ತೀವ್ರ ಕಳವಳ ವ್ಯಕ್ತಪಡಿಸಿದೆ. ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಸುರಕ್ಷತೆ ಹಾಗೂ ಅವರ ಆಸ್ತಿ-ಪಾಸ್ತಿಗಳ ಮೇಲೆ ಆಗುತ್ತಿರುವ ದಾಳಿಗಳ ಬಗ್ಗೆ ಭಾರತದ ಅಧಿಕಾರಿಗಳು ನೇರವಾಗಿ ಪ್ರಸ್ತಾಪಿಸಿದ್ದಾರೆ. ಬಾಂಗ್ಲಾದಲ್ಲಿರುವ ಮಧ್ಯಂತರ ಸರಕಾರದ ಜೊತೆಗೆ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಮಾತುಕತೆ ನಡೆಸಿ, ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಅಸಮಾಧಾನವನ್ನು ಮುಟ್ಟಿಸಿದ್ದಾರೆ. ಬಾಂಗ್ಲಾದಲ್ಲಿ ಭುಗಿಲೆದ್ದಿರುವ ಹಿಂಸಾಚಾರದಿಂದಾಗಿ ಹಿಂದೂಗಳು ಹಾಗೂ ಇತರೆ ಅಲ್ಪಸಂಖ್ಯಾತರು ದಿನದಿಂದ ದಿನಕ್ಕೆ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ನಿರಂತರ ದಾಳಿಯಿಂದಾಗಿ ಬಾಂಗ್ಲಾದಲ್ಲಿ ಹಿಂದೂಗಳಿಗೆ ಒಂದು ದಿನವೂ ನೆಮ್ಮದಿಯಿಂದ ಕಾಲ ಕಳೆಯಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮೂರು ತಿಂಗಳಿಂದ ಹಿಂದೂಗಳು ರಕ್ಷಣೆಗಾಗಿ ಬೀದಿಗಿಳಿದು ಹೋರಾಟ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಅದನ್ನು ತಡೆಯಲು ವಿದೇಶಾಂಗ ಸಚಿವಾಲಯದಲ್ಲಿ ಎಲ್ಲ ರೀತಿಯ ಯತ್ನಗಳನ್ನು ಆರಂಭಿಸಿದೆ.

{ ಗಿರಿರಾಜ್ ಸಿಂಗ್ } ಕೇಂದ್ರ ಸಚಿವ

ಬಾಂಗ್ಲಾ ಪ್ರಜೆಗಳು ಹಾಗೂ ರೋಹಿಂಗ್ಯಾಗಳು ನಮ್ಮ ದೇಶದ ಅನೇಕ ನಗರಗಳಲ್ಲಿ ಜೊಮ್ಯಾಟೊ, ಸ್ವಿಗ್ಗಿ ಹಾಗೂ ಇತರೆ ಆನ್‌ಲೈನ್ ಕಂಪನಿಗಳಲ್ಲಿ ಡಿಲಿವರಿ ಬಾಯ್‌ಗಳಾಗಿ ಸೇರಿಕೊಂಡಿದ್ದಾರೆ, ಕೂಡಲೇ ಅವರನ್ನು ಗುರುತಿಸುವ ಕಾರ್ಯ ನಡೆಸಿ ಪೊಲೀಸರಿಗೆ ಒಪ್ಪಿಸಬೇಕಾಗಿದೆ.

ಅಡಿಲೇಡ್ ಪಂದ್ಯದಲ್ಲಿ ಹೀನಾಯ ಸೋಲು | ಭಾರತದಲ್ಲಿ ನ್ಯೂಜಿಲೆಂಡ್ ವಿರುದ್ಧವೂ ಸರಣಿ ಸೋಲು | ಭಾರತದ ಫೈನಲ್ ಹಾದಿ ಬಲು ಕಠಿಣ

ಮುಳುವಾದ ನ್ಯೂಜಿಲೆಂಡ್ ವಿರುದ್ಧದ ಸರಣಿ ಸೋಲು

ಬೆಂಗಳೂರು: ಆಸ್ಟ್ರೇಲಿಯಾದ ಅಡಿಲೇಡ್‌ನಲ್ಲಿ ಭಾರತ ಸೋಲುವ ಮೊದಲು ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್‌ನ ಅಂಕಪಟ್ಟಿಯಲ್ಲಿ ಭಾರತ ಮೊದಲನೇ ಸ್ಥಾನದಲ್ಲಿತ್ತು. ಆದರೆ, ಹೀನಾಯ ಸೋಲಿನಿಂದ ಭಾರತ ತಂಡ ಈಗ 3ನೇ ಸ್ಥಾನಕ್ಕೆ ಇಳಿದಿದೆ. ಶ್ರೀಲಂಕ ವಿರುದ್ಧ ಗೆದ್ದ ಮೇಲೆ ದಕ್ಷಿಣ ಆಫ್ರಿಕ ತಂಡ ಈಗ ಪಟ್ಟಿಯಲ್ಲಿ ಮೊದಲನೇ ಸ್ಥಾನಕ್ಕೇರಿದೆ. ಆಸ್ಟ್ರೇಲಿಯಾ ತಂಡ ಸದ್ಯ 2ನೇ ಸ್ಥಾನದಲ್ಲಿದೆ. ಹೀಗಿದ್ದಾಗ, ಭಾರತ ತಂಡ 2025ರಲ್ಲಿ ಲಾರ್ಡ್ಸ್‌ನಲ್ಲಿ ನಡೆಯುವ ಫೈನಲ್ ಪಂದ್ಯದಲ್ಲಿ ಆಟವಾಡುತ್ತಾ? ಎಂಬುದೇ ಈಗ ಕ್ರೀಡಾಭಿಮಾನಿಗಳ ಯಕ್ಷ ಪ್ರಶ್ನೆಯಾಗಿದೆ. ಹೀಗಿದ್ದಾಗ, ಭಾರತ ಫೈನಲ್ ಪಮದ್ಯ ಆಡಲು ಮಾಡಬೇಕಾಗಿದ್ದು ಏನು? ಎಂಬ ಈಗ ಕ್ರಿಕೆಟ್ ಅಭಿಮಾನಿಗಳ ತಲೆಯಲ್ಲಿದೆ.

ಮ್ಯಾಜಿಕ್ ಆಗಬೇಕು
- ಪಾಕಿಸ್ತಾನ ವಿರುದ್ಧದ ಸರಣಿಯಲ್ಲಿ ಪಾಕಿಸ್ತಾನ ಗೆಲ್ಲಬೇಕು
- ಆಸ್ಟ್ರೇಲಿಯಾವನ್ನು ಭಾರತ 3-2 ರಿಂದ ಗೆಲ್ಲಬೇಕು
- ಆಸ್ಟ್ರೇಲಿಯಾ ಮುಂದಿನ ಸರಣಿಯಲ್ಲಿ ಶ್ರೀಲಂಕಾವನ್ನು 2-0 ಅಂತರದಿಂದ ಸೋಲಿಸಬೇಕು

ಇದೇ 2 ತಿಂಗಳ ಹಿಂದೆ ಭಾರತ ತಂಡಕ್ಕೆ ಪರಿಸ್ಥಿತಿ ಇರಲಿಲ್ಲ. ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದ ಭಾರತ ಮತ್ತು 2ನೇ ಸ್ಥಾನದಲ್ಲದ್ದ ಆಸ್ಟ್ರೇಲಿಯಾಗಳೇ ಫೈನಲ್ ಆಡುವ ತಂಡಗಳು ಎಂದು ಬಹುತೇಕ ಎಲ್ಲರೂ ಅಂದುಕೊಂಡಿದ್ದರು. 75ಕ್ಕೂ ಅಧಿಕ ಸರಾಸರಿ ಅಂಕ ಕಲೆ ಹಾಕಿದ್ದ ಭಾರತದ ತಂಡದ ಹತ್ತಿರಕ್ಕೂ ಯಾರೂ ಸುಳಿಯುವ ಸಾಧ್ಯತೆ ಇರಲಿಲ್ಲ. ಒಂದು ವೇಳೆ 2ನೇ ಸ್ಥಾನದಲ್ಲಿದ್ದ ಆಸ್ಟ್ರೇಲಿಯಾಕ್ಕೆ ಕುತ್ತು ಬರಬಹುದೇ ಹೊರತು ಭಾರತಕ್ಕೆ ದೊಡ್ಡ ಹೊಡೆತವೇನೂ ಬೀಳುವುದಿಲ್ಲ ಎಂಬ ಲೆಕ್ಕಾಚಾರವಿತ್ತು.

2 ತಿಂಗಳ ಹಿಂದೆ ಭಾರತ ತಂಡಕ್ಕೆ 2 ಟೆಸ್ಟ್ ಸರಣಿಗಳ ಸವಾಲಿತ್ತು ಅವುಗಳೆಂದರೆ, ನ್ಯೂಜಿಲೆಂಡ್ ವಿರುದ್ಧದ ಭಾರತದಲ್ಲಿನ ಸರಣಿ ಹಾಗೇ ಈಗ ನಡೆಯುತ್ತಿರುವ ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್ ಗವಾಸ್ಕರ್ ಸರಣಿ. ಆಗೆಲ್ಲ ನ್ಯೂಜಿಲೆಂಡ್ ವಿರುದ್ಧ ಸುಲಭದಲ್ಲಿ ಗೆದ್ದು, ಆಸ್ಟ್ರೇಲಿಯಾ ಸರಣಿಯಲ್ಲಿ ಎರಡು ಪಂದ್ಯ ಗೆದ್ದರೂ ಭಾರತದ ಫೈನಲ್ ಪ್ರವೇಶ ಅಬಾಧಿತ ಎಂಬಂತಿತ್ತು ಪರಿಸ್ಥಿತಿ.

ಆದರೆ, ಭಾರತಕ್ಕೆ ಪ್ರವಾಸಿಯಾ ಬಂದಿದ್ದ ನ್ಯೂಜಿಲೆಂಡ್ ತಂಡ ಭಾರತೀಯ ಆಟಗಾರರ ಮೇಲೆ ಸವಾರಿ ಮಾಡಿತು. ಯಾರೂ ಊಹಿಸದ ರೀತಿಯಲ್ಲಿ ಸರಣಿಯನ್ನು 3-0 ಅಂತರದಿಂದ ಕ್ಲೀನ್ ಸ್ವೀಪ್ ಮಾಡಿ ಭಾರತದ ಅಂಕಗಳನ್ನು ನ್ಯೂಜಿಲೆಂಡ್ ಕಸಿದುಕೊಂಡಿತ್ತು.

ಸರಣಿ ಸೋಲಿನ ನಂತರ ಅದರದ್ದೇ ಒತ್ತಡದಲ್ಲಿದ್ದ ಭಾರತ ತಂಡಕ್ಕೆ ಅಡಿಲೇಡ್‌ನಲ್ಲಿ ಸೋತಿದ್ದು ಭಾರಿ ಹಿನ್ನಡೆಯನ್ನುಂಟು ಮಾಡಿದೆ. ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್ ಫೈನಲ್ ಮುಂಚಿತವಾಗಿ ಭಾರತಕ್ಕೆ ಉಳಿದಿರುವುದು ಕೇವಲ 3 ಪಂದ್ಯಗಳಷ್ಟೇ. ಆ ಮೂರರಲ್ಲಿ ಮೂರನ್ನು ಗೆದ್ದಲ್ಲಿ ಭಾರತ ಖಂಡಿತವಾಗಿಯೂ ಸೇಫ್.

ಪ್ರಾಕ್ಟೀಸ್ ಶುರು ಮಾಡಿದ ಭಾರತ ತಂಡ

ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯ ಮೂರನೇ ಪಂದ್ಯಕ್ಕಾಗಿ ಟೀಮ್ ಇಂಡಿಯಾ ಅಭ್ಯಾಸ ಶುರು ಮಾಡಿದೆ. ಬ್ರಿಸ್ಬೇನ್‌ನಲ್ಲಿ ನಡೆಯಲಿರುವ ಈ ಪಂದ್ಯಕ್ಕಾಗಿ ತೆರಳುವ ಮುನ್ನವೇ ಭಾರತೀಯ ಆಟಗಾರರು ಅಡಿಲೇಡ್‌ನಲ್ಲಿ ಅಭ್ಯಾಸ ಆರಂಭಿಸಿದ್ದಾರೆ. ಈ ಮೂಲಕ ಮತ್ತೆ ಗೆಲುವಿನ ಲಯಕ್ಕೆ ಮರಳಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಇನ್ನು ಈ ಪಂದ್ಯವನ್ನು ರೆಡ್ ಬಾಲ್‌ನಲ್ಲಿ ಆಡಲಾಗುತ್ತದೆ. ಅಡಿಲೇಡ್‌ನಲ್ಲಿ ನಡೆದ ದ್ವಿತೀಯ ಟೆಸ್ಟ್ ಪಂದ್ಯದಲ್ಲಿ ಪಿಂಕ್ ಬಾಲ್ ಬಳಸಲಾಗಿತ್ತು. ಆ ಪಂದ್ಯವು ಡೇ-ನೈಟ್ ಟೆಸ್ಟ್ ಆಗಿದ್ದರಿಂದ ಪಿಂಕ್ ಬಾಲ್‌ನಲ್ಲಿ ಆಡಿಲಾಗಿತ್ತು. ಮೂರನೇ ಪಂದ್ಯವು ಸಾಮಾನ್ಯ ಟೆಸ್ಟ್ ಪಂದ್ಯವಾಗಿದ್ದು, ಅದರಂತೆ ಈ ಮ್ಯಾಚ್‌ನಲ್ಲಿ ಎಂದಿನಂತೆ ರೆಡ್ ಬಾಲ್ ಬಳಸಲಾಗುತ್ತದೆ. ಅಂದಹಾಗೆ ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಮೂರನೇ ಪಂದ್ಯವು ಡಿಸೆಂಬರ್ 14 ರಿಂದ ಶುರುವಾಗಲಿದ್ದು, ಈ ಪಂದ್ಯಕ್ಕೆ ಬ್ರಿಸ್ಬೇನ್‌ನ ಗಾಬ್ಬಾ ಮೈದಾನ ಆತಿಥ್ಯವಹಿಸಲಿದೆ.

ಶ್ರೀಲಂಕಾ ಹಾದಿ ಬಲು ಕಠಿಣ

ಈಗ 4 ನೇ ಸ್ಥಾನದಲ್ಲಿರುವ ಶ್ರೀಲಂಕಾದ ಪರಿಸ್ಥಿತಿ ಅತ್ಯಂತ ಕಠಿಣವಾಗಿದೆ. ಪ್ರಸ್ತುತ 45.45 ಸರಾಸರಿ ಅಂಕಗಳನ್ನು ಹೊಂದಿರುವ ಶ್ರೀಲಂಕಾ ತಂಡ ಆಸ್ಟ್ರೇಲಿಯಾ ತಂಡದ ವಿರುದ್ಧ ಉಳಿದಿರುವ 2 ಟೆಸ್ಟ್ ಪಂದ್ಯಗಳನ್ನು ಗೆದ್ದರೂ ಅಂತಿಮವಾಗಿ ಗಳಿಸಿವುದು 53.85 ಸರಾಸರಿ ಅಂಕಗಳು. ಆಗ ಅವರು ಅವರು ಬೇರೆ ತಂಡಗಳ ಫಲಿತಾಂಶದ ಮೇಲೇ ಅವಲಂಬಿಸಬೇಕಾಗುತ್ತದೆ. ಶ್ರೀಲಂಕಾ ತಂಡ ಫೈನಲ್‌ಗೆ ಹೋಗುವ ದಾರಿ ಅತಿ ದುರ್ಗಮವೂ ಆಗಿದೆ.

ಸುಂದರ್ ಪರವಾಗಿ ಪೂಜಾರ ಬ್ಯಾಟಿಂಗ್

ಮೂರನೇ ಪಂದ್ಯ ಗೆಲ್ಲಲು ಹನ್ನೊಂದರ ಬಳಗದಲ್ಲಿ ಬದಲಾವಣೆ ತರಲು ಸೂಚಿಸಿದ್ದಾರೆ. ಆರ್.ಅಶ್ವಿನ್ ಬದಲಿಗೆ ವಾಷಿಂಗ್ಟನ್ ಸುಂದರ್‌ಗೆ ಅವಕಾಶ ಸಿಗಬೇಕು ಎಂದು ಹೇಳಿದ್ದಾರೆ. ಅಡಿಲೇಡ್‌ನಲ್ಲಿ ಸುಂದರ್ ಬದಲಿಗೆ ಆಡಿದ್ದ ಅಶ್ವಿನ್ ಮೊದಲ ಇನ್ನಿಂಗ್ಸ್‌ನಲ್ಲಿ 18 ಓವರ್‌ಗಳನ್ನು ಬೌಲ್ ಮಾಡಿದ್ದರು. ಇದರಲ್ಲಿ ಅವರು 53 ರನ್ ನೀಡಿ ಕೇವಲ ಒಂದು ವಿಕೆಟ್ ಮಾತ್ರ ಪಡೆದಿದ್ದರು. ಬ್ಯಾಟಿಂಗ್‌ನಲ್ಲಿಯೂ ಹೇಳಿಕೊಳ್ಳುವ ಪ್ರದರ್ಶನ ಅವರಿಂದ ಬರಲಿಲ್ಲ. ಪರ್ತ್ ಟೆಸ್ಟ್‌ನಲ್ಲಿ ಅವಕಾಶ ಗಿಟ್ಟಿಸಿಕೊಂಡಿದ್ದ ವಾಷಿಂಗ್ಟನ್ ಸುಂದರ್ ಉತ್ತಮವಾಗಿ ಆಟ ಆಡಿದ್ದರು ಎಂದು ಹೇಳಿದ್ದಾರೆ.

ಇದರ ಜೊತೆಗೆ ಹರ್ಷಿತ್ ರಾಣಾ ಬದಲಿಗೆ ಬೇರೆ ಯಾರಾದರೂ ತಂಡಕ್ಕೆ ಬರಬೇಕಾ? ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಪೂಜಾರ, ರಾಣಾ ಅವರಿಗೆ ಸೂಕ್ತ ಬೆಂಬಲ ಸಿಗಬೇಕು ಆತನಲ್ಲಿ ಪ್ರತಿಭೆಯಿದೆ ಎಂದು ಹೇಳಿದ್ದಾರೆ. ಮೊದಲ ಟೆಸ್ಟ್ ಪಂದ್ಯದಲ್ಲಿ ರಾಣಾ ಉತ್ತಮ ಪ್ರದರ್ಶನ ನೀಡಿದ್ದಾರೆ. ಯಾವುದೋ ಒಂದು ಪಂದ್ಯವನ್ನು ಆಧಾರವಾಗಿಟ್ಟುಕೊಂಡು ಅವರನ್ನು ತಂಡದಿಂದ ಕೈಬಿಡಲು ಸಾಧ್ಯವಿಲ್ಲ. ಟ್ರಾವಿಸ್ ಹೆಡ್ ಅವರ ವಿಕೆಟ್ ಸೇರಿದಂತೆ ತಂಡದ ಗೆಲುವಿನಲ್ಲಿ ಅವರ ಪಾತ್ರವಿದೆ, ಎಂದು ಅವರು ಹೇಳಿದ್ದಾರೆ.

ಸೈಲೆಂಟ್ ಆಗಿ ಟಾಪ್ ಆದ ಹರಿಣಗಳು

ಶ್ರೀಲಂಕಾ ವಿರುದ್ಧ ಸರಣಿಯನ್ನು 2-0 ಅಂತರದಿಂದ ಗೆದ್ದುಕೊಂಡಿರುವ ದಕ್ಷಿಣ ಆಫ್ರಿಕಾ ಸದ್ಯ ಅಂಕಪಟ್ಟಿಯಲ್ಲಿ 63.33 ಸರಾಸರಿ ಅಂಕ ಹೊಂದಿ, ಮೊದಲ ಸ್ಥಾನದಲ್ಲಿದೆ. ಹರಿಣಗಳು ಇನ್ನು ಪ್ರವಾಸಿ ಪಾಕಿಸ್ತಾನದ ವಿರುದ್ಧ 2 ಟೆಸ್ಟ್‌ಗಳ ಸರಣಿಯನ್ನು ಆಡಬೇಕಿದೆ.

ಆ ಸರಣಿಯಲ್ಲಿ 1 ಪಂದ್ಯ ಗೆದ್ದರೂ ಆಫ್ರಿಕಾ 1ನೇ ಸ್ಥಾನ ಗಟ್ಟಿಗೊಳ್ಳಲಿದೆ. ಒಂದು ವೇಳೆ ಸರಣಿ 1-1 ಸಮಬಲಗೊಂಡಲ್ಲಿ ಆಫ್ರಿಕಾ 61.11 ಸರಾಸರಿ ಅಂಕಗಳೊಂದಿಗೆ ಅಭಿಯಾನ ಸಮಾಪ್ತಿಗೊಳಿಸಲಿದ್ದು ಆಗ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳಿಗೆ 1ನೇ ಸ್ಥಾನಕ್ಕೇರಲು ಅವಕಾಶವಿದೆ.

ಒಂದು ವೇಳೆ ಎರಡೂ ಪಂದ್ಯಗಳು ಡ್ರಾ ಆದಲ್ಲಿ ಆಗ ದಕ್ಷಿಣ ಆಫ್ರಿಕಾ ತಂಡದ ಸರಾಸರಿ ಅಂಕ 58.33 ಆಗಲಿದೆ. ಈ ವೇಳೆ ಭಾರತ ತಂಡ ಆಸ್ಟ್ರೇಲಿಯಾವನ್ನು 3-2 ಅಂತರದಿಂದ ಸೋಲಿಸಬೇಕಾಗುತ್ತದೆ. ಆ ಬಳಿಕ ಆಸ್ಟ್ರೇಲಿಯಾ ತನ್ನ ಮುಂದಿನ ಸರಣಿಯಲ್ಲಿ ಶ್ರೀಲಂಕಾವನ್ನು 2-0 ಅಂತರದಿಂದ ಸೋಲಿಸಿದಲ್ಲಿ ದಕ್ಷಿಣ ಆಫ್ರಿಕಾ ಫೈನಲ್ ಸ್ಪರ್ಧೆಯಿಂದ ಹೊರಬೀಳಲಿದೆ. ಪಾಕಿಸ್ತಾನ ತಂಡ ಎರಡೂ ಪಂದ್ಯಗಳನ್ನು ಗೆದ್ದರೆ ಭಾರತದ ಫೈನಲ್ ಪ್ರವೇಶ ಸುಲಭವಾಗಲಿದೆ.

ಹೀಗಾಗಿ, ಭಾರತ ತನ್ನ ಪಂದ್ಯಗಳನ್ನು ಗೆಲ್ಲುವುದಷ್ಟೇ ಅಲ್ಲದೇ, ಬೇರೆ ಕೆಲವು ರಾಷ್ಟ್ರಗಳು ಬೇರೆ ಪಂದ್ಯಗಳಲ್ಲಿ ಸೋಲಬೇಕೆಂದು ಆಶಿಸಬೇಕಾಗಿದೆ.

ಬಂಡುಕೋರರ ಪಡೆಗಳಿಂದ ಔಪಚಾರಿಕ ಮಾತುಕತೆ | ತ್ವರಿತ ಅಧಿಕಾರ ಹಸ್ತಾಂತರ ಸಾಧ್ಯತೆ

ಸಿರಿಯಾದಲ್ಲಿ ಅಲ್-ಬಶೀರ್ ಪ್ರಧಾನಿಯಾಗುವ ಸಾಧ್ಯತೆ

ಡಮಾಸ್ಕಸ್: ಸಿರಿಯಾ ರಾಜಧಾನಿ ಡಮಾಸ್ಕಸ್ ಸೇರಿದಂತೆ ಹಲವಾರು ಪ್ರದೇಶಗಳನ್ನು ವಶಪಡಿಸಿಕೊಂಡು, ದೀರ್ಘಕಾಲದಿಂದ ಅಧ್ಯಕ್ಷರಾಗಿದ್ದ ಬಷರ್ ಅಲ್-ಅಸ್ಸಾದ್ ಅವರನ್ನು ಪದಚ್ಯುತಗೊಳಿಸಿದ ನಂತರ ಸಿರಿಯಾದ ಬಂಡುಕೋರ ಪಡೆಗಳು ದೇಶದ ಆಡಳಿತದ ಮೇಲೆ ಔಪಚಾರಿಕವಾಗಿ ಅಧಿಕಾರ ಸಾಧಿಸಲು ಮಾತುಕತೆ ಆರಂಭಿಸಿವೆ.

ಅಬು ಮೊಹಮ್ಮದ್ ಅಲ್-ಜುಲಾನಿ ಎಂದೂ ಕರೆಯಲ್ಪಡುವ ಬಂಡುಕೋರ ಪಡೆಗಳ ನಾಯಕ ಅಹ್ಮದ್ ಅಲ್-ಶರಾ ನಿರ್ಗಮಿಸುತ್ತಿರುವ ಪ್ರಧಾನಿ ಮೊಹಮ್ಮದ್ ಅಲ್-ಜಲಾಲಿ ಅವರನ್ನು ಭೇಟಿಯಾಗಿ ಅಧಿಕಾರ ಹಸ್ತಾಂತರದ ಬಗ್ಗೆ ಚರ್ಚಿಸಿದರು. ಬಷರ್ ಅಲ್-ಅಸ್ಸಾದ್ ಅವರ ಅಡಿಯಲ್ಲಿ ಸೇವೆ ಸಲ್ಲಿಸಿದ ಅಲ್-ಜಲಾಲಿ, ಹಯಾತ್ ತಹ್ರೀರ್ ಅಲ್-ಶಾಮ್ (ಎಚ್ ಟಿಎಸ್) ನೇತೃತ್ವದ ಸಿರಿಯನ್ ಸಾಲ್ವೇಶನ್ ಸರ್ಕಾರಕ್ಕೆ ಅಧಿಕಾರ ವರ್ಗಾಯಿಸಲು ಒಪ್ಪಿಕೊಂಡಿದ್ದಾರೆ.

ತ್ವರಿತ ಮತ್ತು ಸುಗಮವಾಗಿ ಅಧಿಕಾರವನ್ನು ಹಸ್ತಾಂತರಿಸಲು ನಾವು ಪ್ರಯತ್ನಿಸುತ್ತಿದ್ದೇವೆ ಎಂದು ಅಲ್-ಜಲಾಲಿ ಹೇಳಿದ್ದಾರೆ. ಡಮಾಸ್ಕಸ್ ಸ್ವಾಧೀನದ ನೇತೃತ್ವ ವಹಿಸಿದ್ದ ಎಚ್‌ಟಿಎಸ್‌ಗೆ ಆಪ್ತರಾಗಿರುವ ಮತ್ತು ಇದ್ಲಿಬ್ ಮೂಲದ ಎಸ್‌ಎಸ್‌ಜಿಯ ಮುಖ್ಯಸ್ಥರಾಗಿರುವ ಮೊಹಮ್ಮದ್ ಅಲ್-ಬಶೀರ್ ಅವರು ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗುವ ಸಾಧ್ಯತೆ ಹೆಚ್ಚಿದೆ.

ಹೊಸ ಸರ್ಕಾರವು ಹೊಸದಾಗಿ ವಶಪಡಿಸಿಕೊಂಡ ಪ್ರದೇಶಗಳ ಮೇಲೆ ನಿಯಂತ್ರಣವನ್ನು ಬಲಪಡಿಸಲು, ಸರ್ಕಾರಿ ಸಂಸ್ಥೆಗಳನ್ನು ಮರುರೂಪಿಸಲು ಮತ್ತು ಸಿರಿಯನ್ ದೇಶಭ್ರಷ್ಟರು ಮತ್ತು ಸ್ಥಳಾಂತರಗೊಂಡವರನ್ನು ಹೊರಹಾಕಲು ಆದ್ಯತೆ ನೀಡುವ ಸಾಧ್ಯತೆಯಿದೆ ಎಂದು ಸ್ಯಾನ್ ಫ್ರಾನ್ಸಿಸ್ಕೋ ವಿಶ್ವವಿದ್ಯಾಲಯದ ರಾಜಕೀಯ ಪ್ರಾಧ್ಯಾಪಕ ಸ್ಟೀಫನ್ ಜುನೆಸ್ ಅಲ್ ಜಜೀರಾಗೆ ತಿಳಿಸಿದರು.

ಅಲ್-ಖೈದಾ ಮಾಜಿ ಅಂಗಸಂಸ್ಥೆಯಾದ ಎಚ್‌ಟಿಎಸ್ ತನ್ನ ಕಠಿಣ ಇಸ್ಲಾಮಿಕ್ ನಿಲುವುಗಳನ್ನು ಬದಲಾಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದು, ಅಲ್-ಅಸ್ಸಾದ್ ಆಡಳಿತದಲ್ಲಿ ಬಲವಂತವಾಗಿ ಸೈನ್ಯಕ್ಕೆ ಸೇರಿದ ಸೈನಿಕರಿಗೆ ಕ್ಷಮಾದಾನ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ರಕ್ಷಣೆಯ ಭರವಸೆ ನೀಡಿದೆ. ಆದಾಗ್ಯೂ, ಹೊಸ ನಾಯಕತ್ವವು ಯುದ್ಧ ಅಪರಾಧಗಳಲ್ಲಿ ಭಾಗಿಯಾಗಿರುವ ಹಿರಿಯ ಮಿಲಿಟರಿ ಮತ್ತು ಭದ್ರತಾ ಅಧಿಕಾರಿಗಳ ವಿರುದ್ಧ ನ್ಯಾಯಯುತ ಪ್ರತೀಕಾರ ತೆಗೆದುಕೊಳ್ಳುವುದಾಗಿ ಹೇಳಿದೆ.

ಎಚ್‌ಟಿಎಸ್ ನೇತೃತ್ವದ ಬಂಡುಕೋರ ಪಡೆಗಳ ತ್ವರಿತ ಯಶಸ್ಸು ದೇಶದ 13 ವರ್ಷಗಳ ಅಂತರ್ಯುದ್ಧದಲ್ಲಿ ಒಂದು ಹೊಸ ತಿರುವನ್ನು ನೀಡಿದೆ. ಈ ಸಂಘರ್ಷದಲ್ಲಿ ಲಕ್ಷಾಂತರ ಜನ ಬಲಿಯಾಗಿದ್ದು, ಆಧುನಿಕ ಇತಿಹಾಸದಲ್ಲಿ ಅತಿದೊಡ್ಡ ನಿರಾಶ್ರಿತರ ಬಿಕ್ಕಟ್ಟನ್ನು ಸೃಷ್ಟಿಸಿತು. ತನ್ನ ಅಧಿಕಾರಾವಧಿಯಲ್ಲಿ ಅಲ್-ಅಸ್ಸಾದ್ ನಾಗರಿಕರನ್ನು ಹತ್ಯೆಗೈದ, ಚಿತ್ರಹಿಂಸೆ ನೀಡಿದ ಮತ್ತು ಬಲವಂತದಿಂದ ಜನರನ್ನು ಕಣ್ಮರೆ ಮಾಡಿದ ಹಾಗೂ ತನ್ನದೇ ಜನರ ವಿರುದ್ಧ ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ಬಳಸಿರುವ ಆರೋಪಗಳನ್ನು ಎದುರಿಸುತ್ತಿದ್ದಾರೆ.

ದುಬಾರಿ ಕಾರು ಲೂಟಿ

ಸಿರಿಯಾದಲ್ಲಿ ಬಂಡುಕೋರರ ಗುಂಪು ಸರ್ವಾಧಿಕಾರಿ ಬಷರ್ ಅಲ್ ಅಸಾದ್ ಸರ್ಕಾರ ಉರುಳಿಸಿ ಆಕ್ರಮಣಕಾರಿ ರೀತಿಯಲ್ಲಿ ಆಡಳಿತ ಹಿಡಿದ್ದಾರೆ. ಇತ್ತ ಬಷರ್ ಅಲ್ ಅಸಾದ್ ಮನೆಗೆ ನುಗ್ಗಿರುವ ಬಂಡುಕೋರರು ಹಾಗೂ ಲೂಟಿಕೋರರು ಎಲ್ಲಾ ವಸ್ತುಗಳನ್ನು ದೋಚಿದ್ದಾರೆ. ಈ ವೇಳೆ ದುಬಾರಿ ಮೌಲ್ಯದ ಐಷಾರಾಮಿ ಕಾರುಗಳನ್ನು ದೋಚಿದ್ದಾರೆ. ಮನೆಗೆ ನುಗ್ಗಿ ಸಿಕ್ಕ ಕಾರು ಕೀಗಳನ್ನು ತೆಗೆದುಕೊಂಡು ಫೆರಾರಿ, ಮರ್ಸಿಡೀಸ್ ಬೆಂಜ್, ಹಮ್ಮರ್, ಲೆಕ್ಸಸ್, ಟೋಯೋಟಾ ಸೇರಿದಂತೆ ಹಲವು ಕಾರುಗಳನ್ನು ದೋಚಿದ್ದಾರೆ. ಸುಮಾರು 50ಕ್ಕೂ ಹೆಚ್ಚು ಕಾರುಗಳನ್ನು ಸೀಟು, ಚಕ್ರ ಸೇರಿದಂತೆ ಹಲವು ಆಕ್ಸೆಸರಿ ದೋಚಿ, ಇನ್ನು ಕೆಲವು ಕಾರುಗಳನ್ನು ಪುಡಿ ಮಾಡಿದ್ದಾರೆ. ಮೂಲಗಳ ಪ್ರಕಾರ, ಬಷರ್ ಅಲ್ ಅಸಾದ್ ಬಳಿ 100ಕ್ಕೂ ಹೆಚ್ಚು ಐಷಾರಾಮಿ ಕಾರುಗಳಿದ್ದವು ಎಂದು ಬಹಿರಂಗವಾಗಿದೆ. ಲೂಟಿಕೋರರು ಕಾರುಗಳನ್ನು ಪುಡಿ ಮಾಡಿರುವ ವಿಡಿಯೊ ದೃಶ್ಯವೂ ಸ್ಪಷ್ಟವಾಗಿದೆ

ಮುಂದಿನ ಚುನಾವಣೆ ಗೆಲ್ಲಲು ಭರಪೂರ ಘೋಷಣೆ | ಆಟೋ ಚಾಲಕರಿಗೆ ವಿವಿಧ ಸೌಲಭ್ಯ

ಆಟೋ ಚಾಲಕರಿಗೆ ₹10 ಲಕ್ಷ ಆರೋಗ್ಯ ವಿಮೆ: ಆಪ್

ದೆಹಲಿ: ದೆಹಲಿ ವಿಧಾನಸಭಾ ಚುನಾವಣೆಗೆ ಭರ್ಜರಿ ತಯಾರಿ ನಡೆಸುತ್ತಿರುವ ಆಮ್ ಆದ್ಮಿ ಪಕ್ಷವು (ಎಎಪಿ) ಭರಪೂರ ಘೋಷಣೆಗಳನ್ನು

ಪ್ರಕಟಿಸಿದೆ. ಈಗಾಗಲೇ ಇರುವ ಉಚಿತ ಯೋಜನೆಗಳ ಮುಂದುವರಿಕೆ, ಹಿರಿಯ ನಾಗರಿಕರಿಗೆ ಪಿಂಚಣಿ ಪುನಾರಂಭದ ಭರವಸೆಯನ್ನೂ ನೀಡಿದ್ದಲ್ಲದೆ, ಇದೀಗ ಆಟೋ ಚಾಲಕರಿಗೆ ರು. 10 ಲಕ್ಷ ಆರೋಗ್ಯ ವಿಮೆಯನ್ನೂ ನೀಡುವುದಾಗಿ ಪ್ರಕಟಿಸಿದೆ.

ಎಎಪಿ ಪಕ್ಷದ ಮುಖ್ಯಸ್ಥ, ಮಾಜಿ ಸಿಎಂ ಅರವಿಂದ್ ಕೇಜ್ರಿವಾಲ್ ಮಂಗಳವಾರ ಈ ಎಲ್ಲಾ ಯೋಜನೆಗಳನ್ನು ಪ್ರಕಟಿಸಿದ್ದು, ನಗರದ ನೋಂದಾಯಿತ ಆಟೋ ಚಾಲಕರಿಗೆ 10 ಲಕ್ಷ ರೂಪಾಯಿ ಆರೋಗ್ಯ ವಿಮೆ ನೀಡಲಾಗುವುದಲ್ಲದೆ, ಸಮವಸ್ತ್ರ ಭತ್ಯೆಯಾಗಿ ವರ್ಷಕ್ಕೆ ರು. 5 ಸಾವಿರ ನೀಡುವುದಾಗಿ ಘೋಷಿಸಿದರು.

ಕೊಂಡ್ಲಿ ಕ್ಷೇತ್ರದಲ್ಲಿ ಆಟೋ ಚಾಲಕನ ಕುಟುಂಬ ಸದಸ್ಯರೊಂದಿಗೆ ಭೋಜನ ಸವಿದ ಕೇಜ್ರಿವಾಲ್, ಆಟೋ ಚಾಲಕರ ಆರೋಗ್ಯಕ್ಕೆ ಆದ್ಯತೆ ನೀಡಲಾಗುವುದು ಎಂದರು. ಸಮವಸ್ತ್ರ ಭತ್ಯೆಯಾಗಿ ವರ್ಷಕ್ಕೆ ಎರಡು ಬಾರಿ ರು. 2,500 ಸರ್ಕಾರ ನೀಡಲಿದ್ದು, ಆಟೋ ಚಾಲಕರ ಮಕ್ಕಳಿಗೆ ಉಚಿತ ತರಬೇತಿ ಕೊಡಿಸಲಾಗುವುದು ಎಂದು ಇದೇ ವೇಳೆ ಆಶ್ವಾಸನೆ ನೀಡಿದರು.

ಇದಲ್ಲದೇ, ಆಟೋ ಚಾಲಕರ ಕುಟುಂಬದ ಹೆಣ್ಣುಮಕ್ಕಳ ವಿವಾಹಕ್ಕೆ ಸರ್ಕಾರದಿಂದ ಒಂದು ಲಕ್ಷ ರೂಪಾಯಿ ನೆರವು ಸಿಗಲಿದೆ.

ದೆಹಲಿಗೆ ಚುನಾವಣೆ ಯಾವಾಗ?

70 ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಮುಂದಿನ ವರ್ಷ ಫೆಬ್ರವರಿಯೊಳಗೆ ಚುನಾವಣೆ ನಡೆಯಲಿದೆ. 2015ರಿಂದ ಎರಡು ಅವಧಿಗೆ ದೆಹಲಿ ದರ್ಬಾರ್ ನಡೆಸಿರುವ ಆಪ್ ಸತತ ಮೂರನೇ ಬಾರಿಗೆ ಅಧಿಕಾರದ ಗದ್ದುಗೆ ಏರಲು ಹವಣಿಸುತ್ತಿದೆ. ಇತ್ತ, 25 ವರ್ಷಗಳಿಂದ ಅಧಿಕಾರ ಕಳೆದುಕೊಂಡಿರುವ ಬಿಜೆಪಿ ಸರ್ಕಾರ ರಚನೆ ಮಾಡಲು ತಂತ್ರ ರೂಪಿಸಿದೆ. ವಿಪಕ್ಷಗಳ ಇಂಡಿ ಮೈತ್ರಿಕೂಟದಲ್ಲಿದ್ದರೂ ಕಾಂಗ್ರೆಸ್ ಜೊತೆಗೆ ದೆಹಲಿಯಲ್ಲಿ ಮೈತ್ರಿ ಇಲ್ಲ ಎಂದು ಆಪ್ ಈಗಾಗಲೇ ಘೋಷಿಸಿದೆ. ಅಬಕಾರಿ ಹಗರಣದಲ್ಲಿ ಸಿಲುಕಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಕೇಜ್ರಿವಾಲ್, ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿದ್ದು, ಪಕ್ಷವನ್ನು ಮತ್ತೆ ಶತಾಯಗತಾಯ ಅಧಿಕಾರಕ್ಕೆ ತರಲು ಶ್ರಮಿಸುತ್ತಿದ್ದಾರೆ.

ಆಟೋ ಪ್ರಯಾಣದ ಬುಕಿಂಗ್‌ಗಾಗಿ ಪೂಚೋ ಆ್ಯಪ್ ಅನ್ನು ಮರುಪ್ರಾರಂಭಿಸುವುದಾಗಿ ಭರವಸೆ ನೀಡಿದರು. ಅದನ್ನು ಈ ಹಿಂದೆಯೇ ಆರಂಭಿಸಲಾಗಿದ್ದರೂ, ಕಾರಣಾಂತರಗಳಿಂದ ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು. ಆ್ಯಪ್ ಮೂಲಕ ಆಟೋ ಪ್ರಯಾಣ ಬುಕ್ ಮಾಡಿ, ನೋಂದಾಯಿತ ಚಾಲಕರ ಸಂಪರ್ಕ ಸಂಖ್ಯೆಗೆ ಕರೆ ಮಾಡಿ ಪ್ರಯಾಣಿಕರು ಸೇವೆಯನ್ನು ಪಡೆಯಬಹುದಾಗಿದೆ.

ಕರ್ನಾಟಕ, ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಸೂಚನೆ | ಅರ್ಜಿ ವಿಚಾರಣೆ

ಎನ್‌ಡಿಆರ್‌ಎಫ್ ವ್ಯಾಜ್ಯ: ಸುಪ್ರೀಂ ಸಲಹೆ

ದೆಹಲಿ: ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ (ಎನ್‌ಡಿಆರ್‌ಎಫ್) ಕುರಿತು ಕರ್ನಾಟಕ ಮತ್ತು ಕೇಂದ್ರ ಸರ್ಕಾರದ ನಡುವಿನ ವ್ಯಾಜ್ಯವನ್ನು ಬಗೆಹರಿಸಿಕೊಳ್ಳಲು ಸುಪ್ರೀಂ ಕೋರ್ಟ್ ಮಂಗಳವಾರದ ವಿಚಾರಣೆಯಲ್ಲಿ ಮೌಖಿಕ ಸಲಹೆ ನೀಡಿದೆ.

ಬರ ನಿರ್ವಹಣೆಗಾಗಿ ರಾಜ್ಯಕ್ಕೆ ಎನ್‌ಡಿಆರ್‌ಎಫ್‌ನಿಂದ ಹಣಕಾಸು ನೆರವು ಬಿಡುಗಡೆ ಮಾಡುವಂತೆ ಕೇಂದ್ರಕ್ಕೆ ನಿರ್ದೇಶನ ನೀಡಲು ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರಿದ್ದ ಪೀಠ ವಿಚಾರಣೆ ನಡೆಸಿತು.

ಈ ವೇಳೆ ಪೀಠ, ಕರ್ನಾಟಕಕ್ಕೆ ಈವರೆಗೆ ಎಷ್ಟು ಎನ್‌ಡಿಆರ್‌ಎಫ್ ನಿಧಿ ಬಿಡುಗಡೆಯಾಗಿದೆ ಎಂದು ಪ್ರಶ್ನಿಸಿತು. ಕೇಂದ್ರದ ಪರ ಹಾಜರಿದ್ದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ರಾಜ್ಯ ಸರ್ಕಾರ ಕೇಳಿದ ರು. 18,171 ಕೋಟಿಗೆ ಕೇವಲ ರು. 3,819 ಕೋಟಿ ರನೀಡಲಾಗಿದೆ. ಈ ಬಗ್ಗೆ ಅಫಿಡವಿಟ್ ಸಲ್ಲಿಸಲು ಕಾಲಾವಕಾಶ ಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ಪೀಠ, ಎನ್‌ಡಿಆರ್‌ಎಫ್ ನಿಧಿ ಬಿಡುಗಡೆ ಕುರಿತ ವ್ಯಾಜ್ಯವನ್ನು ಕೇಂದ್ರ ಸರ್ಕಾರ ಶೀಘ್ರವೇ ಅಂತ್ಯಗೊಳಿಸಲು ಪ್ರಯತ್ನಿಸಬೇಕು ಎಂದು ತಿಳಿಸಿ, ಮುಂದಿನ ವಿಚಾರಣೆಯನ್ನು 2025ರ ಜನವರಿಗೆ ಮುಂದೂಡಿತು.

ಕರ್ನಾಟಕದ ವಾದವೇನು?: ರಾಜ್ಯದಲ್ಲಿ ತೀವ್ರ ಬರಗಾಲ ಕಾಡಿದೆ. ರೈತರು ನಷ್ಟಕ್ಕೀಡಾಗಿದ್ದಾರೆ. ಆರ್ಥಿಕ ಪರಿಹಾರ ನೀಡಲು ಕೇಂದ್ರ ಸರ್ಕಾರವು ರಾಜ್ಯದ ಪಾಲಿನ ಎನ್‌ಡಿಆರ್‌ಎಫ್ ನಿಧಿಯನ್ನು ಬಿಡುಗಡೆ ಮಾಡಬೇಕು. ಈವರೆಗೂ ರು. 3400 ಮಾತ್ರ ಸಿಕ್ಕಿದೆ ಎಂದು ಏಪ್ರಿಲ್ 29ರಂದು ನಡೆದ ವಿಚಾರಣೆಯಲ್ಲಿ ಕೋರ್ಟ್‌ಗೆ ತಿಳಿಸಿತ್ತು.

ರಾಜ್ಯಕ್ಕೆ ಆರ್ಥಿಕ ನೆರವು ನಿರಾಕರಿಸುತ್ತಿರುವ ಮೂಲಕ ಕೇಂದ್ರವು ಸಂವಿಧಾನದ 14, 21ನೇ ವಿಧಿಗಳ ಅನುಸಾರ ಜನರ ಮೂಲಭೂತ ಹಕ್ಕುಗಳ ಉಲ್ಲಂಘಿಸಿದೆ. ಇದಲ್ಲದೆ, ವಿಪತ್ತು ನಿರ್ವಹಣಾ ಕಾಯಿದೆ-2005, ಬರ ನಿರ್ವಹಣೆಯ ಕೈಪಿಡಿ, ರಾಜ್ಯ ವಿಪತ್ತು ನಿರ್ವಹಣಾ ನಿಧಿ ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ, ಸಂವಿಧಾನ ಮತ್ತು ಆಡಳಿತದ ಮಾರ್ಗಸೂಚಿಗಳನ್ನು ಉಲ್ಲಂಘಿಸಿದಂತಾಗಿದೆ ಎಂದು ಆಪಾದಿಸಿದೆ.

2023ರ ಋತುವಿನಲ್ಲಿ ರಾಜ್ಯವು ಭೀಕರ ಬರಗಾಲ ಕಂಡಿದೆ. 236ರ ಪೈಕಿ 223 ತಾಲೂಕುಗಳನ್ನು ಬರ ಪೀಡಿತ ಎಂದು ಘೋಷಿಸಲಾಗಿದೆ. ಇದರಲ್ಲಿ 196 ತಾಲೂಕುಗಳು ತೀವ್ರ ಬರ ಪೀಡಿತವಾಗಿದ್ದರೆ, 27 ಮಧ್ಯಮ ಪೀಡಿತ ಎಂದು ಗುರುತಿಸಲಾಗಿದೆ ಎಂದು ಅರ್ಜಿಯಲ್ಲಿ ತಿಳಿಸಿದೆ. ಎನ್‌ಡಿಆರ್‌ಎಫ್ ಹಣ ಬಿಡುಗಡೆಗೆ ವಿಳಂಬ ತೋರಿದ ಕೇಂದ್ರದ ವಿರುದ್ಧ ರಾಜ್ಯ ಕಾಂಗ್ರೆಸ್ ಸರ್ಕಾರ ಸುಪ್ರೀಂ ಮೆಟ್ಟಿಲೇರಿದೆ.

43 ವರ್ಷಗಳ ಬಳಿಕ ಭಾರತದ ಪ್ರಧಾನಿಯೊಬ್ಬರ ಭೇಟಿ

ಶೀಘ್ರದಲ್ಲೇ ಪ್ರಧಾನಿ ಮೋದಿ ಕುವೈತ್ ಪ್ರವಾಸ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಶೀಘ್ರದಲ್ಲಿಯೇ ಪಶ್ಚಿಮ ಏಷ್ಯಾದ ಪ್ರಮುಖ ದೇಶವಾದ ಕುವೈತ್‌ಗೆ ಭೇಟಿ ನೀಡಲಿದ್ದಾರೆ. ಕಳೆದ 43 ವರ್ಷಗಳಲ್ಲಿ ಕುವೈತ್‌ಗೆ ಭಾರತದ ಪ್ರಧಾನಿಯೊಬ್ಬರ ಪ್ರಥಮ ಭೇಟಿ ಇದಾಗಿದೆ. ಕುವೈತ್ ಪ್ರಸ್ತುತ ಗಲ್ಫ್ ಸಹಕಾರ ಮಂಡಳಿಯ (ಜಿಸಿಸಿ) ಅಧ್ಯಕ್ಷತೆ ಹೊಂದಿರುವುದು ಗಮನಾರ್ಹ.

ಕಳೆದ ವಾರ ದೆಹಲಿಗೆ ಆಗಮಿಸಿದ್ದ ಕುವೈತ್ ವಿದೇಶಾಂಗ ಸಚಿವ ಅಬ್ದುಲ್ಲಾ ಅಲಿ ಅಲ್-ಯಾಹ್ಯಾ ಅವರು ಲೋಕ ಕಲ್ಯಾಣ ಮಾರ್ಗ್‌ನಲ್ಲಿನ ಪ್ರಧಾನಿಯವರ ನಿವಾಸಕ್ಕೆ ಭೇಟಿ ನೀಡಿ, ಶೀಘ್ರವಾಗಿ ತಮ್ಮ ದೇಶಕ್ಕೆ ಆಗಮಿಸುವಂತೆ ಪ್ರಧಾನಿಗೆ ಔಪಚಾರಿಕ ಆಹ್ವಾನ ನೀಡಿದ್ದರು, ಆ ಆಹ್ವಾನವನ್ನು ಮೋದಿ ಒಪ್ಪಿಕೊಂಡಿದ್ದಾರೆ.

ಇದಾಗಿ ಕೆಲ ಗಂಟೆಗಳ ನಂತರ ಹೈದರಾಬಾದ್ ಹೌಸ್‌ನಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ನಿಯೋಗ ಮಟ್ಟದ ಮಾತುಕತೆ ನಡೆಸಿದ ಅಬ್ದುಲ್ಲಾ ಅಲಿ ಅಲ್-ಯಾಹ್ಯಾ ಭಾರತವನ್ನು ಕುವೈತ್‌ನ ಅತ್ಯಂತ ಆತ್ಮೀಯ ರಾಷ್ಟ್ರವೆಂದು ಬಣ್ಣಿಸಿ, ಪ್ರಧಾನಿ ಮೋದಿ ವಿಶ್ವದ ಬುದ್ಧಿವಂತ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ ಎಂದು ಹೇಳಿದ್ದರು.

'ಆಹ್ವಾನವನ್ನು ಸ್ವೀಕರಿಸಿದ್ದಕ್ಕಾಗಿ ಮತ್ತು ಪ್ರಧಾನಿ ಮೋದಿಯವರನ್ನು ಭೇಟಿ ಮಾಡುವ ಅವಕಾಶ ನೀಡಿದ್ದಕ್ಕಾಗಿ ನಾನು ನಿಮಗೆ ಧನ್ಯವಾದ ಹೇಳಲು ಬಯಸುತ್ತೇನೆ. ವಿಶ್ವಾದ್ಯಂತದ ಬುದ್ಧಿವಂತ ವ್ಯಕ್ತಿಗಳಲ್ಲಿ ಒಬ್ಬರು ಎಂದು ನಾವು ನಂಬುತ್ತೇವೆ. ಪ್ರಧಾನಿಯವರು ಭಾರತವನ್ನು ಉತ್ತಮ ಮಟ್ಟದಲ್ಲಿ ಇರಿಸುತ್ತಾರೆ ಎಂಬುದು ನನಗೆ ಖಾತ್ರಿಯಿದೆ. ಭಾರತವು ನಮಗೆ ಬಹಳ ಆತ್ಮೀಯ ರಾಷ್ಟ್ರವಾಗಿದೆ ಮತ್ತು ನಾವು ನಮ್ಮ ಸಂಬಂಧಗಳನ್ನು ಗೌರವಿಸುತ್ತೇವೆ' ಎಂದು ಕುವೈತ್ ವಿದೇಶಾಂಗ ಸಚಿವ ಅಬ್ದುಲ್ಲಾ ಅಲಿ ಅಲ್-ಯಾಹ್ಯಾ ಸಭೆಯಲ್ಲಿ ಹೇಳಿದ್ದರು.

ಮುಂದೂಡಿಕೆಯಾಗಿದ್ದ ಭೇಟಿ

2014ರಲ್ಲಿ ಪ್ರಧಾನಿಯಾದ ನಂತರ, ಯುನೈಟೆಡ್ ಅರಬ್ ಎಮಿರೇಟ್ಸ್, ಬಹ್ರೇನ್, ಸೌದಿ ಅರೇಬಿಯಾ, ಒಮಾನ್ ಮತ್ತು ಕತಾರ್ ಒಳಗೊಂಡಿರುವ ಜಿಸಿಸಿ ಸದಸ್ಯ ರಾಷ್ಟ್ರಗಳ ಪೈಕಿ ಮೋದಿ ಈವರೆಗೂ ಭೇಟಿ ನೀಡದ ಏಕೈಕ ರಾಷ್ಟ್ರ ಕುವೈತ್ ಆಗಿದೆ. 2022ರಲ್ಲಿ ಕೋವಿಡ್ ಸಾಂಕ್ರಾಮಿಕದ ಕಾರಣದಿಂದ ಮೋದಿಯ ಉದ್ದೇಶಿತ ಕುವೈತ್ ಭೇಟಿಯನ್ನು ಮುಂದೂಡಲಾಗಿತ್ತು. ಸೆಪ್ಟೆಂಬರ್‌ನಲ್ಲಿ ನ್ಯೂಯಾರ್ಕ್ ನಲ್ಲಿ ನಡೆದ ಯುಎನ್‌ಜಿಎ ಯ 79ನೇ ಅಧಿವೇಶನದ ಸಂದರ್ಭದಲ್ಲಿ ಪ್ರಧಾನಿ ಮೋದಿ ಕುವೈತ್ ದೇಶದ ಯುವರಾಜ ಶೇಖ್ ಸಬಾಹ್ ಖಾಲಿದ್ ಅಲ್-ಹಮದ್ ಅಲ್-ಮುಬಾರಕ್ ಅಲ್-ಸಬಾಹ್ ಅವರನ್ನು ಭೇಟಿಯಾಗಿದ್ದರು.